


814 308 3
TRI N87
ಗ್ರಂಥ ಸ್ವಾಮ್ಯ ವಿಭಾಗ

# ಹೃದಯ ಗೀತ

ತ್ರಿವೇಣಿ

ತ್ರಿವೇಣಿ ಪಬ್ಲಿಕೇಷನ್ಸ್
ಚಾಮರಾಜಪುರಂ : : ಮೈಸೂರು-4

HRUDAYAGEETHA-a social novel by Triveni, Published by Triveni Publications, Chamarajapurm, Mysore-4 First edition of Triveni Publications 1987

© ಮೀರಾ ಹರೀಶ್ ಕುಮಾರ್
1152, ಚಾಮರಾಜಪುರಂ, ಮೈಸೂರು–4

ಮುದ್ರಕರು :
ಸಂಜಯ್ ಪ್ರಿಂಟರ್ಸ್, ಮೈಸೂರು–1

# ಹೃದಯ ಗೀತ

ಪದ್ಮಿನಿ—ಗೀತಾ.

ಅವರಿಬ್ಬರೂ ಒಂದೇ ಕಾಲೇಜಿನಲ್ಲಿ, ಒಂದೇ ತರಗತಿಯಲ್ಲಿ, ಓದುತ್ತಿದ್ದರು ಆದರೂ ಅವರಲ್ಲಿ ಗೆಳೆತನ ಬೆಳೆದಿರಲಿಲ್ಲ. ಅವರಿಗೆ ಪರಸ್ಪರ ಪರಿಚಯವಿತ್ತೇ ಹೊರತು ಗಾಢವಾದ ಮೈತ್ರಿಯಿರಲಿಲ್ಲ. ಆಕಸ್ಮಾತ್ತಾಗಿ ದಾರಿಯಲ್ಲಿ ಎಲ್ಲಾದರೂ ಒಬ್ಬರನ್ನೊಬ್ಬರು ಸಂಧಿಸಿದರೆ ಮುಗುಳ್ನಗೆ ಬೀರಿ ಮುಂದುವರಿಯುತ್ತಿದ್ದರು

"ಇವಳು ಪದ್ಮಿನಿ, ನನ್ನ ಸಹಪಾಠಿ. ಬುದ್ಧಿವಂತೆ" ಎಂಬುದುಮಾತ್ರ ಗೀತಳಿಗೆ ತಿಳಿದಿತ್ತು."

ಪರಸ್ಪರ ಹೆಚ್ಚಿನ ಸ್ನೇಹಕ್ಕೆ, ವಿಶ್ವಾಸಕ್ಕೆ ಅವರಿಬ್ಬರೂ ಎಂದೂ ಪ್ರಯತ್ನಿಸಿರಲಿಲ್ಲ. ಅದಕ್ಕೆ ಕಾರಣಗಳಿಲ್ಲದೆ ಇರಲಿಲ್ಲ.

ಸೀನಿಯರ್ ಇಂಟರ್ ಆರ್ಟ್ಸ್ ವಿಭಾಗದಲ್ಲಿ ಸುಮಾರು ತೊಂಭತ್ತೈದು ಜನ ವಿದ್ಯಾರ್ಥಿನಿಯರಿದ್ದರು. ಎಲ್ಲ ವಿದ್ಯಾರ್ಥಿನಿಯರಲ್ಲಿಯೂ ಆತಿ ಸ್ನೇಹ ಬೆಳೆಸುವುದು ಅಸಾಧ್ಯವಾಗಿತ್ತು.

ಅವರಿಬ್ಬರ ಮನೆಗಳೂ ಒಂದೊಂದು ದಿಕ್ಕಿನಲ್ಲಿದ್ದುವು. ಅವರಿಬ್ಬರ ನಡುವೆ ಇದ್ದ ಮತ್ತೊಂದು ದೊಡ್ಡ ಅಂತರ—ಗೀತಾ ಶ್ರೀಮಂತರ ಮನೆಯ ಹುಡುಗಿ. ಗೀತಳ ತಂದೆ ನಗರದ ಪ್ರಮುಖ ಅಡ್ವೋಕೇಟರುಗಳಲ್ಲಿ ಒಬ್ಬರಾಗಿದ್ದರು. ಗೀತಳ ಬೆಲೆಬಾಳುವ ಉಡಿಗೆಗಳು, ಒಡವೆಗಳು, ಅಲಂಕಾರ ಕಾಲೇಜಿನ ಹುಡುಗಿಯರ ಕಣ್ಣುಗಳನ್ನು ಕುಕ್ಕುತ್ತಿದ್ದುವು. ಒಂದೊಂದು ದಿನ ಗೀತಾ ಕಾಲೇಜಿಗೆ ಕಾರಿನಲ್ಲಿ ಬರುತ್ತಿದ್ದಳು. ಪ್ರತಿದಿನವೂ ಅವಳು ತರಗತಿಗೆ ಬೇಕೆಂದು ತಡಮಾಡಿ ಬರುತ್ತಿದ್ದಳು.

ಟೀಚರು ಕ್ಲಾಸಿನೊಳಗೆ ಬಂದು ಅಟೆಂಡೆನ್ಸ್ ತೆಗೆಯುತ್ತಿದ್ದಾಗ ಗೀತಳ ತಪುಲತೆ ಬಾಗಿಲಿಗೆ ಹಬ್ಬಿ ನಿಂತು,

"ಎಕ್ಸ್‌ಕ್ಯೂಸ್ ಮಿ ಮಿಸ್" ಎಂದು ಇಂಪಾಗಿ ಹಾಡಿ ತರಗತಿಯೊಳಗೆ ಹರಿಹುಟಿತ್ತಿತ್ತು.

ಅವಳು ಬಾಗಿಲಿನಲ್ಲಿ ನಿಂತಕೂಡಲೇ ವಿದ್ಯಾರ್ಥಿನಿಯರ ಕಣ್ಣುಗಳು ಗೀತಳತ್ತ ಹರಿಯುತ್ತಿದ್ದುವು ಅಟೆಂಡೆನ್ಸ್ ತೆಗೆದುಕೊಳ್ಳುತ್ತಿದ್ದ ಟೀಚರು ಹಾಜರಿಪುಸ್ತಕದಿಂದ ತಲೆ ಎತ್ತಿ ಗೀತಳನ್ನು ಒಂದು ಬಾರಿ "ಯೆಸ್" ಎನ್ನುತ್ತಿದ್ದರು

ಗೀತ ಗಂಭೀರವಾಗಿ ಕ್ಲಾಸನ್ನು ಪ್ರವೇಶಿಸಿ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುವವರೆಗೆ ಕ್ಲಾಸಿನಲ್ಲಿ ಮೌನ ಕವಿಯುತ್ತಿತ್ತು ಎಲ್ಲರ ಕಣ್ಣುಗಳೂ ಅವಳ ಅಲಂಕಾರದಲ್ಲಿ ಕೇಂದ್ರೀಕೃತವಾಗುತ್ತಿದ್ದುವು

ಈವನಿಂಗ್ ಇನ್ ಪ್ಯಾರಿ, ಮಲ್ಲಿಗೆ ಹೂವಿನ ಪರಿಮಳ ತರಗತಿಯಲ್ಲಿ ಹಗುರವಾಗಿ ತೇಲಾಡುತ್ತಿತ್ತು.

ಗೀತಾ ತನ್ನ ಸ್ಥಳದಲ್ಲಿ ಕುಳಿತ ಮೇಲೆ ಟೀಚರು ಮತ್ತೆ ಹಾಜರಿಯನ್ನು ತೆಗೆದುಕೊಳ್ಳುತ್ತಿದ್ದರು

ಹುಡುಗಿಯರು ಒಬ್ಬರಿಗೊಬ್ಬರು ಪಿಸುಗುಟ್ಟುತ್ತಿದ್ದರು

"ಗೀತಾ ಉಟ್ಟಿರೋದು ಯಾವುದೋ ಹೊಸ ಸೀರೆ ಕಣೆ ಇದುವರೆಗೂ ಅವಳು ಒಂದು ದಿನವೂ ಈ ಸೀರೆ ಉಟ್ಟಿಹಾಗಿಲ್ಲ "

"ಅವಳಿಗೆ ಎಷ್ಟು ಸೀರೆ ಇದೆ ಎಣಿಸೋಣಾಂತ ನಾನೂ ಬಹಳ ದಿನದಿಂದ ಪ್ರಯತ್ನಪಡ್ತಿದ್ದೀನಿ ಆದರೆ ಸರಿಯಾದ ಲೆಕ್ಕವೇ ಸಿಗೋದಿಲ್ಲ."

"ಅವಳಿಗೇನಮ್ಮ—ಅವಳ ತಂದೆ ಐಶ್ವರ್ಯವಂತರು ಸಾಲದುದಕ್ಕೆ ಒಬ್ಬಳೇ ಮಗಳು."

"ತಾಯಿ ಬೇರೆ ಇಲ್ಲ. ಅವಳಪ್ಪ ತಾಯಿ ಇಲ್ಲದ ಹುಡಿಗೀಂತ ಅತೀ ಮುದ್ದಿನಿಂದ ಬೆಳೆಸಿದ್ದಾರೆ ಮಗಳ ಮಾತೇ ವೇದವಾಕ್ಯ ತಂದೇಗೆ. ತನಗೆ ಬೇಕುಬೇಕಾದ್ದನ್ನೆಲ್ಲಾ ತೆಗೆಸಿಕೊಂಡು ರಾಜಕುಮಾರಿಯ ಹಾಗೆ ವೈಭವ ಪಡ್ತಾಳೆ ಗೀತಾ."

"ಅದಕ್ಕೂ ಕೇಳಿಕೊಂಡು ಬಂದಿರಬೇಕು ಕಣೆ. ಈಗ ಗೌರೀಗೂ ತಾಯಿಯಿಲ್ಲ. ಅವಳ ತಂದೆಗೆ ಬೇಕಾದ ಹಾಗೇ ದುಡ್ಡಿದೆ ; ಆದರೆ ಅವರ ತಂದೆ ಎರಡನೆಯ ಮದುವೆ ಮಾಡಿಕೊಂಡು ಅವಳು ಹೇಳಿದ ಹಾಗೆ ಕೇಳಿಕೊಂಡು, ಗೌರೀಗೆ ಚಿತ್ರಹಿಂಸೆ ಕೊಡ್ತಿದ್ದಾರೆ."

"ಗೀತಳ ತಂದೆ ಎರಡನೇ ಮದುವೆ ಮಾಡಿಕೊಂಡಿಲ್ಲವೇ ?"

"ಇಲ್ಲ. ಗೀತಾ ಮಗುವಾಗಿದ್ದಾಗಲೇ ಅವರ ಹೆಂಡತಿ ಹೋಗಿಬಿಟ್ಟ ರಂತೆ. ಆಮೇಲೆ ಆತ ಇನ್ನೊಂದು ಮದುವೆ ಮಾಡಿಕೊಳ್ಳಲೇ ಇಲ್ಲವಂತೆ."

"ಆದರೆ ಅವರ ನಡತೆ ಚೆನ್ನಾಗಿಲ್ಲಾಂತ ಯಾರೋ ಹೇಳಿದರು, ನಿಜ ವೇನೆ ?"

—ಇಬ್ಬರ ಸಂಭಾಷಣೆಯನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದ ಮೂರನೆಯ ಹುಡುಗಿ ನಡುವೆ ಬಾಯಿಹಾಕಿ ಕೇಳಿದಳು

"ಯಾರಿಗೆ ಗೊತ್ತಮ್ಮಾ ಬಹಳ ವಯಸ್ಸಿನಲ್ಲಿಯೇ ಹೆಂಡತಿ ಹೋಗಿ ಬಿಟ್ಟರು ಆದುದರಿಂದ ಅವರ ನಡತೆ ಕೆಟ್ಟಿದ್ದರೂ ಕೆಟ್ಟಿರಬಹುದು ಅವರ ನಡತೆ ಹೇಗಿದ್ದರೇನು ? ಆತ ಕೈತುಂಬಾ ಹಣ ಸಂಪಾದಿಸುತ್ತಾರೆ. ಆ ನವಾಬನ ಶಹಜಾದಿ ಈ ಗೀತಾ ಅಲ್ಲವೇನೆ ಪದ್ಮಿನಿ ?"

ಪದ್ಮಿನಿ ಗೆಳತಿಯರ ಮಾತುಗಳನ್ನುಕೇಳಿಸಿಕೊಳ್ಳುತ್ತಿದ್ದರೂ ನಿರಾಸಕ್ತಿ ಯಿಂದ ಕುಳಿತ್ತಿದ್ದಳು

ಅವಳ ಮಿಂಚುಗಣ್ಣುಗಳು ಟೀಚರಿನ ಮುಖವನ್ನು ನೋಡು ತ್ತಿದ್ದುವು ಕಿವಿಗಳು ಗೆಳತಿಯರ ಮಾತುಗಳನ್ನು ಹೀರುತ್ತಿದ್ದುವು.

ಕೃಪಳ ಪ್ರಶ್ನೆಗೆ ಪದ್ಮಿನಿ ಅವಳ ಕಡೆ ತಿರುಗದೆ ಟೀಚರಿನ ಮುಖವನ್ನು ನೋಡುತ್ತಲೇ "ನೋ ಕಾಮೆಂಟ್ಸ್" ಎಂದು ಉತ್ತರಕೊಟ್ಟಳು.

"ಇವಳೊಬ್ಬಳು ಸನ್ಯಾಸಿನಿ. " ಎಂದು ಕೃಪಾ ಪದ್ಮಿನಿಯನ್ನು ಮೂದಲಿಸುವಷ್ಟರಲ್ಲಿ ಉಪಾಧ್ಯಾಯಿನಿ ಕೃಪಾ ಮಾತಾನಾಡುತ್ತಿರುವುದನ್ನು ಗಮನಿಸಿ,

"ಕೃಪಾ, ಈ ಪ್ರಶ್ನೆಗೆ ಉತ್ತರ ಹೇಳು" ಎಂದರು.

ಕೃಪಾ ತಬ್ಬಿಬ್ಬಾಗಿ ಎದ್ದು ನಿಂತಳು. ಟೀಚರಿನ ಪ್ರಶ್ನೆಯನ್ನು ಅವಳು ಕೇಳಿಸಿಕೊಂಡಿದ್ದರೆತಾನೇ ಉತ್ತರ ಹೇಳುವುದು ?

ಪದ್ಮಿನಿ ಕೃಪಳ ಸೆರಗನ್ನು ಹಿಡಿದು ಜಗ್ಗಿದಳು. ಕೃಪಾ ಪಕ್ಕಕ್ಕೆ ತಿರುಗಿ ದಳು. ಪದ್ಮಿನಿ ತನ್ನ ನೋಟ್ಸಿನ ಮೇಲೆ ಕೈ ಇಟ್ಟಳು. ಕೃಪಾ ಓದಿ ಕೊಂಡಳು.

"ನಾನು ಮದುವೆಯಾದರೂ ಸಂತೋಷವಾಗಿರುವುದಿಲ್ಲ. ಯಾಕೆಂದರೆ ಮತ್ತೊಬ್ಬ ವ್ಯಕ್ತಿಯ ಜವಾಬ್ದಾರಿ ನನ್ನ ಮೇಲಿರುತ್ತದೆ. ಆದುದರಿಂದ

ನಾನು ಸುಖವಾಗಿರುವುದಿಲ್ಲ. ನಾನು ಮದುವೆಮಾಡಿಕೊಳ್ಳದಿದ್ದರೂ ಸುಖವಾಗಿರುವುದಿಲ್ಲ. ಯಾಕೆಂದರೆ ನನ್ನನ್ನು ನಾನೇ ನೋಡಿಕೊಳ್ಳಬೇಕು. ತನ್ನ ಜವಾಬ್ದಾರಿಯನ್ನು ನಾನೇ ಹೊರಬೇಕು. ಆದುದರಿಂದ ಮದುವೆಯಾಗಲಿ, ಮದುವೆಯಾಗದಿರಲಿ ನಾನು ಸುಖವಾಗಿರುವುದಿಲ್ಲ."

ಪದ್ಮಿನಿಯ ಕೈಗಳು ಅದರ ಕೆಳಗೆ ಬರೆದುವು.

"ಈ ಡೈಲಮಾನ ರಿಪೀಟ್ ಮಾಡು ಇದೇ ಮೇಡಂ ಕೇಳಿದ ಪ್ರಶ್ನೆ."

ಪ್ರಶ್ನೆಯೇನೋ ಕೃಪಳಿಗೆ ತಿಳಿದಹಾಗಾಯಿತು ಆದರೆ ಉತ್ತರ ?

"ನಾನು ಪ್ರಶ್ನೆ ಕೇಳಿದಾಗ ನೀನು ಏನು ಮಾಡುತ್ತಿದ್ದೆ ? ನಾನು ಏನು ಪ್ರಶ್ನೆ ಕೇಳಿದೆ ಹೇಳು."

—ಕೃಪಳ ಪೆಚ್ಚುಮುಖ ನೋಡಿ ಅವಳಿಗೆ ಈ ಪ್ರಶ್ನೆ ಗೊತ್ತಿರಲಾರದು ಎಂದು ಉಪಾಧ್ಯಾಯಿನಿ ಗುಡುಗಿದರು

ಕೃಪಾ ಅವರು ಕೇಳಿದ ಪ್ರಶ್ನೆಯನ್ನು ಹೇಳಿದಳು.

ಉಪಾಧ್ಯಾಯಿನಿ ಕೊಂಚ ಪೆಚ್ಚಾಗಿ "ಸರಿ, ಉತ್ತರ ಹೇಳು" ಎಂದರು.

ಕೃಪ ತಲೆ ತಗ್ಗಿಸಿದಳು

"ಪದ್ಮಿನಿ" ಉಪಾಧ್ಯಾಯಿನಿ ಕೂಗಿದರು

ಪದ್ಮಿನಿ ಎದ್ದುನಿಂತು ತಡೆಬಡೆಯಿಲ್ಲದೆ ಉತ್ತರಿಸಿದಳು

"ನಾನು ಮದುವೆಯಾದರೆ ಸುಖವಾಗಿರುತ್ತೇನೆ. ಯಾಕೆಂದರೆ ನನ್ನನ್ನು ನೋಡಿಕೊಳ್ಳುವ ವ್ಯಕ್ತಿಯೊಬ್ಬರು ಇರುತ್ತಾರೆ, ನಾನು ಮದುವೆಯಾಗದಿದ್ದರೂ ಸುಖವಾಗಿರುತ್ತೇನೆ. ಯಾಕೆಂದರೆ ಬೇರೊಂದು ವ್ಯಕ್ತಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನಗಿರುವುದಿಲ್ಲ, ಆದುದರಿಂದ ನಾನು ಮದುವೆಯಾಗಲಿ, ಮದುವೆಯಾಗದಿರಲಿ ಸುಖವಾಗಿರುತ್ತೇನೆ."

"ಗುಡ್."

ಗೆಳತಿಯರು ನಿಲ್ಲಿಸಿದ್ದ ಮಾತಿನಮಳೆ ಮತ್ತೆ ಮುಂದಕ್ಕೆ ಹೇಯ್ದುಕೊಂಡು ಹೋಗಿತ್ತು.

ಗೀತಳ ಪುಣ್ಯವನ್ನು ಕಂಡು ಹುಡುಗಿಯರನೇಕರು ಕರುಬುತ್ತಿದ್ದರು.

ಆದರೆ ಪದ್ಮಿನಿ ಈ ಪಂಗಡಕ್ಕೆ ಸೇರಿರಲಿಲ್ಲ. ಗೀತಾ 'ಶಹಜಾದಿ' ಎಂಬುದು ಅವಳಿಗೆ ತಿಳಿದಿತ್ತು. ಆದುದರಿಂದಲೇ ಪದ್ಮಿನಿ ಗೀತಳಿಂದ ಕೂಡ

ಉಳಿದಿದ್ದಳು. ತಾನಾಗಿಯೇ ಗೀತಳ ಪರಿಚಯ ಮಾಡಿಕೊಳ್ಳುವ ಅವಕಾಶವೂ ಇರಲಿಲ್ಲ ಪದ್ಮಿನಿಗೆ

ಅವರಿಬ್ಬರೂ ಒಂದು ಸಂದರ್ಭದಿಂದ ಗೆಳತಿಯರಾದರು. ಗೀತಾ ಒಂದು ವಾರದಿಂದ ಕಾಲೇಜಿಗೆ ಬಂದಿರಲಿಲ್ಲ ಅವಳ ಗೈರುಹಾಜರಿಯನ್ನು ಉಪಾಧ್ಯಾಯಿನಿಯಿಂದ ಮೊದಲ್ಗೊಂಡು ಕಾಲೇಜಿನ ಜವಾನನವರೆಗೆ ಗಮನಿಸಿದ್ದರು. ತರಗತಿಗೆ ಎರಡು ನಿಮಿಷ ತಡವಾಗಿ ಬರುತ್ತಿದ್ದ ಗೀತಾ ಒಂದು ವಾರದಿಂದಲೂ ಕಾಣಿಸಿರಲಿಲ್ಲ ಪ್ರತಿದಿನವೂ ಅವಳ ಗೈರುಹಾಜರಿಯನ್ನು ವಿದ್ಯಾರ್ಥಿನಿಯರು ಗಮನಿಸಿದ್ದರು

"ನವಾಬರ ಜೊತೆ ಶಹಜಾದಿ ತಿರುಗಾಡಿಕೊಂಡು ಬರೋಕೆ ಹೋಗಿರ ಬಹುದು" ಎಂದು ಟೀಕಿಸಿದ್ದಳು ಕೃಪಾ

"ಲೀವ್ ಲೆಟರ್ ಕಳಿಸಬಹುದಾಗಿತ್ತು" ಕಪಿಲಾ ಹೇಳಿದಳು

"ಲೀವ್ ಲೆಟರ್ ಕಳಿಸೋಕೂ ಸಮಯವಿರಲಿಲ್ಲವೋ ಏನೋ ಅವಳ ತಂದೆ ಒಂದು ತರಹಾ ಮನುಷ್ಯರಂತೆ. ಆಗಾಗ್ಗೆ ಬೆಂಗಳೂರಿಗೆ ಹೋಗಿ ಕಂಟೋನ್ಮೆಂಟಿನಲ್ಲಿ ಪ್ರೇಯಸಿಯ ಮನೆಯಲ್ಲಿ ಒಂದೆರಡು ದಿನ ವಿದ್ದು ಬರೋದು ಮಾಮೂಲಂತೆ ಈಗಲೂ. "

"ಹಾಗೆ ಅವರು ಹೋಗಿರುವುದಾದರೆ ಗೀತಾಳ ನ್ಯಾಕೆ ಕರೆದು ಕೊಂಡು ಹೋಗಬೇಕು ? ಅಲ್ಲವೇನೆ ಪದ್ಮಿನಿ ? ಎಂದು ಕಪಿಲಾ ಕೇಳಿದಳು.

ಪದ್ಮಿನಿಯ ಬೆಳುಬೆರಳುಗಳು ಉಪಾಧ್ಯಾಯಿನಿ ಹೇಳಿದುದನ್ನೆಲ್ಲಾ ಪುಸ್ತಕದಲ್ಲಿ ಬರೆಯುತ್ತಿತ್ತು. ಕಪಿಲಳ ಮಾತಿಗೆ ಪದ್ಮಿನಿ ಪುಸ್ತಕದಿಂದ ತಲೆ ಎತ್ತದೆ 'ನೋ ಕಾಮೆಂಟ್ಸ್' ಎಂದಳು.

ಸಂಜೆ ಆಟ ಮುಗಿಸಿಕೊಂಡು ಪದ್ಮಿನಿಯು ಮನೆಯ ಕಡೆ ಹೊರಟಳು. ಒಂದೇ ಸಮನೆ ಎರಡು ಗಂಟೆಗಳ ಕಾಲ 'ರಿಂಗ್' ಆಡಿದ್ದುದರಿಂದ ಪದ್ಮಿನಿಯ ಬಲತೋಳು ಸ್ವಲ್ಪ ನೋಯುತ್ತಿತ್ತು. ಚೆನ್ನಾಗಿ ಆಟವಾಡಿದುದ ರಿಂದ ಅವಳಿಗೆ ಹಸಿವೆಯಾಗುತ್ತಿತ್ತು.

ಎದುರಿಗೆ ಗೀತಳ ಮನೆಯ ಜವಾನಕೈಲಿ ನಾಯಿಯ ಸರಪಳಿ ಹಿಡಿದು ಕೊಂಡು ಬರುತ್ತಿದ್ದ. ಮುದ್ದಾದ ಕಪ್ಪು ಜೂಲುನಾಯಿಯೊಂದು ಅವನು

ಕೈಲಿ ಹಿಡಿದಿದ್ದ ಸರಪಳಿಯನ್ನು ಜಗ್ಗಿ ಎಳೆಯುತ್ತಾ ಮುಂದೆ ಓಡುತ್ತಿತ್ತು

ಎಷ್ಟೋ ದಿನ ಅವನು ಗೀತಳನ್ನು ಕರೆದುಕೊಂಡು ಹೋಗಲು ಬರುತ್ತಿದ್ದ—ಸಂಜೆ ಕಾಲೇಜಿನಲ್ಲಿ ಏನಾದರೂ ಸಮಾರಂಭವಿದ್ದು ಮನೆಗೆ ಹೊರಡುವುದು ತಡವಾದಾಗ

ಗೆಳತಿಯರ ಟೀಕೆಗಳನ್ನು ಪದ್ಮಿನಿಯ ಮನಸ್ಸು ಮೆಲುಕುಹಾಕಿತು ಮನಸ್ಸು ಯಾವುದೊಂದು ನಿರ್ಧಾರವನ್ನು ಮಾಡುವುದಕ್ಕೆ ಮುಂಚೆಯೇ ಪದ್ಮಿನಿಯ ತುಟಿಗಳು ಎರಡಾದವು

"ಗೀತ ಕಾಲೇಜಿಗೆ ಯಾಕೆ ಬರುತ್ತಿಲ್ಲ ?"

ಪದ್ಮಿನಿಯ ಪ್ರಶ್ನೆ ಕೇಳಿ ಜವಾನ ನಿಂತು ಹೇಳಿದ

"ಅವರಿಗೆ ಮೈಗೆ ಹುಷಾರಿಲ್ಲ "

"ಏನಾಗಿದೆ ?"

"ಅದೇನೋ 'ಫ್ಲೂ' ಅಂತಿದ್ದರಪ್ಪಾ "

"ಜ್ವರ ಬಿಟ್ಟಿದೆಯೆ ?"

"ಇಲ್ಲ "

"ಔಷಧಿ ಕೊಡಿಸುತ್ತಿದ್ದಾರೇನು ?"

"ಹೂಂ ರಾಯರೇ ಎರಡು ಹೊತ್ತೂ ಕಾರ್‍ನಾಗೆ ಡಾಕ್ಟರನ್ನು ಮನೀಗೆ ಕರ್ಕೊಂಡು ಬರ್ತಾರೆ "

ಕಂಟೋನ್ಮೆಂಟು ಪ್ರೇಯಸಿಯ ಮನೆ

ಪದ್ಮಿನಿಗೆ ಆ ರಾಯರಲ್ಲಿ ಒಂದು ಬಗೆಯ ಮರುಕ ಉಂಟಾಯಿತು ಪಾಪ ಒಂದು ವಾರದಿಂದಲೂ ಗೀತಾ ಕಾಲೇಜಿಗೆ ಬಂದಿಲ್ಲ ಮೈಗೆ ಹುಷಾರಿಲ್ಲದೆ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದಾಳೆ ತಾನೇಕೆ ಅವಳನ್ನು ಒಮ್ಮೆ ನೋಡಿಕೊಂಡು ಬರಬಾರದು ?

ಪದ್ಮಿನಿಯ ಕಾಲುಗಳು ಗೀತಳ ಮನೆಯತ್ತ ಹೆಜ್ಜೆ ಹಾಕಿದುವು ಮೆಯಿನ್ ರೋಡಿನಲ್ಲಿದ್ದ ದೊಡ್ಡ ಮಹಡಿ ಮನೆಯೊಂದರ ಕಬ್ಬಿಣದ ಬಾಗಿಲಿನ ಮುಂದೆ ಪದ್ಮಿನಿ ಒಂದುಗಳಿಗೆ ಯೋಚಿಸುತ್ತಾ ನಿಂತಳು

ಒಳಗೆ ಹೋಗಲೋ ಬೇಡವೋ ?

ಇಲ್ಲಿಯುವರೆವಿಗೆ ಬಂದದ್ದಾಯಿತು. ಹೋಗಿಯೇ ಬಿಡೋಣ.

ಪದ್ಮಿನಿ ಬಾಗಿಲಿನ ಚಿಲಕವನ್ನು ಸರಿಸಿದಳು ಬಾಗಿಲಿನ ಚಿಲಕ ತೆಗೆಯುವಾಗ ಅವಳ ಕಣ್ಣುಗಳು ಗಾಜಿನ ಗೂಡಿನಲ್ಲಿದ್ದ ಅಮೃತಶಿಲೆಯ ಹಲಗೆಯ ಕಡೆ ಹೊರಳಿದವು ಕಪ್ಪು ಅಕ್ಷರಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಮನೆಯ ಹೆಸರನ್ನು ಹಲಗೆಯ ಮೇಲೆ ಕೆತ್ತಿದ್ದರು " ಸುದರ್ಶನ"

ಪದ್ಮಿನಿ ಕಾಂಪೌಂಡನ್ನು ಪ್ರವೇಶಿಸಿ ಮತ್ತೆ ಬಾಗಿಲನ್ನು ಮುಚ್ಚಿ ಮನೆಯ ಕಡೆ ನೋಡಿದಳು

ಎಷ್ಟು ವಿಶಾಲವಾದ ಮನೆ !

ಮನೆಯ ಸುತ್ತಲೂ ಸೊಗಸಾದ ಉದ್ಯಾನವನವಿತ್ತು ಮನೆಯ ಮುಂಭಾಗದಲ್ಲಿ ಚಿಕ್ಕದೊಂದು ನೀರಿನ ಚಿಲುಮೆಯಿತ್ತು

ರಂಗುರಂಗಿನ ಹೂವುಗಳು ಗಾಳಿಯಲ್ಲಿ ತಲೆ ಕುಣಿಸಿ ಪದ್ಮಿನಿಯನ್ನು ಸ್ವಾಗತಿಸಿದುವು

ಪದ್ಮಿನಿ ಪೋರ್ಟಿಕೋದಲ್ಲಿ ನಿಂತಳು

ವರಾಂಡದಲ್ಲಿ ವ್ಯಕ್ತಿಯೊಬ್ಬರು ಪೇಪರೊಂದನ್ನು ಮುಖಕ್ಕೆ ಅಡ್ಡ ಲಾಗಿ ಹಿಡಿದು ಓದುತ್ತಾ ಆರಾಮ ಕುರ್ಚಿಯ ಮೇಲೆ ಕುಳಿತಿದ್ದರು

ಪೇಪರಿನ ಮೇಲಿನಿಂದ ಸಿಗರೇಟಿನ ಹೊಗೆ ಸುರುಳಿ ಸುರುಳಿಯಾಗಿ ಮೇಲೆ ಹೋಗುತ್ತಿದ್ದುದನ್ನು ಪದ್ಮಿನಿ ನೋಡಿದಳು

ಕಾಲಿನಲ್ಲಿ ಮಿರಮಿರನೆ ಮಿಂಚುತ್ತಿದ್ದ ಕಪ್ಪು ಬಣ್ಣದ ಶೂಸುಗಳು, ಗರಿಮುರಿಯಾದ ಬಿಳಿಯ ಶರಾಯಿ ಮಾತ್ರ ಪದ್ಮಿನಿಗೆ ಕಾಣಿಸಿತು

ಇವರೇ 'ಸುದರ್ಶನ'ದ ನವಾಬರಿರಬೇಕೆಂದುಕೊಂಡಳು ಪದ್ಮಿನಿ ಆತ ಪತ್ರಿಕೆ ಓದುವುದರಲ್ಲಿ ಮಗ್ನರಾಗಿದ್ದರು ಪದ್ಮಿನಿ ಬಾಗಿಲು ತೆಗೆದು ಕೊಂಡು ಒಳಗೆ ಬಂದುದನ್ನು ಅವರು ಗಮನಿಸಿಯೇ ಇರಲಿಲ್ಲ

ಏನೆಂದು ಕರೆಯುವುದು ?

ಸಾರ್ ? ಸರಿಯಾಗಿಲ್ಲ ಗೀತಾ ? ಪಾಪ ! ಹಾಸಿಗೆ ಹಿಡಿದು ಮಲಗಿದ್ದಾಳೆ

ಪದ್ಮಿನಿ ಕೈ ಬಳೆಗಳನ್ನು ಸರಿಸಿ ಸದ್ದು ಮಾಡಿದಳು

ಆದರೆ ಪೇಪರೋದುತ್ತಿದ್ದ ವ್ಯಕ್ತಿ ತಲೆ ಎತ್ತಲಿಲ್ಲ ಪದ್ಮಿನಿಗೆ ಕೊಂಚ ನಿರಾಶೆಯಾಯಿತು.

ಪದ್ಮಿನಿ ಕೆವ್ಮ್ಮಿದಳು

ಆತ ಪೇಪರನ್ನು ಕೆಳಗಿಳಿಸಿ ಪೇಪರಿನ ಮೇಲಿನಿಂದ ಪದ್ಮಿನಿಯನ್ನು ನೋಡಿದರು

ಪದ್ಮಿನಿಯ ಮನಸ್ಸಿನಲ್ಲಿದ್ದ ಗೀತಳ ತಂದೆಯ ಚಿತ್ರ ಸಂಪೂರ್ಣವಾಗಿ ಮಾಯವಾಯಿತು

ಗೆಳತಿಯರ ಟೀಕೆಗಳನ್ನು ಕೇಳಿ ಕೇಳಿ, ಗೀತಳ ತಂದೆಯೆಂದರೆ ಪದ್ಮಿನಿ ಒಂದು ಚಿತ್ರವನ್ನು ಕಲ್ಪಿಸಿಕೊಂಡಿದ್ದಳು

ಗಿಡ್ಡ ವ್ಯಕ್ತಿ, ಬಟ್ಟ ತಲೆ, ತಲೆಯ ಹಿಂಭಾಗದಲ್ಲಿ ನೆರೆತ ಸ್ವಲ್ಪ ಕೂದಲು, ಬಿಳಿದಾಗುತ್ತಿದ್ದ ಮೀಸೆ, ಬೊಜ್ಜು ಮೈ, ಪ್ರಧಾನವಾಗಿ ಕಾಣುವ ಹೊಟ್ಟೆ, ಕೆಂಪು ಕಣ್ಣುಗಳು, ಪುಂಡು ಮುಖ, ದಪ್ಪ ಗಾಜಿನ ಕನ್ನಡದ ವ್ಯಕ್ತಿಯ ಚಿತ್ರವೊಂದು ಅವಳ ಚಿತ್ತಭಿತ್ತಿಯ ಮೇಲೆ ನಿಂತಿತ್ತು

ಆದರೆ ಎದುರಿಗಿದ್ದ ವ್ಯಕ್ತಿ ?

ನೋಡಿದ ಕೂಡಲೇ ಒಳ್ಳೆಯ ಆಟಗಾರನಿರಬಹುದೆಂದು ಹೇಳಬಹುದಾದ ಶರೀರ, ಪ್ರಮಾಣಬದ್ಧವಾದ ನಿಲುವು, ದಟ್ಟವಾದ ಕಪ್ಪು ಕೂದಲಿನ ಕ್ರಾಪು, ಸೌಮ್ಯ ಮುಖ

ಗೀತಳ ಅಣ್ಣ—ಹಿರಿಯಣ್ಣ ಇರಬಹುದು ಎಂದಿತು ಮನಸ್ಸು. ಆತ ಪೇಪರನ್ನು ಕೆಳಗಿಟ್ಟು, ಪದ್ಮಿನಿಯ ಕಡೆ ನೋಡಿದರು ಅವರ ಮುಖ ಯಾವುದೋ ತೊಂದರೆಗೀಡಾದ ಮಗುವಿನ ಮುಖದಂತಿತ್ತು ತುಂಟತನ ಮಾಡಿಬಂದ ಪೋರನ ಕ್ರಾಪಿನಂತೆ ಅವರ ತಲೆಗೂದಲು ಕೆದರಿತ್ತು ಒಂದೆರಡು ಕೂದಲಿನ ಎಸಳುಗಳು ಹಣೆಯ ಮೇಲೆ ನಲಿದಾಡುತ್ತಿದ್ದವು

"ಯಾರು ?" ಎನ್ನುತ್ತಾ ಆತ ಎದ್ದು ನಿಂತರು

ಅದೇಕೋ ಪದ್ಮಿನಿಗೆ ಗಂಟಲು ಕಟ್ಟಿದಂತಾಯಿತು ಅವ್ಯಕ್ತ ಕೈಯೊಂದು ಅವಳ ಗಂಟಲನ್ನು ಅದುಮಿ ಹಿಡಿದಂತಾಯಿತು

"ನಾನು ನಾನು ಕಾಲೇಜಿನಲ್ಲಿ " ಪದ್ಮಿನಿ ತೊದಲಿದಳು.

ಪದ್ಮಿನಿ ಪೋರ್ಟಿಕೊದಲ್ಲಿನ ಕೆಳಗೋಡೆಯ ಮೆಟ್ಟಲಿನ ಮೇಲೆ ನಿಂತಿದ್ದಳು ಆತ ಮುಂದೆ ಬಂದ ಮೇಲು ಮೆಟ್ಟಲಿನ ಮೇಲೆ ನಿಂತು ಪದ್ಮಿನಿಯ ಕಡೆ ನೋಡಿದರು.

ಆಟವಾಡಿ ದಣಿದಿದ್ದ ಮುಖ ಹಸಿವಿನಿಂದ ಮತ್ತಷ್ಟು ಕಳೆಗುಂದಿತ್ತು. ಸಾಧಾರಣವಾದೊಂದು ನೂಲಿನ ಸೀರೆ, ಕೆದರಿದ ತಲೆ, ಕೈಗಳಲ್ಲಿನ ಒಂದೊಂದು ಗಾಜಿನ ಬಳೆ, ಬರಿದಾದ ಕೊರಳಿನ ಪದ್ಮಿನಿಯನ್ನು ನೋಡಿ ಆತ ಏನೆಂದು ಬಗೆದರೋ ?

"ಈಗೇನು ನನಗೆ ಸಹಾಯ ಮಾಡೋಕ್ಕಾಗುವುದಿಲ್ಲ ಮುಂದಕ್ಕೆ ಹೋಗಿರಮ್ಮ."

ಆತ ಅಸಹನೆಯಿಂದ ನುಡಿದರು

ಸಹಾಯ ! ಪದ್ಮಿನಿಗೆ ಅವರ ಮಾತುಗಳು ಅರ್ಥವಾಗಲಿಲ್ಲ ಅವರ ಧೋರಣೆ ನೋಡಿ ಅವಳ ನಾಲಗೆಯ ಶಕ್ತಿ ಉಡುಗಿತ್ತು

"ನಾನು ನಾನು ಕಾಲೇಜಿನಲ್ಲಿ " ಎಂದಳು ಮತ್ತೆ ಪದ್ಮಿನಿ

"ನಾವು ತಾನೇ ಎಷ್ಟು ಜನಕ್ಕೇಂತ ಸಹಾಯ ಮಾಡೋಕ್ಕಾಗುತ್ತದೆ ? ಇದುವರೆವಿಗೂ ಎಂಟು, ಹತ್ತು ಜನರಿಗಿಂತಲೂ ಹೆಚ್ಚು ವಿದ್ಯಾರ್ಥಿಗಳು ಬಂದಿದ್ದರು ನಮ್ಮ ಯೋಚನೆ ಕಷ್ಟ ನಮಗೆ ನೀವು ಸುಮ್ಮನೆ ತೊಂದರೆ ಮಾಡಬೇಡಿ ಹೊರಟುಹೋಗಿ" ಎಂದು ಹೇಳಿ ಆತ ಹೊಗೆ ಕಾರುತ್ತಿದ್ದ ಸಿಗರೇಟನ್ನು ಮತ್ತೆ ಬಾಯಲ್ಲಿ ಕಚ್ಚಿದರು

ತಾನು ವಿದ್ಯೆಗಾಗಿ ಸಹಾಯ ಯಾಚಿಸುತ್ತಿರಬಹುದೆಂದು ಆತ ತಿಳಿದಿದ್ದಾರೆ. ಎಂದು ಪದ್ಮಿನಿಗೆ ಈಗ ಅರ್ಥವಾಯಿತು

ಅವಮಾನದಿಂದ ಪದ್ಮಿನಿಯ ಮುಖ ಕೆಂಪಾಯಿತು ಕೋಪದಿಂದ ಅವಳ ಕಣ್ಣುಗಳು ಉಜ್ವಲವಾದವು ಪದ್ಮಿನಿ ಅವುಡುಗಚ್ಚಿ ಹೇಳಿದಳು.

"ನಾನು ಗೀತಾಳ ಸಹಪಾಠಿ, ಗೀತಾಗೆ ಮೈಗೆ ಹುಷಾರಿಲ್ಲವೆಂದು ಕೇಳಿದೆ " ಆದುದರಿಂದ ಅವಳನ್ನು ನೋಡಿಕೊಂಡು ಹೋಗಲು ಬಂದಿದ್ದೆ ...ಅಷ್ಟೇ.. "

ಶತಪಥ ಸುತ್ತುತ್ತಿದ್ದ ಆತ ತಟ್ಟನೆ ನಿಂತು,

"ಕ್ಷಮಿಸಿ. ನಾನು ಯಾರೋ ಏನೋ ಎಂದು ಭಾವಿಸಿದ್ದೆ ಗೀತಳ ಯೋಚನೆಯಿಂದಾಗಿ ನನಗೆ ಬೇಸರವಾಗಿತ್ತು ಸಾಲದುದಕ್ಕೆ ಈ ಮುಸುಕು ಬೆಳಕು. . " ಎನ್ನುತ್ತಾ ಅವರು ವರಾಂಡದ ದೀಪದ ಸ್ವಿಚ್ಚನ್ನು ಒತ್ತಿದರು.

ದೀಪದ ಕಿರಣಗಳು ಪದ್ಮನಿಯ ಮುಖದ ಮೇಲೆ ಬೆಳಗಿದುವು.

ಅವಳು ಎಡಗೈಯಿಂದ ಪುಸ್ತಕಗಳನ್ನು ಎದೆಗೊತ್ತಿ ದಿಟ್ಟತನದಿಂದ ತಲೆ ಎತ್ತಿ ಅವರ ಕಡೆ ನೋಡುತ್ತಿದ್ದಳು

ಕ್ಷಮಿಸಬೇಕಂತೆ

ವಿಶಾದದ, ವ್ಯಂಗ್ಯಬೆರೆತ ನಗೆಯೊಂದು ಅವಳ ತುಟಿಗಳ ಮೇಲೆ ಕುಣಿದಾಡಿತು

ಬಡವಳೆಂದರೆ ಎಷ್ಟು ತಾತ್ಸಾರ ! ತನ್ನ ನೂಲಿನ ಸೀರೆಗೆ ಸಿಕ್ಕಿದ ಗೌರವ ಇದು ! ತಾನು ಸೊಗಸಾದ ಧರ್ಮಾವರದ ಸೀರೆಯುಟ್ಟುಕೊಂಡು ಬಂದಿದ್ದರೆ ? ಸಾಲದುದಕ್ಕೆ ಬೂಟಾಟಿಕೆ ಬೇರೆ ಕ್ಷಮೆ ತಪ್ಪು ತಿಳಿವಳಿಕೇಂತ

ಅವಳ ತುಟಿಯ ಮೇಲೆ ಸುಳಿದ ನಗೆಗೆ ಕಪ್ಪು ಬಣ್ಣ ಹಚ್ಚಿದರು ಆತ

ಅವರೂ ನಸುನಕ್ಕು "ಬನ್ನಿ ಗೀತಾನ ನೋಡುವಿರಂತೆ" ಎಂದರು

ಏನೂ ಬೇಕಿಲ್ಲ ಎಂದು ಹೇಳಿ ಆತನ ಮುಖಕ್ಕೆ ರಪ್ಪನೆ ಹೊಡೆದು ಹಿಂತಿರುಗಿಬಿಡಬೇಕೆನಿಸಿತು ಪದ್ಮಿನಿಗೆ ಆದರೇಕೋ ಹಾಗೆ ಮಾಡುವುದು ಅವಳಿಂದ ಸಾಧ್ಯವಾಗಲಿಲ್ಲ ಆತ ಮುಂದ ಹೋದರು ಪದ್ಮಿನಿ ಅವರನ್ನು ಯಂತ್ರದಂತೆ ಹಿಂಬಾಲಿಸಿದಳು

ಆಗಲೇ ಕತ್ತಲು ಕವಿಯುತ್ತಿದ್ದ ಕೊಠಡಿಗಳಲ್ಲೆಲ್ಲ ಆತ ದೀಪವನ್ನು ಬೆಳಗಿಸುತ್ತಾ ಮುಂದೆ ಹೋದರು

ಮನೆಯ ಅಂದಚೆಂದವನ್ನು ನೋಡುವ ತಾಳ್ಮೆ ಪದ್ಮಿನಿಗಿರಲಿಲ್ಲ ಅವಳು ತಲೆ ತಗ್ಗಿಸಿ 'ಸುದರ್ಶನ' ವಾಸಿಯನ್ನು ಹಿಂಬಾಲಿಸಿದಳು

ಆತ ಮಹಡಿಯೇರಿ ಕೊಠಡಿಯೊಂದರ ಮುಂದೆ ನಿಂತು,

"ಗೀತಾ" ಎಂದು ಮೃದುವಾಗಿ ಕರೆದರು

ದೀಪದ ಬೆಳಕು ಕಣ್ಣು ಚುಚ್ಚುವುದೆಂದು ಗೀತಾ ಇರುಳು ದೀಪವನ್ನು ಮಾತ್ರ ಹಚ್ಚಿಸಿದ್ದಳು

"ಏನಣ್ಣ ?"

"ಇನ್ನೂ ನಿದ್ದೆ ಬಂದಿಲ್ಲವೇನಮ್ಮ ?" ವಾತ್ಸಲ್ಯ ಆತನ ದನಿಯಲ್ಲಿ ಉಕ್ಕಿ ಉಕ್ಕಿ ಬರುತ್ತಿತ್ತು

"ಇಲ್ಲ"

"ನಿನ್ನ ನೋಡೋಕೆ ಅದು ಯಾರೋ ನಿನ್ನ ಸ್ನೇಹಿತೆ ಬಂದಿದ್ದಾರೆ. "

"ಒಳಗೆ ಬರಹೇಳಣ್ಣ ದೀಪ ಹಾಕು ."

ರೂಮಿನ ದೊಡ್ಡ ದೀಪ ಬೆಳಗಿತು ಪದ್ಮಿನಿ ರೂಮಿನ ಬಾಗಿಲ ಬಳಿ ಹೊಸಿಲ ಆಚೆ ನಿಂತಿದ್ದಳು ಗೀತಾ ಹಾಸಿಗೆಯ ಮೇಲಿನಿಂದಲೇ ಪದ್ಮಿನಿಯ ಮುಖವನ್ನು ನೋಡಿ, ಬತ್ತಿದ ಮುಖದಲ್ಲಿ ನಗೆತುಂಬಿ,

"ಒಳಗೆ ಬಾ ಪದ್ಮಿನಿ" ಎಂದಳು

ಪದ್ಮಿನಿ ಒಳಗೆ ಬಂದಳು ಗೀತ ಮಂಚದ ಬಳಿಯಿದ್ದ ಕುರ್ಚಿಯ ಕಡೆ ಕೈ ತೋರಿಸಿ

"ಕುರ್ಚೀನ ಮಂಚಕ್ಕೆ ಸ್ವಲ್ಪದೂರಕ್ಕೆ ಹಾಕಿಕೊಂಡು ಕುಳಿತುಕೋ 'ಫ್ಲೂ' ಸೋಂಕು ಎಂದು ಡಾಕ್ಟರು ಹೇಳುತ್ತಾರೆ " ಎನ್ನುತ್ತಾ ತಂದೆಯ ಕಡೆತಿರುಗಿ

"ಅಣ್ಣಾ, ಇವಳು ನನ್ನ ಸಹಪಾಠಿ ಪದ್ಮಿನಿ ಇವರು ನಮ್ಮ ತಂದೆ" ಎಂದಳು! ಇವರು ಗೀತಾಳ ತಂದೆಯೇ!

"ನಮಸ್ಕಾರ" ಆತ ಕೈ ಜೋಡಿಸಿದರು ಪದ್ಮಿನಿ ಬದಲು ಹೇಳದೆ ಸುಮ್ಮನೆ ಕೈಮುಗಿದಳು

ಪದ್ಮಿನಿ ಕುರ್ಚಿಯನ್ನೆಳೆದುಕೊಂಡು ಕುಳಿತಳು ಗೀತಳ ತಂದೆ ರೂಮಿನಿಂದ ಹೊರಗೆ ಹೋದರು ಮರುಗಳಿಗೆ ಅವರು ಮೆಟ್ಟಿಲು ಇಳಿಯುತ್ತಿದ್ದ ಸದ್ದು ಪದ್ಮಿನಿಗೆ ಕೇಳಿಸಿತು

ಗೀತಳಿಗೆ ಪದ್ಮಿನಿ ಬಂದುದು ನಿಜವಾಗಿಯೂ ಆಶ್ಚರ್ಯವನ್ನುಂಟು ಮಾಡಿತು- ಯಾಕೇಂದರೆ ಅವರಿಗೆ ಕೇವಲ ಪರಿಚಯವಿತ್ತೇ ಹೊರತು ಸ್ನೇಹವಿರಲಿಲ್ಲ, ಅಂತಹದರಲ್ಲಿ ಪದ್ಮಿನಿ ಈಗ ತನ್ನನ್ನು ನೋಡಲು ಬರುವುದೆಂದರೆ?

"ಎಷ್ಟು ದಿನದಿಂದ ಮೈಗೆ ಹುಷಾರಿಲ್ಲ?"

"ಒಂದು ವಾರದಿಂದ "

"ಲೀವ್ ಲೇಟರ್ ಯಾಕೆ ಕಳಿಸಲಿಲ್ಲ?"

ಗೀತಾ ಆಶ್ಚರ್ಯದಿಂದ ಕಣ್ಣರಳಿಸಿ "ನಮ್ಮ ಹನುಮನ ಕೈಲಿ ಲೀವ್ ಲೆಟರ್ ಕಳಿಸಿದ್ದೆನಲ್ಲಾ ." ಎಂದಳು

"ಹಾಗಾದರೆ ಟೀಚರು ಇವತ್ತು ಕೂಡ ಕೇಳಿದರು—ನೀನು ಯಾಕೆ

ಬರ್ತಿಲ್ಲಾಂತ ”

“ಹನುಮ ಕೊಟ್ಟನೋ ಇಲ್ಲವೋ ತಿಳಿಯಲಿಲ್ಲ ನನಗೆ ಹುಷಾರಿಲ್ಲಾಂತ ನಿನಗೆ ಯಾರು ಹೇಳಿದರು ?”

“ಇವತ್ತು ಕಾಲೇಜಿನಿಂದ ಮನೆಗೆ ಬರುತ್ತಿದ್ದಾಗ ದಾರೀಲಿ ಹನುಮ ನಾಯಿಯನ್ನು ಕರೆದುಕೊಂಡು ಹೋಗ್ತಿದ್ದ ನಾನು, ನೀನು ಕಾಲೇಜಿಗೆ ಯಾಕೆ ಬರ್ತಿಲ್ಲಾಂತ ವಿಚಾರಿಸಿದಾಗ ಅವನು ನಿನಗೆ ಆರೋಗ್ಯ ಚೆನ್ನಾಗಿಲ್ಲಾಂತ ಹೇಳಿದ ”

“ಹಾಗಾದರೆ ನೀನು ಕಾಲೇಜಿಂದ ಸೀದಾ ಇಲ್ಲಿಗೇ ಬಂದಿದ್ದೀಯಾ ” ಎನ್ನುತ್ತಾ ಗೀತ ಪದ್ಮಿನಿಯ ಕೈಯಲ್ಲಿದ್ದ ಪುಸ್ತಕಗಳ ಕಡೆ ನೋಡಿದಳು

ಒಂದು ವಾರಕ್ಕೆ ಗೀತ ತುಂಬ ಇಳಿದುಹೋಗಿದ್ದಳು ಅವಳ ತುಂಬಿದ ಕೆನ್ನೆಗಳು ಕೃಶವಾಗಿದ್ದವು, ಕಾಲೇಜಿನ ಕಡುಬೆಡಗಿ ಗೀತಾ ರೋಗದ ಧಾಳಿಗೆ ಸಿಕ್ಕಿ ಹಾಸಿಗೆಯ ಮೇಲೆ ಅತ್ಯಂತ ದೈನ್ಯದ ಮೂರ್ತಿಯಾಗಿ ಮಲಗಿದ್ದಳು

ಮೆಟ್ಟಲಿನ ಮೇಲೆ ಸದ್ದಾಯಿತು ಬೂಟ್ಸಿನ ಕಾಲಿನಿಂದ ಮೆಟ್ಟಲು ತುಳಿಯುತ್ತಾ ಗೀತಳ ತಂದೆ ಮೇಲೆ ಬಂದರು ಅವರ ಹಿಂದೆಯೇ ಅಡಿಗೆಯವನೊಬ್ಬ ಟ್ರೇಯಲ್ಲಿ ಓವಲ್ಟೀನ್ ತಂದ

ಗೀತಳ ತಂದೆ ಬಟ್ಟಲನ್ನು ಕೈಗೆ ತೆಗೆದುಕೊಂಡು ಪದ್ಮಿನಿ,

“ತಗೊಳ್ಳಿ” ಎಂದರು

“ಬೇಡ ಇಷ್ಟು ಹೊತ್ತಿನಲ್ಲಿ ನಾನು ಏನೂ ತೆಗೊಳ್ಳೋದಿಲ್ಲ ”

“ತಗೋ ಪದ್ಮಿನಿ ಕಾಲೇಜಿನಿಂದ ಸೀದ ಇಲ್ಲಿಗೇ ಬಂದಿದ್ದೀಯ. ನನಗೋಸ್ಕರವಾದರೂ ತಗೋ” ಎಂದಳು ಗೀತಾ

ರೋಗಿಯ ಮನಸ್ಸನ್ನು ನೋಯಿಸಲಾಸೆಪಡದೆ ಪದ್ಮಿನಿ ಲೋಟವನ್ನು ಕೈಗೆ ತೆಗೆದುಕೊಂಡಳು

“ಅಣ್ಣ ”

“ಏನು ಗೀತಾ ?”

“ನೀನೀಗ ಹೇಗಿದ್ದರೂ ಡಾಕ್ಟರನ್ನು ಕರೆದುಕೊಂಡು ಬರೋಕೆ ಹೋಗ್ತೀಯ ಅಗಲೇ ಕತ್ತಲಾಗ್ತಿದೆ ಹಾಗೆ ಪದ್ಮಿನೀನೂ ”

ಮಗಳ ಯೋಚನೆಯೇ ತಂದೆಗೂ ಬಂದಿತ್ತು.

"ಆಗಲಿ "

"ನಿಮಗೆ ನಾನು ತೊಂದರೆ ಕೊಡೋದಿಲ್ಲ "

ಓವಲ್ಟೀನಿನ ಲೇಪನದಿಂದಾಗಿ ಅವಳ ತುದಿ ಮಿನುಗಿತು.

"ಹಾಗೆ ಹೇಳಬೇಡ ಪದ್ಮಿನಿ ನಿನ್ನ ಮನೆಯ ಹತ್ತಿರ ಇಳಿಸಿ ಹೋಗುವುದು ಅಣ್ಣನಿಗೇನೂ ಕಷ್ಟದ ಕೆಲಸವಲ್ಲ "

"ಬೇಡ ಗೀತಾ "

"ನನಗಾಗಿ ಒಪ್ಪಿಕೋ "

ಗೀತಳಿಗೆ ಹಿಂಸೆ ಕೊಡುವುದು ಪದ್ಮಿನಿಗೆ ಸಾಧ್ಯವಿರಲಿಲ್ಲ

"ಆಗಲಿ "

"ಅಣ್ಣಾ, ಹನುಮ ಬಂದಿದ್ದಾನೆಯೇ ?"

"ಹೂಂ "

"ಅವನ್ನ ಸ್ವಲ್ಪ ಕರಿ "

ತಂದೆ ರೂಮಿನಿಂದ ಹೊರಗೆ ಹೋಗಿ ಮೇಲುಮೆಟ್ಟಲಿನ ಮೇಲೆ ನಿಂತು "ಹನುಮಾ" ಎಂದರು

"ಬಂದೆ ಬುದ್ಧಿ "

ಹಾಸಿಗೆಯ ಮೇಲಿನಿಂದಲೇ ಶಹಜಾದಿ ತನ್ನ ಸಾಮ್ರಾಜ್ಯವನ್ನು ಆಳುತ್ತಿದ್ದಳು ನವಾಬರು ಸಹಿತ ಎಳೆಯ ಶಹಜಾದಿಯ ಹುಕುಮನ್ನು ಅಕ್ಷರಶಃ ಪಾಲಿಸುತ್ತಿದ್ದಂತೆ ಪದ್ಮಿನಿಗೆ ತೋರಿತು

ಹನುಮ ಬಾಗಿಲಿನಲ್ಲಿ ನಿಂತ

"ಲೀವ್ ಲೆಟರನ್ನು ಕಾಲೇಜಿಗೆ ಕೊಡೂಂತ ಕೊಟ್ಟಿದ್ದನಲ್ಲಾ ಏನು ಮಾಡಿದೆಯೋ ?"

ಗೀತಾ ಕೊಂಚ ಕೋಪದಿಂದಲೇ ಕೇಳಿದಳು

ಹನುಮ ಪದ್ಮಿನಿಯ ಮುಖ ನೋಡಿದ ಅವಳೆದುರಿಗೆ ಅವನು ಸುಳ್ಳು ಹೇಳುವ ಹಾಗಿರಲಿಲ್ಲ

"ತಾವು ಕೊಟ್ಟ ಕಾಜಗಾನ ನಾನು ಕಳೆದುಬುಟ್ಟೆ" ಹನುಮ ಹೆದರುತ್ತಾ ಹೇಳಿದ

"ನನಗೆ ಹೇಳಿದ್ದರೆ ಇನ್ನೊಂದು ಕಾಗದ ಬರೆದುಕೊಡ್ತಿದ್ದೆ" ಗೀತಾ

ಗುಡುಗಿದಳು. "ತಾವು ಸಿಟ್ಟು ಮಾಡಿಕೊಳ್ತೀರೇನೋಂತ " ಎನ್ನುತ್ತಾ ತಲೆ ಕೆರೆದ

"ಅಣ್ಣಾ, ನೀನು ಈಗ ಒಂದು ಲೀವ್ ಲೆಟರ್ ಬರೆದು ಪದ್ಮಿನಿ ಕೈಯಲ್ಲಿ ಕೊಡು "

ಗೀತಳ ತಂದೆ ಗೀತಳ ಮೇಜಿನ ಮುಂದೆ ಕುಳಿತು ಬಿಳಿಯ ಹಾಳೆಯೊಂದನ್ನು ತೆಗೆದು ಕಾಲೇಜಿನ ಪ್ರಿನ್ಸಿಪಾಲರಿಗೆ ಕಾಗದವೊಂದನ್ನು ಬರೆದು ಅದನ್ನು ಕವರಿನಲ್ಲಿ ಹಾಕಿ ಪದ್ಮಿನಿಯ ಕೈಗೆ ಕೊಟ್ಟರು

ಪದ್ಮಿನಿ ಎದ್ದು ನಿಂತು "ಬರ್ತೀನಿ ಗೀತಾ" ಎಂದಳು

"ಆಗಲಿ. ನಿನಗೆ ತೊಂದರೆಯಾಗದಿದ್ದರೆ ಆಗಾಗ್ಗೆ ಬರ್ತಾ ಇರು ಪದ್ಮಿನಿ ನನಗೂ ಒಂದು ವಾರದಿಂದ ಮನೇಲಿ ಇದ್ದು ತುಂಬಾ ಬೇಜಾರಾಗಿ ಹೋಗಿದೆ ಈಗ ತಪ್ಪಿಹೋಗಿರುವ ಪಾಠಗಳನ್ನೆಲ್ಲಾ ನೀನೇ ನನಗೆ ಹೇಳಿ ಕೊಡಬೇಕು ತಿಳಿಯಿತಾ ?"

ಪದ್ಮಿನಿ ತಲೆ ಅಲುಗಿಸುತ್ತಲೇ ರೂಮಿನಿಂದ ಹೊರಗೆ ಬಂದಳು ಗೀತಳ ತಂದೆಯೂ ಅವಳೊಡನೆ ಮಹಡಿಯಿಳಿದರು

ಮೂರ್ತಿ ಗ್ಯಾರೇಜಿನಿಂದ ಕಾರನ್ನು ತರುವಷ್ಟರಲ್ಲಿ ಪದ್ಮಿನಿ ಅವರ ಮನೆಯ ಕಾಂಪೌಂಡನ್ನು ದಾಟಿದ್ದಳು

ಮೂರ್ತಿ ಪದ್ಮಿನಿಯ ಬಳಿ ಕಾರನ್ನು ನಿಲ್ಲಿಸಿ ತಾವು ಕೆಳಗಿಳಿದು ಕಾರಿನ ಹಿಂಭಾಗದ ಬಾಗಿಲನ್ನು ತೆಗೆದರು

"ಕ್ಷಮಿಸಿ, ನಾನು ನಡೆದೇ ಹೋಗುತ್ತೇನೆ "

"ಈಗ ಹೇಗಿದ್ದರೂ ನಿಮ್ಮ ಮನೆಯ ದಾರೀಲೇ ನಾನು ಡಾಕ್ಟರನ್ನು ಕರೆದುಕೊಂಡು ಬರೋದಿಕ್ಕೆ ಹೋಗ್ತೇನೆ "

"ಹವಾ ಚೆನ್ನಾಗಿದೆ ವಾಕಿಂಗ್ ಆದ ಹಾಗೂ ಆಗುತ್ತದೆ "

"ಆಗಲೇ ಕತ್ತಲಾಗಿದೆ "

"ನನಗೆ ಎಲ್ಲಾ ಅಭ್ಯಾಸವಾಗಿದೆ" ಪದ್ಮಿನಿ ಸ್ವಲ್ಪ ಒರಟಾಗಿಯೇ ಉತ್ತರ ಕೊಟ್ಟಳು ಗಲಿಬಿಲಿಗೊಂಡ ಮಗುವಿನಂತಾಯಿತು ಮೂರ್ತಿಯ ಮುಖ

"ಆಮೇಲೆ ಗೀತಾ ನನ್ನ ಆಕ್ಷೇಪಣೆ ಮಾಡ್ತಾಳೆ...."

ವಿದ್ಯಾರ್ಥಿಗಳು ಸಹಾಯ ಕಷ್ಟ .ವಿದ್ಯೆಗೆ ಸಹಾಯ

ಮೂರ್ತಿಯ ಮಾತುಗಳು ಪದ್ಮಿನಿಯ ಕಿವಿಯಲ್ಲಿ ಮತ್ತೆ ಮೊಳಗಿದವು ಪದ್ಮಿನಿಯ ಹೃದಯ ಅಪಮಾನದಿಂದ ಬಿರುಸಾಯಿತು ಆ ಬಿರುಸಿನಲ್ಲೇ ಪದ್ಮಿನಿ ಖಾರವಾಗಿ ನುಡಿದಳು

"ಗೀತಾಗೆ ನಾನು ಸಮಾಧಾನ ಹೇಳ್ತೀನಿ "

ಇಷ್ಟು ನುಡಿದವಳೇ ಪದ್ಮಿನಿ ತಟ್ಟನೇ ತಿರುಗಿ ಹೊರಟುಬಿಟ್ಟಳು ಮೂರ್ತಿ ಏನು ಮಾಡಲೂ ತೋರದೆ ತಾನು ಹೋಗುತ್ತಿರುವುದನ್ನೇ ನಿಟ್ಟಿಸಿ ನೋಡುತ್ತಾ ನಿಂತಿರುವುದನ್ನು ಅವಳು ಒಳ ಮನಸ್ಸಿನಲ್ಲಿಯೆ ಚಿತ್ರಿಸಿಕೊಂಡಳು

ಕೋಪ, ದರ್ಪ, ಅಸಹಾಯಕತೆಯ ತವರೂರಾಗಿರಬಹುದಾದ ಆ ಮುಖವನ್ನು ಹಿಂತಿರುಗಿ ನೋಡುವ ಆಸೆಯಾಯಿತು ಪದ್ಮಿನಿಗೆ

ಒಂದೇ ಒಂದುಸಲ ಹಿಂತಿರುಗಿ ಅವರನ್ನು ನೋಡಬಾರದೇಕೆ ? ಸಹಾಯ ! ಸಹಾಯವಂತೆ ಸಹಾಯ ತನ್ನನ್ನೇನು ಭಿಕ್ಷುಕಿ ಎಂದು ಭಾವಿಸಿ ದನೇನೋ ಈ ನವಾಬ

ಆದರೂ ಒಂದು ಸಲ ಯಾಕೆ ತಿರುಗಿ ನೋಡಬಾರದು ?

'ಉಹುಂ, ಊಹೂಂ' ಎಂದು ಅವಳ ಮನಸ್ಸು ಪ್ರತಿಭಟಿಸಿತ್ತು ನಡಿಗೆಯ ವೇಗ ಹೆಚ್ಚಾಯಿತು

ಕಾರಿಗೆ ಗೇರು ಹಾಕಿದ ಸದ್ದು ಪದ್ಮಿನಿಗೆ ಕೇಳಿಸಿತು ಮರುಕ್ಷಣದಲ್ಲಿ ಪದ್ಮಿನಿಯ ಕಣ್ಣಿಗೆ ತುಂಬಾ ಧೂಳನ್ನೆರಚಿ ಕಾರು ಭರ್ರೆಂದು ಅವಳ ಮುಂದೆ ಹಾದುಹೋಯಿತು

ಧೂಳನ್ನು ಸಹಿಸಲಾರದೇ ಪದ್ಮಿನಿ ಕರವಸ್ತ್ರದಿಂದ ಮೂಗನ್ನು ಮುಚ್ಚಿಕೊಂಡಳು

ಗೀತಾ ತಾನು ತಿಳಿದುಕೊಂಡಿದ್ದಷ್ಟು ಜಂಭಗಾತಿಯಲ್ಲವೆಂದು ತೋರಿತು ಪದ್ಮಿನಿಗೆ ಕೈ ತುಂಬಾ ಹಣವಿದ್ದು ಮೆರೆದಾಡಬೇಕೆಂಬ ಚಪಲವಿದ್ದರೆ ವೈಭವಪಟ್ಟರೆ ತಪ್ಪೇನು ? ಹಣವಿದೆ, ಹಣ ಪ್ರದರ್ಶನ ಮಾಡುವ ಆಸೆ ಯಿದೆ, ಗರ್ವವಿರುವಂತೆ ತೋರಿದರೂ ನಿಷ್ಕಪಟವಾದ ಮನಸ್ಸು ಗೀತಳದು ಎಂದು ಪದ್ಮಿನಿ ಅಭಿಪ್ರಾಯಪಟ್ಟಳು

ತಾನು ರೂಮಿನೊಳಗೆ ಹೋದಾಗ ಗೀತಳಿಗೆಷ್ಟು ಆಶ್ಚರ್ಯ, ಆನಂದ! ಪಾಪ ಇದುವರೆವಿಗೂ ಅವಳನ್ನು ನೋಡಲು ಯಾರೂ ಹೋಗಿರಲೇ ಇಲ್ಲ ವೇನೊ? ಗೀತಳದೂ ಸ್ನೇಹಸ್ವಭಾವ ಅಲ್ಲ ಕಾಲೇಜಿನಲ್ಲಿ ಅಷ್ಟೊಂದು ಹುಡುಗಿಯರು ಸಹಪಾಠಿಗಳಾಗಿದ್ದರೂ ಅವಳಿಗೆ ಒಬ್ಬಳು ಸಹಿತ 'ಗೆಳತಿ' ಎಂದು ಹೇಳಿಕೊಳ್ಳುವ ಹುಡುಗಿ ಇರಲಿಲ್ಲ ಬಾಲ್ಯದಿಂದಲೂ ದರ್ಪ, ಠೀವಿ, ಮುದ್ದಿನಲ್ಲಿ ಬೆಳೆದ ಗೀತಾ ಕಾಲೇಜಿನಲ್ಲಿಯೂ ಸಹ ಏಕಾಂಗಿಯಾಗಿದ್ದರೆ ಆಶ್ಚರ್ಯವೇನಿಲ್ಲ

ಇನ್ನು ಅವಳ ತಂದೆ—ಅಬ್ಬ! ಎಷ್ಟು ದುರಹಂಕಾರ ಆತನಿಗೆ! ತಮ್ಮ ಮನೆಗೆ ಬರುವವರೆಲ್ಲ ಯಾಚಕಕ್ಕೆ ಬರುತ್ತಾರೆಂದೇ ಭಾವಿಸಿದ್ದಾರೇನೋ ಆತ! ಅವರ ಕಾರಿನಲ್ಲಿ ಗತಿಗೆಟ್ಟು ಕುಳಿತುಕೊಂಡು ಹೋಗಲು ತನಗೇನು ಕಾಲಿಲ್ಲವೇ?

ಮನೆ ಬಾಗಿಲು ಸಿಕ್ಕುವವರೆಗೆ ಪದ್ಮಿನಿಯ ಮನಸ್ಸು ಯೋಚಿಸುತ್ತಲೇ ಇತ್ತು ಮುಂಬಾಗಿನಲ್ಲಿಯೇ ಕುಳಿತಿದ್ದ ಪದ್ಮಿನಿಯ ತಾಯಿ ಜಲಜಮ್ಮ ಮಗಳನ್ನು ನೋಡಿ—

"ಎಷ್ಟು ಹೊತ್ತಿಗೇ ಮನೆಗೆ ಬರೋದು? ಆಗಲೇ ಏಳೂಕಾಲಾಗಿ ಹೋಯಿತು" ಎಂದು ಗದರಿಸಿದರು.

"ನನ್ನ ಸ್ನೇಹಿತೆಯೊಬ್ಬಳಿಗೆ ಮೈಗೆ ಹುಷಾರಿರಲಿಲ್ಲಮ್ಮ ಅವಳನ್ನ ನೋಡಿಕೊಂಡು ಬರೋಣಾಂತ ಹೋಗಿದ್ದೆ "

"ಯಾರು ಅವಳು ?"

"ಗೀತಾ ಎಂದು ಅವಳ ಹೆಸರು ?"

"ಅವಳ ತಂದೆ "

"ಅಡ್ವೋಕೇಟ್ ಕೇಶವಮೂರ್ತಿ "

"ದೊಡ್ಡ ಮನೆ ಮುಂದೆ ನೀರಿನಚಿಲುಮೆ.. ವಿಶಾಲವಾದ ಕಾಂಪೌಂಡು. ಮನೆ ಸುತ್ತಲೂ ತೋಟ ಇದೆ " ಎಂದು ಜಲಜಮ್ಮ ವರ್ಣಿಸುವಷ್ಟರಲ್ಲಿ ಪದ್ಮಿನಿ ಆತುರದಿಂದ

"ಹೂಂ ಹೂಂ ಅದೇ ಮನೆ" ಎಂದಳು

"ಸರಿ ಆತನೇ. " ಎಂದು ತಾಯಿ ರಾಗ ಎಳೆದರು. ತಾತ್ಸಾರ,

ತಿರಸ್ಕಾರ ಪ್ರತಿ ಅಕ್ಷರದೊಡನೆಯೂ ಹೊರಗೆ ಹರಿದುಬಂತು

ಬೀರುವಿನಲ್ಲಿ ಪುಸ್ತಕವಿಡುತ್ತಿದ್ದ ಪದ್ಮಿನಿ ತಟ್ಟನೆ ತಾಯಿಯ ಕಡೆ ಕತ್ತು ಹೊರಳಿಸಿದಳು ಮತ್ತು ಅವಳು ಹೊರಳಿಸಿದ ರಭಸಕ್ಕೆ ನಿಡು ಜಡೆಯೂ ಮುಂದೆ ನೆಗೆದು ಬಂದು ಎದೆಯ ಮೇಲೇರಿ, ಸೊಂಟದ ಮೇಲಿಳಿಯಿತು ಪ್ರಶ್ನೆಗಳ ಮಾಲೆಯೇ ಅವಳ ಕಣ್ಣುಗಳಲ್ಲಿ ಕುಣಿಕುಣಿದು ಹರಡಿಕೊಂಡಿತು

"ಯಾಕಮ್ಮಾ ಹಾಗೆ ರಾಗ ಎಳೀತೀಯ ?"

"ನಿನಗ್ಯಾಕೆ ಅವೆಲ್ಲ ? ನೀನು ಹುಡುಗಿಯ ಹಾಗಿರಬಾರದೇ ?"

ಗಂಟಲಿನವರೆಗೆ ನುಗ್ಗಿ ಬಂದಿದ್ದ ಕಾತರವನ್ನು ಪದ್ಮಿನಿ ನುಂಗಿ ಕೊಂಡಳು ತಾನು ಕುತೂಹಲ ತೋರಿದಷ್ಟು ತಾಯಿ ಉದಾಸೀನಳಾಗು ವಳೆಂಬುದು ಪದ್ಮಿನಿಗೆ ತಿಳಿದಿತ್ತು ಆದುದರಿಂದಲೇ ಅವಳು ತಾಯಿಯನ್ನು ಹೆಚ್ಚು ಕೆದಕಲಿಲ್ಲ

ಪದ್ಮಿನಿ ಯಾವ ಮಾತೂ ಆಡದೆ ಊಟಕ್ಕೆ ಕುಳಿತುಕೊಂಡಳು ತಾಯಿ ಬಡಿಸತೊಡಗಿದರು

ತಾಯಿ ಎಳೆದ ಆ ರಾಗ—"ಸರಿ ಆತನೇ " ಎಂಬ ಮೂದಲಿಕೆ ಪದ್ಮಿನಿಯ ಕಿವಿಯಲ್ಲಿ ಗುಂಯ್ಗುಡುತ್ತಿತ್ತು

ತಾಯಿ ಯಾಕೆ ಹಾಗೆಂದರು ?

ಜಲಜಮ್ಮ ಮಗಳಿಗೆ ಮಜ್ಜಿಗೆ ಬಡಿಸಿ ಎದುರಿಗಿದ್ದ ಗೋಡೆಯನ್ನೊರಗಿ ನಿಂತು ಕೇಳಿದರ

"ನೀನು, ಗೀತಾ ಬಹಳ ಸ್ನೇಹಿತರೇನು ?"

"ಹಾಗೇನಿಲ್ಲ ಒಂದು ಕ್ಲಾಸೊಂದ ಮೇಲೆ ಪರಿಚಯವಿಲ್ಲದೇ ಇರುತ್ತದೆಯೇ ? ಅವಳಿಗೆ ಹುಷಾರಿಲ್ಲ ಎಂದು ತಿಳಿಯಿತು ಆದುದರಿಂದ ಅವಳನ್ನು ನೋಡಿಕೊಂಡು ಬರೋಣಾಂತ ಹೋಗಿದ್ದೆ

"ಪದ್ಮಿನಿ, ನಾನೊಂದು ಮಾತು ಹೇಳ್ತೀನಿ ನೀನು, ಗೀತಾ ಎಷ್ಟೇ ಸ್ನೇಹಿತರಾಗಿದ್ದರೂ ನಿಮ್ಮ ನಿಮ್ಮ ಸ್ನೇಹ ಕಾಲೇಜಿನಲ್ಲಿ ಮಾತ್ರವಿರಲಿ. ನೀನು ಅವರ ಮನೆಗೆ ಹೆಚ್ಚು ಹೋಗಬೇಡ ತಿಳಿಯಿತೆ ?"

ಪದ್ಮಿನಿ ಅತ್ಯಂತ ಆಶ್ಚರ್ಯದಿಂದ "ಯಾಕೆ ಅವರ ಮನೇಲಿ ದೆವ್ವ

ಇದೆಯೇನು?" ಎಂದಳು

"ದೆವ್ವ ಇಲ್ಲ ಆದರೆ ಅಲ್ಲಿ ಇರೋರು ಮನುಷ್ಯರಲ್ಲ "

"ಗೀತಾ ಮನುಷ್ಯಳಲ್ಲವೇ " ಎಂದು ಪದ್ಮಿನಿ ಹೇಳುವಷ್ಟರಲ್ಲಿ ತಾಯಿ ನಡುವೆ ಬಾಯಿ ಹಾಕಿ,

"ಪಾಪ! ಗೀತಾನ ನಾನೀಗ ದೂರಿದೆನೇ? ಆತ ಮನುಷ್ಯನಲ್ಲ" ಎಂದರು

ಮೂರ್ತಿ ಮನುಷ್ಯರಲ್ಲವೆ!

ಮೂರ್ತಿಯ ಸೌಮ್ಯ ಮುಖ, ಶಾಂತಿ ತುಂಬಿದ ಕಣ್ಣುಗಳು, ತುಂಟತನ ಮೂಡಿಬಂದ ಹುಡುಗನಂತೆ ಕೆದರಿದ ಕ್ರಾಪು, ಶುಭ್ರವಾದ ಬಟ್ಟೆ—ಇವುಗಳ ಮಾಲೀಕ 'ಸುದರ್ಶನ'ದ ಒಡೆಯ ಮಾನವನಲ್ಲವೇ?

ಎಷ್ಟು ವಿನಯ—ತನಗೆ ಓವಲ್ಟೀನ್ ನೀಡಿದಾಗ

ಎಷ್ಟು ಸೌಜನ್ಯ—'ಕತ್ತಲಾಗಿದೆ—ಕಾರಿನಲ್ಲಿ ಕರೆದುಕೊಂಡು ಹೋಗಿ ಬಿಡುತ್ತೇನೆ' ಎಂದಾಗ

"ಅವರು ನಮ್ಮ ಹಾಗೇ ಇದಾರಲ್ಲಮ್ಮಾ "

ತಾನೇಕೆ ಅವರನ್ನು ಇಷ್ಟೊಂದು ಸಮರ್ಥಿಸಿ ಮಾತನಾಡಬೇಕು? ಅವರ ಪರ ತಾನೇಕೆ ವಕೀಲಿ ಮಾಡಬೇಕು? ಅವರು ಮಾನವರಾದರೇನು, ದಾನವರಾದರೇನು? ಆದರೂ ತಾಯಿ ಒಂದೇ ಸಮನೆ ಆತನನ್ನು ದೂರಿದಾಗ ಪದ್ಮಿನಿಗೆ ಸುಮ್ಮನಿರಲಾಗಲಿಲ್ಲ

ವ್ಯರ್ಥವಾಗಿ ಆತನ ಗುಣ ನಡತೆಯ ಕೊಲೆಯಾಗಬೇಕೆ?

"ನೋಡೋಕೇನೋ ನಮ್ಮ ಹಾಗೇ ಅವರೂ ಇದಾರೆ ಅದು ನನಗೂ ಗೊತ್ತು ಮನುಷ್ಯ ನೋಡೋಕೇನೋ ಲಕ್ಷಣವಾಗಿದ್ದಾರೆ "

"ಹೌದು" ಎಂದು ಪದ್ಮಿನಿ ಈ ವಿಷಯದಲ್ಲಿ ತಾಯಿಯನ್ನು ಒಪ್ಪಿಕೊಂಡಳು

"ಇಷ್ಟು ವಯಸ್ಸಾಗಿದ್ದರೂ ತಲೇಲಿ ಒಂದು ಕೂದಲು ಬೆಳ್ಳಗಾಗಿಲ್ಲ ಇನ್ನೂ ಹುಡುಗ ಇದ್ದ ಹಾಗೇ ಇದಾರೇಂತ. ?

"ಹೌದಮ್ಮ ಅವರನ್ನು ನೋಡಿದಾಗ ನನಗೆ ಆತ ಗೀತಳ ಅಣ್ಣ ಇರಬೇಕೆಂದುಕೊಂಡಿದ್ದೆ ಅವರು ಗೀತಳ ಪಡಿಯಚ್ಚು. "

"ಗೀತ ಆತನ ಪಡಿಯಚ್ಚು ಎನ್ನು."

"ಆದರೆ ಅವರ ವಿಷಯ ನಿನಗೆ ಹೇಗೆ ಗೊತ್ತಾಯಿತಮ್ಮ? ಅವರು ಹೇಗಿದ್ದಾರೆ, ಎಲ್ಲಿದ್ದಾರೆ ಎನ್ನುವ "

"ನನಗೇನು ಕಣ್ಣು, ಕಿವಿ ಇಲ್ಲವೇ? ಅಥವಾ ಆತ ಏನು ಅನಾಮಧೇಯನಲ್ಲ ನಗರದ ಪ್ರಸಿದ್ಧ ಅಡ್ವೋಕೇಟರಾಗಿದ್ದಾರೆ ಹೀಗೆ ಯಾರಾದರೂ ಅವರ ಸಮಾಚಾರ ಬೇಡಾಂದರೂ ತಿಳಿಸುತ್ತಾರೆ ನೀನು ಮಾತ್ರ ಅವರ ಮನೆಗೆ ಜಾಸ್ತಿ ಹೋಗಬೇಡ ಎಷ್ಟು ಬೇಕೋ ಅಷ್ಟರಲ್ಲಿ ಇರು"

"ಯಾಕಮ್ಮ?"

"ಮರಳೀ ಮಗುಚೀ ಮಂಚಕ್ಕೆ ಎಷ್ಟು ಕಾಲೂಂತ ಕೇಳ್ತೀಯಲ್ಲಾ? ಆತನ ನಡತೆ ಸ್ವಲ್ಪವೂ ಚೆನ್ನಾಗಿಲ್ಲವಂತೆ "

ತಾಯಿಯ ಮಾತು ಕೇಳಿ ಪದ್ಮಿನಿ ಆಶ್ಚರ್ಯಗೊಳ್ಳಲಿಲ್ಲ ಈ ಸುದ್ದಿ ಅವಳಿಗೆ ಆಗಲೇ ಹಳೆಯದಾಗಿತ್ತು ಕಾಲೇಜಿನಲ್ಲಿ ಅವಳ ಗೆಳತಿಯರು ಗೀತಳ ತಂದೆಯ ಗುಣವಿಮರ್ಶೆಯನ್ನು ಮಾಡಿದ್ದರು

ತಾಯಿಯ ಮಾತು ಕೇಳಿ ಅದೇಕೋ ಪದ್ಮಿನಿ ಕೆರಳಿದಳು

"ನಾನೇನು ಅವರ ಮನೆಗೆ ಆತನ ಜೊತೆ ಚಕ್ಕಂದ ಆಡೋಕೆ ಹೋಗ್ತೀನೀಂತ ತಿಳ್ಕೊಂಡಿದೀಯಾಮ್ಮ?"

"ನೀನು ಗೀತಳಿಗೋಸ್ಕರವೇ ಅಲ್ಲಿಗೆ ಹೋಗಬಹುದು ಆದರೆ ಆತನ ದೃಷ್ಟಿ ನಿನ್ನ ಮೇಲೆ ಬೀಳದಿರುತ್ತದೆಯೇ?"

"ನೀನು ಇಲ್ಲದ್ದೊಂದು ಅನುಮಾನಪಡಬೇಡ ಅವರಿಗೆ ನನ್ನ ತಂದೆಯಾಗುವಷ್ಟು ವಯಸ್ಸಾಗಿದೆ"

"ವಯಸ್ಸಾಗಿದ್ದರೂ ಗಂಡಸರ ಬುದ್ಧಿ ಹೀಗೇಂತ ಹೇಳೋಕಾಗೋದಿಲ್ಲ ಸಾಲದುದಕ್ಕೆ ಆತ "

ಪದ್ಮಿನಿ ಕುತೂಹಲದಿಂದ ತಾಯಿಯ ಕಡೆ ತಿರುಗಿದಳು

"ತನ್ನ ಹೆಂಡತಿಯನ್ನು ಕೊಲೆ ಮಾಡಿದ್ದಾನೆ "

"ಏನು?"

"ಗೀತಳ ತಾಯಿಯನ್ನು ಆತ ಕೊಲೆ ಮಾಡಿದ ಸಂಗತಿ ಪ್ರಪಂಚಕ್ಕೇ ಗೊತ್ತಿದೆ" ತಾಯಿ ನಿಧಾನವಾಗಿ ನುಡಿದರು

ಪದ್ಮಿನಿಯ ಹೃದಯದಲ್ಲಿ ಪಂಜು ಹೊತ್ತಿಸಿದಂತಾಯಿತು ಉರಿಯುವ ಪಂಜಿಗೆ ಅವಳ ಮುಖದಲ್ಲಿದ್ದ ರಕ್ತ ತೈಲವಾಯಿತು

"ಅವರು ಗೀತನ ತಾಯಿ " ಪದ್ಮಿನಿ ತೊದಲಿದಳು

ಜಲಜಮ್ಮ ಎದ್ದು ತಮ್ಮ ಕೆಲಸಕ್ಕೆ ಹೊರಟುಹೋದರು

ಎಂಜಲು ಕೈ ಒಣಗುತ್ತಿದ್ದರೂ ಪದ್ಮಿನಿಗೆ ಅದರ ಪರಿವೆಯಿರಲಿಲ್ಲ ಅವಳು ಪ್ರತಿಮೆಯಂತೆ ತಟ್ಟೆಯ ಮುಂದೆ ಕುಳಿತುಬಿಟ್ಟಳು

ಆ ಸೌಮ್ಯ ಮುಖ—ಕೊಲೆಗಾರನ ಮುಖವಾಡವೇ ?

ಶಾಂತಿ ತುಂಬಿದ ಕಣ್ಣುಗಳು—ಕೆಸರು ತುಂಬಿದ ಹೃದಯದ ಪರದೆಯೇ ?

ಏಳೇ, ಎದ್ದು ಕೈ ತೊಳೆದುಕೋ ತಟ್ಟೆ ಮುಂದೆ ಕುಳಿತುಕೊಂಡು ತಪಸ್ಸು ಮಾಡ್ತಿದೀಯಾ ?" ತಾಯಿ ಕೂಗಿದರು

ಪದ್ಮಿನಿ ಎದ್ದು ಕೈ ತೊಳೆಯಲು ಹೋದಳು

ಪದ್ಮಿನಿ ಕೈ ತೊಳೆದು ಎದುರಿಗೆ ಗ್ರೀಕರ ಇತಿಹಾಸದ ಪುಸ್ತಕವನ್ನು ತೆಗೆದುಕೊಂಡು ಕುಳಿತಳು ಕಣ್ಣುಗಳು ಪುಸ್ತಕದಲ್ಲಿ ನಾಟಿದ್ದರೂ ಮನಸ್ಸು ಮಾತ್ರ ವ್ಯಾಸಂಗದ ಹಿಡಿತದಿಂದ ಜಾರಿಹೋಯಿತು

ಪದ್ಮಿನಿ ಪುಸ್ತಕವನ್ನು ಮುಚ್ಚಿಟ್ಟು ತಾಯಿಯನ್ನು ಹುಡುಕಿಕೊಂಡು ಹೋದಳು ಜಲಜಮ್ಮ ಅಡಿಗೆ ಮನೆಯಲ್ಲಿ ಕಸಮುಸುರೆ ಮಾಡುತ್ತಿದ್ದರು ಪದ್ಮಿನಿ ಒಳಗೆ ಬಂದುದನ್ನು ನೋಡಿ ತಾಯಿ

"ನಿಮ್ಮ ತಂದೆಗೆ ಎಲೆ ಅಡಿಕೆ ಕೊಡಮ್ಮ" ಎಂದರು ಪದ್ಮಿನಿ ಎಲೆಗಳನ್ನು ಮಡಿಸಿ ತೆಗೆದುಕೊಂಡುಹೋಗಿ ತಂದೆಗೆ ಕೊಟ್ಟಳು ತಂದೆ ಮಗಳನ್ನು ನೋಡಿ,

"ಸದಾನಂದ ಬರೋಡದಿಂದ ಕಾಗದ ಬರೆದಿದ್ದಾನೆ ಪದ್ಮಿನಿ ಹೇಗೆ ಓದುತ್ತಿದ್ದಾಳೆ, ಈ ಸಲ ಅವಳು ಇಂಟರಿನಲ್ಲಿ ಫಸ್ಟ್‌ಕ್ಲಾಸಿನಲ್ಲಿ ಬರಬೇಕು ಚೆನ್ನಾಗಿ ಓದೋಕೆ ಹೇಳೀಂತ ಬರೆದಿದ್ದಾನೆ "

ಸದಾನಂದ ಪದ್ಮಿನಿಯ ಪ್ರೀತಿಯ ಅಣ್ಣ ರಮಾನಂದ, ಜಯಾನಂದರನ್ನೂ ಅವಳು ಪ್ರೀತಿಸುತ್ತಿದ್ದಳಾದರೂ ಸದಾನಂದನಲ್ಲೇ ಅವಳಿಗೆ ಹೆಚ್ಚು ಅಭಿಮಾನವಿತ್ತು ಅದಕ್ಕೆ ಕಾರಣವಿಲ್ಲದೇ ಇರಲಿಲ್ಲ ಜಯಾ,

ರಮಾ ಇಬ್ಬರೂ ಪದ್ಮಿನಿಗೆ ಹಿರಿಯಣ್ಣಂದಿರಾದುದರಿಂದ ಅವರವರಿಗೆ ವಯಸ್ಸಿನಲ್ಲಿ ಹೆಚ್ಚು ಅಂತರವಿತ್ತು. ಹೀಗಾಗಿ ಬಾಲ್ಯದಲ್ಲಿ ತನ್ನೊಡನೆ ಆಟ ಮಾಡುತ್ತಾ ಜಗಳವಾಡುತ್ತಿದ್ದವನು ಸದಾ ತನಗೆ ತಿಳಿಯದ ಪಾಠಗಳನ್ನು ಕಲಿಸಿಕೊಟ್ಟ ಗುರು ಸದಾನಂದ.

ಜಯಾನಂದನಿಗೆ ಕಲ್ಕತ್ತೆಯಲ್ಲಿ ಕೆಲಸವಿತ್ತು. ರಮಾನಂದ ಹಿರೇ ಭಾಸ್ಕರ ಅಣೆಕಟ್ಟಿನ ಕೆಲಸದಲ್ಲಿದ್ದ. ಅವರಿಬ್ಬರಿಗೂ ಮದುವೆಯಾಗಿತ್ತು. ಸದಾನಂದ ಕೆಲಸದಲ್ಲಿದ್ದರೂ ಪದ್ಮಿನಿಗೆ ಮದುವೆಯಾದ ಮೇಲೆ ತನ್ನ ಮದುವೆ ಎಂದು ಖಂಡಿತವಾಗಿ ಹೇಳಿಬಿಟ್ಟಿದ್ದ. ಪದ್ಮಿನಿ ತಾನು ಪದವೀಧರಳಾಗುವವರೆಗೂ ಮದುವೆಯಾಗುವುದಿಲ್ಲವೆಂದು ನಿರ್ಧರಿಸಿದ್ದಳು.

ಪದ್ಮಿನಿಯ ತಂದೆ ನಂಜುಂಡಯ್ಯನವರಿಗೆ ರಿಟೈರಾಗಿತ್ತು. ಮೂರು ಜನ ಗಂಡುಮಕ್ಕಳು ಮನೆಗೆ ಕಳುಹಿಸುತ್ತಿದ್ದ ಹಣದಲ್ಲಿ ಅವರ ಸಂಸಾರ ಸಾಗಿತ್ತು. ಜಯಾನಂದ, ರಮಾನಂದರಿಗೆ ಅವರವರ ಸಂಸಾರ ಇದ್ದುದರಿಂದ ಅವರು ತಂದೆಗೆ ಹೆಚ್ಚು ಹಣವನ್ನು ಕಳುಹಿಸುತ್ತಿರಲಿಲ್ಲ. ಸದಾನಂದ ಮಾತ್ರ ತನಗೆ ತಿಂಗಳಿಗೆ ಬೇಕಾಗ ಷ್ಟನ್ನು ಮಾತ್ರ ಉಳಿಸಿಕೊಂಡು ಉಳಿದ ಹಣವನ್ನು ತಂದೆಗೆ ಕಳುಹಿಸುತ್ತಿದ್ದ.

ಜಯಾನಂದ ರಮಾನಂದರಿಂದ ನಿಮಗೆ ಹೆಚ್ಚು ಸಹಾಯ ಸಿಕ್ಕುವುದಿಲ್ಲ. ನಾನು ಮದುವೆಯಾಗಿಬಿಟ್ಟರೆ ನಿಮ್ಮನ್ನು ನೋಡಿಕೊಳ್ಳುವವರು ಯಾರು ?" ಎಂದು ಕೇಳುತ್ತಿದ್ದ ಸದಾನಂದ.

"ನಮಗೋಸ್ಕರ ನೀನು ಮದುವೆಮಾಡಿಕೊಳ್ಳದೆ ಇರೋದು ಯಾವ ನ್ಯಾಯವೋ ?" ಎಂದು ಜಲಜಮ್ಮ ಮಗನನ್ನು ಕೇಳುತ್ತಿದ್ದರು.

ಪದ್ಮಿನಿಯ ವಿದ್ಯಾಭ್ಯಾಸ ಮುಗಿದು ಅವಳಿಗೆ ಮದುವೆಯಾದರೆ ನಿಮ್ಮ ಜವಾಬ್ದಾರಿಗಳೆಲ್ಲ ಕಳೆಯುತ್ತದೆ. ಆಮೇಲೆ ನಾನು ಮದುವೆ ಮಾಡಿಕೊಂಡು ನಿಮಗೆ ಕಡಿಮೆ ಹಣ ಕಳುಹಿಸಿದರೂ ಹೇಗೋ ಆಗುತ್ತದೆ" ಎಂದು ಉತ್ತರ ಹೇಳಿ ತಾಯಿಯನ್ನು ಸುಮ್ಮನಾಗಿಸುತ್ತಿದ್ದ ಸದಾನಂದ.

ಸದಾನಂದನ ಮಾತುಗಳೂ ಒಂದು ವಿಧದಲ್ಲಿ ಸರಿಯಾಗಿದ್ದುದರಿಂದ ತಾಯಿ–ತಂದೆ ಅವನನ್ನು ಹೆಚ್ಚು ಒತ್ತಾಯಪಡಿಸುತ್ತಿರಲಿಲ್ಲ.

ಸದಾನಂದನಿಂದ ಕಾಗದ ಬಂದ ದಿವಸ ಪದ್ಮಿನಿ ಪಾಯಸದೂಟ

ಉಂಡವಳಂತೆ ಹಿಗ್ಗುತ್ತಿದ್ದಳು ತಂದೆ ಅವನಿಂದ ಕಾಗದ ಬಂದಿದೆ ಎಂಬ ಸುದ್ದಿ ತಿಳಿಸಿದೊಡನೆ ಪದ್ಮಿನಿ ಹೊಸ ಬೊಂಬೆ ಕಂಡ ಮಗುವಿನಂತೆ ಹಿಗ್ಗಿ, ಮೊದಲೇ ದೊಡ್ಡದಾಗಿದ್ದ ಕಣ್ಣುಗಳನ್ನು ಮತ್ತಷ್ಟು ವಿಸ್ತರಿಸಿ,

"ಎಲ್ಲಿ ಕಾಗದ ? ಕೊಡಣ್ಣ" ಎಂದು ಕೇಳುತ್ತಿದ್ದಳು ಸದಾನಂದ ನಿಂದ ಬಂದ ಪ್ರತಿಯೊಂದು ಕಾಗದವನ್ನೂ ಅವಳು ಎರಡುಮೂರು ಬಾರಿ ಯಾದರೂ ಓದುತ್ತಿದ್ದಳು ಕೆಲವು ಬಾರಿ ತಾಯಿಯನ್ನು ಕೀಟಲೆ ಮಾಡುವುದಕ್ಕಾಗಿ ಪದ್ಮಿನಿ,

"ಅಮ್ಮ ಸದಾ ಮದುವೆ ಯಾಕೆ ಬೇಡಾಂತಾನೇ ಎನ್ನುವ ಗುಟ್ಟು ಈಗ ತಿಳಿಯಿತು ಅವನು ಅಲ್ಲಿ ಯಾವುದೋ ಕಿರಸ್ತಾನರ ಹುಡುಗಿ ಅವಳ ಹೆಸರೂ ಬರೆದಿದಾನೆ—ತಾಳು ಹೇಳ್ತೀನಿ "

ಎಂದು ಕಾಗದವನ್ನು ಮತ್ತೆ ಓದುವಂತೆ ನಟಿಸಿ,

"ಮೇರಿ ಎನ್ನುವವಳೊಡನೆ ಹಾಯಾಗಿ ಓಡಾಡಿಕೊಂಡಿದಾನಂತೆ" ಎನ್ನುತ್ತಿದ್ದಳು ಪದ್ಮಿನಿ ತಾಯಿಯನ್ನು ಮೊದಲ ಸಲ ಹೀಗೆ ಹೆದರಿಸಿ ದಾಗ ಜಲಜಮ್ಮ ಹೌಹಾರಿ ಹೋಗಿದ್ದರು ಆಗ ತಾಯಿಯನ್ನು ನೋಡಿ ಪದ್ಮಿನಿ ಬಹಳ ನಕ್ಕಿದ್ದಳು

ಆದರೆ ಈ ದಿನ ತಂದೆ ಸದಾನಂದ ಕಾಗದ ಬರೆದಿದಾನೆ ಎಂದು ಹೇಳಿ ದಾಗ ಪದ್ಮಿನಿ,

"ಆರೋಗ್ಯವಾಗಿದಾನೆ ತಾನೆ" ಎಂದಳು

"ಹೂಂ ಬೇಕಾದರೆ ಅವನ ಕಾಗದ ತಗೊಂಡು ನೀನೇ ಓದು ನನ್ನ ಹಾಸಿಗೆಯ ದಿಂಬಿನ ಕೆಳಗಿದೆ "

"ಇರಲಿ ಬಿಡಣ್ಣ "

ಮಗಳ ಮಾತು ಕೇಳಿ ತಂದೆಗೆ ಆಶ್ಚರ್ಯವಾಯಿತು ಅವರು ಆತಂಕದಿಂದ,

"ಯಾಕಮ್ಮ ಹುಷಾರಾಗಿದೀಯೋ ಇಲ್ಲವೋ ?" ಎಂದರು

"ಸ್ವಲ್ಪ ತಲೆ ನೋಯುತ್ತಾ ಇದೆ "

"ಇವತ್ತೇನೂ ಓದಬೇಡ ಸುಮ್ಮನೆ ಮಲಗಿಕೊಂಡು ನಿದ್ದೆ ಮಾಡಿಬಿಡು" ಎಂದರು ತಂದೆ

ಪದ್ಮಿನಿ ಮಲಗಲು ಹೋದಳು ಜಲಜಮ್ಮ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಮಲಗಲು ಒಳಗೆ ಬಂದರು ಮಗಳಾಗಲೇ ಮಲಗಿರುವುದನ್ನು ನೋಡಿ ಅವರು,

"ಯಾಕೆ ಇಷ್ಟು ಬೇಗ ಮಲಗಿಬಿಟ್ಟೆ ?" ಎಂದರು

"ತಲೆ ನೋಯುತ್ತಾ ಇದೆ "

"ಖಾಯಿಲೆ ಹುಡುಗಿ ಇರುವ ಮನೆಗೆ ನೀನು ಯಾಕೆ ಹೋಗಿದ್ದೆ ? ಇನ್‌ಫ್ಲೂಯಂಜಾ ಮೊದಲೇ ಸೋಂಕು ಆ ಹುಡುಗಿಯಿಂದ ನೀನು ದೂರ ಇದ್ದೆ ತಾನೇ ?"

"ಇಲ್ಲ ಅವಳನ್ನು ತಬ್ಬಿಕೊಂಡು ಕುಳಿತಿದ್ದೆ" ಎಂದು ಹೇಳುವ ತವಕ ವಾಯಿತು ಪದ್ಮಿನಿಗೆ ತಾಯಿಯೊಡನೆ ಹುಡುಗಾಟವಾಡಲು ಯಾಕೋ ಮನಸ್ಸಿಗೆ ಬೇಡವಾಯಿತು

"ಇಲ್ಲಮ್ಮ ದೂರಾನೇ ಕುಳಿತಿದ್ದೆ "

ಸ್ವಲ್ಪ ಹೊತ್ತು ಸುಮ್ಮನಿದ್ದು ಪದ್ಮಿನಿ ತಾಯಿಯನ್ನು ಕೇಳಿದಳು.

"ಅಮ್ಮ , ನೀನು ಹೇಳಿದ್ದು ನಿಜವೇನಮ್ಮ ?"

"ಯಾವುದು ?"

ಆ ತಾಯಿಗೆ ತಾನೇನು ಹೇಳಿದ್ದೆ ಎಂಬುದೇ ಮರೆತುಹೋಗಿತ್ತು

"ಗೀತಳ ತಂದೆ ಅವರ "

ತಾಯಿ ಹೇಳಿದ ವಿಷಯವನ್ನು ಬಾಯಿಂದ ಆಡಿ ತೋರಿಸುವುದು ಸಹ ಮಗಳಿಗೆ ಸಾಧ್ಯವಾಗಲಿಲ್ಲ

ಪ್ರತ್ಯಕ್ಷವಾಗಿ ಕಾಣದ ವಿಷಯವನ್ನು ಆಡುವುದು ಅಷ್ಟೊಂದು ಸುಲಭವೆ ?

"ಯಾರಿಗೆ ಗೊತ್ತಮ್ಮ ಅವರ ಮನೆಯ ರಹಸ್ಯ ಅವರ ಹೆಂಡತಿ ಹೋದ ಹೊಸದರಲ್ಲಿ ಎಲ್ಲರೂ ಅವರನ್ನು ಹಾಗೆ ದೂರಿದರು ಇಷ್ಟರ ಮೇಲೆ ನಿಜ ಎಷ್ಟೋ ಆ ಪರಮಾತ್ಮನಿಗೇ ಗೊತ್ತು "

ತಾಯಿಯ ಮಾತು ಕೇಳಿ ಪದ್ಮಿನಿಯ ಮನಸ್ಸು ಹಗುರವಾಯಿತು

"ಒಂದು ಪಕ್ಷ ಅವರು ನಿಜವಾಗಿ ಹಾಗೆ ಮಾಡಿದ್ದರೆ ಪೋಲಿಸಿನವರು ಸುಮ್ಮನಿರುತ್ತಿದ್ದರೇನಮ್ಮ ?"

"ಅವರು ದುಡ್ಡುಳ್ಳವರು ಏನು ತಪ್ಪು ಕೆಲಸ ಮಾಡಿದರೂ ಬಚಾವಾಗ್ತಾರೆ" ತಾಯಿ ಮತ್ತೆ ಬೇರೊಂದು ಅರ್ಥ ಬರುವಂತೆ ಮಾತನಾಡಿದರು

ತಾಯಿಯೊಡನೆ ಇನ್ನು ಈ ವಿಷಯ ಬೆಳೆಸಿ ಪ್ರಯೋಜನವಿಲ್ಲವೆಂದು ಪದ್ಮಿನಿಗೆ ತೋರಿತು

"ಅಂದಹಾಗೆ ಗೀತಳ ಲೀವ್ ಲೆಟರ್ ಎಲ್ಲಿಟ್ಟುಬಿಟ್ಟೆನೋ ?" ಪದ್ಮಿನಿ ಗಡಬಡಿಸಿ ಎದ್ದು ರೂಮಿನ ದೀಪ ಹಾಕಿದಳು

"ಯಾಕೆ ಎದ್ದೆ ?"

"ಗೀತಾ ರಜದ ಚೀಟಿ ಕೊಟ್ಟಿದ್ದಳಮ್ಮ ಎಲ್ಲಿಟ್ಟಿದೀನೋ ನೋಡಬೇಕು" ಎನ್ನುತ್ತಾ ಪದ್ಮಿನಿ ಪುಸ್ತಕವಿರಿಸಿದ್ದ ಬೀರುವನು ಹುಡುಕಿ ಕೊನೆಗೆ ಪುಸ್ತಕವೊಂದರಿಂದ ತಿಳಿ ನೀಲಿ ಬಣ್ಣದ ಕವರೊಂದನ್ನು ಹೊರಗೆ ತೆಗೆದಳು

ಏನೋ ಒಂದು ಕುತೂಹಲದಿಂದ ಪದ್ಮಿನಿ ಕವರನ್ನು ಬಿಡಿಸಿ ಒಳಗಿದ್ದ ಕಾಗದವನ್ನು ಬಿಚ್ಚಿದಳು ಕಾಗದದ ಮೇಲ್ಭಾಗದಲ್ಲಿ ಮುದ್ರಿಸಿತ್ತು—ಎಸ್ ಕೆ ಮೂರ್ತಿ ಎಂ ಎ , ಎಲ್ ಎಲ್ ಬಿ , ಅಡ್ವೋಕೇಟ್

ಸ್ಪಷ್ಟವಾಗಿ ಬರದಿದ್ದ ವಾಕ್ಯಗಳ ಮೇಲೆ ಪದ್ಮಿನಿ ಕಣ್ಣೋಡಿಸಿದಳು ಪದ್ಮಿನಿ ಕಾಗದವನ್ನು ಮಡಿಸಿ ಕವರಿನೊಳಗಿಟ್ಟು ನಾಲಗೆಯಿಂದ ಕವರನ್ನು ಒದ್ದೆಮಾಡಿ ಮತ್ತೆ ಅದನು ಅಂಟಿಸಿ ಬೀರುವಿನಲ್ಲಿಟ್ಟಳು

ದೀಪ ಆರಿಸಿ ಮಲಗಿದಾಗ ಪದ್ಮಿನಿಗೆ ತಟ್ಟನೆ ನೆನಪಾಯಿತು ಲೀವ್ ಲೆಟರನ್ನು ಬರೆದು ಕವರಿನಲ್ಲಿ ಹಾಕಿದಾಗ ಮೂರ್ತಿ ಸಹ ಅವಳಂತೆಯೇ ಕವರನ್ನು ಎಂಜಲಿನಿಂದ ಒದ್ದೆ ಮಾಡಿ ಅಂಟಿಸಿದ್ದರು

ಕೂಡಲೇ ಎದ್ದು ಹೋಗಿ ಬಾಯನ್ನು ಚೊಕ್ಕಟವಾಗಿ ತೊಳೆದು ಕೊಂಡು ಬರಬೇಕೆನಿಸಿತು ಪದ್ಮಿನಿಗೆ

"ಅಯ್ಯೋ ಯಾರು ಎದ್ದು ಹೋಗ್ತಾರೆ ? ಬೇಜಾರು" ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು ಪದ್ಮಿನಿ ಹೊದಿಕೆ ಎಳೆದುಕೊಂಡಳು

* * *

ಮೂರ್ತಿ ಡಾಕ್ಟರ ಶಾಪಿಗೆ ಹೋದಾಗ ಅಲ್ಲಿ ಇನ್ನೂ ಕೆಲವರು ರೋಗಿಗಳು ಕುಳಿತಿದ್ದರು ಮೂರ್ತಿ ಒಳಗೆ ಬಂದ ಕೂಡಲೇ ಡಾಕ್ಟರು ಅವರನ್ನು ನೋಡಿ ನಕ್ಕು

"ಕುಳಿತುಕೊಳ್ಳಿ ಇನ್ನು ಹತ್ತು ನಿಮಿಷಗಳಲ್ಲಿ ಬರುತ್ತೇನೆ" ಎಂದು ಹೇಳಿ "ಬಾಬೂ, ಸಾಹೇಬರಿಗೆ ಕುರ್ಚಿ ತಂದು ಹಾಕೋ" ಎಂದು ಕೂಗಿದರು ಕಾಂಪೌಂಡರು ಕುರ್ಚಿಯನ್ನು ಮೂರ್ತಿಯ ಬಳಿ ನಿಲ್ಲಿಸಿ

"ಕೂತ್ಕೊಳ್ಳಿ ಸಾರ್" ಎಂದ

ಮೂರ್ತಿ ಬೆತ್ತದ ಕುರ್ಚಿಯ ಮೇಲೆ ಕುಳಿತುಕೊಂಡರು ಬಾಬು ಅಂದಿನ ಪತ್ರಿಕೆಯನ್ನು ಅವರ ಕೈಗೆ ಕೊಡಲು ಬಂದ

"ಏನು ಬೇಡ ಬಿಡು" ಎಂದರು ಮೂರ್ತಿ

ತಮ್ಮ ಸಂಜೆಯ ವರ್ತನೆಗಾಗಿ ಅವರ ಮನಸ್ಸು ಕೊಂಚ ಮುದುಡಿಕೊಂಡಿತ್ತು ಆದರೆ ಅದರಲ್ಲಿ ತಮ್ಮ ತಪ್ಪಾದರೂ ಏನು ?

ಕೆಲವು ದಿನಗಳಿಂದಲೂ ಅನಾಥಾಲಯದವರು, ವಿದ್ಯಾರ್ಥಿಗಳು ಒಂದೇ ಸಮನೆ ಅವರ ಮನೆಗೆ ಮುತ್ತಿಗೆ ಹಾಕುತ್ತಿದ್ದರು ಗೀತಾ ಹಾಸಿಗೆ ಹಿಡಿದು ಮಲಗಿದಾಗಿನಿಂದಲೂ ಹಣಕ್ಕಾಗಿ ಬರುತ್ತಿದ್ದವರ ಸಂಖ್ಯೆ ಹೆಚ್ಚಾಗಿತ್ತು

"ಪರೀಕ್ಷೆಗೆ ಕಟ್ಟಬೇಕು, ಏನಾದರೂ ಸಹಾಯ ಮಾಡಿ" ಎಂದು ಒಬ್ಬರು ಕೇಳಿಕೊಂಡರೆ ಮತ್ತೊಬ್ಬರು,

"ನೀವು ಈ ಸಲ ದುಡ್ಡು ಕೊಟ್ಟರೆ ನಾನು ಓದುವುದು ಸಾಧ್ಯ ಇಲ್ಲದಿದ್ದರೆ ವಿದ್ಯೆಯನ್ನ ನಾನು ಇಲ್ಲಿಗೆ ನಿಲ್ಲಿಸಬೇಕಾಗುತ್ತದೆ" ಎಂದು ಹೇಳುತ್ತಿದ್ದರು

ಅವರುಗಳಿಗೆ ಸ್ವಲ್ಪ ಹಣದ ಸಹಾಯ ಮಾಡುವುದರಿಂದಲಾದರೂ ಗೀತಳಿಗೆ ಬೇಗ ಹುಷಾರಾಗುವುದೇನೋ ಎಂಬ ಭ್ರಮೆಯಿಂದ ಮೂರ್ತಿ ತಮ್ಮ ಮನೆಯ ಬಾಗಿಲಿಗೆ ಬಂದಿದ್ದ ವಿದ್ಯಾರ್ಥಿಗಳಿಗೆ ಹಣಸಹಾಯ ಮಾಡಿದ್ದರು

ವಿದ್ಯಾರ್ಥಿಗಳಿಗೆ ಸ್ವಾರ್ಥದ ದೃಷ್ಟಿಯಿಂದಲೇ ಹಣ ಸಹಾಯ ಮಾಡುತ್ತಿರುವುದನ್ನು ನೆನೆದು ಅವರಿಗೆ ನಗು ಬಂದಿತ್ತು

ಹೂಂ ಎಷ್ಟಾಗಲಿ ವಯಸ್ಸಾಗಲಿಲ್ಲವೇ ? ಇನ್ನು ಮೇಲೆ ಈ ಬಗೆಯ ನಂಬಿಕೆ ಹೆಚ್ಚಾಗುತ್ತದೆ ಎಂದು ಅವರು ಸಮಾಧಾನ ತಾಳಿದ್ದರು

ಗೀತಳ ಅನಾರೋಗ್ಯದಿಂದ ಅವರ ಮನಸ್ಸು ತುಂಬಾ ವ್ಯಾಕುಲಗೊಂಡಿತ್ತು ಮುಂಜಾನೆಯ ಹೂವಿನಂತಿದ್ದ ಹುಡುಗಿ ಜ್ವರದ ತಾಪಕ್ಕೆ ಸಿಕ್ಕಿ ನಡುಬೇಸಿಗೆಯ ಕೊಳದಂತಾಗಿದ್ದಳು

ಬೆಳಗಿನಿಂದಲೂ ಅವರ ಮನಸ್ಸು ಮಂಕಾಗಿತ್ತು. ಕೋರ್ಟು ಮುಗಿದ

ಮೇಲೆ ಗೆಳೆಯ ಮಹದೇವ್ ಮೂರ್ತಿಯನ್ನು,

"ಬರ್ತೀರಾ ಕ್ಲಬ್ಬಿಗೆ" ಎಂದಾಗ ಮೂರ್ತಿ,

"ಇವತ್ತು ಯಾಕೋ ಮೂಡಿನಲ್ಲಿಲ್ಲ ಕಣ್ರಿ ಬೆಳಗಿನಿಂದ ತುಂಬ ಡಿಪ್ರೆಸ್ಡ್ ಆಗಿ ಫೀಲ್ ಆಗ್ತಿದೆ" ಎಂದಿದ್ದರು,

"ಗೀತಾ ಹೇಗಿದ್ದಾಳೆ ?"

ಗೆಳೆಯನಿಗೆ ಮಗಳ ಮೇಲಿದ್ದ ಅಮಿತ ಪ್ರೇಮ ಮಹದೇವ್‌ಗೆ ತಿಳಿದಿತ್ತು ಮೂರ್ತಿ ವ್ಯಾಕುಲಗೊಂಡರೆ,ಸಂತೋಷಗೊಂಡರೆ ಆ ಸುಖದುಃಖದ ಭಾವನೆಗಳ ಹಿಂದೆ ಗೀತಾ ಇದ್ದೇ ಇರುವಳೆಂಬುದು ಮಹದೇವ್‌ಗೆ ತಿಳಿದಿತ್ತು

"ಇವತ್ತೇನು ಬಹಳ ಸಂತೋಷವಾಗಿದೀರಿ ? ಗೀತಾ ಏನೆಂದಳು ?"

"ಗೀತಾ ಬಟ್ಟೆ ಹೊಲಿಯುವುದನ್ನು ಎಷ್ಟು ಚೆನ್ನಾಗಿ ಕಲಿತಿದಾಳೇಂತ ಮಹದೇವ್ ಕಳ್ಳಿ ಅವಳು ಮೊದಲು ನನಗೆ ಈ ವಿಷಯಾನೇ ತಿಳಿಸಿರಲಿಲ್ಲ ಯಾವ ದರ್ಜಿಯೂ ಅವಳಂತೆ ಬಟ್ಟೆ ಹೊಲಿಯಲಾರ "

"ನಿಜ ಗೀತಳಷ್ಟು ಕೆಟ್ಟದಾಗಿ ಹೊಲಿಯಲಾರ ದರ್ಜಿ" ಎಂದು ಮಹದೇವ್ ಆಗ ಗೆಳೆಯನನ್ನು ರೇಗಿಸುತ್ತಿದ್ದರು

ಅವಳಿಗೊಂದು ಹೊಲಿಗೆ ಯಂತ್ರ ಬೇಕಂತೆ" ಎನ್ನುತ್ತಿದ್ದರು ಮೂರ್ತಿ– ಗೀತ ತಮ್ಮ ಮೇಲೆ ಅಪಾರ ದಯೆ ಪ್ರೀತಿ ವ್ಯಕ್ತಪಡಿಸಲು ಹೊಲಿಗೆಯ ಯಂತ್ರ ಕೇಳಿದ ಹಾಗೆ

ಗೀತ ತಮ್ಮನ್ನು ಏನಾದರೂ ಕೇಳಿದರೆ ಆವಳು ತಮಗೆ ದೊಡ್ಡದೊಂದು ಉಪಕಾರ ಮಾಡಿದಷ್ಟು ಮೂರ್ತಿ ಹಿಗ್ಗುತ್ತಿದ್ದರು

ಗೀತಳ ನಗುವಿನಲ್ಲಿ ಅವರು ತಮ್ಮ ಬಾಳ ಸಾರ್ಥಕತೆಯನ್ನು ಕಾಣುತ್ತಿದ್ದರು ಗೀತಳ ಕಣ್ಣುಗಳ ಬೆಳಕು ಕೊಂಚ ಮಾಸಿದರೂ ಮೂರ್ತಿ ತಲ್ಲಣಿಸುತ್ತಿದ್ದರು

ಗೀತಾ ಅರಳಿದ ಒಂದು ಹೂವು ಮುಡಿದರೆ ಆ ಹೂವು ಅರಳಿದ್ದಕ್ಕೆ ಸಾರ್ಥಕ ಎಂದು ಭಾವಿಸುತ್ತಿದ್ದ ಜೀವ ಅವರದು

ಅವಳೊಂದು ಹೊಸ ಸೀರೆಯುಟ್ಟರೆ ಸೀರೆಯ ಜನ್ಮ ಕೃತಕೃತ್ಯವಾಯಿತು ಎಂದು ಅವರ ಎಣಿಕೆ

ವೈಭವದ ತೇರಿನಲ್ಲಿದ್ದರೂ ಗೀತ ಸ್ನೇಹದ ಸವಿ ಕಂಡಿರಲಿಲ್ಲ ಈ ವಿಷಯ ಮೂರ್ತಿಗೂ ತಿಳಿದಿತ್ತು. ಮೊದಲಿನಿಂದಲೂ ಒಂಟಿಯಾಗಿ ಬೆಳೆದ ಗೀತಳಿಗೆ ಯಾರೂ ಗೆಳತಿಯರಿರಲಿಲ್ಲ ಅವಳ ಸ್ವಭಾವ ಬಹಳ ಬೇಗ ಇತರರೊಡನೆ ಹೊಂದಿಕೊಳ್ಳುತ್ತಿರಲಿಲ್ಲ

ಎಲ್ಲರಿಂದಲೂ ದೂರ ಸರಿಯುವ ಮನೋಭಾವ ಅವಳಲ್ಲಿತ್ತು ಇತರರೊಡನೆ ಏಕೋ ಏನೋ, ಹೊಂದಿಕೊಂಡು ಹೋಗಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ ಆದರೂ ಅವಳ ಎಳೆಯ ಮನಸ್ಸು ಸಮವಯಸ್ಕರ ಸ್ನೇಹ ಪಡೆಯಲು ಹಾತೊರೆಯುತ್ತಿತ್ತು ತಾನು ಕುಳಿತಿದ್ದ ಸಿಂಹಾಸನದಿಂದ ಒಂದು ಮೆಟ್ಟಲು ಕೆಳಗಿಳಿಯಲು ಗೀತ ಸಿದ್ಧಳಿರಲಿಲ್ಲ ಇತರರು ತಾವೇ ಅವಳಿರುವಲ್ಲಿಗ ಹತ್ತಿಹೋಗಿ ಸ್ನೇಹಹಸ್ತ ನೀಡಲು ತಯಾರಿರಲಿಲ್ಲ

ಇತರರು ಅವಳ ರಿಸರ್ವ್ಡ್ ನೇಚರನ್ನು 'ಜಂಭ' ಎಂದು ಕರೆಯುತ್ತಿದ್ದರು

ತಾಯಿಯಿಲ್ಲದ ಗೀತಳಿಗೆ ಮೂರ್ತಿಯೇ ತಾಯಿ ತಂದೆ

ಗೆಳತಿಯರಿಲ್ಲದ ಗೀತಳಿಗೆ ಮೂರ್ತಿಯೇ ಆಪ್ತ ಗೆಳೆಯ ಗೀತಳ ಸಹಪಾಠಿಗಳು ಯಾರೂ ಸಾಧಾರಣವಾಗಿ ಅವಳ ಮನೆಗೆ ಹೋಗುತ್ತಿರಲಿಲ್ಲ ಗೀತಳಿಗೂ ಸಂಜೆಯ ಹೊತ್ತು ಇತರರ ಮನೆಗೆ ಹೋಗುವ ಅಭ್ಯಾಸವಿರಲಿಲ್ಲ ಒಂದೊಂದು ದಿನ ಮೂರ್ತಿ ತಾವೇ ಬಲವಂತಮಾಡಿ ಗೀತಳನ್ನು ತಮ್ಮೊಡನೆ ಕ್ಲಬ್ಬಿಗೆ ಕರೆದುಕೊಂಡು ಹೋಗುತ್ತಿದ್ದರು ಕ್ಲಬ್ಬಿನಲ್ಲಿದ್ದ ಮಹದೇವ್ ಗೀತಳ ಮತ್ತೊಬ್ಬ ಮಿತ್ರರಾಗಿದ್ದರು ತಂದೆಯೊಡನೆ ಆಗಾಗ್ಗೆ ತಮ್ಮ ಮನೆಗೆ ಬರುತ್ತಿದ್ದ ಮಹದೇವ್‌ನಲ್ಲಿ ಗೀತಳಿಗೆ ಸಲಿಗೆಯೂ ಬೆಳೆದಿತ್ತು.

ಇತರರಿಂದ ದೂರವಿದ್ದ ಗೀತಳನ್ನು ಪದ್ಮಿನಿ ನೋಡಲು ಮನೆಗೆ ಬಂದಾಗ ಮೂರ್ತಿಗೆ ಅವಳು ಗೀತಳ ಸಹಪಾಠಿ ಇದ್ದರೂ ಇರಬಹುದು ಎಂಬ ಆಲೋಚನೆ ಒಂದು ಸಲವೂ ಬರಲಿಲ್ಲ

ಅಪರಿಚಿತರು ತಮ್ಮಲ್ಲಿಗೆ ಬಂದರೆ ಹಣದ ಸಹಾಯ ಕೇಳಿಕೊಂಡೇ ಬರುತ್ತಾರೆ, ಎಂಬ ಅಭಿಪ್ರಾಯ ಮೂರ್ತಿಯಲ್ಲಿತ್ತು

ಸಾಲದುದಕ್ಕೆ ಪದ್ಮಿನಿಯ ಬಾಹ್ಯಾಲಂಕಾರವೂ ಹೆಚ್ಚುಕಡಿಮೆ ಅಂತಹವರ ಗುಂಪಿಗೇ ಸೇರಿಸುವಂತಿತ್ತು

ಅತಿ ಸಾಮಾನ್ಯವಾದುದೊಂದು ನೂಲಿನ ಸೀರೆ, ಕೆದರಿದ ತಲೆ ದಣಿದ ಮುಖ, ಬರಿದಾಗಿದ್ದ ಕೊರಳು, ಕೇವಲ ಒಂದೊಂದು ಗಾಜಿನ ಬಳೆಯಿದ್ದ ಕೈಗಳು, ರಟ್ಟು ಮಾಸಿದ ಪುಸ್ತಕಗಳು ಇವುಗಳನ್ನು ನೋಡಿ ಮೂರ್ತಿ ಮೋಸ ಹೋಗಿದ್ದರು

ತನ್ನ ಮಾತಿನ ಅರ್ಥ ಅವಳಿಗಾಗುತ್ತಲೇ ಅವಳು ಹೇಗೆ ಕೆರಳಿದ್ದಳು! ಹೆಡೆ ತುಳಿಸಿಕೊಂಡ ಸರ್ಪ !

'ನಾನು ಗೀತಳ ಸಹಪಾಠಿ ನಾನು ಅವಳನ್ನು ನೋಡಿಕೊಂಡು ಹೋಗಲು ಬಂದೆ' ಎಂದು ಅವಳು ಹೇಳಿದಾಗ ಪ್ರತಿಯೊಂದು ಪದವೂ ಅವಳ ಕೋಪ, ರೋಷದ ವಿಷವನ್ನು ಹೊತ್ತುಕೊಂಡು ಬಂದು ನೇರವಾಗಿ ಅವರ ಎದೆಯನ್ನು ಪ್ರವೇಶಿಸಿತ್ತು

ಮಸುಕು ಬೆಳಕಿನಲ್ಲಿ ಅವಳನ್ನು ಸರಿಯಾಗಿ ನೋಡದೆ ತಾನು ಹೀಗೆ ಮಾತನಾಡಬಾರದಾಗಿತ್ತು ಎಂದುಕೊಳ್ಳುತ್ತಲೇ ಮೂರ್ತಿ ವರಾಂಡದ ದೀಪವನ್ನು ಹಾಕಿದ್ದರು

ದೀಪಗಳು ಬೆಳಗಿದವು ಅವರು ಪದ್ಮಿನಿಯ ಕಡೆ ತಿರುಗಿದರು

ಅವಳ ಕಣ್ಣುಗಳಲ್ಲಿ ಉರಿಯುತ್ತಿದ್ದ ಸ್ವಾಭಿಮಾನ, ಜಾಣ್ಮೆಯು ಎದುರಿಗೆ ಅರವತ್ತು ಕ್ಯಾಂಡಲಿನ ದೀಪ ಮೂರ್ತಿಗೆ ಬಹಳ ಮಂಕಾಗಿ ತೋರಿತು ಅವರು ಒಂದು ಗಳಿಗೆ ಬೆಪ್ಪಾಗಿದ್ದರು

ಅವಳ ತುಟಿಯ ಮೇಲೆ ಅರಳಿದ ನಗೆಯ ಸೌರಭ ಅವರಲ್ಲೂ ಮಂದಸ್ಮಿತವನ್ನು ಉಕ್ಕಿಸಿತ್ತು

ಅವಳುಟ್ಟಿದ್ದುದು ಸಾಮಾನ್ಯವಾದುದೊಂದು ನೂಲಿನ ಸೀರೆ—ಆದರೆ ಹುಡುಗಿ ಧೀರ, ಗಂಭೀರ, ಅಚಲ ಹಿಮವತ್ಪರ್ವತದಂತೆ ಅವರನ್ನು ದಿಟ್ಟತನದಿಂದ ಎದುರಿಸುವವಳಂತೆ ನೋಡುತ್ತಾ ನಿಂತಿದ್ದಳು ಹಿಮಾಲಯದ ಎದುರಿಗೆ ನಿಂತ ಶಿಶುವಿನಂತೆ ಆಗ ಮೂರ್ತಿ ಬೆಪ್ಪು, ಚಕಿತ, ಪುಲಕಿತ, ಭಯ ಭೀತ, ಆನಂದಿತ

ಅವಳ ನಗೆ ವ್ಯಂಗ್ಯ ನಗೆಯೆಂದು ತಿಳಿಯಲು ಮೂರ್ತಿಗೆ ಬಹಳ ಹೊತ್ತು ಬೇಕಾಗಲಿಲ್ಲ

ಮುದ್ದಾದ ಬಾಯಿ ವಕ್ರವಾದಾಗ ಮೂರ್ತಿಯ ಸ್ಮಿತ ಮಾಯ

ವಾಗಿತು

ಪದ್ಮಿನಿಯು ಹೆಣ್ಣು, ಆದರೆ ಎಳೆಯ ಹುಡುಗಿ—ಆದುದರಿಂದ ಬೇಗ ಕೋಪಗೊಳ್ಳುವುದು ಸಹಜ ಮೂರ್ತಿ ಪದ್ಮಿನಿಯನ್ನು ಒಳಗೆ ಬರುವಂತೆ ಆಹ್ವಾನಿಸಿದ್ದರು

ಒಂದೇ ಒಂದು ಗಳಿಗೆ ಅವಳು ಸೆಟೆದು ನಿಂತು ಮೂರ್ತಿಯನ್ನು ನೇರ ವಾಗಿ ಸಿಟ್ಟಿನಿಂದ ನೋಡಿದಳು ಉಗ್ರಭಾವನೆಯ ಅಲೆಯೊಂದು ಅವಳ ನಯನ ಸಾಗರದಲ್ಲಿ ಉರುಳಾಡುತ್ತಿತ್ತು

ತನ್ನನ್ನು ಹೊಡೆಯುವ ಹಂಬಲವೇ ? ಇದ್ದರೂ ಇರಬಹುದು. ಸಣ್ಣ ಮಾತಿಗೆ ನಾರಿ ಮಾರಿಯಾಗಬಲ್ಲಳೇ ? ಈಗ ತನ್ನಿಂದಾದ ಅಪರಾಧ ವಾದರೂ ಏನು ?

ಬೆಂಕಿಯ ಕಾವಿಗೆ ಕರಗುವ ಬೆಣ್ಣೆಯಂತೆ ಅವಳು ಮತ್ತೆ ಮೃದು ವಾದಳು ಕಣ್ಣಿನ ನೋಟ ಕಳಕಳಿಯಿತು

ಹುಡುಗಿ ರಾಜಿಯಾದಳು ಎಂದು ತಾವು ಭಾವಿಸುವಷ್ಟರಲ್ಲಿ ಅವಳು ತಮ್ಮ ಕೋರಿಕೆಯನ್ನು ತಿರಸ್ಕರಿಸಿ ಮನೆಗೆ ಕಾಲುನಡಿಗೆಯಲ್ಲಿ ಹೊರಟು ಬಿಟ್ಟಿದ್ದಳು

'ನಾನು ನಡೆದೇ ಹೋಗುತ್ತೇನೆ' ಎಂದವಳು ಹೇಳಿದಾಗ ಮೂರ್ತಿಗೆ ಅವಳನ್ನು ಎಳೆದು ಕಾರಿನಲ್ಲಿ ಎಸೆದು ಕರೆದುಕೊಂಡು ಹೋಗಬೇಕೆನಿಸಿತ್ತು.

ಚೋಟುದ್ದದ ಹುಡುಗಿಗೆ ಎಷ್ಟೊಂದು ಪ್ರತಿಷ್ಠೆ ! ಕೊನೆಗೆ ತನ್ನ ವಯಸ್ಸಿಗಾದರೂ ಮರ್ಯಾದೆ ಬೇಡವೇ ?

ಅವಳ ಮೇಲಿನ ಕೋಪದಲ್ಲೇ ಅವರು ಕಾರನ್ನು ವೇಗವಾಗಿ ಬಿಟ್ಟು ಕೊಂಡು ಫಾರ್ಮಸಿಗೆ ಬಂದಿದ್ದರು

ಡಾಕ್ಟರು ಚರ್ಮದ ಬ್ಯಾಗನ್ನು ಕೈಲಿ ಹಿಡಿದು,

"ಹೊರಡೋಣವೇ" ಎಂದು ಕೇಳಿದಾಗ ಮೂರ್ತಿ ಗಲಿಬಿಲಿಯಿಂದ ಎದ್ದುನಿಂತರು

ಮನೆಯ ಮುಂದೆ ಕಾರಿನ ಸದ್ದಾಗುತ್ತಲೇ ಹನುಮ ಓಡಿ ಬಂದು ಗೇಟನ್ನು ತೆಗೆದ

ಡಾಕ್ಟರು ಗೀತಳ ಟೆಂಪರೇಚರನ್ನು ನೋಡಿ 'ನಾರ್ಮಲ್‌ಗೆ ಬಂದಿದೆ'

ಎಂದಾಗ ಮೂರ್ತಿ ನಿಟ್ಟುಸಿರುಬಿಟ್ಟರು

"ಇವತ್ತೇನೂ ಇಂಜಕ್ಷನ್ ಬೇಕಾಗಿಲ್ಲ"

"ನಾನು ನಾಳೆಯಿಂದ ಕಾಲೇಜಿಗೆ ಹೋಗಬಹುದೇ ಡಾಕ್ಟರ್ ?" ಎಂದು ಗೀತಾ ಆತುರದಿಂದ ಕೇಳಿದಳು

"ನಿನ್ನ ಕೈಲಿ ಸಾಧ್ಯವಾದರೆ ಮಹಡಿ ಇಳಿ ನೋಡೋಣ" ಎಂದು ಡಾಕ್ಟರು ಗೀತಳನ್ನು ರೇಗಿಸಿದರು

"ಊಂ" ಎಂದು ಗೀತ ಪ್ರತಿಭಟಿಸುವಷ್ಟರಲ್ಲಿ ಅವರು "ಇನ್ನೊಂದು ವಾರ ಕಾಲೇಜಿನ ಸುದ್ದಿ ಎತ್ತಬೇಡ" ಎಂದರು

"ತುಂಬಾ ಪಾಠಗಳು ತಪ್ಪಿಹೋಗುತ್ತವೆ"

"ಕ್ಲಾಸಿನಲ್ಲಿ ಬುದ್ಧಿವಂತೆಯಾಗಿರುವ ಹುಡುಗಿಯ ಸಹಾಯ ಪಡೆದರಾಯಿತು"

"ಪದ್ಮಿನಿ ಬೇಕಾದರೆ" ಎಂದು ಗೀತಾ ಹೇಳುವಷ್ಟರಲ್ಲಿ ಮೂರ್ತಿ,

"ಟ್ಯೂಷನ್ ಇಡಿಸಿದರಾಯಿತು" ಎಂದರು

ಡಾಕ್ಟರನ್ನು ಮತ್ತೆ ಕಾರಿನಲ್ಲಿಯೇ ಕರೆದುಕೊಂಡು ಹೋಗಿ ಅವರನ್ನು ಮನೆಗೆ ತಲುಪಿಸಿ ಮೂರ್ತಿ ಬಂದರು

ರಾತ್ರಿ ಗೀತಳ ಮಂಚದ ಪರದೆಯನ್ನು ಮೂರ್ತಿ ಕೆಳಗೆ ಬಿಡುತ್ತಿದ್ದಾಗ ಅವಳು ಕೇಳಿದಳು—

"ಅಣ್ಣಾ, ಪದ್ಮಿನೀನ ಅವಳ ಮನೆಗೆ ಬಿಟ್ಟುಬಂದೆಯಾ ?"

ಮೂರ್ತಿ ಪರದೆಯನ್ನು ಮೆತ್ತೆಯ ಕೆಳಗೆ ಸುತ್ತಲೂ ಸಿಕ್ಕಿಸುತ್ತಾ,

"ಔಷಧಿ ತಗೊಂಡೆಯಾ ?" ಎಂದರು

"ಹೂಂ"

"ನಿದ್ದೆ ಮಾಡು, ಏನಾದರೂ ಬೇಕಾದರೆ ಕೂಗು" ಎಂದು ಹೇಳುತ್ತಾ ಮೂರ್ತಿ ರೂಮಿನ ದೀಪ ಆರಿಸಿ ಹೊರಗೆ ಹೋದರು

ಪಕ್ಕದಲ್ಲಿದ್ದ ತಮ್ಮ ರೂಮಿನ ದೀಪದ ಸ್ವಿಚ್ಚು ಹಾಕಿದ ಸದ್ದು ಗೀತಳಿಗೆ ಕೇಳಿಸಿತು

ತಂದೆಯ ಅಗಾಧ ಪ್ರೀತಿಯಿಂದ ಗೀತಳ ಹೃದಯ ತುಂಬಿ ಬಂತು. ಸುಮಾರು ಹದಿಮೂರು ವರ್ಷಗಳಿಂದ ಒಂಟಿ ಜೀವನ ನಡೆಸುತ್ತಿದ್ದ

ತಂದೆಯ ಬರಡು ಬಾಳನ್ನು ನೆನೆದು ಗೀತಳಿಗೆ ವ್ಯಥೆಯಾಯಿತು

ಗೀತಳಿಗೆ ತಾಯಿಯ ನೆನಪು ಮಸುಕು ಮಸುಕಾಗಿತ್ತು ಐದು ವರ್ಷದ ಹುಡುಗಿಯಾಗಿದ್ದಾಗ ಅವಳು ತಾಯಿಯನ್ನು ಕಳೆದುಕೊಂಡಿದ್ದಳು ಜ್ವರದ ಕಾವಿನಲ್ಲಿ 'ಅಮ್ಮಾ' ಎಂದು ನರಳಿದ್ದಳು ತಾನು 'ಅಮ್ಮಾ' ಎಂದು ನರಳಿದಾಗ ತಂದೆಯ ಮುಖದಲ್ಲಿ ಮೂಡಿದ ನೋವನ್ನು ಗಮನಿಸಿದ್ದಳು ಆ ನೋವನ್ನು ಗಮನಿಸಿಯೇ ಗೀತಾ ಪ್ರಯತ್ನಪೂರ್ವಕವಾಗಿ 'ಅಮ್ಮಾ' ಎಂದು ನರಳುವುದನ್ನು ಕಡಿಮೆಮಾಡಿದ್ದಳು ಆದರೂ ಒಮ್ಮೊಮ್ಮೆ ಅವಳ ಪ್ರಯತ್ನ ಮೀರಿ ಆ ಪದ ಅವಳ ಹೃದಯದಿಂದ ಹೊರಗೆ ಬರುತ್ತಿತ್ತು

ಬೀರುವಿನಿಂದ ಪುಸ್ತಕವನ್ನು ಎಳೆದುಕೊಂಡ ಸದ್ದು

ಗೀತ ಆಲಿಸಿದಳು ಗಡಿಯಾರ ಹತ್ತುಗಂಟೆ ಹೊಡೆಯುತ್ತಿತ್ತು ಅಣ್ಣ ಇನ್ನಾದರೂ ಮಲಗಬಾರದೇ ?

ರೂಮಿನ ದೀಪ ಆರಿಸಿ ಟೇಬಲ್ ಲ್ಯಾಂಪನ್ನು ಒತ್ತಿದ ಸದ್ದು

ಕುರ್ಚಿಯನ್ನು ಮತ್ತಷ್ಟು ಮೇಜಿನ ಬಳಿಗೆ ಸರಿಸಿದ ಶಬ್ದ

ಗೀತಾ ಕಣ್ಣು ಮುಚ್ಚಿ ನಿದ್ರಿಸಲು ಯತ್ನಿಸಿದಳು

* * *

ನಾಲ್ಕು ದಿನಗಳಾದ ಮೇಲೆ ಪದ್ಮಿನಿಗೆ ಮತ್ತೆ ಗೀತಳ ಮನೆಗೆ ಹೋಗಿ ಅವಳನ್ನು ನೋಡಿಕೊಂಡು ಬರಬೇಕೆನ್ನಿಸಿತು ಮೊದಲ ಬಾರಿ ತಾನು ಅವಳನ್ನು ನೋಡಲು ಹೋದಾಗ ಅವಳ ದೈನ್ಯಮುಖ ಕಂಡು ಪದ್ಮಿನಿ ಕರಗಿದ್ದಳು

ವಿಶಾಲವಾದ ಮನೆ ವಿಸ್ತಾರವಾದ ಕೊಠಡಿಯೊಂದರಲ್ಲಿ ದೊಡ್ಡ ಮಂಚವೊಂದರ ಮೇಲೆ ಹಿಡಿಯಾಗಿ ಮಲಗಿದ್ದ ಗೀತ ಪದ್ಮಿನಿಯಲ್ಲಿ ಕರುಣೆಯನ್ನು ಹುಟ್ಟಿಸಿದ್ದಳು

ಸಂಕಟದ ಸಮಯದಲ್ಲಿ ತಾಯಿಯ ಮಮತೆಯ ಸ್ಪರ್ಶದಿಂದ ದೂರವಾಗಿದ್ದ ಅಭಾಗಿನಿ ಗೀತಾ. ದೇಹಕ್ಕೆ ಹಿಂಸೆಯಾಗುತ್ತಿದ್ದಾಗ ಆ ಜೀವಿ ಮತ್ತೊಂದು ಹೃದಯ ಅನುಕಂಪವನ್ನು ಬಯಸುವುದಿಲ್ಲವೇ ? ಅವಳ ತಂದೆಯೇನೋ ಮಗಳನ್ನು ಮನಸಾರೆ ಪ್ರೀತಿಸಬಹುದು, ಆದರೆ ಖಾಯಿಲೆ

ಮಲಗಿರುವ ಮಗಳ ಬಳಿ ಅವರು ತಮ್ಮ ಕೆಲಸಕಾರ್ಯಗಳನ್ನೆಲ್ಲಾ ಬಿಟ್ಟು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಪದ್ಮಿನಿ ಗೀತಳ ಮನೆಗೆ ಆ ದಿನ ಹೋಗಲೇಬೇಕೆಂದು ನಿರ್ಧರಿಸಿದಳು ಶನಿವಾರ ಮಧ್ಯಾಹ್ನ ಕಾಲೇಜು ನಾಲ್ಕು ಗಂಟೆಗೇ ಮುಗಿಯಿತು ಪದ್ಮಿನಿ ಮನೆಗೆ ಬಂದು ತಿಂಡಿ ಮುಗಿಸಿ ಗೀತಳ ಮನೆಗೆ ಹೊರಡಲು ಅನುವಾದಳು

ಮಗಳು ಹೊರಗೆ ಹೊರಟಿರುವುದನ್ನು ನೋಡಿ ತಾಯಿ ಕೇಳಿದಳು,

"ಎಲ್ಲಿಗೆ ಹೋಗ್ತಿಯೇ ?"

ಸುಳ್ಳೇಕೆ ಹೇಳಬಾರದು? ಗೀತಳ ಮನೆಗೆ ಹೋಗ್ತೀನಿ ಎಂದು ಹೇಳಿದರೆ ತಾಯಿ ತಡೆಯುವಳೇನೋ ? ಹೂಂ, ತಾನು ತಾಯಿಗೇಕೆ ಹೆದರಬೇಕು ?ತಾನು ಮಾಡುತ್ತಿರುವುದು ತಪ್ಪು ಕೆಲಸವೇನಲ್ಲ

"ಗೀತಳ ಮನೆಗೆ ಹೋಗ್ತೀನಿ"

"ಬೇಡ ಪದ್ಮಿನಿ"

ಪದ್ಮಿನಿ ಸಿಡುಕಿ ಹೇಳಿದಳು "ಬಿಡಮ್ಮ ಊರೋರೆಲ್ಲಾ ಸಣ್ಣ ಮಾತು ಆಡಿದರೆ ನಾವೂ ಆಡಬೇಕೆ ? ಇಷ್ಟಕ್ಕೂ ತಾನು ಗೀತನ್ನ ನೋಡೋಕೆ ಹೋಗ್ತೀನಿ ಅವಳ ತಂದೇನ ನೋಡೋಕೆ ಹೋಗ್ತಿಲ್ಲ "

"ಈ ಚೀಚೆಗೆ ಗಂಟಲು ದೊಡ್ಡದಾಯಿತು ನಿನಗೆ "

"ನನಗೂ ಹದಿನೆಂಟು ವರ್ಷವಾಗ್ತಾ ಬಂತಲ್ಲ"

"ಕತ್ತಲಾಗುವಷ್ಟರಲ್ಲಿ ಬಂದುಬಿಡು "

"ಆಗಲಿ" ಎನ್ನುತ್ತಾ ಪದ್ಮಿನಿ ಬಾಗಿಲಿನ ವರೆಗೆ ಹೋದಳು ತಾಯಿ ಮತ್ತೆ ಮಗಳನ್ನು ಕೂಗಿ ಕರೆದು ಅವಳ ಕೈಗೆ ಎಂಟಾಣೆಯ ಬಿಲ್ಲೆಯೊಂದನ್ನು ಕೊಟ್ಟು

"ಬರುತ್ತಾ ಅಂಗಡೀಲಿ ಏನಾದರೂ ತರಕಾರಿ ತಗೊಂಡು ಬಾ. ನಾಳೆಗೆ ಏನೂ ಇಲ್ಲ" ಅಂದರು

"ಒಂದು ಚೀಲ ಕೊಡು "

ತಾಯಿ ಚೀಲವೊಂದನ್ನು ತಂದು ಮಗಳಿಗೆ ಕೊಟ್ಟು,

"ಈ ಸೀರೇಲಿ ಹೋಗ್ತೀಯಾ ?" ಎಂದರು

ಪದ್ಮಿನಿ ತಾನು ಉಟ್ಟಿದ್ದ ಕಾವಿಬಣ್ಣದ ಖಾದಿಯ ಸೀರೆಯ ಕಡೆ

ನೋಡಿ "ಏನಾಗಿದೆ ?" ಎಂದಳು

"ಯಾವುದಾದರೂ ರೇಷ್ಮೆ "

"ನಿನ್ನ ಬುಟ್ಟಾ ಹೂವಿನ ಸೀರೆ ಯಾಕಾಗಬಾರದು ?"

ಕಾವಿಬಣ್ಣದ ಖಾದಿ ಸೀರೆಯಲ್ಲಿ ಮನೋಹರವಾಗಿ ಕಾಣುತ್ತಿದ್ದ ಪದ್ಮಿನಿಯನ್ನು ನೋಡಿ ಜಲಜಮ್ಮ ಅಭಿಮಾನದಿಂದ,

"ಹಾಳಾಗಿ ಹೋಗು" ಎಂದು ಬೈದರು

ಪದ್ಮಿನಿ ಚೀಲವನ್ನು ತೂಗಾಡಿಸುತ್ತಾ ಹೊರಟಳು ಗೀತಳ ಮನೆಗೆ ಹೋಗುವಾಗ ದಾರಿಯಲ್ಲಿನ ಅಂಗಡಿ ಸಾಲುಗಳ ನಡುವೆ ಹಾದುಹೋಗು ವಾಗ ಪದ್ಮಿನಿಗೆ ತಾಯಿಯ ಮಾತು ನೆನಪಿಗೆ ಬಂತು

"ಹೇಗಪ್ಪಾ ಕಿತ್ತಳೆ ಹಣ್ಣು ಡಜನ್ ?"

"ಹತ್ತಾಣೆ"

"ಎಂಟಾಣೆ"

"ಇಲ್ಲ"

"ನನ್ನ ಹತ್ತಿರ ಇರೋದೆ ಎಂಟಾಣೆ ಅಷ್ಟಕ್ಕೆ ಕೊಡುವ ಹಾಗಿದ್ದರೆ ಕೊಡು" ಎನ್ನುತ್ತಾ ಪದ್ಮಿನಿ ಎಂಟಾಣೆಯ ಬಿಲ್ಲೆಯನ್ನು ಅಂಗಡಿಯವನಿಗೆ ತೋರಿಸಿದಳು ಅಂಗಡಿಯವನು ಹಣ್ಣುಗಳನ್ನು ಚೀಲಕ್ಕೆ ಹಾಕಿದ

ಪದ್ಮಿನಿ 'ಸುದರ್ಶನ'ದ ಬಾಗಿಲನ್ನು ತೆಗೆದಳು ಕಾರು ಪೋರ್ಟಿಕೋ ದಲ್ಲಿ ನಿಂತಿತ್ತು ಮೂರ್ತಿ ಕಾರಿನ ಬಾಗಿಲನ್ನು ತೆಗೆಯುವುದರಲ್ಲಿದ್ದರು ಪದ್ಮಿನಿ ಕಾಂಪೌಂಡನ್ನು ಪ್ರವೇಶಿಸಿದಳು

ಎಲ್ಲಿಯೋ ಇದ್ದ ಕಪ್ಪು ಜೂಲು ನಾಯಿ ಭಯಂಕರವಾಗಿ ಬಗು ಳುತ್ತಾ ಪದ್ಮಿನಿಯ ಬಳಿಗೆ ನುಗ್ಗಿ ಬಂತು

ಪದ್ಮಿನಿ ಹೊರಗೆ ಓಡಿಹೋಗುವ ಹಾಗಿರಲಿಲ್ಲ ಅವಳು ಹಿಂತಿರುಗಿ ಓಡುವಷ್ಟರಲ್ಲಿ ನಾಯಿ ಅವಳ ಕಾಲನ್ನು ಬಂದು ಹಿಡಿಯಿತು

ಪದ್ಮಿನಿ ಚೀರಿದಳು ಅವಳ ಕೈಲಿದ್ದ ಚೀಲ ಕೆಳಗೆ ಬಿತ್ತು ಮೂರ್ತಿ ಪದ್ಮಿನಿಯ ಬಳಿಗೆ ಓಡಿಬಂದರು ನಾಯಿಯ ಬೆನ್ನಿನ ಮೇಲೆ ಬಲವಾಗಿ ಗುದ್ದಿ 'ಹನುಮಾ' ಎಂದು ಕೂಗಿದರು ಹನುಮ ಓಡಿ ಬಂದು ನಾಯಿ ಯನ್ನು ಹೊಡೆಯುತ್ತಾ ಎಳೆದುಕೊಂಡು ಹೋದ.

ಹೆದರಿಕೆಯಿಂದ ಪದ್ಮಿನಿಯ ದೇಹ ನಡುಗುತ್ತಿತ್ತು. ದಪ್ಪನಾಗಿದ್ದ ಖಾದಿ ಸೀರೆ ಉಟ್ಟುಕೊಂಡಿದ್ದುದರಿಂದ ನಾಯಿಯ ಹಲ್ಲು ಪದ್ಮಿನಿಯ ಕಾಲಿನೊಳಗೆ ಆಳವಾಗಿ ಇಳಿದಿರಲಿಲ್ಲ. ಸೀರೆ ಮಾತ್ರ ಸ್ವಲ್ಪ ಹರಿದುಹೋಗಿತ್ತು. ನೋವಿಗಿಂತಲೂ ಹೆದರಿಕೆಯಿಂದ ಪದ್ಮಿನಿ ತತ್ತರಿಸಿದ್ದಳು. ಬೇಡಬೇಡವೆಂದರೂ ಅವಳ ಕಣ್ಣುಗಳಿಂದ ಹನಿಯೊಡೆಯಿತು.

ಪದ್ಮಿನಿ ವಿಹ್ವಲಳಾಗಿ ಕೆಳಗೆ ಬಿದ್ದಿದ್ದ ಚೀಲವನ್ನೂ ಸುತ್ತಲೂ ಹರಡಿಹೋಗಿದ್ದ ಹಣ್ಣುಗಳನ್ನೂ ನೋಡಿದಳು.

ಮೂರ್ತಿ ಚೀಲಕ್ಕೆ ಹಣ್ಣುಗಳನ್ನು ಆಯ್ದು ತುಂಬುತ್ತಿದ್ದರು. ಅವರ ಅಲೆಗೂದಲಿನ ಕ್ರಾಫಿನ ಕಡೆ ನೋಡುತ್ತಿದ್ದಂತೆಯೇ ಪದ್ಮಿನಿಯ ಕೆನ್ನೆಯ ಮೇಲೆ ಕಂಬನಿ ಇಳಿಯಿತು. ಅವಳು ಬಿಕ್ಕಿದಳು.

ಮೂರ್ತಿ ತಲೆ ಎತ್ತಿ ಅವಳ ಕಡೆ ನೋಡಿದರು.

ಪಾಪ! ಹೆದರಿಕೆಯಿಂದ ಹುಡುಗಿಯ ದೇಹ ಕಂಪಿಸುತ್ತಿತ್ತು. ಕಣ್ಣುಗಳಲ್ಲಿ ಮಿನುಗಿದ ಬೆಳ್ಳಿ ನೀರು ಮುತ್ತಿನ ಮಣಿಗಳಾಗಿ ನುಣುಪುಗೆನ್ನೆಯ ಮೇಲೆ ಉರುಳುತ್ತಿತ್ತು.

ಖಾಯಿಲೆ ಮಲಗಿರುವ ಮಗಳನ್ನು ನೋಡಲು ಕಿತ್ತಳೇ ಹಣ್ಣು ತಂದು ತಮ್ಮ ನಾಯಿಯ ಕೈಲಿ ಕಚ್ಚಿಸಿಕೊಂಡ ಹುಡುಗಿಯನ್ನು ನೋಡಿ ಮೂರ್ತಿಗೆ ಮರುಕವುಂಟಾಯಿತು.

ಮೂರ್ತಿ ತನ್ನ ಕಡೆ ನೋಡುತ್ತಲೇ ಪದ್ಮಿನಿ ತನ್ನ ಕಂಬನಿ ಅವರಿಗೆ ಕಾಣಬಾರದು ಎಂಬಂತೆ ಕೈಗಳಿಂದ ಕಣ್ಣು ಮುಚ್ಚಿಕೊಂಡಳು.

ಮೂರ್ತಿ ಎದ್ದು ನಿಂತು "ಒಳಗೆ ಬನ್ನಿ" ಎಂದರು. ಪದ್ಮಿನಿ ನಿಂತ ಸ್ಥಳದಿಂದ ಕದಲಲಿಲ್ಲ.

"ಇನ್ನು ಮೇಲೆ ಹೀಗಾಗೋದಿಲ್ಲ. ಜೂಲೀನ ಇನ್ನುಮೇಲೆ ಬೆಳಗಿನ ಹೊತ್ತು ಕಟ್ಟಿ ಹಾಕಿಸುತ್ತೇನೆ. ಹಾಗೇ ಈಗ ಬೇಕಾದರೆ ಡಾಕ್ಟರ್ ಬಳಿಗೆ ಹೋಗೋಣ. ನಾಯಿಯ ಹಲ್ಲು ತಗುಲಿದೆ. ಎಷ್ಟಾಗಲಿ ನಾಯಿಯ ಹಲ್ಲು ಬಹಳ ಅಪಾಯಕಾರಿ...."

ಅವರು ಅವಳನ್ನು ಸಂತೈಸುವಂತೆ ಮಾತನಾಡಿದರು. ಅವಳಿನ್ನೂ ಹಾಗೆಯೇ ನಿಂತಿರುವುದನ್ನು ನೋಡಿ ಮೂರ್ತಿಗೆ ಅವಳ ಕೈ ಹಿಡಿದು ಒಳಗೆ

ಕರೆದುಕೊಂಡು ಹೋಗಬೇಕೆನಿಸಿತು

ಹುಡುಗಿಯೇನೋ ಚಿಕ್ಕವಳು ಆದರೂ ತಪ್ಪು ತಿಳಿದರೆ ?

ಪದ್ಮಿನಿ ಸೆರಗಿನಿಂದ ಕಣ್ಣೊರಸಿಕೊಂಡು ಮೂರ್ತಿಯ ಕೈಲಿದ್ದ ಚೀಲವನ್ನು ತೆಗೆದುಕೊಂಡಳು

ಹಾಲಿನಲ್ಲಿ ಆರಾಮಕುರ್ಚಿಯೊಂದರ ಮೇಲೆ ಮೈತುಂಬಾ ಶಾಲು ಹೊದೆದು ಗೀತ ಕುಳಿತಿದ್ದಳು ಪದ್ಮಿನಿಯನ್ನು ನೋಡಿ ಗೀತಾ ಸಡಗರ ದಿಂದ ನಿಂತು "ಬಾಮ್ಮ" ಎಂದಳು

ಪದ್ಮಿನಿ ಕ್ಷೀಣವಾಗಿ ನಕ್ಕು ಗೀತಳ ಬಳಿಗೆ ಬಂದಳು

"ಎಲ್ಲಿ ಕಾಲು ನೋಡೋಣ ತೋರಿಸಿ" ಮೂರ್ತಿ ಕೇಳಿದರು

"ಪರವಾಗಿಲ್ಲ"

"ಏನಾಯಿತಣ್ಣ ?" ಗೀತಾ ಗಾಬರಿಯಿಂದ ಕೇಳಿದಳು.

"ಜ್ಯೂಲಿ ಕಚ್ಚಿಬಿಟ್ಟಿದೆ "

"ಎಲ್ಲಿ ಪದ್ಮಿನಿ ತೋರಿಸು"

"ಎಲ್ಲೋ ಸ್ವಲ್ಪ ಗಾಯವಾಗಿರಬೇಕು ಅಷ್ಟೆ ಇವತ್ತು ಖಾದಿ ಸೀರೆ ಉಟ್ಟುಕೊಂಡು ಬಂದಿದ್ದರಿಂದ ಬಚಾವಾದೆ ಇಲ್ದೆಹೋಗಿದ್ದರೆ ಚೆನ್ನಾಗಿ ಗಾಯವಾಗಿರೋದು" ಎಂದಳು ಪದ್ಮಿನಿ

"ತೋರಿಸು ನೋಡೋಣ"

"ನೋಡುವಂತಹದೇನಿಲ್ಲ ಹಣ್ಣು ತಗೋ" ಎಂದು ಪದ್ಮಿನಿ ಚೀಲ ಗೀತಳ ಕೈಗೆ ಕೊಟ್ಟಳು ಗೀತಾ ಚೀಲದಿಂದ ಒಂದು ಹಣ್ಣು ತೆಗೆದು ಪದ್ಮಿನಿಯ ಕಡೆ ತಿರುಗಿ,

"ಥ್ಯಾಂಕ್ಸ್" ಎಂದಳು ಕೃತಜ್ಞತೆಯಿಂದ.

"ಗೀತಾ, ನಿನ್ನ ಸ್ನೇಹಿತೆಗೆ ತಿಂಡಿ ಏನೂ ಕೊಡೋಲ್ಲವೆ ?"

"ತಾತಾ ತಾತಾ" ಗೀತಾ ಕೂಗಿದಳು ಅಡಿಗೆಯ ಭಟ್ಟರು ಹೊರಗೆ ಬಂದರು

"ನನ್ನ ಸ್ನೇಹಿತೆ ಬಂದಿದ್ದಾಳೆ. ಏನಾದರೂ. "

"ಆಗಲಮ್ಮ" ಎಂದು ಅವರು ಒಳಗೆ ಹೋದರು

"ನಾನು ಹುಟ್ಟುವುದಕ್ಕಿಂತ ಮುಂಚಿನಿಂದಲೂ ಅವರು ಇಲ್ಲೇ

ಇದಾರೆ ಆದುದರಿಂದ ಇವರನ್ನು 'ತಾತಾ' ಎಂದು ಕರೆಯುತ್ತಾನೆ" ಎಂದು ಗೀತಾ ಹೇಳಿ ತನ್ನೆದುರಿಗೇ ನಿಂತಿದ್ದ ತಂದೆಗೆ,

"ನೀನೊಂದು ಹಣ್ಣು ತಗೋ ಅಣ್ಣ" ಎಂದು ಹೇಳಿ ಚೀಲದಿಂದ ಒಂದು ಹಣ್ಣು ತೆಗೆದು ತಂದೆಯ ಕೈಗೆ ಕೊಟ್ಟಳು

ಮೂರ್ತಿ ಹಣ್ಣಿನೊಡನೆ ಆಟವಾಡುತ್ತಾ ಹೊರಗೆಹೋದರು ತಾತ ವಿರಾಯಿ ಹಾಲು ತಂಗು ಪದ್ಮಿನಿಗು ಎದುರಿಗಿಡುವಾಗ ಕಾರು ಹೊರಟ ಸದ್ದು ಕೇಳಿಸಿತು

ಗೀತ ತಟ್ಟನೆ ನಿಂತು ಅಣ್ಣನಿಗೆ ಹೇಳಬೇಕಾಗಿತ್ತು—ನಿನ್ನ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿದ್ದರೆ ಚೆನ್ನಾಗಿತ್ತು" ಎಂದಳು

"ಗಾಬರಿಯೇನಿಲ್ಲ"

"ಎಲ್ಲಿ ತೋರಿಸು ನೋಡೋಣ"

ಪದ್ಮಿನಿ ಬಟ್ಟೆಯನ್ನು ಕೊಂಚ ಎತ್ತಿದಳು ಹಿಮ್ಮಡಿಯ ಮೇಲೆ ಸಣ್ಣ ಗಾಯವಾಗಿತ್ತು ಊರಿದ್ದ ಎರಡು ಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿದ್ದವು ರಕ್ತ ಸ್ವಲ್ಪ ಬಂದಿತ್ತು

"ಅಣ್ಣ ಆಫೀಸಿನಿಂದ ಬರುವವರೆಗೆ ಇಲ್ಲೇ ಇರು ಆಮೇಲ್ ನಿನ್ನ ಕರ್ಕೊಂಡು ಹೋಗೋಕೆ ಹೇಳ್ತೀನಿ" ಎಂದಳು ಗೀತಾ

"ಮನೆಗೆ ಹೋಗುವಾಗ ನಾನೇ ಹೋಗಿ ಔಷಧಿ ಹಾಕಿಸಿಕೊಂಡು ಹೋಗ್ತೀನಿ"

"ನೀನು ಹೇಗಿದೀಯಮ್ಮ ?"

"ಈಗ ಜ್ವರ ಇಲ್ಲ ಸೋಮವಾರದಿಂದ ಕಾಲೇಜಿಗೆ ಹೋಗಬಹುದು ಎಂದು ಹೇಳಿದಾರೆ ನಿನ್ನ ನೋಟ್ಸ್ ಎಲ್ಲ ತಂದುಕೊಡು ನಾನು ಬರೆದು ಕೊಂಡು ಹೋಗ್ತೀನಿ "

"ಆಗಲಿ"

ಪದ್ಮಿನಿ ತಿಂಡಿ ಮುಗಿಸಿದಳು ಗೀತಾ ಪದ್ಮಿನಿ ತಂದಿದ್ದ ಎರಡು ಹಣ್ಣುಗಳನ್ನು ಸುಲಿದು ತಿಂದಳು

"ಆಗಾಗ್ಗೆ ನಮ್ಮ ಮನೆಗೆ ಬರುತ್ತಾ ಇರು ಪದ್ಮಿನಿ ಮನೇಲಿ ನಂಗೆ ಒಬ್ಬಳಿಗೇ ಬೇಜಾರಾಗುತ್ತಿರುತ್ತದೆ"

"ನಿಮ್ಮ ತಂದೇನೂ ಇರ್ತಾರಲ್ಲ"

"ಅವರು ಬೆಳಗ್ಗೆ ಆಫೀಸಿಗೆ ಹೊರಟುಹೋದರೆ ಹತ್ತು ಗಂಟೆಗೆ ಮನೆಗೆ ಬರ್ತಾರೆ ಕೋರ್ಟಿನಿಂದ ಮನೆಗೆ ಐದು ಗಂಟೆಗೆ ಬಂದು ಪುನಃ ಆಫೀಸಿಗೆ ಹೋದರೆ ಏಳು ಗಂಟೆಯವರೆವಿಗೆ ಅಲ್ಲೇ ಇರುತ್ತಾರೆ ಅಲ್ಲಿ ಕೆಲಸ ಇಲ್ಲದಿದ್ದ ದಿನ ರೋಟರಿ ಕ್ಲಬ್ಬಿಗೆ ಹೋಗ್ತಾರೆ"

"ನಿಮ್ಮ ತಂದೆ ರೋಟರಿಯನ್ನೋ ?"

"ಹಾಗೇನಿಲ್ಲ ಸಮಯ ಕಳೆಯೋಕೆ ಏನಾದರೂ ಒಂದು ಹವ್ಯಾಸ ಬೇಕಲ್ಲ ಅಲ್ಲಿ ಟೆನ್ನಿಸ್ ಆಡ್ತಾರೆ ನಮ್ಮ ತಂದೆ ಒಳ್ಳೆಯ ಟೆನ್ನಿಸ್ ಆಟಗಾರರು" ಎಂದು ಗೀತಾ ಹೆಮ್ಮೆಯಿಂದ ಹೇಳಿಕೊಂಡಳು

"ಓಹೋ "

"ಟೋರ್ನಮೆಂಟುಗಳಲ್ಲಿ ಬೇಕಾದಹಾಗೆ ಬಹುಮಾನಗಳೂ ಬಂದಿವೆ ತೋರಿಸ್ತೀನಿ ಬಾ" ಎನ್ನುತ್ತಾ ಗೀತಾ ಎದ್ದು ರೂಮಿನಲ್ಲಿದ್ದ ಸಣ್ಣ ಗಾಜಿನ ಬೀರುವೊಂದರ ಬಳಿ ಪದ್ಮಿನಿಯನ್ನು ಕರೆದುಕೊಂಡು ಹೋಗಿ ಅಲ್ಲಿ ವಿವಿಧ ರೀತಿಯ ಬೆಳ್ಳಿಯ ಬಟ್ಟಲುಗಳನ್ನು ತೋರಿಸಿದಳು

"ಇಷ್ಟೇ ಅಲ್ಲ ನಮ್ಮ ತಂದೆ ತುಂಬಾ ಚೆನ್ನಾಗಿ ಚದುರಂಗ ಆಡ್ತಾರೆ ನನ್ನ ಜೊತೆಗೆ ದಿವಸಾ ಯಾರಾದರೂ ಆಟ ಆಡೋಕೆ ಸಿಕ್ಕಿದರೆ ಟೇಬಲ್ ಟೆನ್ನಿಸ್ ತೆಗೆದುಕೊಡ್ತೀನಿ ಎಂದು ಹೇಳಿದ್ದಾರೆ

"ನಿಮ್ಮ ತಂದೆ ಜೊತೇನೆ ಆಡಬಹುದು"

"ಅವರಿಗೆ ಬಿಡುವಿರುವುದಿಲ್ಲ ನೀನು ದಿವಸಾ ಬರುವ ಹಾಗಿದ್ದರೆ–"

"ನನಗೆ ದಿವಸಾ ಬರೋಕ್ಕಾಗೋದಿಲ್ಲವ್ಮ ನಾನೊಂದು ದಿನ ನಿಮ್ಮ ಮನೆಗೆ ಬಂದರೆ ನೀನೊಂದು ದಿನ ನಮ್ಮ ಮನೆಗೆ ಬರಬೇಕು "

"ನೀನು ಬರುತ್ತಾ ಇದ್ದರೆ ನಾನೂ ಬರ್ತೀನಿ ನಿಂಗೆ ಚದುರಂಗ ಆಡೋಕೆ ಬರುತ್ತಾ ?"

"ಇಲ್ಲ"

"ನಾನು ಹೇಳಿಕೊಡಲಾ ?"

"ಹೂ "

ಗೀತ ಸಂಭ್ರಮದಿಂದ ಎದ್ದು ಹೋಗಿ ಚದುರಂಗ ಕಾಯಿ, ಹಾಸನ್ನು

ತಂದಳು

"ಇದು ರಾಜ, ರಾಣಿ, ಆನೆ, ಕುದುರೆ " ಎಂದು ಗೀತಾ ಕಾಯಿಗಳ ಪರಿಚಯವನ್ನು ಪದ್ಮಿನಿಗೆ ಮಾಡಿಕೊಡುತ್ತಿದ್ದಾಗ ಕಾರಿನ ಸದ್ದು ಕೇಳಿಸಿತು

"ಇದೇನು ಅಣ್ಣ ಆಫೀಸಿನಿಂದ ಇಷ್ಟು ಬೇಗ ಮನೆಗೆ ಬಂದುಬಿಟ್ಟರು ಎಂದು ಪದ್ಮಿನಿ ಆಶ್ಚರ್ಯಪಡುತ್ತಿರುವಾಗ ಮೂರ್ತಿ ಡಾಕ್ಟರೊಡನೆ ಒಳಗೆ ಬಂದರು

"ಎಲ್ಲಿ ನಾಯಿಯಿಂದಾಗಿರುವ ಗಾಯ ತೋರಿಸಿ" ಎಂದರು ಮೂರ್ತಿ ಪದ್ಮಿನಿಗೆ

ಡಾಕ್ಟರ ಎದುರಿಗೆ ಪ್ರತಿಭಟಿಸಲಿಲ್ಲ

ಡಾಕ್ಟರು ಗಾಯಕ್ಕೆ ಮುಲಾಮು ಸವರಿ ಒಂದು ಇಂಜಕ್ಷನ್ ಕೊಟ್ಟು,

"ಸಾಕಿದ ನಾಯಿಯಾದುದರಿಂದ ಏನೂ ಭಯವಿಲ್ಲ ಸೆಪ್ಟಿಕ್ ಆಗದ ಹಾಗೆ ಒಂದು ಇಂಜಕ್ಷನ್ ಕೊಟ್ಟಿದೀನಿ ಸಾಕು" ಎಂದರು

ಪದ್ಮಿನಿ ನೋವಿನಿಂದ ಮುಖ ಹಿಂಡಿದಳು

"ನಮ್ಮ ಪ್ರಿನ್ಸೆಸ್ ಏನಂತಾಳೆ" ಎನ್ನುತ್ತಾ ಡಾಕ್ಟರು ಗೀತಳ ತಲೆಯ ಮೇಲೆ ಬೆರಳಿನಿಂದ ಮೃದುವಾಗಿ ಹೊಡೆದು,

"ಬರ್‍ತೀನಿ ಮೂರ್ತಿ, ನಾನು ಇನ್ನೊಂದು ಮನೆಗೆ ಹೋಗಬೇಕು ನಡೆದುಕೊಂಡೇ ಹೋಗ್ತೀನಿ" ಎಂದು ಹೇಳಿ ಹೊರಟುಹೋದರು

"ಗೀತಾ ನನ್ನ ರೂಮಿನಲ್ಲಿ ನೀಲಿ ಬಣ್ಣದ ಫೈಲಿದೆ. ತಗೊಂಡು ಬಾ ಎಂದರು ಮೂರ್ತಿ

ಗೀತಾ ಎದ್ದು ಮಹಡಿ ಹತ್ತಿದಳು

ಮೂರ್ತಿ, ಪದ್ಮಿನಿ ಒಬ್ಬರನ್ನೊಬ್ಬರು ನೋಡಿದರು

"ಇನ್ನುಮೇಲೆ ಖಂಡಿತ ಹೀಗೆ ಆಗಗೊಡುವುದಿಲ್ಲ" ಎದರು ಮೂರ್ತಿ ಪಶ್ಚಾತ್ತಾಪದಿಂದ

"ಡಾಕ್ಟರ ಬಿಲ್ಲು ಎಷ್ಟಾಯಿತೂಂತ ದಯವಿಟ್ಟು ತಿಳಿಸಿ "

ಸ್ವಪ್ರತಿಷ್ಠೆ ದುರಹಂಕಾರದ ಪ್ರತಿರೂಪದಂತೆ ನಿಂತಿದ್ದ ಪದ್ಮಿನಿಯ ಕೆನ್ನೆಗೆ ರಪ್ಪನೇ ಹೊಡೆಯಬೇಕೆನಿಸಿತು ಮೂರ್ತಿಗೆ.

"ನೀವು ಕಿತ್ತಲೆ ಹಣ್ಣಿಗೆ ಎಷ್ಟು ಹಣ ಕೊಟ್ಟರಿ ಎಂದು ಹೇಳಿದ ಮೇಲೆ ನಾನು ಹೇಳ್ತೀನಿ" ಎಂದು ಮೂರ್ತಿ ವ್ಯಂಗ್ಯವಾಗಿ ನುಡಿದು ತಟ್ಟನೆ ಮಹಡಿಯೇರಿದರು

ತಂದೆ ಮಗಳು ಜೊತೆಯಾಗಿ ಕೆಳಗೆ ಬಂದರು ಫೈಲಿನೊಡನೆ ಕೆಳಗೆ ಬಂದ ಮೂರ್ತಿ ಪದ್ಮಿನಿಯ ಕಡೆ ತಿರುಗಿ ನೋಡದೆ ಸರಸರನೆ ಹೊರಟು ಹೋದರು

ಕತ್ತಲು ಕವಿಯುವುದಕ್ಕೆ ಮುಂಚೆಯೇ ಪದ್ಮಿನಿ ಮನೆ ಸೇರಿದಳು ಸ್ವಲ್ಪ ಕುಂಟುತ್ತಾ ಬಂದ ಮಗಳನ್ನು ನೋಡಿ ಜಲಜಮ್ಮ ಗಾಬರಿಯಾಗಿ—

"ಏನಾಯಿತೇ ?" ಎಂದರು

"ಗೀತನ ಮನೆ ನಾಯಿ ಕಚ್ಚಿತು "

"ಅಲ್ಲಿಗೆ ಹೋಗಬೇಡಾಂದರೆ ನೀನು ಕೇಳೋದಿಲ್ಲ ನಾಳೆ ಬೆಳಗ್ಗೆ ಡಾಕ್ಟರ ಹತ್ತಿರ ಹೋಗಿ ಬಾ "

"ಔಷಧಿ ಇಂಜಕ್ಷನ್ ಎಲ್ಲಾ ಆಯಿತು "

"ಎಲ್ಲಿ ?"

"ಗೀತಳ ತಂದೆ ಮನೆಗೆ ಡಾಕ್ಟರನ್ನು ಕರೆದುಕೊಂಡು ಬಂದಿದ್ದರು "

ತಾಯಿ ಆಶ್ಚರ್ಯದಿಂದ 'ಓ' ಎಂದರು

ಗೀತಳ ತಂದೆಯ ಬಗ್ಗೆ ಅವರಿಗೆ ಯಾವಾಗಲೂ ಒಳ್ಳೆಯ ಅಭಿಪ್ರಾಯ ಇರಲಿಲ್ಲ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹಬ್ಬಿದ ಸುದ್ದಿಯನ್ನು ಅವರು ನಂಬಿದ್ದರು

ಕ್ರೂರಿ, ಕೊಲೆಗಾರ, ಪುಂಡ ಎಂದು ಭಾವಿಸಿದ್ದ ಆತ ಇಷ್ಟು ಕರುಣೆಯಿಂದ ವರ್ತಿಸಬಲ್ಲನೆ ಎಂದು ಜಲಜಮ್ಮನಿಗೆ ಆಶ್ಚರ್ಯವಾಯಿತು

"ಪರವಾಗಿಲ್ಲ ಆತ ನಾವು ತಿಳಿದುಕೊಂಡಿರುವಷ್ಟು ಕೆಟ್ಟವರಲ್ಲಾಂತ ಕಾಣುತ್ತದೆ ಅಲ್ಲವೇನೆ ಪದ್ಮಿನಿ ?"

"ಗೊತ್ತಿಲ್ಲ "

"ತರಕಾರಿ ತಂದೆಯಾ ?"

"ಇಲ್ಲ "

"ಮರೆತುಹೋಯಿತೇ ?"

"ನೆನಪಿತ್ತು, ಆದರೂ ತರಲಿಲ್ಲ "

ಜಲಜಮ್ಮ ಕೊಂಚ ಕುಪಿತರಾಗಿ "ಯಾಕೆ ?" ಎಂದರು

"ಗೀತಳಿಗೆ ಕಿತ್ತಲೇಹಣ್ಣು ತಗೊಂಡು ಹೋಗಿದ್ದೆ ನೀನು ಕೊಟ್ಟಿದ್ದ ದುಡ್ಡು ಹಣ್ಣಿಗಾಗಿ ಖರ್ಚಾಯಿತು "

"ನಿನ್ನ ದಾಂಡಲೆ ಅತಿಯಾಯಿತು "

ಪದ್ಮಿನಿ ತಾಯಿ ಕಚ್ಚಿದ ಜಾಗವನ್ನು, ಬೆರಳುಗಳಿಂದ ಮೃದುವಾಗಿ ಸವರುತ್ತಾ ತಾಯಿಯ ಮುಖವನ್ನು ನೋಡಿ ಮುದ್ದಾಗಿ ನಕ್ಕಳು

ಮಗಳ ನಗುವಿನಲ್ಲಿ ತಾಯಿಯ ಕೋಪ ಕೊಚ್ಚಿಹೋಯಿತು

"ಸದಾನಂದ, ಇವರು ನಿನ್ನ ಎತ್ತಿಕೊಂಡು ಹೋಗಿ ಅಟ್ಟದ ಮೇಲೆ ಕೂರಿಸಿದರೆ" ಎಂದು ತಾಯಿ ಅಕ್ಕರೆಯಿಂದ ಪದ್ಮಿನಿಯನ್ನು ಬೈದರು

"ನೀನಿದ್ದೀಯಲ್ಲಾ ನನ್ನ ಅಲ್ಲಿಂದ ಇಳಿಸ್ಕೋಕೆ "

"ಅದರಲ್ಲೂ ನೀನು—ಇಳಿಸಿಕೊಳ್ಳುವಳು" ಎಂದು ಜಲಜಮ್ಮ ಪದ್ಮಿನಿಯನ್ನು ಮೂದಲಿಸಿ ಒಳಗೆ ಹೋದರು

"ಅವರೆದುರಿಗೆ ನೀನು ಹಾಗೆ—ಹೆಣ್ಣಿನ ಹಾಗೆ ಅಳಬಾರದಾಗಿತ್ತು ನೀನು ಅತ್ತು ನನ್ನ ಮಾನ ಕಳೆದೆ" ಎಂದುಕೊಳ್ಳುತ್ತಾ ಪದ್ಮಿನಿ ತನ್ನ ಎರಡು ಕಣ್ಣುಗಳನ್ನು ಮೃದುವಾಗಿ ಚಿವುಟಿಕೊಂಡಳು

* * *

ತಂದೆ ಮನೆಗೆ ಬರುವವರೆಗೆ ಗೀತಾ ಊಟಕ್ಕೇಳಲಿಲ್ಲ, ಮೂರ್ತಿ ರಾತ್ರಿ ಒಂಭತ್ತು ಗಂಟೆಗೆ ಮನೆಗೆ ಬಂದರು ಮನೆಯೊಳಗೆ ಬಂದವರೇ ಕತೆಯ ಪುಸ್ತಕವೊಂದನ್ನು ಓದುತ್ತಿದ್ದ ಗೀತಳನ್ನು ನೋಡಿ—

"ಊಟವಾಯಿತೇ ?" ಎಂದರು

"ಇಲ್ಲ "

ಬಟ್ಟೆ ಬದಲಾಯಿಸಿ ನಾನೂ ಬರುತ್ತೇನೆ ನಡಿ "

ತಂದೆ ಮಗಳಿಬ್ಬರೂ ಊಟಕ್ಕೆ ಕುಳಿತರು ಗೀತಾ ತಾನಾಗಿಯೇ ಮಾತಿಗೆ ಮೊದಲು ಮಾಡಿದಳು

"ಅಣ್ಣ, ಪದ್ಮಿನಿ ಎಷ್ಟು ಒಳ್ಳೆಯ ಹುಡುಗಿ ! ಪಾಪ ! ಹಣ್ಣು ತಂದು ತಾಯಿಯ ಕೈಲಿ ಕಡಿಸಿಕೊಂಡಳು "

ಮೂರ್ತಿಯ ಮನಸ್ಸಿನ ಮುಂದೆ ಕಣ್ಣೀರಿನಲ್ಲಿ ತೇಲುತ್ತಿದ್ದ ಪದ್ಮಿ

ನಿಯ ಮುಖ ಸುಳಿಯಿತು ಅವಳ ದೊಡ್ಡ ಕಣ್ಣುಗಳೆರಡು ಕಂಬನಿಯನ್ನು ಹೊರಚೆಲ್ಲುತ್ತಿದ್ದಾಗ ತಾನು ಮೂಕನಂತೆ ನಿಂತಿರಲಿಲ್ಲವೆ ? ಸುಮ್ಮನೆ ನಿಂತಿರದೆ ಏನು ಮಾಡಬೇಕಿತ್ತು ? ಕಾವಿಬಣ್ಣದ ಸೆರಗಿನಿಂದ ಅರಳಿದ ಹೂವಿನಂತೆ ಮೇಲೆ ಎದ್ದು ನಿಂತಿದ್ದ ಅವಳ ಮುಖದ ಚೆಲುವನ್ನು ನೋಡಿ ತಾನು ಒಂದು ಗಳಿಗೆ ಮುಗ್ಧನಾಗಲಿಲ್ಲವೇ ?

"ಏನಣ್ಣ ನಿದ್ದೆ ಬರ್ತಿದೆಯಾ ?" ಗೀತ ತಂದೆಯನ್ನು ಕೇಳಿದಳು

"ಇಲ್ಲಮ್ಮ "

"ಆಗಲೇ ಕನಸು ಕಾಣುತ್ತಿರುವ ಹಾಗಿದೆ "

ತಾನು ಕನಸು ಕಾಣುತ್ತಿದ್ದುದೇನೋ ನಿಜ ತಾನಾದರೂ ಇಪ್ಪತ್ತು ವರ್ಷದ ಯುವಕನಂತೆ ಹೀಗೆ ಕನಸು ಕಾಣಬೇಕೆ ? ಹೆಣ್ಣಿನ ಚೆಲುವು, ಸೌಂದರ್ಯ ತನಗೇನೂ ಹೊಸದಲ್ಲವಲ್ಲ ಇಷ್ಟಾದರೂ ತಾನು ಆ ಹುಡುಗಿಯ ಸೌಂದರ್ಯವನ್ನು ಕುರಿತು ಮನಸ್ಸಿನಲ್ಲಿಯೇ ಮೆಲುಕು ಹಾಕುವುದು ಉಚಿತವೇ ? ಅವಳೂ ಗೀತ ಸಮವಯಸ್ಕಳಿರಬಹುದು ಆದರೇನಂತೆ ? ಸೌಂದರ್ಯವನ್ನು ನೋಡಿ ಮೆಚ್ಚಿ ಆನಂದಿಸಲು ಯಾರಾದರೇನಂತೆ ? ತನ್ನ ಮೆಚ್ಚುಗೆಯಲ್ಲಿ ಸ್ವಲ್ಪವಾದರೂ ಕೀಳುಕಾಮನೆಯಿಲ್ಲ

"ಇಲ್ಲವೇ ? ಇರಲಿಲ್ಲವೇ ?" ಮನಸ್ಸು ಕೆದಕಿತು

'ಖಂಡಿತ ಇಲ್ಲ' ಎಂದುಕೊಂಡರು ಮೂರ್ತಿ

ಹಾಗಾದರೆ ಅವಳ ಕೈಹಿಡಿದು ಒಳಗೆ ಕರೆದುಕೊಂಡು ಹೋಗಬೇಕೆಂಬ ಭಾವನೆ ತನಗೆ ಬಂದಿದ್ದಾದರೂ ಯಾಕೆ ? ಹೆದರಿಕೆಯಿಂದ ಅರಳಿಯ ಎಲೆಯಂತೆ ನಡುಗುತ್ತಿದ್ದ ಅವಳ ಎಳೆಯ ಶರೀರವನ್ನು ತನ್ನ ತೋಳುಗಳಲ್ಲಿ ಬಿಗಿದು

ತಾನು ಹೀಗೆ ಮನಸ್ಸಿನಲ್ಲಿ ಯೋಚಿಸುವುದು ತಪ್ಪು ಎಂದು ತಿಳಿದು ಮೂರ್ತಿ ಬೆದರಿದರು

ಈ ರೀತಿಯ ಯೋಚನೆಗಳು ಎಂದೂ ಅವರನ್ನು ಕಾಡಿರಲಿಲ್ಲ ಹದಿಮೂರು ವರ್ಷಗಳ ಹಿಂದೆ ಹೆಂಡತಿಯನ್ನು ಕಳೆದುಕೊಂಡಿದ್ದ ಮೂರ್ತಿ ಶುಕಮುನಿಯ ಬಾಳನ್ನು ಪರಿಪಾಲಿಸುತ್ತಿರಲಿಲ್ಲವಾದರೂ ಜೀವನದಲ್ಲಿ ಹೆಣ್ಣಿನ ಆಕರ್ಷಣೆಗೆ ಪ್ರಧಾನ ಮಾತ್ರ ಕೊಟ್ಟಿರಲಿಲ್ಲ ಅಮಾವಾಸ್ಯೆಯ

ಕಡುಕತ್ತಲೆ ತಿಂಗಳಿಗೋವ್ಮೆ ಬರುವಂತೆ ಎಲ್ಲೋ ಒಮ್ಮೊಮ್ಮೆ ದೌರ್ಬ ಲ್ಯಕ್ಕೆ ಬಲಿಯಾಗುತ್ತಿದ್ದುದುಂಟು

ತಮ್ಮ ಮನಸ್ಸಿನ ಹಿಡಿತ ಆಗಾಗ್ಗೆ ತಪ್ಪುತ್ತಿದ್ದುದಕ್ಕೂ ಮೂರ್ತಿ ಸಂಪೂರ್ಣ ಜವಾಬ್ದಾರರಾಗಿರಲಿಲ್ಲ

ಅದಕ್ಕೆ ಬಹುಮಟ್ಟಿಗೆ ಕಾರಣಳಾಗಿದ್ದವಳು ಮಿಸೆಸ್ ದೀಕ್ಷಿತ್ ಹೆಂಡತಿ ಹೋದ ತರುಣದಲ್ಲಿ ದಿನಗಳೆಯುವುದು ಅತ್ಯಂತ ಬೇಸರವಾಗಿ ಮೂರ್ತಿ ರೋಟರಿ ಕ್ಲಬ್ಬಿನ ಸದಸ್ಯರಾಗಿದ್ದರು ಆಗ ಮೂರ್ತಿಗೆ ಅಲ್ಲಿ ಮಹದೇವ್ ಯಮುನಾ ದೀಕ್ಷಿತಳ ಪರಿಚಯವನ್ನು ಮಾಡಿಕೊಟ್ಟರು

ಆಗ ಯಮುನೆಗೂ ಮೂರ್ತಿಯಷ್ಟೇ ವಯಸ್ಸಾಗಿತ್ತು

ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡಿದ್ದ ಯಮುನಾ ಲಂಗುಲಗಾಮಿಲ್ಲದ ಕುದುರೆಯಾಗಿದ್ದಳು ದೀಕ್ಷಿತ್ ಯಮುನೆಯನ್ನು ವಿಧವೆಯನ್ನಾಗಿ ಮಾಡಿ ಹೋದರೂ ಅವಳನ್ನು ನಿರ್ಗತಿಕಳನ್ನಾಗಿ ಮಾಡಿರ ಲಿಲ್ಲ ದೀಕ್ಷಿತನ ಅಪಾರ ಆಸ್ತಿಯ ಯಮುನೆಯ ವಶವಾಗಿತ್ತು ದೀಕ್ಷಿತ ಬದು ಕಿರುವವರೆಗೆ ಯಮುನಾ ಮನೆಯ ಹೊಸಿಲು ಬಿಟ್ಟು ಆಚೆಗೆ ಬಂದಿರಲಿಲ್ಲ ದೀಕ್ಷಿತ ಕಣ್ಮರೆಯಾಗಿ ಅವನ ಆಸ್ತಿ ತನ್ನ ಕೈಗೆ ಬಂದಮೇಲೆ ಯಮುನೆ ಯನ್ನು ಹಿಡಿದವರೇ ಇರಲಿಲ್ಲ

ಯಮುನೆಯ ಗೆಳತಿಯೊಬ್ಬಳು ಅವಳನ್ನು ಕ್ಲಬ್ಬಿನ ಸದಸ್ಯೆಯನ್ನಾಗಿ ಮಾಡಿದಳು ಕ್ಲಬ್ಬಿನ ಸದಸ್ಯೆಯಾಗಿ ಟೆನ್ನಿಸ್ ರಾಕೆಟ್ ಕೈಗೆ ಬಂದೊಡನೆ ಯಮುನೆಯ ಉಡಿಗೆತೊಡಿಗೆಗಳಲ್ಲಿ ಬದಲಾವಣೆಯಾಗುತ್ತಾ ಬಂದಿತು. ಬರಿ ದಾಗಿದ್ದ ಹಣೆಯ ಮೇಲೆ ನಕ್ಷತ್ರ, ದುಂಡು ಚಂದ್ರ, ಅರ್ಧಚಂದ್ರ, ತಿಲಕ ಮೊದಲಾದುವುಗಳು ಕಂಗೊಳಿಸಿದುವು ಕಿರಿದಾಗಿದ್ದ ಕಣ್ಣುಗಳನ್ನು ಕಾಡಿಗೆ, ಸೋಗೆಯಿಂದ ವಿಸ್ತರಿಸುವ ಪ್ರಯತ್ನವನ್ನು ಯಮುನಾ ಕೈ ಗೊಂಡಳು ದಪ್ಪ ತುಟಿಯ ಒರಟನ್ನು ಮುಚ್ಚಲು ಆಕೆ ಕೆಂಪು ಬಣ್ಣದ ಆಶ್ರಯವನ್ನು ಪಡೆಯಬೇಕಾಯಿತು ಅಷ್ಟೇನೂ ಒಳ್ಳೆಯ ಬಣ್ಣವಿಲ್ಲದ ಚರ್ಮಕಾಂತಿಯನ್ನು ಹೆಚ್ಚಿಸಲು ಯಮುನಾ ಮುಖಬಣ್ಣ, ರೂಜ್ ಉಪ ಯೋಗಿಸಬೇಕಾಯಿತು ಗೊಡ್ಡು ಧರ್ಮಾವರದ ಸೀರೆಗಳಿಗೆ ಬದಲಾಗಿ ತೆಳುವಾದ ಸಿಲ್ಕು ಜಾರ್ಜೆಟ್ ಬಟ್ಟೆಗಳು ಯಮುನೆಯ ವಾರ್ಡ್ರೋಬಿನಲ್ಲಿ

ಮೆರೆದಾಡಿದುವು

ಹೆಸರಿಗೆ ಮಾತ್ರ ಯಮುನಾ ಮಿಸೆಸ್ ದೀಕ್ಷಿತ್

"ಇದ್ಯಾಕಣ್ಣಾ ಸುಮ್ಮನೆ ಕೂತ್ಕೊಂಡಿದೀಯಾ ?" ಎಂದು ಗೀತಾ ಕೇಳಿದಾಗ ಮೂರ್ತಿ ಎದ್ದು ಕೈ ತೊಳೆಯಲು ಹೋದರು

ಅಚ್ಚುಕಟ್ಟಾಗಿ ಹಾಸಿದ್ದ ಹಾಸಿಗೆಯ ಮೇಲೆ ಉರುಳಿ ಸಿಗರೇಟೊಂದನ್ನು ಹಚ್ಚಿದರು, ಮೂರ್ತಿ

ಮಹದೇವ್ ಪರಿಚಯಮಾಡಿಸಿದ್ದ "ಮಿಸೆಸ್ ದೀಕ್ಷಿತ್" ಮಿಸ್ಟರ್ ಮೂರ್ತಿ ಎದುರಿಗೆ ನಿಂತಿದ್ದ ಸ್ಥೂಲಾಂಗಿಯನ್ನು ಮೂರ್ತಿ ನೋಡಿದರು ಅವಳ ಮಾತು, ಕತೆ, ಬಣ್ಣ, ಬಹಿರೂಪ ಮೂರ್ತಿಯಲ್ಲಿ ಅಸಹ್ಯವನ್ನು ಹುಟ್ಟಿಸಿದ್ದವು ಬಣ್ಣ, ಬೆಡಗು ಬಿನ್ನಾಣ ಉಡುಗೆಯಿಂದ ಯಮುನಾ ದೂರದಿಂದ ಚೆಂದವಾಗಿ ತೋರಿದರೂ ಹತ್ತಿರದಿಂದ ಬಹಳ ಕುರೂಪಿಯಾಗಿ ಕಾಣುತ್ತಿದ್ದಳು

ಉಬ್ಬುತಗ್ಗುಗಳಿಂದ ಕೂಡಿದ ಕೆನ್ನೆಗಳ ಮೇಲೆ ಅವರೆಕಾಳಿನ ಗಾತ್ರದ ಮಡವೆಗಳು ಶೋಭಿಸುತ್ತಿದ್ದುವು ಅವುಗಳನ್ನು ಮುಚ್ಚಲು ಯಮುನಾ ಧಾರಾಳವಾಗಿ ಬಣ್ಣ ಬಳಿದಿದ್ದಳು ದೂರದಿಂದ ಕೆಂಪುಗುಲಾಬಿಯಂತೆ ಕಾಣುತ್ತಿದ್ದ ಅವಳ ತುಟಿಗಳು ಹತ್ತಿರದಿಂದ ಒಣಗಿ ಒಡಕು ಒಡಕಾಗಿ ಕಾಣುತ್ತಿದ್ದವು

ಇನ್ನು ಆ ಕಣ್ಣುಗಳೋ ? ಎಷ್ಟು ಕಪ್ಪು ಹಚ್ಚಿದರೂ ಅದರ ಅಗಲವನ್ನು ವಿಸ್ತರಿಸುವುದು ಸಾಧ್ಯವೇ ?

ಮುಖಕ್ಕೆ ಕಂಭದಂತಿದ್ದ ಮೂಗು, ಅತಿ ಸ್ಥೂಲಕಾಯದ ಯಮುನಾ ಕುರೂಪಿಯಾಗಿದ್ದರೂ ಪುರುಷರನ್ನು ಬಹಳ ಸುಲಭವಾಗಿ ಆಕರ್ಷಿಸುತ್ತಿದ್ದಳು

ಅವಳು ಚೆಲುವೆಯಲ್ಲ ಆದರೆ ಪುರುಷರಿಗೆ ಆಕರ್ಷಕ ವ್ಯಕ್ತಿ ಅನೇಕ ಮಾಂಸದ ಮುದ್ದೆಗಳಿಂದ ನಿರ್ಮಿಸಲ್ಪಟ್ಟಿದ್ದ ಆ ಹೆಂಗಸನ್ನು ನೋಡಿ ಮೂರ್ತಿ ಮೊದಲು ಜಿಗುಪ್ಸೆಗೊಂಡಿದ್ದರು

ಆತ ವಿಧುರ ಎಂದು ತಿಳಿದೊಡನೆ ಯಮುನಾ ಆವರಲ್ಲಿ ಹೆಚ್ಚಿನ ಶ್ರದ್ಧೆ ಆಸಕ್ತಿಯನ್ನು ತೋರಿಸತೊಡಗಿದ್ದಳು

ಟೆನ್ನಿಸ್ ಆಟವಾಡಬೇಕಾದರೆ ಮೂರ್ತಿ ತನ್ನ ಪಾರ್ಟನರ್ ಆಗ ಬೇಕು ಬ್ರಿಡ್ಜ್ ಆಡುವಾಗ ತಾನು, ಮೂರ್ತಿ ಒಂದು ಕಡೆ ಇರಬೇಕು

ಯಮುನೆಯನ್ನು ಸಹಿಸುವುದು ಮೂರ್ತಿಗೆ ಅನಿವಾರ್ಯವಾಗಿತ್ತು ಮೇಲೆ ಬಿದ್ದು ತನ್ನೊಡನೆ ಇರಲು ಬಯಸುತ್ತಿದ್ದ ಆ ಹೆಣ್ಣನ್ನು ಒದರು ವುದು ಮೂರ್ತಿಗೆ ಸಾಧ್ಯವಾಗಲಿಲ್ಲ

ಮಹದೇವ್ ಮೂರ್ತಿಯನ್ನು ರೇಗಿಸುತ್ತಿದ್ದರು

"ಏನ್ರೀ, ಮಿಸೆಸ್ ದೀಕ್ಷಿತರ ಕೃಪಾದೃಷ್ಟಿ ನಿಮ್ಮ ಮೇಲಿದೆ ನೀವೇ ಅದೃಷ್ಟವಂತರು, ನೀವು ಬಂದ ಮೇಲೆ ಆಕೆ ನಮ್ಮನ್ನು ಕಡೆಗಣ್ಣಿನಿಂದಲೂ ನೋಡುತ್ತಿಲ್ಲ ಯಾವಾಗಲೂ ನಿಮ್ಮ ಜೊತೆ "

"ಏನು ಮಾಡಲಿ ? ಫಾರ್ ಷಿವಲ್ರೀ ಸೇಕ್—ನಾನು ಅವಳನ್ನು ಸಹಿಸಬೇಕು" ಎನ್ನುತ್ತಿದ್ದರು ಮೂರ್ತಿ

ಹೀಗೆ ಮೊದಲಾದ ಪರಿಚಯ ಸ್ನೇಹರೂಪ ತಾಳಿತು ಆಗಾಗ್ಗೆ ಇಬ್ಬರೂ ಜೊತೆಯಾಗಿ ಚಿತ್ರ ನೋಡುತ್ತಿದ್ದರು ಯಮುನಾ ಒಮ್ಮೊಮ್ಮೆ ಮೂರ್ತಿಯನ್ನು ಬಲವಂತಮಾಡಿ ತನ್ನ ಮನೆಗೆ ಕರೆದೊಯ್ದು ಆದರದಿಂದ ಸತ್ಕರಿಸುತ್ತಿದ್ದಳು

ಹಾಗೆ ಒಂದು ದಿನ ಸತ್ಕರಿಸುವಾಗ ಯಮುನಾ ಕೇಳಿದಳು—

"ನಿಮಗೆ ಬೇಜಾರಾಗೋಲ್ಲವೇನ್ರಿ ?"

"ಯಾಕೆ ?"

"ನಿಮಗೆ ಏನೂ ಡೈವರ್ಷನ್ ಬೇಡವೇ ?"

"ಅದಕ್ಕೇನು ಬೇಕಾದ ಹಾಗಿದೆ "

"ಯಾವುದು ?"

"ಗೀತಾ, ನನ್ನ ವೃತ್ತಿ, ಕ್ಲಬ್ಬು, ಆಟಗಳು, ಚಿತ್ರ ಪುಸ್ತಕಗಳನ್ನು ಓದುವುದು "

ಏನಿದ್ದರೂ ಹೆಂಡತಿ ಇದ್ದ ಹಾಗೆ ಆಗುತ್ತದೆಯೇ ?" ಎಂದು ಯಮುನಾ ಕೇಳಿದಳು

ಅವಳ ಧೈರ್ಯ ಕಂಡ ಮೂರ್ತಿಗೆ ಆಶ್ಚರ್ಯವಾಯಿತು

"ನನಗೇನೂ ಹೆಂಡತಿಯ ಅಗತ್ಯ ಅಷ್ಟೊಂದಿಲ್ಲ "

"ನೀವು ಹೀಗೆ ಹೇಳಿದರೆ ನಮ್ಮಂತಹವರೆಲ್ಲಾ ಏನು ಮಾಡಬೇಕು ? ನಿಮಗೆ ಯಾವುದೂ ಅರ್ಥವಾಗೋದಿಲ್ಲ ನೀವೊಂದುಕಲ್ಲುಬಂಡೆ ನಾನೂ ಅಷ್ಟು ದಿನದಿಂದ ನಿಮಗೆ ಬುದ್ಧಿ ಕಲಿಸೋಣಾಂತ ನೋಡ್ತಿದೀನಿ ನೀವು ಯಾವುದೂ ತಿಳಿಯದವರ ಹಾಗೆ "ಯಮುನೆಯ ಕಂಠ ಗದ್ಗದವಾಯಿತು

ಯಾವುದೂ ತಿಳಿಯದಂತೆ ನಟಿಸುತ್ತಾ ಆಕೆಯ ಸ್ನೇಹ ಮಾತ್ರ ಬಯಸಿದ್ದ ಮೂರ್ತಿಗೆ ಎದುರಿಗೆ ಕುಳಿತಿದ್ದ ಹೆಣ್ಣನ್ನು ನೋಡಿ ಕನಿಕರ ವಾಯಿತು

ಆಕೆ ತಾನಾಗಿಯೇ ಬಾಯಿಬಿಟ್ಟು ಮನಸ್ಸಿನ ಆಸೆಯನ್ನುಮೂರ್ತಿಯ ಎದುರಿಗೆ ಆಡಿ ತೋರಿಸಿದ್ದಳು

ಆಕೆಗೆ ತಾನೆ ಜೀವನದಲ್ಲಿ ಏನು ಸುಖವಿದೆ ? ಚಿಕ್ಕವಯಸ್ಸಿನಲ್ಲಿಯೆ ಗಂಡನನ್ನು ಕಳೆದುಕೊಂಡು ಒಂಟಿಬಾಳು ನಡೆಸುತ್ತಿದ್ದ ಬಾಯಾರಿದ ಹೆಣ್ಣು ಯಮುನಾ ತನ್ನ ಒಂಟಿ ಬಾಳನ್ನು ಮರೆಯಲು ಆಕೆ ಕ್ಲಬ್ಬಿನ ಸದಸ್ಯೆ ಯಾಗಿದ್ದಳು ತನಗಿಂತಲೂ ಆಕೆ ದುರ್ಭಾಗ್ಯಳು. ತಾನು ಮನೆಗೆ ಹೋದರೆ ನಗುಮುಖದಿಂದ ಹತ್ತಿರ ಓಡಿಬರುವ ಗೀತಾ ತನ್ನೆಲ್ಲಾ ನೋವನ್ನೂ ಮರೆಸುವ ಸಂಜೀವಿನಿಯಾಗಿದ್ದಾಳೆ ಆದರೆ ಯಮುನೆಗೆ ಯಾರೂ ಇರಲಿಲ್ಲ

ಆಕೆಯ ವೇಷಭೂಷಣಗಳು ಸಮಾಜಕ್ಕೆ ನಗೆಯ ವಸ್ತುಗಳಾಗಿದ್ದವು ಆಕೆಯ ಎದುರಿಗೆ ಹಲ್ಲುಕಿರಿಯುತ್ತಿದ್ದ ಗಂಡಸರು ಬೆನ್ನ ಹಿಂದೆ ಅವಳನ್ನು ಅಶ್ಲೀಲವಾಗಿ ಹಾಸ್ಯಮಾಡಿ ನಗುತ್ತಿದ್ದರು ತನ್ನ ದೊಡ್ಡ ಮನೆಯಲ್ಲಿ ಏಕಾಂಗಿಯಾಗಿ ಹುಚ್ಚಿಯಂತೆ ಬಾಳುವೆ ನಡೆಸುತ್ತಿದ್ದ ಯಮುನೆಯನ್ನು ನೋಡಿ ಮೂರ್ತಿಗೆ ಸಂಕಟವಾಯಿತು

ತಾನಾದರೋ ಗಂಡಸು ಮನಸ್ಸು ಮಾಡಿದರೆ ಮತ್ತೊಂದು ಮದುವೆಯನ್ನು ಮಾಡಿಕೊಳ್ಳಬಹುದು ತಾನು ಸಮಾಜಕ್ಕೆ ಹೆದರ ಬೇಕಾಗಿರಲಿಲ್ಲ

ಆದರೆ ಯಮುನಾ ?

ಅವಳು ಮತ್ತೊಂದು ಮದುವೆಯಾಗುವಂತಿರಲಿಲ್ಲ ಗಂಡಸರ ಕುಚೋದ್ಯದ ವಸ್ತುವಾಗಿ, ಹೆಂಗಸರ ತಿರಸ್ಕಾರದ ಕೇಂದ್ರವಾಗಿ, ಸಮಾಜದ ದಾರಿ

ಗೆಟ್ಟ ಹೆಣ್ಣಾಗಿ ಬಾಳ್ವೆ ನೂಕುತ್ತಿದ್ದಳು ಅವಳು ಅತಿ ಸಲಿಗೆಯಿಂದ ಗಂಡಸ ರೊಡನೆ ಬೆರೆಯುತ್ತಿದ್ದ ರೀತಿ ನೋಡಿ ಸಮಾಜ ಅವಳಿಗಾಗಲೇ 'ಮಾನ ವಿಲ್ಲದ ಹೆಣ್ಣು' ಎಂಬ ಬಿರುದು ಕೊಟ್ಟಿತ್ತು ಒಡಕಿನ ಕಹಿಯನ್ನು ಮರೆ ಯಲು ಯಮುನಾ ಗಂಡಸರಂತೆ ಸಿಗರೇಟು ಸೇದುತ್ತಿದ್ದಳು—ಆಗಾಗ್ಗೆ ಆಗುತ್ತಿದ್ದ ಪಾರ್ಟಿಗಳಲ್ಲಿ ಕಂಠಪೂರ್ತಿ ಕುಡಿಯುತ್ತಿದ್ದಳು ಕುಡಿದು ಮನೆಗೆ ಬಂದು ಹುಚ್ಚಿಯಂತೆ ಮನೆಯಲ್ಲೆಲ್ಲಾ ಹರಿದಾಡಿ, ಕಣ್ಣೀರಿನ ಹೊಳೆ ಹರಿಸಿ, ಸೊರಗಿ, ಹಾಸಿಗೆಯನ್ನೇರುತ್ತಿದ್ದಳು ಯಮುನಾ

ಮೇಲಿನ ಥಳುಕು ಹೆಚ್ಚಾದಷ್ಟೂ ಮನಸ್ಸಿಗೆ ಗೆದ್ದಲು ಹಿಡಿಯು ತ್ತಿತ್ತು ಮೂರ್ತಿ ಎದುರಿಗೆ ಕುಳಿತಿದ್ದ ಯಮುನೆಯನ್ನು ದಿಟ್ಟಿಸಿ ನೋಡಿದರು ಅವಳ ಕಣ್ಣುಗಳಲ್ಲಿ ನೀರಿತ್ತು ಅವಳ ನಿಜವಾದ ಸ್ವರೂಪ, ಬಣ್ಣದ ಅರಿವಾಯಿತು ಮೂರ್ತಿಗೆ ಆಗ ಮೂರ್ತಿ ಬಯಕೆಗಿಂತಲೂ ಹೆಚ್ಚಾಗಿ ಕರುಣೆಯಿಂದ ಯಮುನೆಯನ್ನು ತನ್ನ ಬಳಿಗೆ ಎಳೆದುಕೊಂಡಿ ದ್ದರು

ಯಾವತ್ತೂ ಅವರು ಅವಳನ್ನು ಬಯಕೆಯ ದೃಷ್ಟಿಯಿಂದ ಕಂಡಿರ ಲಿಲ್ಲ ಯಮುನೆ ಮಾತ್ರವೇಕೆ—ಯಾವ ಹೆಣ್ಣಿನಲ್ಲೂ ಮೂರ್ತಿ ಆಸಕ್ತಿ, ಶ್ರದ್ಧೆ ತೋರಿಸಿರಲಿಲ್ಲ

ಯಮುನಾ ಕರುಣೆಯ ವಸ್ತುವಾಗಿದ್ದಳೇ ಹೊರತು ಬಯಕೆಯ ಕಿಡಿಯಾಗಿರಲಿಲ್ಲ

ಒಂಟಿ ಬಾಳಿನ ದಂಡಕಾರಣ್ಯದಲ್ಲಿ ಆಹಾರವಿಲ್ಲದೆ ಕೆರಳಿದ ಹೆಣ್ಣು ಸಿಂಹದಂತೆ ಅಲೆದಾಡುತ್ತಿದ್ದ ಯಮುನೆಯನ್ನು ಅತ್ಯಂತ ಮರುಕ, ಕರುಣೆ, ಸಹಾನುಭೂತಿಯಿಂದ ಕಾಣುತ್ತಿದ್ದರು

ಯಮುನಾ ಮೂರ್ತಿಯ ದಾಸಾನುದಾಸಳಾಗಿದ್ದಳು ಮೂರ್ತಿಯ ಮುದ್ದಿನ ಮಗಳು ಗೀತಳನ್ನು ಮೂರ್ತಿಗಾಗಿ ಪ್ರೀತಿಸುತ್ತಿದ್ದಳು ನಿಜ ವಾದ ಪ್ರೀತಿಯಿಲ್ಲದಿದ್ದರೂ ತಂದೆಗಾಗಿ ಮಗಳಲ್ಲಿ ಪ್ರೇಮವನ್ನು ನಟಿಸು ತ್ತಿದ್ದಳು

ಗೀತಳಿಗೆ ಮಾತ್ರ ಯಮುನೆಯನ್ನು ಕಂಡರೆ ಆಗುತ್ತಿರಲಿಲ್ಲ ಯಮುನೆಯ ಅತಿ ಅಲಂಕಾರ, ನಾಟಕೀಯವಾದ ಮಾತುಗಳು, ಕೃತಕ

ನಗು ಗೀತಳಲ್ಲಿ ಬೇಸರ ಹುಟ್ಟಿಸಿದ್ದುವು ಗೀತಳ ಮನಸ್ಸನ್ನರಿತಿದ್ದ ಮೂರ್ತಿ ಯಮುನೆಯನ್ನು ಹೆಚ್ಚಾಗಿ ಮನೆಗೆ ಬರಗೊಡುತ್ತಿರಲಿಲ್ಲ ಯಮುನಾ ತಾನಾಗಿಯೇ ಏನಾದರೂ ನೆಪ ತೆಗೆದು ಬರಲು ಯತ್ನಿಸಿದಾಗ ಮೂರ್ತಿ ಯಾವುದಾದರೊಂದು ಉಪಾಯ ಹೂಡಿ ಅವಳ ಆಗಮನವನ್ನು ತಡೆಯುತ್ತಿದ್ದರು

ಯಮುನೆಯೊಡನೆ ಓಡಾಡುವುದರಿಂದಾಗಿ ಮೂರ್ತಿಗೂ ಕೆಟ್ಟ ಹೆಸರು ಬಂದಿತ್ತು ಜನ ಆಗಾಗ್ಗೆ ಅವರಿಬ್ಬರನ್ನು ಜೊತೆಯಾಗಿ ಥಿಯೇಟರುಗಳಲ್ಲಿ ಕಾರಿನಲ್ಲಿ, ಮನೆಯಲ್ಲಿ ನೋಡುತ್ತಿದ್ದರು

"ಅವನಿಗೆ ಹೆಂಡತಿಯಿಲ್ಲ, ಅವಳಿಗೆ ಗಂಡನಿಲ್ಲ ಇಬ್ಬರೂ ಸರಿಯಾಗಿದಾರೆ" ಎಂದು ಹಾಸ್ಯ ಮಾಡಿ ನಕ್ಕಿದ್ದರು

ಯಮುನೆಯ ಬಹಿರಂಗ ಸ್ವರೂಪ ಕಂಡು ನಕ್ಕು ಮೂದಲಿಸುತ್ತಿದ್ದ ಜನ ಅವಳ ಅಂತರಂಗ ಸ್ವರೂಪವನ್ನು ನೋಡುವ ಯತ್ನ ಮಾಡುತ್ತಿರಲಿಲ್ಲ ಅವಳಿಗೆ ಹಣವಿತ್ತು, ಪುರುಷರನ್ನು ಮರುಳುಗೊಳಿಸುವ ಜಾಣ್ಮೆಯಿತ್ತು ಒಳ್ಳೆಯ ಅಭಿರುಚಿಗಳಿದ್ದುವು–ಆದರೆ ಸಂಸಾರದ ಕಹಿ, ಸಿಹಿ ಎರಡರಿಂದಲೂ ಯಮುನಾ ಪೂರ್ತಿ ವಂಚಿತಳಾಗಿದ್ದಳು ನನ್ನವರೆಂದು ಹೇಳಿಕೊಳ್ಳುವವರು ಅವಳಿಗೆ ಯಾರೂ ಇರಲಿಲ್ಲ ಅವಳ ಮನಸ್ಸಿಗೆ ದುಃಖವಾದರೆ ತನ್ನ ಪ್ರೇಮದ ತೋಳುಗಳಲ್ಲಿ ಆಶ್ರಯ ನೀಡುವ ಪತಿಯಾಗಲಿ, ಮುದ್ದು ಮಾತುಗಳಿಂದ ಮನಸ್ಸಿನ ನೋವನ್ನು ಒರೆಸುವ ಮಗುವಾಗಲಿ ಇರಲಿಲ್ಲ ಅಷ್ಟು ದೊಡ್ಡ ಮನೆಗೆ ಪಿಶಾಚಿಯಂತೆ ಒಬ್ಬಳೇ ಇರುತ್ತಿದ್ದಳು

ಅನೇಕ ದಿನ ರಾಣಿಯಂತೆ ಅಲಂಕರಿಸಿಕೊಂಡು ಸಮಾರಂಭಗಳಲ್ಲಿ ಪಾತ್ರವಹಿಸಿ ಗೆಳೆಯ ಗೆಳತಿಯರ ದೇಶಾವರೀ ಮಾತುಗಳಿಗೇ ಹಿಗ್ಗಿ ರಾತ್ರಿ ಹತ್ತು ಗಂಟೆಯಲ್ಲಿ ಒಬ್ಬಳೇ ಮನೆಗೆ ಬಂದು ಕನ್ನಡಿಯ ಮುಂದೆ ಒಡವೆಗಳನ್ನು ಬಿಚ್ಚಲು ಕುಳಿತಾಗ—

ಅವಳ ಮುಖ ಬಾಡುತ್ತಿತ್ತು ವಜ್ರದ ಬಳೆಗಳು, ಉಂಗುರಗಳನ್ನು ಹಾಕಿದ್ದ ಕೈಗಳು ಸಿಡಿದುಹೋಗುತ್ತಿದ್ದ ತಲೆಯನ್ನು ಭದ್ರವಾಗಿ ಹಿಡಿಯುತ್ತಿದ್ದುವು ನೆಕಲೇಸುಗಳನ್ನು ಧರಿಸಿದ್ದ ಕೊರಳು ಕುಸಿದು ಮೇಜಿನ ಮೇಲೆ ಒರಗುತ್ತಿತ್ತು

ದುಃಖ, ಕೋಪ, ತಾಪ, ವಿರಹ, ದ್ವೇಷ ಅವುಗಳಿಂದ ಯಮುನಾ ಹೋಗಿ ಹಾಸಿಗೆಯ ಮೇಲೆ ಬೀಳುತ್ತಿದ್ದಳು

ಅವಳ ಹಸಿವನ್ನು ನೀಗಲು ಹಲವಾರು ಗೆಳೆಯರಿದ್ದರೂ ಯಮುನಾ ಯಾರನ್ನೂ ಪ್ರೀತಿಸಿರಲಿಲ್ಲ ತನಗೂ ಅವರಿಗೂ ಕೇವಲ ದೈಹಿಕ ಆಕರ್ಷಣೆಯ ಹೊರತು ಬೇರೇನೂ ಇಲ್ಲವೆಂಬುದು ಯಮುನಳಿಗೆ ತಿಳಿದಿತ್ತು ಮೂರ್ತಿ ಇತರರಿಗಿಂತ ಭಿನ್ನವಾದ ವ್ಯಕ್ತಿಯೆಂದು ತಿಳಿದು ಯಮುನಾ ಅವರಲ್ಲಿ ಹೆಚ್ಚಿನ ಶ್ರದ್ಧೆಯನ್ನು ತೋರಿಸಿದ್ದಳು ಆದರೆ ಆತನಿಗೆ ತನ್ನಲ್ಲಿ ದೈಹಿಕ ಆಕರ್ಷಣೆಯಾಗಲಿ, ಮೋಹವಾಗಲಿ ಇಲ್ಲವೆಂದು ಅವಳಿಗೆ ತಿಳಿದಾಗ ನಿರಾಶೆಯಾಯಿತು ಅಷ್ಟೇ ಅಲ್ಲ—ತಾನು ಅವನ ಕರುಣೆಯ ವಸ್ತು ಎಂದು ತಿಳಿದಾಗ ಯಮುನಾ ಉನ್ಮಾದಿನಿಯಂತೆ ಕೆರಳಿದ್ದಳು ಇನ್ನು ಮೇಲೆ ಮೂರ್ತಿಯನ್ನು ನೋಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಳು ತನ್ನ ಕೋಪ, ದರ್ಪಕ್ಕೆ ಹೆದರಿ ಅವರು ತಮ್ಮ ಕ್ಷಮಾಪಣೆ ಕೇಳಿಕೊಳ್ಳಬಹುದು ಎಂದು ಅವಳು ತಿಳಿದಿದ್ದಳು ಒಂದು ವರ್ಷ ಮನಸ್ತಾಪದಲ್ಲಿಯೇ ಕಳೆದ ಮೇಲೂ ಮೂರ್ತಿ ತನ್ನ ಕಡೆಯೂ ತಿರುಗಿ ನೋಡದಿರುವುದನ್ನು ಸಹಿಸಲಾರದೇ ಕಣ್ಣೀರಿನಲ್ಲಿ ಮಿಂದು ತಾನೇ ಅವರ ಬಳಿಗೆ ಹೋಗಿದ್ದಳು ಮೂರ್ತಿ ತನ್ನನ್ನು ಕ್ಷಮಿಸಿದುದೂ ಕರುಣೆಯಿಂದಲೇ ಎಂದರಿತು ಯಮುನಾ ಮತ್ತೆ ರೊಚ್ಚಿಗೆದ್ದಿದ್ದಳು

ಅಂದಿನಿಂದ ಅವರವರ ಸಂಬಂಧ ಕಡಮೆಯಾದರೂ ಅದು ಸಂಪೂರ್ಣ ಕಡಿಯಲಿಲ್ಲ ಆ ಬಗೆಯ ಜೀವನಕ್ಕೆ ಎಂದೂ ಮೂರ್ತಿ ಮೋಹಗೊಂಡವರಲ್ಲ ಒಂದು ಬಗೆಯ ನಿರ್ಲಿಪ್ತತೆ, ಔದಾಸೀನ್ಯದಿಂದ ತನ್ನ ಬಳಿಗೆ ದೀನಳಾಗಿ ಯಾಚಕಳಂತೆ ಬರುತ್ತಿದ್ದ ಯಮುನೆಯನ್ನು ಮೂರ್ತಿ ಪರಿಗ್ರಹಿಸುತ್ತಿದ್ದರೇ ಹೊರತು ತಾವಾಗಿಯೇ ಎಂದೂ ಅವಳಲ್ಲಿಗೆ ಹೋಗುತ್ತಿರಲಿಲ್ಲ ಮೂರ್ತಿಯ ಧೋರಣೆಗೆ ಬೇಸರಗೊಂಡಿದ್ದ ಯಮುನೆ ಅವರಿಂದ ದೂರವಾಗುತ್ತಿದ್ದರೂ ಹಳೆಯ ವ್ಯಾಮೋಹವಿನ್ನೂ ಉಳಿದಿತ್ತು.

ಹೆಂಡತಿ ಹೋದ ತರುಣದಲ್ಲಿ ಅವರಿಗೆ ಎರಡನೆಯ ಮದುವೆ ಮಾಡಿಕೊಳ್ಳುವಂತೆ ಸೂಚಿಸಿದವರಿಗೇನೂ ಕಡಿಮೆಯಿರಲಿಲ್ಲ ಮೂರ್ತಿಯ ಮನಸ್ಸನ್ನು ಗೆಲ್ಲಲು ಕೆಲವರು ಚೆಲುವೆಯರಾದ ವಧುಗಳನ್ನು ಕರೆದುಕೊಂಡು

ಬಂದಿದ್ದರು

ಆದರೆ ಗೀತಳಿಗಾಗಿ, ಹೆಂಡತಿಯ ಸಾವಿನಿಂದಾದ ನಿರಾಶೆಯಿಂದಾಗಿ ಮೂರ್ತಿ ಎರಡನೆಯ ಮದುವೆ ಮಾಡಿಕೊಳ್ಳುವುದಿಲ್ಲವೆಂದು ನಿರ್ಧರಿಸಿದ್ದರು ಗೀತಳ ತಾಯಿಯನ್ನೇನೂ ಮೂರ್ತಿ ಮೆಚ್ಚಿ ಮದುವೆಯಾಗಿದ್ದರು ಅವಳೊಡನೆ ಸುಖದಾಂಪತ್ಯ ಜೀವನ ನಡೆಸಿದ್ದರು

ಅವಳಿಗೆ ಬಂದ ಮರಣವಾದರೂ ಎಂತಹುದು ?

ಒಂದು ಬೆಳಿಗ್ಗೆ ಹಾಸಿಗೆಯಿಂದೆದ್ದು ಆಕೆ ಮುಖ ತೊಳೆಯಲು ಬಚ್ಚಲು ಮನೆಗೆ ಹೋದಳು ಬಚ್ಚಲು ಬಳಿಯಿದ್ದ ಒಲೆಯಿಂದ ಉರಿ ಈಚೆಗೆ ಬಂದದ್ದನ್ನು ಕಾಣದೇ ಆಕೆ ನಿರಿಗಳನ್ನು ಚಿಮ್ಮಿಸಿಕೊಂಡು ಬಚ್ಚಲ ಬಳಿ ನಿಂತು ಮುಖ ತೊಳೆಯುತ್ತಿದ್ದಳು ಹಿಂದುಗಡೆಯಿಂದ ಸೀರೆ ಭಗ್ಗನೆ ಹತ್ತಿಕೊಂಡಿತು ಮೊದಲು ಆಕೆ ಅದನ್ನು ಗಮನಿಸಲಿಲ್ಲ ಮೈಗೆ ಶಾಖ ತೋರಿದಾಗ ಆಕೆ ಸೀರೆ ಹತ್ತಿಕೊಂಡಿರುವುದನ್ನು ಗಮನಿಸಿ ಚಿಟ್ಟನೆ ಚೀರಿದಳು ಇನ್ನೂ ಸುಖನಿದ್ರೆಯಲ್ಲಿ ಮೈಮರೆತು ಮಲಗಿದ್ದ ಮೂರ್ತಿ ಹೆಂಡತಿಯ ಚೀತ್ಕಾರ ಕೇಳಿ ಓಡಿಬಂದರು

ಆಕೆಯನ್ನು ಆಸ್ಪತ್ರೆಗೆ ಸೇರಿಸಲು ಆಂಬ್ಯುಲೆನ್ಸಿನಲ್ಲಿ ಕರೆದೊಯ್ಯುತ್ತಿದ್ದಾಗ ದಾರಿಯಲ್ಲೇ ಅವಳು ಕೊನೆಯ ಉಸಿರನ್ನು ಎಳೆದಳು

ಅಲ್ಲಿಗೆ ಅವಳ ಕತೆ ಮುಗಿಯಿತು

ಹೆಂಡತಿಯ ಮರಣದ ಪೆಟ್ಟಿನೊಡನೆ ಮೂರ್ತಿ ತಾನು ಕೊಲೆಗಾರನೆಂಬ ದೋಷಾರೋಪಣೆಯನ್ನೂ ಹೊರಬೇಕಾಯಿತು

ಯಾರಿಂದಲೋ ಎಲ್ಲಿಂದಲೋ ಸುದ್ದಿಯೊಂದು ಹುಟ್ಟಿಕೊಂಡಿತು —ಗಂಡ ಹೆಂಡತಿಯರಲ್ಲಿ ಬಹಳ ಮನಸ್ತಾಪವಿತ್ತು ಮೂರ್ತಿ ಹೆಂಡತಿಯ ಬಾಯಿಗೆ ಬಟ್ಟೆ ತುರುಕಿ, ಮೈಮೇಲೆ ಸೀಮೆಎಣ್ಣೆ ಚೆಲ್ಲಿ, ತಾವಾಗಿಯೇ ಬೆಂಕಿ ಹೊತ್ತಿಸಿ ಅವಳನ್ನು ಸುಟ್ಟರು

ತಮ್ಮ ಮೇಲೆ ಸಿಡಿಲಿನಂತೆ ಬಂದು ಎರಗಿದ ಆರೋಪಣೆಯನ್ನು ತಡೆದುಕೊಳ್ಳುವುದು ಮೂರ್ತಿಗೆ ತುಂಬಾ ಕಷ್ಟವಾಯಿತು ಈ ಆಪಾದನೆಯಿಂದ ಮನಸ್ಸು ಎಷ್ಟು ವ್ಯಥೆಗೊಂಡಿತೆಂದರೆ ತಾವೂ ಏಕೆ ಆತ್ಮಹತ್ಯೆ ಮಾಡಿಕೊಳ್ಳಬಾರದು ಎಂಬ ಯೋಚನೆ ಸಹಿತ ಮೂರ್ತಿಗೆ ಬಂದಿತ್ತು

ಆದರೆ ಗೀತಾ ?

ನಾಲ್ಕು ತುಂಬಿ ಐದನೆಯ ವರ್ಷದಲ್ಲಿದ್ದ ಗೀತಳ ಗತಿಯೇನು ? ಮೂರ್ತಿ ತಮ್ಮ ಯೋಚನೆಯನ್ನು ಬೇರು ಸಮೇತ ಕಿತ್ತೆಸೆದರು

ಯಮುನಳ ಎದುರಿಗೆ ಹಿಮದಂತಿರುತ್ತಿದ್ದ ಮೂರ್ತಿಯ ಮನಸ್ಸು ಪದ್ಮಿನಿಯನ್ನು ನೋಡಿದಾಗಿನಿಂದ ತುಂಬು ಪ್ರವಾಹ ಬಂದ ಗಂಗಾನದಿ ಯಂತೆ ಹರಿಯತೊಡಗಿತ್ತು

ಎಂತೆಂತಹ ಚೆಲುವೆಯರಿಗೆ, ಬೆಡಗಿಯರಿಗೆ, ಚತುರೆಯರಿಗೆ ಒಲಿ ಯದ, ಬಾಗದ ತಮ್ಮ ಮನಸ್ಸು ಈಗ ಪದ್ಮಿನಿಯನ್ನು ನೋಡಿ ಕಿಡಿ ತಗುಲಿದ ಕರ್ಪೂರವಾಗಬೇಕೆ ?

ಇದು ತಾತ್ಕಾಲಿಕ ಆಕರ್ಷಣೆ ಇದ್ದರೂ ಇರಬಹುದು ಎಂದು ಕೊಂಡು ಮನಸ್ಸನ್ನು ಹಗುರಗೊಳಿಸಲು ಮೂರ್ತಿ ನಿದ್ರಿಸಲು ಯತ್ನಿಸಿ ದರು

* * *

ಭಾನುವಾರದ ದಿನವಾದುದರಿಂದ ಮೂರ್ತಿಗೆ ಕೋರ್ಟಿರಲಿಲ್ಲ ಭಾನುವಾರ ಮಧ್ಯಾಹ್ನ ಯಮುನಾ ತನ್ನ ಮನೆಗೆ ತಿಂಡಿಗೆ ಬರುವಂತೆ ಮೂರ್ತಿಯನ್ನು ಆಹ್ವಾನಿಸಿದ್ದಳು ತಿಂಡಿ ಮುಗಿಸಿದನಂತರ ಇಬ್ಬರೂ ಒಟ್ಟಿಗೆ ಕ್ಲಬ್ಬಿಗೆ ಹೋಗಬಹುದೆಂದು ಯಮುನಾ ಮೂರ್ತಿಗೆ ಸೂಚಿಸಿ ದ್ದಳು

ಆದರೆ ಮೂರ್ತಿಗೆ ಅವಳ ಆಹ್ವಾನ ಬೇಡವಾಗಿತ್ತು ಪದ್ಮಿನಿಯನ್ನು ನೋಡಿದಾಗಿನಿಂದಲೂ ಅವರಿಗೆ ಯಮುನಾ ಎಂಬ ವ್ಯಕ್ತಿಯೊಬ್ಬಳು ಈ ಪ್ರಪಂಚದ ಮೇಲೆ ಇದ್ದಾಳೆ ಎಂಬ ಅಂಶವೇ ಮರೆತುಹೋಗಿತ್ತು ಅವರ ಮನಸ್ಸಿನ ತುಂಬಾ, ಪ್ರಪಂಚದ ತುಂಬಾ ಬಳ್ಳಿದೇಹದ ಪದ್ಮಿನಿಯೇ ಹಬ್ಬಿಕೊಂಡಿದ್ದಳು

ಭಾನುವಾರ ಮಧ್ಯಾಹ್ನವೇ ತಾನು ಅಲ್ಲಿಗೆ ಹೊರಟುಹೋದರೆ ಸ್ವರ್ಣ ಗಳಿಗೆಯೊಂದನ್ನು ತಪ್ಪಿಸಿಕೊಂಡಂತಾಗುತ್ತದೆಯಲ್ಲವೆ ? ತಾನು ಹೊರಟು ಹೋದ ಮೇಲೆ ಒಂದು ಪಕ್ಷ ಪದ್ಮಿನಿ ಇಲ್ಲಿಗೆ ಬಂದರೆ ? ಅವಳನ್ನು ಮತ್ತೊಂದು ಬಾರಿ ನೋಡಲು ತನ್ನ ಜೀವನದ ಕೊನೆಯ ಗಳಿಗೆಯವರೆವಿಗೆ

ಕಾದು ನಿಂತರೂ ಚಿಂತೆಯಿಲ್ಲ ಎನಿಸಿತು ಮೂರ್ತಿಗೆ

ಮೂರ್ತಿ ಮೈ ಕೊಡವಿಕೊಂಡು ಹಾಸಿಗೆಯನ್ನು ಬಿಟ್ಟರು ತಾನೇಕೋ ಬರಬರುತ್ತಾ ಕಾಲೇಜಿನ ಹುಡುಗನಂತಾಗುತ್ತಿಲ್ಲವೇ ? ವಯಸ್ಸಾಗುತ್ತಾ ಬಂದಂತೆ ಎಲ್ಲರಿಗೂ ಜೀವನದಲ್ಲಿ ಜಿಗುಪ್ಸೆ, ವಿರಕ್ತಿ ತಲೆದೋರಿದರೆ ತನಗೆ ಮಾತ್ರ ಮತ್ತೆ ಹೊಸತನ, ಪ್ರಾಯ ಬರುತ್ತಿರುವಂತಿದೆ !

ಹುಡುಗಿಯರ ಕಾಲೇಜಿನ ಮುಂದೆ ನಿಂತು ಬೆಡಗಿಯರನ್ನು ಕಾದು ನೋಡುವ ನವಯುವಕನಂತೆ ನಲವತ್ತೆರಡು ವಸಂತಗಳನ್ನು ಕಂಡಿದ್ದ ತಾನು ಹೀಗೆ ವರ್ತಿಸುವುದು ಸರಿಯೇ ?

ಹುಡುಗಿ ನೋಡಲು ಲಕ್ಷಣವಾಗಿದ್ದಾಳೆ ಆದುದರಿಂದ ತನ್ನ ಮನಸ್ಸಿನಲ್ಲಿ ಮತ್ತೆ ಬಿಸಿರಕ್ತದ ಸಂಚಾರವಾಗಿರಬಹುದು

ಆದರೆ ಪದ್ಮಿನಿಗಿಂತಲೂ ಸುಂದರವಾದ ಹುಡುಗಿಯರನ್ನು ತಾನು ನೋಡಿರಲಿಲ್ಲವೇ ? ಅವಳಿಗೆ ಬೆಳುದಿಂಗಳನಂತಹ ಮೈಬಣ್ಣವಿರಲಿಲ್ಲ ಕಪ್ಪುನಾಗರದಂತಹ ಜಡೆಯಾಗಲಿ, ಸಂಪಿಗೆ ಎಸಳಿನಂತಹ ಮೂಗಾಗಲೀ ಖಂಡಿತ ಇರಲಿಲ್ಲ

ಅವಳಲ್ಲಿರುವ ಆಕರ್ಷಣೆಯಾದರೂ ಏನು ?

ಮಧ್ಯಾಹ್ನದ ಹೊತ್ತಿಗೆ ಯಮುನೆಯ ಆಹ್ವಾನವನ್ನೇ ಮೂರ್ತಿ ಸಂಪೂರ್ಣವಾಗಿ ಮರೆತುಬಿಟ್ಟಿದ್ದರು ಸಂಜೆಯಾಗುತ್ತಾ ಬಂದಂತೆ ಪದ್ಮಿನಿ ಬರುವಳೋ ಇಲ್ಲವೋ ಎಂಬ ಸಂದೇಹದಿಂದ ಮೂರ್ತಿ ಚಡಪಡಿಸತೊಡಗಿದರು

ಗೀತಾ ವರಾಂಡದಲ್ಲಿ ಕುಳಿತು ಸ್ವೆಟರ್ ಹಾಕುತ್ತಿದ್ದಳು ಮೂರ್ತಿ ಅವಳ ಪಕ್ಕದಲ್ಲಿದ್ದ ಮತ್ತೊಂದು ಕುರ್ಚಿಯ ಮೇಲೆ ಕುಳಿತು ನೆಪಕ್ಕೆ ಕೈಲೊಂದು 'ಲಾ' ಪುಸ್ತಕ ಹಿಡಿದಿದ್ದರು

"ಕ್ಲಬ್ಬಿಗೆ ಹೋಗೋದಿಲ್ಲವೇನಣ್ಣ ?"

"ಊಹೂಂ ಹೋಗೋಲ್ಲ "

"ಸಂಜೆ ಎಲ್ಲೂ ಹೋಗೋದಿಲ್ಲವೇ ?"

"ಇಲ್ಲ."

"ಗಂಟೆ ಎಷ್ಟು ?"

ಮೂರ್ತಿ ಕೈಗಡಿಯಾರ ನೋಡಿ "ಆರೂಕಾಲಾಯಿತು" ಎಂದರು

"ಅಣ್ಣ, ನಿನಗೆ ತೊಂದರೆಯಾಗದಿದ್ದರೆ ಒಂದು ಮಾತು "

"ಏನೆ ಅದು ಬಜಾರಿ ?"

"ಪದ್ಮಿನಿಗೆ ನಿನ್ನೆ ಜೂಲಿ ಕಡಿಯಿತಲ್ಲಾ, ಅವಳು ಹೇಗಿದಾಳೋ ನೋಡಿಕೊಂಡು ಬರಬೇಕೂಂತ ನನಗೆ ಆಸೆಯಿದೆ ಪಾಪ ! ಹುಷಾರಾಗಿ ದಾಳೋ ಇಲ್ಲವೋಂತ ಒಂದುಸಲ ನೋಡಿ ಬಂದರೆ ನನಗೆ ಸಮಾಧಾನ "

ಗೀತಳ ಮಾತು ಮುಗಿಯುವುದಕ್ಕೆ ಮುಂಚೆಯೇ ಮೂರ್ತಿ ಮಿಠಾಯಿಯ ಹೆಸರು ಕೇಳಿದ ಮಗುವಿನಂತೆ ಆನಂದದಿಂದ ಎದ್ದು ನಿಂತು,

"ಗ್ಯಾರೇಜಿನಿಂದ ಕಾರು ತರ್ತೀನಿ" ಎನ್ನುತ್ತಾ ಬೀಗದ ಕೈ ಸರಪಳಿಯನ್ನು ತಿರುಗಿಸುತ್ತಾ ಕುಣಿತದ ನಡಿಗೆಯಲ್ಲಿ ಹೋದರು

ಮನೆಗೆಲಸದಲ್ಲಿ ತಾಯಿಗೆ ಸಹಾಯಮಾಡುತ್ತಿದ್ದ ಪದ್ಮಿನಿ ಕಾರು ಮನೆಯ ಮುಂದೆ ನಿಂತ ಸದ್ದನ್ನು ಕೇಳಿ ಹೊರಗೆ ಬಂದಳು

ಗೀತಾ ಕಾರಿನಿಂದ ಇಳಿಯುತ್ತಿದ್ದುದನ್ನು ನೋಡಿ ಪದ್ಮಿನಿ ಒಳಗೆ ಓಡಿದಳು

ಸಂಭ್ರಮದಿಂದ ಚಾಪೆಯೊಂದನ್ನು ಹಾಲಿನಲ್ಲಿ ಹಾಸಿ ಮತ್ತೆ ಬಾಗಿಲಿಗೆ ಬಂದು ನಗುತ್ತಾ "ದಯಮಾಡಿಸಿ" ಎಂದಳು ಗೀತ ಪದ್ಮಿನಿಯ ಕರೆಗೆ ಮನ್ನಣೆಯಿತ್ತು ಒಳಗೆ ಬಂದು ಚಾಪೆಯ ಮೇಲೆ ಕುಳಿತಳು

"ನಿನ್ನ ಜೊತೆ ಯಾರು ಬಂದಿದ್ದಾರೆ ?" ಪದ್ಮಿನಿ ಅನುಮಾನದಿಂದ ಕೇಳಿದಳು

"ಅಣ್ಣ ಬಂದಿದ್ದಾರೆ ನೀನು ಮಾತನಾಡಿಕೊಂಡು ಬಾ ಅದುವರೆವಿಗೂ ಇಲ್ಲೇ ಇರ್ತೀನಿ ಎಂದರು ಆದುದರಿಂದ ನನಗೆ ತುಂಬಾ ಹೊತ್ತು ಇರೋಕಾಗೋದಿಲ್ಲಾಮ್ಮ ನಾಯಿ ಕೈಲಿ ಕಚ್ಚಿಸಿಕೊಂಡೆಯಲ್ಲಾ, ಆದುದರಿಂದ ನೀನು ಹೇಗಿದೀಯೋ ನೋಡಿಕೊಂಡು ಹೋಗೋಣಾಂತ ಬಂದೆ "

ಪದ್ಮಿನಿಯ ಮನಸ್ಸು ಉಯ್ಯಾಲೆಯಾಡಿತು

ಮೂರ್ತಿಯನ್ನು ಒಳಗೆ ಕರೆಯಲೋ ಬೇಡವೋ ? ಒಂದು ಪಕ್ಷ ಒಳಗೆ ಕರೆದರೆ ಅವರೊಡನೆ ಮಾತುಕತೆಯಾಡಬೇಕಾದ ತಂದೆ ಮನೆ

ಯಲ್ಲಿಲ್ಲ.

"ಅವರನ್ನೂ ಒಳಗೆ ಕರಿ, ಗೀತಾ"

"ನೀನೇ ಕರಿ"

ಪದ್ಮಿನಿ ಎದ್ದು ಹೊರಗೆ ಬಂದಳು

ಮೂರ್ತಿ ಸ್ಟೀರಿಂಗ್ ವ್ಹೀಲಿನ ಮೇಲೆ ಎರಡು ಕೈಗಳನ್ನೂ ಇರಿಸಿ ಕೈಮೇಲೆ ತಲೆ ಊರಿ ಕುಳಿತಿದ್ದರು

ಪದ್ಮಿನಿ ಸದ್ದು ಮಾಡದೇ ಹೋಗಿ ಕಾರಿನ ಬಳಿ ನಿಂತಳು ದುಃಖ ಗೊಂಡ ಮಗುವಿನಂತೆ ಮೂರ್ತಿ ಕುಳಿತಿರುವುದದನ್ನು ನೋಡಿ ಪದ್ಮಿನಿಯ ಹೃದಯ ಮಿಡುಕಿತು

ಮೆಲ್ಲನೆ ಕಾರಿನ ಹತ್ತಿರ ಹೋಗಿ ಇದ್ದಕ್ಕಿದ್ದಂತೆಯೇ ಹಾರ್ನ್ ಯಾಕೆ ಮಾಡಬಾರದು, ಎಂದು ಅವಳ ಹುಡುಗುಮನಸ್ಸು ಕೇಳಿತು

ಆಗ ಅವರು ಬೆಚ್ಚಿ ತಲೆ ಎತ್ತಬಹುದು ಆಗ ತಾನು ಮನಸಾರೆ ನಗ ಬಹುದು

ಪದ್ಮಿನಿ ಬೆಕ್ಕಿನಂತೆ ಹೆಜ್ಜೆಯಿಡುತ್ತಾ ಕಾರಿಗೆ ಅತಿ ಸಮೀಪದಲ್ಲಿ ನಿಂತು ಕೆಂಪು ಬಣ್ಣದ ಹಾರನ್ನಿನ ಮೇಲೆ ಕೈಯಿರಿಸಿದಳು ಅವಳು ಹಾರನ್ನನ್ನು ಅದುಮುವ ಮೊದಲೇ ಮೂರ್ತಿ ತಟ್ಟನೆ ತಲೆ ಎತ್ತಿದರು

ಈಗ ಬೇಸ್ತು ಬಿದ್ದವಳು ಪದ್ಮಿನಿ ತನ್ನ ಕಾರ್ಯ ಸಫಲವಾಗದ್ದಕ್ಕೆ ಪದ್ಮಿನಿಗೆ ಸಂಕೋಚವಾಯಿತು ಸಾಲದುದಕ್ಕೆ ಕಳ್ಳತನ ಮಾಡುವಾಗಲೇ ಅವಳು ಸಿಕ್ಕಿಹಾಕಿಕೊಂಡಿದ್ದಳು

ಪದ್ಮಿನಿ ಹಾರನ್ನಿನ ಮೇಲಿನಿಂದ ಕೈತೆಗೆದಳು

ಮುಗುಳುನಗೆಯ ಆರತಿಯೊಡನೆ ಮಿಂಚುಗಣ್ಣಿನ ನಂದಾದೀಪ ವನ್ನು ಬೆಳಗಿಸಿ ಪದ್ಮಿನಿ ಕರೆದಳು

"ಒಳಗೆ ಬರಬಹುದಲ್ಲಾ"

ಅವಳ ಕಣ್ಣುಗಳಲ್ಲಿ ಬೆಳಗುತ್ತಿದ್ದ ಶಾಂತವಾದ ಬೆಳಕಿನಿಂದ ತನ್ನೆದೆ ಯಲ್ಲಿ ತುಂಬಿದ ಕತ್ತಲನ್ನು ಹೊರದೂಡುತ್ತಾ ಮೂರ್ತಿ,

"ಪರವಾಗಿಲ್ಲ ಇಲ್ಲೇ ಇರ್ತೀನಿ" ಎಂದರು

"ನಿಮ್ಮ ಮಹಲಿನ ಭವ್ಯತೆ ನಮ್ಮ ಬಡಗುಡಿಸಲಿಗಿಲ್ಲ ಆದರೆ ಒಳಗೆ

ಬರಲು ಏನು ಅಡ್ಡಿ ?"

ಪದ್ಮಿನಿ ಇರುವ ಸ್ಥಳ ಗುಡಿಸಲಾಗುವುದು ಸಾಧ್ಯವೇ ? ಅವಳ ರೀವಿ, ದರ್ಪ, ಹೆಮ್ಮೆ ಯಾವ ರಾಣಿಗೆ ತಾನೆ ಇದ್ದೀತು ?

"ನಿಮಗೆ ತೊಂದರೆ"

"ಇಂತಹ ತೊಂದರೆಗಳನ್ನು ಅನುಭವಿಸಲು ಪುಣ್ಯ ಮಾಡಿರಬೇಕು" ಎನ್ನುತ್ತಾ ಪದ್ಮಿನಿ ಕಾರಿನ ಬಾಗಿಲಿನ ಹಿಡಿಯನ್ನು ತಿರುಗಿಸಿದಳು ಬಾಗಿಲು ತೆಗೆದುಕೊಂಡಿತು

ನಿರುಪಾಯರಾಗಿ ಮೂರ್ತಿ ಕೆಳಗಿಳಿದರು

ಪದ್ಮಿನಿ ಒಳಗೆ ಓಡಿಹೋದಳು ಜಲಜಮ್ಮ ಚಾಪೆಯ ಮೇಲೆ ಕುಳಿತು ಗೀತಳೊಡನೆ ಮಾತನಾಡುತ್ತಿದ್ದರು

ಪದ್ಮಿನಿ ತಾಯಿಯ ಕಿವಿಯಲ್ಲಿ ಪಿಸುಗುಟ್ಟಿದಳು

"ಅಮ್ಮಾ, ಗೀತನ ತಂದೇನೂ ಬಂದಿದಾರೆ"

ಜಲಜಮ್ಮ ಗಡಿಬಿಡಿಯಿಂದ ಏಳುತ್ತಾ "ಒಳಗೆ ಬರಹೇಳು" ಎಂದು ಹೇಳಿ ತಾವು ಅಡಿಗೆಯ ಮನೆಗೆ ಹೊರಟುಹೋದರು

ಮೂರ್ತಿ ಒಳಗೆ ಬಂದರು ಪದ್ಮಿನಿ ರೂಮಿನೊಳಗೆ ಓಡಿಹೋಗಿ ಕುರ್ಚಿಯೊಂದನ್ನು ತಂದು ಹಾಲಿನಲ್ಲಿರಿಸಿದಳು

"ಚಾಪೇನೆ ಸಾಕಾಗಿತ್ತು"

—ಅವಳು ಭೂತಾಕಾರದ ಕುರ್ಚಿಯನ್ನು ಹೊರುವುದು ನೋಡ ಲಾರದೇ ಮೂರ್ತಿ ಹೇಳಿದರು

"ಚಾಪೆ ತೊಂದರೆ ಸೂಟುಧಾರಿಗಳಿಗೆ" ಎನ್ನುತ್ತಾ ಪದ್ಮಿನಿ ಮತ್ತೆ ಒಳಗೆ ಓಡಿದಳು

ಈ ಹುಡುಗಿಗೆ ನಡೆಯಲು ಬರುವುದೇ ಇಲ್ಲವೇನೋ ? ಹೊಸ ಹರೆಯ ಉಕ್ಕಿಸುತ್ತಿದ್ದ ಚೈತನ್ಯ, ಉತ್ಸಾಹ, ಸಂಭ್ರಮದಿಂದ ಅವಳು ಮಿಂಚಿನಷ್ಟು ಆಕರ್ಷಕಳೂ, ನಡುಬೇಸಿಗೆಯ ಮಳೆಯಂತೆ ಅತ್ಯಗತ್ಯಳೂ ಮಾವಿನ ಚಿಗುರಿನಂತೆ ಹೊಸಬಳೂ, ತಂಗಾಳಿಯಂತೆ ಹಿತಕರಳೂ ಆಗಿರು ವಂತೆ ಮೂರ್ತಿಗೆ ತೋರಿತು

ಎರಡು ನಿಮಿಷಗಳಲ್ಲಿ ಪದ್ಮಿನಿ ನವಿಲಿನ ಬೆಡಗಿನಲ್ಲಿ ಹೊರಗೆ ಬಂದಳು

ಅವಳು ಕೈಲಿ ಹಿಡಿದಿದ್ದ ತಟ್ಟೆಯಲ್ಲಿ ಕಾಫಿಯ ಬಟ್ಟಲುಗಳಿದ್ದವು

ತಂದೆ, ಮಗಳು ಮನೆಯಲ್ಲಿ ಕಾಫಿಯನ್ನು ಕುಡಿಯುತ್ತಿರಲಿಲ್ಲವಾದರೂ ಪದ್ಮಿನಿಯ ಮನೆಯಲ್ಲಿ ತಮ್ಮ ನಿಯಮವನ್ನು ಅತಿಕ್ರಮಿಸಿ ಕಾಫಿಯನ್ನು ಕುಡಿದರು

ಅವರು ಕುಡಿದಿರಿಸಿದ ಬಟ್ಟಲುಗಳನ್ನು ಒಳಗಿಟ್ಟು ಪದ್ಮಿನಿ ಗೀತಳ ಪಕ್ಕದಲ್ಲಿ ಕುಳಿತಳು

"ನಿನ್ನೆ ರಾತ್ರಿ ನಿಮಗೆ ತೊಂದರೆ ಏನೂ ಆಗಲಿಲ್ಲವಷ್ಟೆ ?" ಮೂರ್ತಿ ಕೇಳಿದರು

"ನನಗೆ ಹಾಸಿಗೆಯ ಮೇಲೆ ಮಲಗಿದ್ದಷ್ಟೇ ನೆನಪು ನಾನು ಕಣ್ಣು ಬಿಟ್ಟಾಗ ಬೆಳಗಾಗಿತ್ತು "

"ನಿನ್ನ ನೋಟ್ಸುಗಳು ನನಗೆ ಬೇಕಾಗಿತ್ತು

ಪದ್ಮಿನಿ ಬೀರುವಿನಿಂದ ಗೀತಾ ಕೇಳಿದ ತನ್ನ ನೋಟ್ಸುಗಳನ್ನು ತೆಗೆದು ಕೊಟ್ಟಳು

"ನಿಂಗೆ ಏನಾದರೂ ಕೆಲಸವಿದೆಯಾ ?"

"ಇಲ್ಲ "

"ಒಂದು ರೌಂಡು ಹೋಗಿ ಬರೋಣ ಬರ್ತೀಯಾ ?"

ಪದ್ಮಿನಿ ಅನುಮಾನಿಸುತ್ತಾ "ಆಗಲೇ ಆರೂವರೆಯಾಗಿದೆ ತಾಳು ಅಮ್ಮನ್ನ ಕೇಳಿಕೊಂಡು ಬರ್ತೀನಿ" ಎಂದಳು

ಪದ್ಮಿನಿ ತಾನು ಉಟ್ಟಿದ್ದ ಸೀರೆಯಲ್ಲೇ ಹೊರಟಳು ಅವಳ ಬೆರಳು ಗಳು ಮಾತ್ರ ಸ್ವಲ್ಪ ಕೆದರಿದ್ದ ತಲೆಗೂದಲನ್ನು ಸರಿಮಾಡಿದುವು ಗೀತಳ ರೇಷ್ಮೆಯ ಸೀರೆಯ ಎದುರಿಗೆ ಪದ್ಮಿನಿಯ ಒರಟು ನೂಲಿನ ಸೀರೆ ಬಿಂಗಿ ಬಿಂಗಿಯಾಗಿ ಕಾಣುತ್ತಿತ್ತು

ವೈದ್ಯ ಸನ ಸ್ಪರ್ಶದಿಂದ ಮಣ್ಣು ಹೊನ್ನಾಗುತ್ತಿದ್ದಂತೆ ಪದ್ಮಿನಿಯ ಸ್ಪರ್ಶದಿಂದ ನೂಲಿನ ಸೀರೆ ಪೀತಾಂಬರವಾಗಿರುವಂತೆ ಮೂರ್ತಿಗೆ ತೋರಿತು

ಹುಡುಗಿಯರಿಬ್ಬರೂ ಹಿಂದುಗಡೆಯಲ್ಲಿ ಕುಳಿತರು

"ಎಲ್ಲಿಗೆ ಹೋಗೋಣ, ಗೀತಾ ?"

"ನಿನ್ನಿಷ್ಟ "

"ನೀವು ಏನು ಹೇಳ್ತೀರ ?"

"ಅಣ್ಣ, ನೀನು ಪದ್ಮಿನೀನ ಯಾಕೆ 'ನೀವು, ತಾವು' ಎಂತ ಮಾತ ನಾಡಿಸುತ್ತೀಯಾ ? ಅವಳೂ ನಾನೂ ಒಂದೇ ವಯಸ್ಸಿನವರು ಅವಳಿಗೇಕೆ ಇಷ್ಟೊಂದು ಮರ್ಯಾದೆ ?" ಎನ್ನುತ್ತಾ ಪದ್ಮಿನಿಯ ಕಡೆ ತಿರುಗಿ,

"ನಿನಗೆ ಬಹಳ ಗೌರವ ತೋರಿಸಬೇಕೇನಮ್ಮ ?" ಎಂದಳು

"ಸದ್ಯ ನನಗೆ ಎಂತಹ ಗೌರವವೂ ಬೇಡ ನಾನೂ ಆ ದಿನವೇ ಹೀಗೆ ಕರೆಯಬೇಡೀಂತ ಹೇಳೋಣಾಂತಿದ್ದ ಆದರೆ ಏನಾದರೂ ತಪ್ಪು ತಿಳಿದುಕೊಳ್ಳುತ್ತಾರೇನೋ ಎಂದು ಸುಮ್ಮನಾದೆ "

"ಪದ್ಮಿನಿಯ ಒಪ್ಪಿಗೆಯೂ ಸಿಕ್ಕಿತಲ್ಲ ಏಕವಚನ ಸಂಬೋಧನೆಗೆ "

"ಎಲ್ಲಿಗೆ ಹೋಗೋಣಾಂತ ಕಡೆಗೂ ಹೇಳಲಿಲ್ಲವಲ್ಲಾ" ಮೂರ್ತಿ ಎಂದರು

"ಹೀಗೇ ಹೋಗ್ತಾನೇ ಇರೋಣ" ಗೀತಾ ಹೇಳಿದಳು

"ಕಾರಿನಲ್ಲಿ ಪೆಟ್ರೋಲು ಜಾಸ್ತಿ ಇಲ್ಲ, ಅಮ್ಮಾವರೆ" ಎಂದರು ಮೂರ್ತಿ

"ಹಾಕಿಸಿಕೊಂಡರಾಯಿತು "

ಹುಡುಗಿಯರು ಗೀತಳನ್ನು ಶಹಜಾದಿ ಎಂದು ಕರೆಯುವುದರಲ್ಲಿ ತಪ್ಪೇನಿಲ್ಲ ಎನಿಸಿತು ಪದ್ಮಿನಿಗೆ

"ಬೇಡಮ್ಮ ತುಂಬಾ ದೂರ ಹೋಗುವುದು ಬೇಡ" ಪದ್ಮಿನಿ ಹೇಳಿದಳು

ಕಾರು ಲಲಿತಮಹಲಿನ ಬಳಿ ನಿಂತುಕೊಂಡಿತು

ಮೂರ್ತಿ ಕಾರಿನಿಂದ ಕೆಳಗಿಳಿಯಲಿಲ್ಲ

"ನೀನೂ ಬಾಣ್ಣ ಸ್ವಲ್ಪ ದೂರ ಹೋಗಿಬರೋಣ "

"ಇಲ್ಲ ಹೋಗಿಬನ್ನಿ "

ಹುಡುಗಿಯರಿಬ್ಬರೂ ನಗುತ್ತಾ ಮೆಟ್ಟಲುಗಳನ್ನು ಹಾರುತ್ತಾ ಕೆಳಗೆ ಇಳಿದು ಓಡಿಹೋದರು ಅವರು ಕಣ್ಣು ಮರೆಯಾಗುವವರೆಗೆ ಮೂರ್ತಿ ಅವರನ್ನೇ ನೋಡುತ್ತಿದ್ದರು

ಹದಿನೈದು ನಿಮಿಷಗಳನಂತರ ಅವರಿಬ್ಬರೂ ಪಂಥಕಟ್ಟಿ ಓಡಿಬರುತ್ತಿ

ರುವುದು ಕಾಣಿಸಿತು ಪದ್ಮಿನಿ ಗೀತಳಿಗಿಂತಲೂ ಮುಂದೆ ಓಡಿ ಬಂದು ಏದುಸಿರು ಬಿಡುತ್ತಾ ಕಾರನ್ನೊರಗಿ ನಿಂತುಕೊಂಡಳು ಅವಳ ಹಿಂದೆಯೇ ಓಡಿಬಂದ ಗೀತಾ ತಂದೆಯ ತೋಳನ್ನು ಮುಟ್ಟಿ "ನಾನೇ ಮೊದಲು" ಎಂದು ಚಪ್ಪಾಳೆ ತಟ್ಟಿದಳು

"ನಿನಗಿಂತ ಜೋರಾಗಿ ಓಡಿಬಂದವಳು ನಾನು" ಪದ್ಮಿನಿ ಪ್ರತಿಭಟಿಸಿದಳು

"ಇರಬಹುದು ಆದರೆ ನಾನೇನು ಹೇಳಿದ್ದೆ—ಜೋರಾಗಿ ಓಡಿ ಅಣ್ಣನನ್ನು ಮೊದಲು ಮುಟ್ಟಿದವರೇ ಗೆದ್ದಹಾಗೆ ಎಂದು ಹೇಳಿರಲಿಲ್ಲವೇ ? ನೀನು ಮೊದಲೇ ಓಡಿಬಂದರೂ ಸುಮ್ಮನೆ ಯಾಕೆ ನಿಂತುಕೊಂಡೆ ?"

ಕತ್ತಲೆಯಲ್ಲಿಯೂ ಪದ್ಮಿನಿಯ ಮುಖ ಕೆಂಪುಗೊಂಡುದನ್ನು ಮೂರ್ತಿ ಗಮನಿಸಿದರು

ಇಲ್ಲಿ ಬೆಳಕಿದ್ದಿದ್ದರೆ ? ತನ್ನ ಕಣ್ಣುಗಳಿಗೆ ಎಂತಹ ಹಬ್ಬ !

ಗೀತಳೊಡನೆ ಪಂಥಕಟ್ಟಿ ವೇಗವಾಗಿ ಓಡುವ ಉತ್ಸಾಹದಲ್ಲಿ ಪದ್ಮಿನಿ ಗೀತಳ ಷರತ್ತನ್ನು ಒಪ್ಪಿಕೊಂಡಿದ್ದಳು ಆದರೆ ತಾನು ಗೀತಳಿಗಿಂತಲೂ ವೇಗವಾಗಿ ಮುಂದೋಡಿ ಕಾರಿನ ಬಳಿಗೆ ಬಂದಂತೆ ಅವಳಿಗೆ ತಾನು ಎಂತಹ ನಿಯಮಕ್ಕೆ ಒಪ್ಪಿಕೊಂಡಿರುವೆನೆಂಬುದರ ಅರಿವಾಯಿತು ಕಾರು ಹತ್ತಿರವಾದಂತೆ ಪದ್ಮಿನಿ ಸಂಕೋಚಗೊಂಡು ಸುಮ್ಮನೆ ನಿಂತಳು

ತಾನು ಸೋತರೂ ಚಿಂತೆಯಿಲ್ಲ ಎಂದಿತು ಮನಸ್ಸು

ಪದ್ಮಿನಿ ಇನ್ನೂ ನಾಚಿಕೆಯಿಂದ ತಲೆತಗ್ಗಿಸಿರುವುದನ್ನು ನೋಡಿ ಮೂರ್ತಿಗೆ ತುಂಬಾ ನಗುಬಂತು

ಚೋಟುದ್ದದ ಹುಡಿಗೆಗ ಎಷ್ಟೊಂದು ನಾಚಿಕೆಯಪ್ಪ ! ತನಗೆ ಹೋಲಿಸಿ ನೋಡಿದರೆ ಪದ್ಮಿನಿ ಮಗು ಆದರೆ ಯೌವನ ದೇಹವನ್ನು ಅರಳಿಸಿದಂತೆ ಮನಸ್ಸು ಮುಟ್ಟಿದರೆ ಮುನಿಯಾಗುತ್ತಿತ್ತು

ಎದುರಿನಿಂದ ಬಂದ ಮತ್ತೊಂದು ಕಾರಿನ ಬೆಳಕು, ಕತ್ತಲೆಯಲ್ಲಿ ನಿಂತಿದ್ದ ಮೂವರ ಮೇಲೂ ಬೆಳಕಿನ ಮಳೆ ಕರೆಯಿತು ಆ ಬೆಳಕಿನಲ್ಲಿ ಗೀತಾ ತನ್ನ ತಂದೆಯ ಕಡೆ ನೋಡಿದಾಗ ಅವರು ನಾಚಿ ನಿಂತಿದ್ದ ಪದ್ಮಿನಿಯ ತಗ್ಗಿದ ಮುಖವನ್ನು ಮೈಮರೆತು ನೋಡುತ್ತಿದ್ದರು

ಮಾತ್ಸರ್ಯದ ಗುಳ್ಳೆಯೊಂದು ಗೀತಳ ಹೃದಯದಲ್ಲಿ ಸಿಡಿಯಿತು ಆ ಗಳಿಗೆಯಲ್ಲಿ ತಂದೆ ತನ್ನನ್ನು ಸಂಪೂರ್ಣ ಮರೆತಿರುವಂತೆ ಗೀತಳಿಗೆ ಭಾಸವಾಯಿತು ತಂದೆಯ ಆ ಒಂದು ನೋಟದಲ್ಲಿ ಒಲವೆಲ್ಲಾ ಪದ್ಮಿನಿಯ ಕಡೆ ಹರಿದುಹೋದಂತೆ ಅವಳಿಗೆ ತೋರಿತು

ಒಂದೇ ಒಂದು ಗಳಿಗೆ ಅಷ್ಟೆ

ಮತ್ಸರದ ಗುಳ್ಳೆ ಒಡೆದಮೇಲೆ ಅಲ್ಲಿ ಏನೇನೂ ಉಳಿದಿರಲಿಲ್ಲ ಹೃದಯದಲ್ಲಿ ಮೊದಲಿನಂತೆಯೇ ಭಾವನೆಗಳ ತಿಳಿನೀರು ಮಾತ್ರ ಉಳಿಯಿತು

ಗೀತಾ ತಾನಾಗಿಯೇ ಮೈಮರೆತಿದ್ದ ತಂದೆಯನ್ನು ಎಚ್ಚರಿಸಲಿಲ್ಲ ತನ್ನ ಪಕ್ಕದಲ್ಲಿಯೇ ಮತ್ತೊಂದು ಕಾರು ಸದ್ದು ಮಾಡುತ್ತಾ ಹೋದಮೇಲೆ ಪದ್ಮಿನಿ ಎಚ್ಚರಗೊಂಡು ಮೃದುವಾಗಿ,

"ಹೊರಡೋಣ" ಎಂದಳು

ಗೀತ ಪದ್ಮಿನಿಯ ಕೈಯನ್ನು ತನ್ನ ಹಿಡಿಯಲ್ಲಿ ತೆಗೆದುಕೊಂಡು ಮೃದುವಾಗಿ ಅದುಮಿ,

"ನನಗೆ ನಿನ್ನ ಕಂಡರೆ ತುಂಬಾ ಇಷ್ಟ" ಎಂದು ಪಿಸುಗುಟ್ಟಿದಳು—ತಂದೆಗೆ ಕೇಳಿಸದಂತೆ

ಮೂರ್ತಿಯಲ್ಲೊಂದು ಬಗೆಯ ಸೆಳೆತ ಗೀತಳಲ್ಲಿ ಮತ್ತೊಂದು ರೀತಿಯ ಆಕರ್ಷಣೆ, ಇವೆರಡರ ನಡುವೆ ಪದ್ಮಿನಿ ಬಹುಸುಖಿ—ತುಂಬಾ ಚಳಿಯಾದಾಗ ಬಿಸಿಬಿಸಿಯಾದ ನೀರಿನಲ್ಲಿ ಸ್ನಾನಮಾಡಿ ಬೆಚ್ಚಗೆ ಹೊದ್ದು ಮಲಗಿದಂತೆ

ಕಾರು ಹೊರಟು ಪದ್ಮಿನಿಯ ಮನೆ ಸೇರುವವರೆಗೆ ಮೂವರಲ್ಲಿ ಯಾರೂ ಮಾತನಾಡಲಿಲ್ಲ ಎಲ್ಲರೂ ಅವರವರ ಭಾವನೆಗಳಲ್ಲಿ ಮುಳುಗಿದ್ದರು ಮೂರ್ತಿ ಕನಸಿನಲ್ಲಿರುವಂತೆ ಕಾರು ನಡೆಸುತ್ತಿದ್ದರು ಕಾರಿನ ಚಕ್ರಗಳು 'ಪದ್ಮಿನಿ ಪದ್ಮಿನಿ' ಎಂದು ಹಾಡುತ್ತಾ ಉರುಳುತ್ತಿರುವಂತೆ ಅವರಿಗೆ ತೋರಿತು

ಮೂವರ ಹೃದಯದಲ್ಲೂ ಒಂದೇ ಮಿಡಿತ, ಒಂದೇ ರಾಗ, ಒಂದೇ ಗೀತೆ.

ಪದ್ಮಿನಿಯ ಮನೆಬಾಗಿಲಿನಲ್ಲಿ ಕಾರು ನಿಂತಿತು ಪದ್ಮಿನಿ ಕಾರಿನಿಂದಿಳಿದು ಗೀತಳ ಕಡೆ ತಿರುಗಿ "ಬರ್ತೀನಿ" ಎಂದು ಹೇಳಿ ಮೂರ್ತಿಯ ಕಡೆ ನೋಡಿದಳು ಪದ್ಮಿನಿ ಮೂರ್ತಿಗ ಏನೂ ಹೇಳಲಿಲ್ಲ ಏನಾದರೂ ಹೇಳುವುದು ಅವಳಿಗೆ ಸಾಧ್ಯವೂ ಇರಲಿಲ್ಲ

ಮಗಳು ಒಳಗೆ ಬಂದೊಡನೆ ಜಲಜಮ್ಮ ಕೇಳಿದರು,

"ಬಹಳ ಹೊತ್ತಾಯಿತು, ಅಲ್ಲವೇ ?"

ಪದ್ಮಿನಿ ಬದಲು ಹೇಳದ ಒಳಗೆ ಹೋದಳು ಜಲಜಮ್ಮ ಮಾತನಾಡುತ್ತಾ ಅವಳ ಹಿಂದೆ ಹೋದರು

"ನನಗೇನೋ ನಿನ್ನ ಅವರೊಡನೆ ಕಳುಹಿಸುವುದು ಇಷ್ಟವಿರಲಿಲ್ಲ ಆದರೆ ಮನೆಗೆ ಬಂದು ಕರೆದರೆ ಇಲ್ಲಾಂತ ಹೇಗೆ ಹೇಳುವುದು ? ಗೀತಳ ತಂದೆ ಎಷ್ಟು ಚಿಕ್ಕವರ ಹಾಗೆ ಕಾಣ್ತಾರೆ ! ಅವರಿಗೆ ಗೀತನಷ್ಟು ದೊಡ್ಡ ಮಗಳಿದ್ದಾಳೆಂದರೆ ನಂಬೋಕೆ ಆಗೋದಿಲ್ಲ ಇನ್ನೂ ಆತ ವರಪೂಜೆ ಹುಡುಗ ಇದ್ದ ಹಾಗೆ ಇದಾರೆ ಅಲ್ಲವೇ ?"

"ನೋ ಕಾಮೆಂಟ್ಸ್"

"ನಿನ್ನ ಮಾತಿನ ಅರ್ಥ ನಿನಗೇ ಗೊತ್ತಮ್ಮ"

"ನಂಗೆ ಹಸಿವಾಗ್ತಿದೆ"

"ಊಟಕ್ಕೇಳು ನಿಮ್ಮಪ್ಪಾನೂ ಆಗಿನಿಂದ ನಿನಗಾಗಿ ಕಾದು ಕೊಂಡಿದಾರೆ" ಪದ್ಮಿನಿ ತಂದೆಯನ್ನು ಕೂಗಿದಳು

* * *

ಗೀತಾ ಹುಷಾರಾಗಿ ಮತ್ತೆ ಕಾಲೇಜಿಗೆ ಬಂದಾಗ ಅವಳು, ಪದ್ಮಿನಿ ಗೆಳತಿಯರಾಗಿರುವುದನ್ನು ನೋಡಿ ಹುಡುಗಿಯರು ಆಶ್ಚರ್ಯಪಟ್ಟರು

"ಇಷ್ಟು ದಿವಸ ಇವರಿಗೆ ಇಲ್ಲದ ಗೆಳತನ ಈಗ ಎಲ್ಲಿಂದ ಬಂತೋ ?" ಎಂದು ಹಲವರು ಟೀಕೆ ಮಾಡಿದರು

"ಗೀತಳ ಐಶ್ವರ್ಯಕ್ಕೆ ಬಲಿಯಾಗಿದಾಳೆ" ಎಂದರು ಕೆಲವರು ಆದರೆ ಅವರಿಬ್ಬರ ಸ್ನೇಹದ ಆಳವನ್ನು ಅಳೆಯುವುದು ಯಾರಿಗೂ ಸಾಧ್ಯವಾಗಲಿಲ್ಲ.

ಗೀತಾ ಖಾಯಿಲ ಬೀಳುವುದಕ್ಕೆ ಮುನ್ನ ಅವಳಿಂದ ದೂರವಿದ್ದ ಪದ್ಮಿನಿ ಈಗ ಇದ್ದಕ್ಕಿದ್ದಂತೆಯೇ ಅವಳ ಆತ್ಮೀಯ ಗೆಳತಿಯಾಗಿರುವುದು

ವಿದ್ಯಾರ್ಥಿನಿಯರಿಗೆ ಅಚ್ಚರಿಯನ್ನುಂಟುಮಾಡಿತ್ತು

ಕೆಲವು ದಿನ ಸಂಜೆಯ ಹೊತ್ತು ಬೇಸರವಾದಾಗ ಪದ್ಮಿನಿ ಗೀತಳ ಮನೆಗೆ ಹೋಗುತ್ತಿದ್ದಳು ಎಲ್ಲೋ ಒಂದೊಂದು ದಿನ ಮಾತ್ರ ಮೂರ್ತಿ ಮನೆಯಲ್ಲಿ ಇರುತ್ತಿರಲಿಲ್ಲ ಅವರು ಮನೆಯಲ್ಲಿಲ್ಲದ ದಿನ ಪದ್ಮಿನಿ ಕೇಳು ತ್ತಿದ್ದಳು

"ಎಲ್ಲಿ, ನಿಮ್ಮ ತಂದೆ ಕಾಣೋದೆ ಇಲ್ಲ ?"

ಗೀತ ಅವಳ ಮುಖವನ್ನು ಪರೀಕ್ಷಿಸುವಂತೆ ನೋಡುತ್ತಾ,

"ಕ್ಲಬ್ಬಿಗೆ ಹೋಗಿದಾರೆ" ಎನ್ನುತ್ತಿದ್ದಳು

ಆದರೆ ಮೂರ್ತಿ ಕ್ಲಬ್ಬಿಗೆ ಹೋಗದೇ ಮನೆಯಲ್ಲಿ ಉಳಿಯುತ್ತಿದ್ದುದೇ ಹೆಚ್ಚು ದಿನಗಳು ಒಂದು ಪಕ್ಷ ಅವರು ಕ್ಲಬ್ಬಿಗೆ ಹೋದರೂ ಸಂಜೆ ಆರುಗಂಟೆಯಾಗಿಯೂ ಪದ್ಮಿನಿ ಮನೆಗ ಇನ್ನೂ ಬಾರದಿದ್ದಾಗ, ಅವಳು ಬರಲಾರಳು ಎಂಬ ತಪ್ಪು ತಿಳುವಳಿಕೆಯೋ ಅದಕ್ಕೆ ಕಾರಣವಾಗಿತ್ತು

ಪದ್ಮಿನಿ,ಗೀತ ಚದುರಂಗದಾಟವನ್ನು ಆಡಿ ಸಂಜೆಯನ್ನು ಕಳೆಯುತ್ತಿದ್ದರು ಆಗ ಮೂರ್ತಿ ಪ್ರೇಕ್ಷಕರಾಗಿರುತ್ತಿದ್ದರು

ಕ್ರಮೇಣ ಮೂರ್ತಿ–ಪದ್ಮಿನಿ ಸಲಿಗೆಯಿಂದ ಮಾತುಕತೆಯಾಡುತ್ತಿದ್ದರೂ ಏನೋ ಒಂದು ಬಗೆಯ ನಾಚಿಕೆ ಪದ್ಮಿನಿಯ ನಾಲಗೆಯನ್ನು ಹಿಂದಕ್ಕೆಳೆಯುತ್ತಿತ್ತು ಗೀತಳ ಎದುರಿನಲ್ಲಿ ಅವರಿಬ್ಬರೂ ನಿರ್ಭಯವಾಗಿ, ನಿಸ್ಸಂಕೋಚದಿಂದ ಮಾತನಾಡುತ್ತಿದ್ದರು ಅಕಸ್ಮಾತ್ ಗೀತ ಯಾವುದಕ್ಕಾದರೂ ಎದ್ದು ಒಳಗೆ ಹೋದರೆ ಪದ್ಮಿನಿಯ ಪಾಡು ಯಾರಿಗೂ ಬೇಡ ಮೌನ ಅಸಹನೀಯವಾಗುವವರೆಗೆ ಮೂರ್ತಿ ಸುಮ್ಮನೆ ಕುಳಿತಿದ್ದು ಅನಂತರ ಏನಾದರೊಂದು ಮಾತನಾಡಿಸುತ್ತಿದ್ದರು ಆಗ ಪದ್ಮಿನಿ–ಮಾತಿನಲ್ಲಿ ಪದ್ಮಿನಿ ಕೇವಲ ಮೌನಗೌರಿ ಅವರು ಒಂದೆರಡು ಬಾರಿ ಹೆಚ್ಚು ಒತ್ತಾಯ ಮಾಡಿ ಏನಾದರೂ ಕೇಳಿದಾಗ ಪದ್ಮಿನಿ ಬರಿ ತಲೆ ಅಲುಗಿಸುತ್ತಿದ್ದಳು ಈ ಲಜ್ಜೆಯ ಪ್ರತಿಮೆಯನ್ನು ಮಾತಿಗೆಳೆಯಲಾರದೆ ಮೂರ್ತಿಯೂ ಸುಮ್ಮನಾಗಿಬಿಡುತ್ತಿದ್ದರು ಆದರೆ ಕಣ್ಣುಗಳಲ್ಲಿ ಹಬ್ಬ ಮಾಡಿಕೊಳ್ಳಲು ಏನೂ ಅಡ್ಡಿ ಇರಲಿಲ್ಲ ಜೊತೆಗೆ ಅವಳ ಹೃದಯ ವೀಣೆಯ ಮೌನ ಮಿಡಿತವನ್ನು ಆಲಿಸುತ್ತಾ ಮೂರ್ತಿ ತನ್ಮಯರಾಗಿರುತ್ತಿದ್ದರು

ಒಂದು ಸಲ ಗೀತ ಪದ್ಮಿನಿಯೊಡನೆ ಚದುರಂಗದಾಟವಾಡುತ್ತಿದ್ದಾಗ ತಾತ ಬಂದು ಗೀತಳನ್ನು ಕೂಗಿದರು

ಅಲ್ಲಿಯೇ ಕುರ್ಚಿಯ ಮೇಲೆ ಬೊಗಸೆಯಲ್ಲಿ ಗಲ್ಲವನ್ನೂರಿ ಕುಳಿತಿದ್ದ ತಂದೆಯ ಕಡೆ ನೋಡಿ ಗೀತಾ,

"ಈಗ ಪದ್ಮಿನಿ ಕಾಯಿ ನಡೆಸಬೇಕು ನಾನು ಬರುವವರೆಗೆ ನೀನು ಆಡ್ತಿರಣ್ಣ" ಎಂದು ಹೇಳಿ ಒಳಗೆ ಹೋದಳು

ಮೂರ್ತಿ ಬಂದು ಪದ್ಮಿನಿಯ ಎದುರಿಗೆ ಕುಳಿತರು

ಗೀತಾ ಯಾಕಾದರೂ ಒಳಗೆ ಹೋದಳೋ ಎಂದು ಚಡಪಡಿಸಿದಳು ಪದ್ಮಿನಿ

"ಶುರು ಮಾಡಬಹುದಲ್ಲಾ "

ಅವಳ ಚಡಪಡಿಕೆ ಮೂರ್ತಿಯ ಪಾಲಿಗೆ ತುಂಬಾ ಮೋಹಕವಾಗಿತ್ತು ಹಾಳು ಕಾಟ ಕಳೆದುಹೋಗಲಿ ಎನ್ನುವಂತೆ ಪದ್ಮಿನಿ ಕುದುರೆಯನ್ನು ಹಾರಿಸಿ ಮುಂದಿಟ್ಟಳು ಮೂರ್ತಿಯ ಸಿಪಾಯಿ ಕುದುರೆಯನ್ನು ನುಂಗಿಹಾಕಿತು

"ಚೆಕ್ "

ರಾಜನನ್ನು ಉಳಿಸಲು ಪದ್ಮಿನಿ ಆನೆಯನ್ನು ಮುಂದೆ ತಂದಳು ಮೂರ್ತಿಯ ರಾಣಿ ಆನೆಯನ್ನು ಕಬಳಿಸಿತು

"ಚೆಕ್ "

ಪದ್ಮಿನಿ ರಾಜನನ್ನು ಕಾಪಾಡಲು ರಾಣಿ, ಒಂಟೆಯನ್ನು ಬಲಿಗೊಟ್ಟಳು

ಮೂರ್ತಿ ಎರಡು ನಿಮಿಷಗಳಲ್ಲಿ ಪದ್ಮಿನಿಯ 'ರಾಜ'ನನ್ನು ಕಟ್ಟಿಹಾಕಿದರು ಮೂರ್ತಿ ನಗುತ್ತಾ,

"ಈಗ ದಮ್ಮಯ್ಯ ಎಂದರೆ ನಿನ್ನ ರಾಜನ್ನ ಬಿಡ್ತೀನಿ" ಎಂದರು

"ಏನೂ ಬೇಕಾಗಿಲ್ಲ "

"ಹಾಗಾದರೆ ಸಾಯಿಸಿಬಿಡಲೋ ? ದಮ್ಮಯ್ಯಾಂದರೆ ನಿನ್ನ ರಾಜನಿಗೆ ಇನ್ನೂ ಸ್ವಲ್ಪ ಹೊತ್ತು ಬದುಕೋಕೆ ಅವಕಾಶ ಕೊಡ್ತೀನಿ "

"ನಾನು ಅನ್ನೋದಿಲ್ಲ ನೀವು ರಾಜನ್ನ ಕೊಂದುಬಿಡಿ."

"ಆಮೇಲೆ ನೀನು ಅಳಬಾರದು—ಸೋತುಬಿಟ್ಟೇಂತ "

"ನಾನೇನು ಅಳೋದಿಲ್ಲ "

"ನೋಡು, ಆಗಲೇ ಕಣ್ಣಿನಲ್ಲಿ ನೀರಾಡ್ತಾ ಇದೆ "

"ಏನಿಲ್ಲ "

"ಕಣ್ಣಿನಲ್ಲಿ ನೀರಿಲ್ಲದಿದ್ದರೆ ಕಣ್ಣುಗಳು ಅಷ್ಟೊಂದು ಹೊಳೆಯುವು ದಕ್ಕೆ ಸಾಧ್ಯವೇ ?"

"ಗೀತ ಯಾಕೋ ಬರಲಿಲ್ಲ "

"ಮಾತು ಮರೆಸುವ ಉಪಾಯ ಇದು "

ಪದ್ಮಿನಿ ಚದುರಂಗದ ಕಾಯಿಗಳನ್ನು ಮೂರ್ತಿಯ ಕಡೆ ತಳ್ಳಿ ತಟ್ಟನೆ ಹೊರಗೆ ಹೋದಳು

ಮೂರ್ತಿ ನಗುತ್ತಾ ಕಾಯಿಗಳನ್ನು ಪೆಟ್ಟಿಗೆಯೊಳಗೆ ಹಾಕಿದರು ಆಮೇಲೆ ಒಟ್ಟಿಗೆ ಬಂದರು—ಪದ್ಮಿನಿ, ಗೀತಾ

"ಇನ್ನೊಂದಾಟ ಆಡೋಣ" ಗೀತಾ ಕರೆದಳು

"ನಾನು ಬರೋದಿಲ್ಲ ನೀವಿಬ್ಬರೂ ಆಡಿ ನಾನು ನೋಡ್ತೀನಿ "

ಗೀತಾ, ಮೂರ್ತಿ ಕಾಯಿಗಳನ್ನು ಹೂಡಿದರು ಗೀತಳ ಪಕ್ಕದಲ್ಲಿದ್ದ ಕುರ್ಚಿಯನ್ನು ಎಳೆದುಕೊಂಡು ಪದ್ಮಿನಿ ಮೂರ್ತಿಯ ಹಿಂದೆ ಹಾಕಿಕೊಂಡು ಗೀತಳಿಗೆ ಎದುರಾಗಿ ಕುಳಿತುಕೊಂಡಳು

ಮೂರ್ತಿ ಪದ್ಮಿನಿಯನ್ನು 'ಘಾಟಿ' ಎಂದು ಮನಸ್ಸಿನಲ್ಲಿಯೇ ಬೈದು ಕೊಂಡರು

ಒಂದೊಂದು ಸಲ ಗೀತಳೆ ಪದ್ಮಿನಿಯ ಮನೆಗೆ ಹೋಗುತ್ತಿದ್ದಳು. ಆದರೆ ಮೂರ್ತಿ ಎಂದೂ ಮಗಳೊಡನೆ ಪದ್ಮಿನಿಯ ಮನೆಗೆಹೋಗುತ್ತಿರಲಿಲ್ಲ

ಪದ್ಮಿನಿಯನ್ನು ನೋಡಿದಾಗಿನಿಂದ ಮೂರ್ತಿ, ಯಮುನೆಯ ಸಂಬಂಧಕ್ಕೆ ಪೂರ್ಣವಿರಾಮ ದೊರಕಿತ್ತು ಕ್ಲಬ್ಬಿನಲ್ಲಿಯೂ ಯಮುನೆಗೆ ಮೂರ್ತಿಯ ದರ್ಶನವಾಗುತ್ತಿರಲಿಲ್ಲ ಮೊದಮೊದಲು ಆಕೆ ಕೊಂಚ ನಿರ್ಲಕ್ಷ್ಯದಿಂದಿದ್ದರೂ ಕ್ರಮೇಣ ಮೂರ್ತಿಯ ಸಾನ್ನಿಧ್ಯಕ್ಕಾಗಿ ಅವಳ ಹೃದಯ ಹಾತೊರೆಯಿತು ಅವಳ ಬಗೆಗೆ ಮೂರ್ತಿಯ ಧೋರಣೆ, ಬಿಗು ಹೆಚ್ಚಿದಷ್ಟೂ ಅವಳು ಅವರಿಗಾಗಿ ಹಂಬಲಿಸುತ್ತಿದ್ದಳು ಅವರ ಮನಸ್ಸಿನ ಗುಹೆಯಲ್ಲಡಗಿದ್ದ ಹೃದಯ ಸಂಪತ್ತಿನ ಕಡೆಗೆ ಯಮುನಾ ಒಂದು ಇಣುಕು ನೋಟವನ್ನೂ ಬೀರಿರಲಿಲ್ಲ ಆದರೆ ಆತನ ದೇಹ ಸಂಪತ್ತಿಗಾಗಿ ಅವಳು ಅವರೆದುರಿಗೆ ದೈನ್ಯಳಾಗುತ್ತಿದ್ದಳು

ಒಂದು ದಿನ ಸಂಜೆ ಆರು ಗಂಟೆಯ ಮೇಲೆ ಮೂರ್ತಿ ಕ್ಲಬ್ಬಿಗೆ ಹೊರಟರು ಅವರ ನಾಲ್ಕು ಜನ ಗೆಳೆಯರು ಆದೇ ತಾನೆ 'ಡಬ್ಬಲ್ಸ್' ಆಡಿ ಮುಗಿಸಿದ್ದರು ಮೂರ್ತಿ ಬಂದೊಡನೆ ಎಲ್ಲಿಯೋ ಇದ್ದ ಯಮುನಾ ಆತುರವಾಗಿ ಅವರ ಬಳಿಗೆ ಬಂದಳು

"ನಾವಿಬ್ಬರೂ 'ಸಿಂಗಲ್ಸ್' ಆಡೋಣವೇ?" ಯಮುನಾ ಬಳುಕಲು ಪ್ರಯತ್ನಿಸಿದಳು ದಪ್ಪ ಕುಂಬಳಕಾಯಿಯೊಂದು ಬಳುಕಲು ಪ್ರಯತ್ನಿಸಿದಂತಿತ್ತು, ಅವಳ ಬಳುಕುವ ಯತ್ನ

ಮೂರ್ತಿ ರ್‍ಯಾಕೆಟ್ಟನ್ನು ಕೈಲಿ ಹಿಡಿದು ಕೋರ್ಟಿಗಿಳಿದರು ಮೂರು ಸೆಟ್ಟುಗಳನ್ನು ಆಡಿದ ನಂತರ ಮೂರ್ತಿ ಆಟ ನಿಲ್ಲಿಸಿದರು

ಕ್ಲಬ್ಬಿನೊಳಗೆ ಯಮುನಾ ಟೀ ತರಲು ಹೇಳಿ ಮೂರ್ತಿಯೊಡನೆ ಮಾತಿಗೆ ಪ್ರಾರಂಭ ಮಾಡಿದಳು

"ನಿಮ್ಮ ದರ್ಶನ ಬಹಳ ಅಪರೂಪವಾಯಿತು "

"ಹೌದೇನು ?"

"ಮನೆ ಕಡೆ ಬಂದು ಯಾವುದೋ ಜನ್ಮವಾಯಿತು "

ಮೂರ್ತಿ, ಕರುಣೆ ತಿರಸ್ಕಾರದಿಂದ ನಕ್ಕರು ಅವರ ನಗು ನೋಡಿ ಯಮುನೆಯ ಮೈ ಉರಿದುಹೋಯಿತು

"ನಾಳೆ ಬರ್‍ತೀರಾ ?" ಯಮುನಾ ವೈಯಾರದಿಂದ ಕೇಳಿದಳು ಇವತ್ತು ಪದ್ಮಿನಿ ಬರಲಿಲ್ಲ, ನಾಳೆ ಬಂದರೂ ಬರಬಹುದಲ್ಲವೆ ?

"ನಾಳೆ ನಾನು ಬರೋಕಾಗೋದಿಲ್ಲ "

"ಕ್ಲಬ್ಬಿಗೂ ಬರೋದಿಲ್ಲವೇ ?"

"ಊಹೂಂ "

ಟೀ ಬಂದ ಮೇಲೆ ಇಬ್ಬರೂ ಮಾತಿಲ್ಲದೆ ಕುಡಿಯುತ್ತಾ ಕುಳಿತರು ಯಮುನಾ ಧ್ವನಿ ತಗ್ಗಿಸಿ "ನನ್ನ ಮೇಲೆ ನಿಮಗೆ ಕೋಪವೇ ?" ಎಂದಳು

"ಇಲ್ಲ "

"ಹಾಗಾದರೆ ನಾನೇಕೆ ನಿಮಗೆ ಬೇಡವಾಗಿದೀನಿ ?"

ಮೂರ್ತಿಯಿಂದ ಪೊಟಕು ನಗೆಯೇ ಅವಳಿಗೆ ಬಂದ ಉತ್ತರ

"ಅಂದ ಹಾಗೆ ಇವತ್ತು ನಾನು ಕಾರಿನಲ್ಲಿ ಕ್ಲಬ್ಬಿಗೆ ಬರಲಿಲ್ಲ ನನ

ಕಾರು ಕೆಟ್ಟು ಹೋಗಿತ್ತು ನೀವು ಮನೆಗೆ ಹೋಗುವಾಗ ನನ್ನ ಮನೆಯಲ್ಲಿ ಳಿಸಿ ಹೋಗ್ತೀರಾ ?"

"ಆಗಲಿ"

ಯಮುನಾ ಬಹಳ ಬೇಗ ಮನೆಗೆ ಹೊರಟುಬಿಟ್ಟಳು ಮೂರ್ತಿಯೊಡನೆ ಯಮುನಾ ಮುಂಭಾಗದಲ್ಲೇ ಕುಳಿತಳು ಕಾರು ಹೊರಟಿತು

ತಂಗಾಳಿ ಹಿತವಾಗಿ ಬೀಸುತ್ತಿತ್ತು ಯಮುನೆಯ ಕೃತಕ ಮುಂಗುರುಳು ಗಾಳಿಗೆ ಹಾರಾಡುತ್ತಿದ್ದುವು ಅವಳಿಂದ ಬಂದ ಗಾಳಿ ಹೂವು,ಸೆಂಟು, ಪೌಡರಿನ ವಾಸನೆಯನ್ನು ಮೂರ್ತಿಯ ಬಳಿಗೆ ಹೊತ್ತು ತರುತ್ತಿತ್ತು

ಯಮುನಾ ಮೂರ್ತಿಯ ಬಳಿಗೆ ಸರಿದು ಸ್ಟೀರಿಂಗಿನ ಮೇಲಿದ್ದ ಅವರ ದೊಡ್ಡ ಕೈಗಳ ಮೇಲೆ ತನ್ನ ದುಂಡುಹಸ್ತವನ್ನಿರಿಸಿ,

"ಮೂರ್ತಿ, ಯಾಕೆ ನನ್ನ ಹೀಗೆ ಕಾಡಿಸುತ್ತೀರಿ ?" ಎಂದಳು

'ನಾನೊಬ್ಬ ಹುಡುಗಿಯನ್ನು ಪ್ರೀತಿಸುತ್ತೇನೆ, ಯಮುನಾ' ಎಂದು ಹೇಳುವ ಆಸೆಯಾಯಿತು ಮೂರ್ತಿಗೆ ಆದರೆ ಯಮುನಾ ಈ ಬಗೆಯ ನಿವೇದನೆಗೆ ತಕ್ಕ ಹೆಣ್ಣಲ್ಲವೆಂಬುದು ಅವರಿಗೆ ತಿಳಿದಿತ್ತು ಒಂದು ಪಕ್ಷ ತಾನು ಹಾಗೆ ಹೇಳಿದರೆ ಅವಳೇನು ಮಾಡಬಹುದು ?

ತನ್ನ ಮೇಲೆ ರೇಗಾಡಬಹುದು ನಡುರಸ್ತೆಯಲ್ಲಿಯೇ ಕಾರನ್ನು ನಿಲ್ಲಿಸಿ ಇಳಿದು ಹೋಗಬಹುದು

ತಮ್ಮ ಪ್ರೀತಿಯನ್ನು ಯಮುನೆಗೆ ಹೇಳಲು ಅದು ಬಹಳ ಅಮೂಲ್ಯವಾದುದೆನಿಸಿ ಮೂರ್ತಿ ಸುಮ್ಮನಾದರು

ಬೀದಿಯ ದೀಪದ ಬೆಳಕಿನಲ್ಲಿ ಮೂರ್ತಿ ಕಿರುನಗೆ ಬೀರಿದುದು ಯಮುನಳಿಗೆ ಕಾಣಿಸಿತು ಅವರೇನು ಕನಸು ಕಾಣುತ್ತಿದ್ದಾರೋ ?

ಅದು ತನ್ನ ಉತ್ತೇಜನವೆಂದು ಭಾವಿಸಿ ಯಮುನಾ ಅವರ ಬಳಿಗೆ ಮತ್ತಷ್ಟು ಸರಿದಳು

"ನನಗೆ ಕಾರು ಬಿಡೋಕೆ ಕಷ್ಟವಾಗುತ್ತಿದೆ, ಮಿಸೆಸ್ ದೀಕ್ಷಿತ್ "

ಮಿಸೆಸ್ ದೀಕ್ಷಿತ್! ತಾನು ಯಮುನೆಯಲ್ಲ—ಆತನಿಗೆ ಈಗ ಕೇವಲ ಮಿಸೆಸ್ ದೀಕ್ಷಿತ್ ! ತಾನು ಹತ್ತಿರ ಸರಿದಿದ್ದರಿಂದ ಆತನಿಗೆ ಕಾರು ಬಿಡಲು ಕಷ್ಟವಂತೆ !

ಯಮುನಾ ದೂರ ಸರಿದಳು ಮೂರ್ತಿ ನಿರಾತಂಕವಾಗಿ ಉಸಿರಾಡಿದರು ಮನೆಯ ಬಳಿ ಕಾರು ನಿಲ್ಲುವವರೆಗೆ ಯಾರೂ ಮಾತನಾಡಲಿಲ್ಲ

"ಒಳಗೆ ಬರ್ತೀರಾ ?" ಯಮುನಾ ದೀನಳಾಗಿ ಕೇಳಿದಳು

"ಆಗಲೇ ಎಂಟು ಗಂಟೆಯ ಸಮಯವಾಯಿತು " ಎನ್ನುತ್ತಾ ಮೂರ್ತಿ ಅವಳು ಸೀಟಿನ ಮೇಲೆ ಕುಳಿತಿದ್ದಂತೆಯೇ ಬಾಗಿ ಕಾರಿನ ಬಾಗಿಲನ್ನು ತೆಗೆದರು

"ನಿಮ್ಮ ಕೈಲಿ ನಾನು ಬಹಳ ಮಾತನಾಡುವುದಿದೆ "

"ಇನ್ನೊಂದು ದಿನ ಬರ್ತೀನಿ "

"ಏನಾದರೂ ಡ್ರಿಂಕ್ಸ್ ತಗೊಂಡು ಹೋಗುವಿರಂತೆ " ಆತನನ್ನು ಒಮ್ಮೆ ಒಳಗೆ ಬರಮಾಡಿದರೆ ಅನಂತರ ತಾನು ಹೇಗಾದರೂ ಮಾಡಿ ಅವರನ್ನು ತನ್ನ ಬಲೆಗೆ ಕೆಡವಿಕೊಳ್ಳಬಹುದು ಎಂದು ಅವಳ ಎಣಿಕೆ

"ಊಟದ ಸಮಯದಲ್ಲಿ ಎಂತಹ ಡ್ರಿಂಕ್ಸ್ ?"

"ಊಟ ಮಾಡಿಕೊಂಡೇ ಹೋಗುವಿರಂತೆ,ಬನ್ನಿ "

"ಗೀತಾ ನನಗೋಸ್ಕರ ಕಾಯುತ್ತಿರುತ್ತಾಳೆ"

"ಪ್ಲೀಸ್ " ಎಂದು ಯಮುನಾ ರಾಗ ಎಳೆದಳು

"ಇವತ್ತು ದಯವಿಟ್ಟು ಕ್ಷಮಿಸಿ "

ಮೂರ್ತಿ ಒಳಗೆ ಬರುವುದಿಲ್ಲವೆಂಬುದು ಯಮುನೆಗೆ ಖಂಡಿತವಾಯಿತು ಅವಳು ಕೋಪದಿಂದ ಕುದಿಯುತ್ತಾ ತನ್ನ ದಪ್ಪ ದೇಹವನ್ನು ಕಿರಿದಾದ ಬಾಗಿಲಿನಲ್ಲಿ ಹೇಗೋ ತೂರಿಸಿ ಕೆಳಗಿಳಿದಳು ಅವಳ ಕೋಪ ಬಾಗಿಲಿನ ಮೇಲೆ ಹರಿಯಿತು ಯಮುನಾ ರಪ್ಪೆಂದು ಕಾರಿನ ಬಾಗಿಲನ್ನು ಮುಚ್ಚಿದಳು

ಅವಳ ಜಾರ್ಜೆಟ್ ಸೀರೆಯ ಸೆರಗು ಬಾಗಿಲಿನಲ್ಲಿ ಕಚ್ಚಿಕೊಂಡಿತು ಯಮುನಾ ಕೋಪದಿಂದ ಸೆರಗನ್ನು ಎಳೆದಳು ಸೆರಗು ಹರಿದುಕೊಂಡು ಬಂತು

"ಬಾಗಿಲು ತೆಗೆದು ಸೆರಗು ಬಿಡಿಸಿಕೊಳ್ಳುವಷ್ಟು ತಾಳ್ಮೆ ಇಲ್ಲವೇ ?" ಮೂರ್ತಿ ಕೇಳಿದರು.

"ಮೈಂಡ್ ಯುವರ್ ಓನ್ ಬಿಸಿನೆಸ್" ಎಂದು ಯಮುನಾ

ಗುಡುಗಿ ಮೂರಂಗುಲದ ಹೀಲಿನ ಮೇಲೆ ತನ್ನ ಭಾರವನ್ನು ಹೊತ್ತು ಮನೆಯೊಳಗೆ ಹೋದಳು

ಮೂರ್ತಿ ಬಂದಾಗ ಅವರ ಎಣಿಕೆಯಂತೆ ಗೀತಾ ಊಟ ಮಾಡದೆ ತಂದೆಗಾಗಿ ಕಾಯುತ್ತಿದ್ದಳು

"ಇವತ್ತು ಎಲ್ಲಿಗೂ ಹೋಗಲಿಲ್ಲವೇ, ಗೀತಾ ?"

'ಎಲ್ಲೂ' ಎಂದರೆ ಪದ್ಮಿನಿಯ ಮನೆಗೆ ಎಂದರ್ಥ

"ಇಲ್ಲ."

"ಮನೆಗೆ ಯಾರೂ ಬಂದಿರಲಿಲ್ಲವೆ ?"

'ಯಾರು' ಎಂದರೆ ಪದ್ಮಿನಿ ಎಂಬುದು ಅವಳಿಗೆ ತಿಳಿದಿತ್ತು ಗೀತಾ ನಗು ಅಡಗಿಸಿ "ಇಲ್ಲ" ಎಂದಳು

"ಸಂಜೆಯೆಲ್ಲಾ ಮನೇಲಿ ಒಬ್ಬಳೇ ಏನು ಮಾಡ್ತಿದ್ದೆ ?"

"ಇನ್ನೊಂದು ತಿಂಗಳಿಗೆ ನಮ್ಮ ಮೊದಲನೆ ಟರ್ಮಿನ ಪರೀಕ್ಷೆ ಶುರುವಾಗುತ್ತೆ ಅದಕ್ಕೋಸ್ಕರ ಓದುತ್ತಿದ್ದೆ "

"ಸರಿ "

"ನಾಳೆಯಿಂದ ಪದ್ಮಿನಿ ಸಂಜೆ ಇಲ್ಲಿಗೇ ಬರ್‍ತಾಳೆ ನಾವಿಬ್ಬರೂ ಜಾಯಿಂಟ್ ಸ್ಟಡಿ ಮಾಡೋಣಾಂತ ಮಾಡಿಕೊಂಡಿದೀವಿ ನಾನು ಖಾಯಿಲೆ ಮಲಗಿದ್ದಾಗ ಹದಿನೈದು ದಿನಗಳ ಪಾಠ ತಪ್ಪಿ ಹೋಯಿತು ಆದುದರಿಂದ "

"ಒಳ್ಳೆಯದು" ಎಂದರು ಮೂರ್ತಿ

ಪರೀಕ್ಷೆ ಮುಗಿಯುವವರೆಗೆ ಇನ್ನುಮೇಲೆ ಸಂಜೆಯ ಹೊತ್ತು ಪದ್ಮಿನಿ ತಮ್ಮ ಮನೆಯಲ್ಲಿ! ಅವಳೊಡನೆ ತಾವು ಮಾತನಾಡಲಿ, ಮಾತನಾಡದಿರಲಿ —ತಾವಿಬ್ಬರೂ ಒಂದೇ ಮನೆಯೊಳಗೆ ಇರುವೆವಲ್ಲಾ—ಅಷ್ಟೇ ಸಾಕು ನಾನು ಹೆಚ್ಚಿಗೆ ಬಯಸುವುದಿಲ್ಲ ಎಂದುಕೊಂಡರು ಮೂರ್ತಿ

ಅವ್ಯಾಹತವಾಗಿ ಗೀತ, ಪದ್ಮಿನಿಯ ಜಾಯಿಂಟ್ ಸ್ಟಡಿ ನಡೆಯಿತು ಹುಡುಗಿಯರಿಬ್ಬರೂ ಗೀತಳ ಕೊಠಡಿಯಲ್ಲಿ ಸೇರುತ್ತಿದ್ದರು ಹುಡುಗಿಯರ ವ್ಯಾಸಂಗದ ನಡುವೆ ಪ್ರವೇಶಮಾಡಿ ಅವರ ಅಭ್ಯಾಸವನ್ನು ಮೂರ್ತಿ ಕೆಡಿಸದೆ ತಮ್ಮ ಪಾಡಿಗೆ ತಾವಿರುತ್ತಿದ್ದರು ಗಂಟೆಗಟ್ಟಲೆ ಪದ್ಮಿನಿ ಅವರ

ಮನೆಯಲ್ಲಿ ಕಾಲ ಕಳೆಯುತ್ತಿದ್ದರೂ ಮೂರ್ತಿಗೆ ಅವಳ ದರ್ಶನಲಾಭ ಸಿಕ್ಕುತ್ತಿರಲಿಲ್ಲ

ಎರಡೇ ಎರಡು ನಿಮಿಷಗಳು ಮಾತ್ರ ಅವಳು ಅವರಿಗೆ ಕಾಣಸಿಗುತ್ತಿದ್ದಳು

ಒಳಗೆ ಪ್ರವೇಶ ಮಾಡುವಾಗೊಮ್ಮೆ-ಮನೆಯಿಂದ ಹೊರಗೆ ಹೋಗುವಾಗೊಂದು ಸಲ

ಒಂದೊಂದು ದಿನ ಮೂರ್ತಿ ಕೋರ್ಟಿನಿಂದ ಮನೆಗೆ ಬರುವುದು ತಡವಾದಾಗ ಪದ್ಮಿನಿ ಆಗಲೇ ಬಂದುಬಿಟ್ಟಿರುತ್ತಿದ್ದಳು ಅಂತಹ ದಿನಗಳಲ್ಲಿ ಅವಳು ಹೊರಗೆ ಹೊರಟಾಗ ಮಾತ್ರ ಮೂರ್ತಿ ಅವಳನ್ನು ನೋಡುತ್ತಿದ್ದರು ಅವರು ಕೋರ್ಟಿನಿಂದ ಮನೆಗೆ ಬೇಗ ಬಂದ ದಿನ—

ಮೂರ್ತಿ ಪೋರ್ಟಿಕೋನಲ್ಲಿ ಕುರ್ಚಿ ಹಾಕಿಕೊಂಡು ಕುಳಿತುಕೊಳ್ಳುತ್ತಿದ್ದರು ಕಾಂಪೌಂಡಿನ ಬಾಗಿಲನ್ನು ತೆಗೆದು ಒಳಗೆ ತಲೆಯೆತ್ತಿ ದಿಟ್ಟತನದಿಂದ ಬರುತ್ತಿದ್ದ ಪದ್ಮಿನಿ ಮೂರ್ತಿಯ ಹತ್ತಿರ ಹತ್ತಿರ ಬಂದಂತೆ ತಲೆತಗ್ಗಿಸಿ ಪ್ರಯತ್ನಪೂರ್ವಕವಾಗಿ ಎಲ್ಲಿಂಗೋ ನೋಡುತ್ತಾ ಒಳಗೆ ಹೋಗುತ್ತಿದ್ದಳು. ಮತ್ತೆ ಅವಳು ಹೊರಗೆ ಬರುವುದನ್ನೇ ಅವರ ಮನಸ್ಸು ತವಕದಿಂದ ಕಾಯುತ್ತಿತ್ತು

'ಥೂ ನಾನೇಕೆ ಹೀಗಾದೆ? ನನಗಾಗಲೇ ನಲವತ್ತೆರಡು ವರ್ಷ. ಇನ್ನೂ ಇಪ್ಪತ್ತು ವರ್ಷದ ಹುಡುಗನ ಹಾಗೆ ಆಡ್ತಿದೀನಲ್ಲಾ ಎಂದು ಮೂರ್ತಿ ಎಷ್ಟೋ ವೇಳೆ ತಮಗೆ ತಾವೇ ಛೀಮಾರಿ ಹಾಕಿಕೊಳ್ಳುತ್ತಿದ್ದರು ಯಾವ ಹೆಣ್ಣೂ ಹೀಗೆ ತನ್ನನ್ನು ಆಟವಾಡಿಸಿರಲಿಲ್ಲ. ಎಂಥೆಂಥ ಹುಡುಗಿಯರಿಗೂ ಮನಸೋಲದ ತಾನು ಪದ್ಮಿನಿಗೆ ಮರುಳಾಗಬೇಕೆ? ಅವಳು ಜನ್ಮತಾಳುವುದಕ್ಕೆ ಮುಂಚೆಯೇ ತಾನು ಮದುವೆಯಾಗಿ ಗೃಹಸ್ಥ ಎನಿಸಿಕೊಂಡಿದ್ದಾಗಿತ್ತು ಈ ಇಳಿವಯಸ್ಸಿನಲ್ಲಿ ತನ್ನನ್ನು ಕವಿದುಕೊಂಡಿರುವ ವ್ಯಾಮೋಹ ಎಂತಹುದು! ಹೆಂಗಸಿನ ಆಕರ್ಷಣೆ ತನಗೆ ಎಂದೂ ಇರಲಿಲ್ಲ ಹೆಂಡತಿ ಹೋದಾಗಿನಿಂದ ಒಂದು ಬಗೆಯ ವಿರಕ್ತಿ ತನ್ನನ್ನು ಮುಸುಗಿತ್ತು ಆದರೆ ಯಮುನೆಯ ಮುನ್ನುಗ್ಗುವಿಕೆಯಿಂದ ಅವಳ ಮೇಲಿನ ಕರುಣೆಯಿಂದ ತಾನು ಶೀಲಭ್ರಷ್ಟನಾಗಿದ್ದರೂ ಮನಸ್ಸಿನ ಮುಪ್ಪು ಮಾಯವಾಗಿರಲಿಲ್ಲ

ಬದಲು ಯುವತಿಯ ಸಹವಾಸದಿಂದಾಗಿ ಮನಸ್ಸಿನ ವಯಸ್ಸು ಹೆಚ್ಚಾಗಿತ್ತು. ಹೃದಯ ಎಂದಿನಂತೆಯೇ ಬರಡಾಗಿತ್ತು. ತನ್ನ ಹೃದಯಕ್ಕೆ ಹೆಣ್ಣು ಹೃದಯದ ಆಸರೆ ಇಲ್ಲವಾಗಿತ್ತು.

ಮೂರ್ತಿಯ ಜೀವನದಲ್ಲಿ ಪದ್ಮಿನಿಯ ಪ್ರವೇಶವಾದನಂತರ ?

ಮೂರ್ತಿಗೆ ಮೊದಲಿನ ಎಳೆತನ, ಉತ್ಸಾಹ, ಸಂಭ್ರಮ ಹಿಂತಿರುಗಿತ್ತು. ಪೊರೆ ಕಳಚಿದ ಹಾವಿನಂತೆ, ಮನಸ್ಸಿನ ಮುದಿಪೊರೆ ಕಳಚಿದ್ದ ಮೇಲೆ, ಬೋಳಾಗಿದ್ದ ಮರ ಮತ್ತೆ ಹಸಿರು ಉಟ್ಟಂತೆ ಮೂರ್ತಿಯ ಮನಸ್ಸು-ಮರುಭೂಮಿಯಾಗಿದ್ದ ಹೃದಯ-ಮತ್ತೆ ಉದ್ಯಾನವನವಾಯಿತು.

ಹೆಂಡತಿ ತೀರಿಹೋದನಂತರ ದೇಹಕ್ಕಿಂತಲೂ ಮೂರ್ತಿಯ ಮನಸ್ಸಿಗೆಹೆಚ್ಚು ವಯಸ್ಸಾಗಿತ್ತು. ಎಲ್ಲಿಲ್ಲದ ಮುದಿತನ ಅವರ ಮನಸ್ಸನ್ನು ತುಳಿದಿತ್ತು.

ಆದರೆ ಈಗ ?

ಸೂಜಿಗಲ್ಲಿನ ಸಂಪರ್ಕದಿಂದ ಕಬ್ಬಿಣದ ಚೂರು ತಾನೂ ಆಕರ್ಷಣ ಶಕ್ತಿ ಪಡೆಯುವಂತೆ ಎಳೆಯ ವಯಸ್ಸಿನ ಪದ್ಮಿನಿಯ ಸಾಮೀಪ್ಯದಿಂದ ಮೂರ್ತಿ ನವಯುವಕರಾದರು.

ಪದ್ಮಿನಿಯನ್ನು ಕಾಣುವುದಕ್ಕೆ ಮುಂಚೆ ಮೂರ್ತಿ ಯೋಚಿಸುತ್ತಿದ್ದರು.

'ನಾನು ಬೇಗ ಮುದುಕನಾಗಬಾರದೇ ? ಎಷ್ಟು ದಿನ ಈ ಶಿಕ್ಷೆ ? ಮನಸ್ಸು ಮುದಿಯಾದಂತೆ ದೇಹವೂ ಮುದಿಯಾಗಬಾರದೇ ?'

ಆದರೆ ಪದ್ಮಿನಿಯನ್ನು ನೋಡಿದಮೇಲೆ ಅವರ ಅಭಿಪ್ರಾಯ ಬದಲಾಯಿಸಿತು.

'ಆಗಲೇ ನನಗೆ ಎಷ್ಟು ವರ್ಷವಾಯಿತು !'

ಪದ್ಮಿನಿ ತನ್ನ ಅಭ್ಯಾಸ ಮುಗಿಸಿ ಹೊರಗೆ ಬರುವವರೆಗೆ ಮೂರ್ತಿ ಇದೇ ರೀತಿ ಯೋಚಿಸುತ್ತಾ ಕುಳಿತಿರುತ್ತಿದ್ದರು.

ಹೊರಗೆ ಬಂದ ಪದ್ಮಿನಿ ಜೂಲಿಯನ್ನು ಮಾತನಾಡಿಸುತ್ತಾ ಹೋಗುತ್ತಿದ್ದಳು.

ಪದ್ಮಿನಿ ಈಗ ಮನೆಗೆ ಬಂದಾಗ ಜೂಲಿಯನ್ನು ಕಟ್ಟಿಹಾಕುವ ಆವಶ್ಯಕತೆ ಇರಲಿಲ್ಲ. ಮನೆಗೆ ಹಳಬಳಾದ ಪದ್ಮಿನಿ ಈಗ ಜೂಲಿಯ ಆತ್ಮೀಯರಲ್ಲಿ ಒಬ್ಬಳಾಗಿದ್ದಳು.

* * *

ಒಂದು ಭಾನುವಾರ ಗೀತ ಹಾಸಿಗೆಯಿಂದ ಏಳುವುದಕ್ಕೆ ಮುನ್ನವೇ ಮೂರ್ತಿಯ ಗೆಳೆಯ ಮಹದೇವ್, ಅವರ ಪತ್ನಿ ರಮಾದೇವಿ 'ಸುದರ್ಶನ'ಕ್ಕೆ ಬಂದರು

ಮೂರ್ತಿ ಆದೇ ತಾನೇ ಎದ್ದು ಕ್ಷೌರ ಮಾಡಿಕೊಳ್ಳುತ್ತಿದ್ದರು

"ಹಲೋ ! ಇದೇನು ದಂಪತಿಗಳು ಅಪರೂಪವಾಗಿ ಒಂದರು" ಮೂರ್ತಿ ಅವರನ್ನು ಸ್ವಾಗತಿಸಿದರು

"ನಂಗಿಲ್ಲಿ ಜಾಸ್ತಿ ಹೊತ್ತು ಇರೋಕಾಗೋದಿಲ್ಲ ಇವತ್ತು ಪಾಪು ವಿನ ಹುಟ್ಟಿದ ಹಬ್ಬ, ನೀವು ಗೀತ ಹನ್ನೊಂದು ಗಂಟೆಗೆ ನಮ್ಮ ಮನೆಗೆ ಊಟಕ್ಕೆ ಬರಬೇಕು ಗೀತಾ ಎಲ್ಲಿ ? ರಾಜಕುಮಾರಿ ಇನ್ನೂ ಎದ್ದಿಲ್ಲ ವೇನೋ ?"

"ಸ್ವಲ್ಪ ಉಸಿರಾಡೋಕೆ ಅವಕಾಶ ಕೊಡಿ, ಮಹದೇವ್" ಎಂದು ಹೇಳಿ ಮೂರ್ತಿ "ಗೀತಾ" ಎಂದು ಕೂಗಿದರು

ಆದೇ ತಾನೇ ಕಣ್ಣುಬಿಡುತ್ತಿದ್ದ ಗೀತ ತಂದೆಯ ಕೂಗನ್ನು ಕೇಳಿ ಜಾಗ್ರತೆಯಾಗಿ ಕೆಳಗಿಳಿದುಬಂದಳು

ರಮಾದೇವಿ ಗೀತೆಯ ಬಳಿಗೆ ಹೋಗಿ ಸ್ನೇಹದಿಂದ,

"ಇವತ್ತು ಊಟಕ್ಕೆ ನಮ್ಮ ಮನೆಗೆ ಬಾಮ್ಮ ಸಂಜೆ ಆರತಕ್ಷತೆ, ಊಟ ಎಲ್ಲ ಮುಗಿಸಿಕೊಂಡು ಒಂದೇ ಸಲಕ್ಕೆ ವಾಪಸ್ಸು ಬರುವಿಯಂತೆ ನಾವೇ ನಿನ್ನ ಕರ್ಕೊಂಡು ಬಂದು ಬಿಡ್ತೀವಿ ಆಗಬಹುದೇ ?" ಎನ್ನುತ್ತಾ ರಮಾದೇವಿ ಮೂರ್ತಿಯನ್ನು ನೋಡಿದರು

"ಅವಳಿಷ್ಟ"

ಆಕೆ ಅಷ್ಟು ವಾತ್ಸಲ್ಯದಿಂದ ಕರೆಯುವಾಗ ಇಲ್ಲವೆನ್ನಲಾಗದೆ ಗೀತ ಒಪ್ಪಿಕೊಂಡಳು

ಹನ್ನೊಂದು ಗಂಟೆಗೆ ತಂದೆ, ಮಗಳು ಮಹದೇವ್ ಮನೆಗೆ ಊಟಕ್ಕೆ ಹೊರಟರು ಗೀತಾ ತನ್ನೊಡನೆ ಒಂದು ಚಿಕ್ಕ ಸೂಟುಕೇಸನ್ನು ತೆಗೆದು ಕೊಂಡು ಅದರಲ್ಲಿ ಸಂಜೆಯ ಆರತಕ್ಷತೆಗೆ ಉಡಲೆಂದು ಮತ್ತೊಂದು ಹೊಸ ಸೀರೆಯನ್ನಿರಿಸಿಕೊಂಡಿದ್ದಳು

ದಾರಿಯಲ್ಲಿ ಏನೋ ನೆನಪಾದಂತೆ ಗೀತಾ ಹೇಳಿದಳು,

"ಇವತ್ತು ಭಾನುವಾರ ಆದುದರಿಂದ ನಮ್ಮ ಮನೆಗೆ ಒಂದು ಗಂಟೆಗೇ ಪದ್ಮಿನಿಗೆ ಬರಲು ಹೇಳಿದ್ದೆ. ನಾನಿಲ್ಲದೇ ಇರೋದು ನೋಡಿ ಅವಳು ಕೋಪ ಮಾಡಿಕೊಂಡರೆ ?"

"ಕೋಪ ಯಾಕೆ ಮಾಡಿಕೋಬೇಕು "

"ಅಣ್ಣ, ನೀನು ಊಟ ಮುಗಿಸಿ ಮನೆಗೆ ಹೋಗುವಾಗ ಹಾಗೇ ಅವಳಿಗೆ ಗೀತಾ ಮನೇಲಿರೋದಿಲ್ಲಾಂತ ಒಂದು ಮಾತು ಹೇಳಿಬಿಡಣ್ಣ" ಎಂದಳು ಗೀತ

"ಆಗಲಿ, ನಾನು ಹೇಳ್ತೀನಿ ನೀನು ಯೋಚನೆ ಮಾಡಬೇಡ" ಎಂದು ಅಭಯವಿತ್ತರು ಮೂರ್ತಿ

ಮೂರ್ತಿ ಊಟ ಮುಗಿಸಿಕೊಂಡು ಮನೆಗೆ ಬರುವಾಗ ಒಂದು ಗಂಟೆಯ ಸಮಯವಾಗಿತ್ತು ಮನೆಗೆ ಹಿಂತಿರುಗುವಾಗ ಗೀತಳ ಮಾತು ನೆನಪುಬಂದಿತು ಒಂದು ಸಲ ಅವಳ ಮನೆಗೆ ಹೋಗಿ ಗೀತ ಮನೆಯಲ್ಲಿರುವುದಿಲ್ಲವೆಂದು ಹೇಳಿಬಿಡಲೇ ಎಂದುಕೊಂಡರು

'ಬೇಡ, ಪದ್ಮಿನಿ ಮನೆಗೆ ಬರಲಿ' ಎಂದು ಮನಸ್ಸು ನುಡಿಯಿತು ಮೂರ್ತಿ ಮಹದೇವ್ ಮನೆಯಿಂದ ನೇರವಾಗಿ ತಮ್ಮ ಮನೆಗೇ ಬಂದರು

ಒಂದುಕಾಲು ಗಂಟೆಯಾದರೂ ಪದ್ಮಿನಿ ಮನೆಗೆ ಬಾರದಿರುವುದನ್ನು ನೋಡಿ ಮೂರ್ತಿಗೆ ಕಳವಳವಾಯಿತು

ಒಂದೂವರೆಯ ಹೊತ್ತಿಗೆ ಬಿಸಿಲಿನಲ್ಲಿ ನಡೆದು ಮುಖ ಕೆಂಪಗೆ ಮಾಡಿಕೊಂಡು ಪದ್ಮಿನಿ ಬಂದಳು ಅವಳ ಕೈಯಲ್ಲಿ ನಾಲ್ಕಾರು ಪುಸ್ತಕಗಳಿದ್ದುವು

ಅವಳ ಕೆಂಪೇರಿದ ಮುಖ ನೋಡಿ ಮೂರ್ತಿಗೆ ಕಸಿವಿಸಿಯಾಯಿತು 'ತಪ್ಪು ಮಾಡಿದೆ ಈ ಹುಡುಗೀನ ನಾನು ಬಿಸಿಲಿನಲ್ಲಿ ನಡೆಯುವಂತೆ ಮಾಡಬಾರದಾಗಿತ್ತು '

ಅವಳು ಒಳಗೆ ಬಂದೊಡನೆ 'ಗೀತಾ ಮನೆಯಲ್ಲಿಲ್ಲ' ಎಂದು ಹೇಳಿ ಪದ್ಮಿನಿಯನ್ನು ನಿರಾಶೆಗೊಳಿಸಲಿಲ್ಲ ಮೂರ್ತಿ

"ಹೇಗೆ, ಸಾಗ್ತಿದೆ ನಿಮ್ಮಿಬ್ಬರ ವ್ಯಾಸಂಗ ?"

"ಸುಮಾರಾಗಿ "

"ತಾತಾ, ಏನಾದರೂ ತಿಂಡಿ, ಕಾಫಿ ತಂದುಕೊಡಿ "

"ಏನೂ ಬೇಡಿ ಈಗ ತಾನೇ ಎಲ್ಲಾ ಆಗಿದೆ "ಪದ್ಮಿನಿ ವಿನಯವಾಗಿ ಹೇಳಿದಳು

ಗೀತಾಳ ತಾತ ಮೂರ್ತಿಗೂ 'ತಾತ'ನಾಗಿದ್ದರು

ತಾತ ಪದ್ಮಿನಿಗೆ ತಿಂಡಿ, ಕಾಫಿ ತಂದುಕೊಟ್ಟರು ಪದ್ಮಿನಿ ತಿಂಡಿ ತಿನ್ನ ತೊಡಗಿದಳು ಗೀತ ಎಷ್ಟು ಹೊತ್ತಾದರೂ ಕಾಣದಿರಲು ಅನುಮಾನ ಗೊಂಡು,

"ಗೀತಾ ಎಲ್ಲಿ ?" ಎಂದಳು

"ಇವತ್ತು ಮಹದೇವ್ ಮನೇಲಿ ಅವರ ಮಗೂಗೆ ಹುಟ್ಟಿದ ಹಬ್ಬ ಸಂಜೆಯ ಆರತಕ್ಷತೆಗೆ ಅವಳನ್ನು ಅವರು ಅಲ್ಲಿಯೇ ನಿಲ್ಲಿಸಿಕೊಂಡಿದ್ದಾರೆ ರಾತ್ರಿ ಊಟಾನೂ ಅಲ್ಲೇ ಮುಗಿಸಿಕೊಂಡು ಬರುತ್ತಾಳೆ ನನಗೆ ಹೇಳಿದ್ದಳು —ನಿನಗೆ ಈ ವಿಷಯ ತಿಳಿಸೂಂತ ಆದರೆ ನಾನು ಮರೆತುಬಿಟ್ಟೆ."

ಸುಳ್ಳು ಹೇಳುವಾಗ ಮೂರ್ತಿಯ ನಾಲಿಗೆ ಕೊಂಚ ತಡೆಯಿತು

"ಓ! ಸರಿ ಹಾಗಾದರೆ ನಾನಿನ್ನು ಬರ್ತೀನಿ "

"ತುಂಬಾ ಬಿಸಿಲು ನಿಧಾನವಾಗಿ ಹೋಗಬಹುದು."

"ಅಷ್ಟೇನೂ ಬಿಸಿಲಿಲ್ಲ "

ಕನ್ನಡಿಯಲ್ಲೊಂದು ಸಲ ಪ್ರತಿಬಿಂಬಾನ ನೋಡಿಕೊಂಡರೆ ಗೊತ್ತಾಗುತ್ತೆ—ಹೊರಗೆ ಬಿಸಿಲಿದೆಯೋ ಬೆಳದಿಂಗಳಿದೆಯೋಂತ "

ಪದ್ಮಿನಿ ಅಲ್ಲಿಯೇ ಇದ್ದ ನಿಲುಗನ್ನಡಿಯಲ್ಲಿ ಮುಖ ನೋಡಿ ಕೊಂಡಳು

ಅವಳ ಮುಖವೇನೋ ಕೆಂಪಾಗಿತ್ತು ಆದರೆ ಬಿಸಿಲಿನಿಂದಲೋ ಅಥವಾ ನಾಚಿಕೆಯಿಂದಲೋ ಅವಳಿಗೇ ತಿಳಿಯಲಿಲ್ಲ

"ಒಂದಾಟ ಚದುರಂಗ ಆಡೋಣವಾ ?"

'ಬೇಡಾ ಬೇಡಾ' ಎಂದಿತು ಅವಳ ಮನಸ್ಸು ಬಾಯಿ ಮಾತ್ರ 'ಆಗಲಿ' ಎಂದು ಒಪ್ಪಿಕೊಂಡಿತು

ಚದುರಂಗದ ಹಾಸನ್ನು ಮೇಜಿನ ಮೇಲಿರಿಸಿ ಇಬ್ಬರೂ ಎದುರು ಬದುರಾಗಿ ಕುಳಿತರು.

ಮೂರ್ತಿ ಸೋಲುವ ಸ್ಥಿತಿ ಬಂದಿತು

"ನನ್ನ ನೀನು ಗೆಲ್ಲುತ್ತಿರುವ ಹಾಗಿದೆ "

"ಊಂ, ನಂಗೆಲ್ಲಾ ಗೊತ್ತು ನನ್ನ ಗೆಲ್ಲಿಸಬೇಕೂಂತ ನೀವು ಬೇಕೆಂದು ಸೋಲ್ತಿದೀರಿ" ಅಂದಳು ಪದ್ಮಿನಿ

ಮೂರ್ತಿಯ ಒಳಗುಟ್ಟನ್ನು ಪದ್ಮಿನಿ ಬಯಲುಮಾಡಿದಳು

ಮೂರು ಗಂಟೆಯ ಹೊತ್ತಿಗೆ ಎರಡು ಆಟ ಮುಗಿಯಿತು ಎರಡು ಆಟಗಳಲ್ಲಿಯೂ ಮೂರ್ತಿ ಸೋತುಹೋದರು

"ಗೆದ್ದಿದ್ದಕ್ಕೆ ನನಗೇನು ಬಹುಮಾನ ?" ಪದ್ಮಿನಿ ಹ ಡುಗುತನದಿಂದ ಕೇಳಿದಳು

"ಸೋತವರಿಗೇನೂ ಇಲ್ಲವೇ ?"

"ಸೋತವರಿಗೇನೂ ಇಲ್ಲ ಮೊದಲನೇ ಆಟದಲ್ಲೇನೋ ನೀವು ಬೇಕೆಂದು ಸೋತಿರಿ ಆದರೆ ಎರಡನೇ ಆಟದಲ್ಲಿ ನಾನು ನಿಜವಾಗಿಯೂ ಗೆದ್ದಿದ್ದೇನೆ ನಾನು ಕಷ್ಟಪಟ್ಟು ಗೆದ್ದಿದ್ದಕ್ಕೆ ಏನು ಕೊಡ್ತೀರಿ "

ಗಂಟಲಿನವರಿಗೆ ಬಂದಿದ್ದ ತಮ್ಮಾಸೆ‌ಯನ್ನು ನುಂಗಿಕೊಂಡು ಮೂರ್ತಿ ಹೇಳಿದರು :

"ಪಿಕ್ಚರ್‌ಗೆ ಕರ್ಕೊಂಡು ಹೋಗ್ತೀನಿ, ಬರ್ತೀಯಾ ?"

ಸದ್ಯಕ್ಕೆ ಅವರು ಅಷ್ಟರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು

ತಾನೊಬ್ಬಳೇ ಇವರೊಡನೆ ಹೇಗೆ ಹೋಗುವುದು ?

ಆದರೆ "ಓಹೋ !" ಎಂದಳು ಪದ್ಮಿನಿ ರಾಗವಾಗಿ

"ಇನ್ನು ಹತ್ತು ನಿಮಿಷಗಳಲ್ಲಿ ಬರ್ತೀನಿ" ಎನ್ನುತ್ತಾ ಮೂರ್ತಿ ಚಿಕ್ಕ ಹುಡುಗನಂತೆ ಮೆಟ್ಟಿಲುಗಳನ್ನೇರಿ ಹೋದರು

ಹತ್ತು ನಿಮಿಷಗಳಲ್ಲಿ ಮೂರ್ತಿ ಪಿಕ್ಚರಿಗೆ ಹೊರಡಲು ಸಿದ್ಧರಾಗಿ ಬಂದರು

ಅಚ್ಚುಕಟ್ಟಾಗಿ ಉಡುಪು ಹಾಕಿಕೊಳ್ಳುವುದರಲ್ಲಿ ಇವರು ನಿಸ್ಸೀಮರು ಎಂದುಕೊಂಡಳು ಪದ್ಮಿನಿ ಎಂತಹ ಉಡುಪೂ ಅವರ ಭವ್ಯವಾದ ನಿಲುವಿಗೆ, ಚೆಲುವಾದ ಮುಖಕ್ಕೆ ಒಪ್ಪುತ್ತಿತ್ತು

ಮೂರ್ತಿ ಮೆಟ್ಟಿಲಿಳಿದು ಹತ್ತಿರ ಬರುವವರೆಗೆ ಪದ್ಮಿನಿ ನೆಟ್ಟನೋಟ ದಿಂದ ಅವರನ್ನೇ ನೋಡುತ್ತಿದ್ದಳು ಮೆಚ್ಚುಗೆ ಅವಳ ಕಣ್ಣುಗಳಿಂದ

ತಾನೇತಾನಾಗಿ ಹೊರಸೂಸುತ್ತಿತ್ತು

"ಹೊರಡೋಣ ?" ಅವಳ ಏಕಾಗ್ರತೆಗೆ ಭಂಗ ತಂದು ಮೂರ್ತಿ ಕೇಳಿದರು ಪದ್ಮಿನಿ ಬೆಚ್ಚಿಬಿದ್ದು "ಆಗಲಿ" ಎಂದಳು

ಮೂರ್ತಿಯೊಡನೆ ಕಾರಿನಲ್ಲಿ ಕುಳಿತುಕೊಳ್ಳುವಾಗ ಪದ್ಮಿನಿಯ ಮನಸ್ಸು ಒಂದು ಗಳಿಗೆ ತೂಗಾಡಿತು

'ಬೇಡ' ಎಂದು ಹೇಳಿಬಿಡಲೇ ?

ಆದರೆ ಮೂರ್ತಿಯ ಉತ್ಸಾಹಕ್ಕೆ ತಣ್ಣೀರೆರಚುವುದು ಪದ್ಮಿನಿಗೆ ಸಾಧ್ಯವಾಗಲಿಲ್ಲ

ಪದ್ಮಿನಿ ಹಿಂದುಗಡೆಯ ಸೀಟಿನಲ್ಲಿ ಕುಳಿತಾಗಲೇ ಮೂರ್ತಿಗೆ ಕೊಂಚ ನಿರಾಶೆಯಾಯಿತು

ಥಿಯೇಟರಿನ ಮುಂದಿದ್ದ ಬೋರ್ಡನ್ನು ನೋಡಿ ಪದ್ಮಿನಿ,

"ಇಂಗ್ಲಿಷ್ ಚಿತ್ರವೇ ?" ಎಂದು ರಾಗ ಎಳೆದಳು

"ಯಾಕೆ, ನಿನಗೆ ಇಂಗ್ಲಿಷ್ ಚಿತ್ರ ಇಷ್ಟವಿಲ್ಲವೇ ?"

"ಊಹೂಂ ನಾನು ಇದುವರೆವಿಗೆ ಒಂದೂ ನೋಡಿಲ್ಲ. ನಾನು ಬರೀ ಕನ್ನಡ ಚಿತ್ರಗಳನ್ನು ಮಾತ್ರ ನೋಡ್ತೀನಿ "

"ಚೆನ್ನಾಗಿರುತ್ತದೆಯೇ ಕನ್ನಡ ಚಿತ್ರ ?"

"ಚೆನ್ನಾಗಿರಲಿ ಬಿಡಲಿ—ಕನ್ನಡ ಎನ್ನುವ ಒಂದು ಅಭಿಮಾನದಿಂದ ಯಾವ ಕನ್ನಡ ಚಿತ್ರಾನೂ ತಪ್ಪಿಸೋದಿಲ್ಲ ನಾವೇ ನಮ್ಮ ಚಿತ್ರಗಳನ್ನು ನೋಡದಿದ್ದ ಮೇಲೆ ಹೊರಗಿನವರು ನೋಡುತ್ತಾರೆಯೇ ?"

ಪದ್ಮಿನಿಯ ಸವಾಲು ಕೇಳಿ ಮೂರ್ತಿ,

"ನಮಗೆ ಮನರಂಜನೆ ಬೇಕು ಇಂಗ್ಲಿಷ್ ಚಿತ್ರಗಳಲ್ಲಿ ಅದು ಹೇರಳವಾಗಿ ಸಿಕ್ಕುತ್ತದೆ ನಮ್ಮವರು ತಯಾರು ಮಾಡಿದ್ದೂಂತ ತಲೆ ಚಿಟ್ಟು ಹಿಡಿಸಿಕೊಳ್ಳೋಕೆ ಯಾರಿಗೂ ಇಷ್ಟವಿರುವುದಿಲ್ಲ ಅಲ್ಲವೇ ?"

"ನೋ ಕಾಮೆಂಟ್ಸ್ "

ಮೂರ್ತಿ ಕಾರಿಗೆ ಬೀಗ ಹಾಕಿ ಬಾಕ್ಸ್ ಆಫೀಸಿನ ಕಡೆ ಹೊರಟರು ಪದ್ಮಿನಿಯೂ ಅವರನ್ನು ಹಿಂಬಾಲಿಸಿ ಪಕ್ಕದಲ್ಲಿ ನಿಂತಳು

"ಬಾಕ್ಸ್‌ಗೆ ಎರಡು ಟಿಕೇಟು "

"ಊಹೂಂ ನಾನು ಅಲ್ಲಿಗೆ ಬರೋದಿಲ್ಲ "

"ಯಾಕೆ ?"

"ಅಲ್ಲಿಗೆ ನಾವು ಹೋಗಬಾರದು ಅಲ್ಲಿಗೆ ಹೋಗುವವರು ಬೇರೆ "

ಮೂರ್ತಿ ಹಿಂತಿರುಗಿ ಅವಳ ಕಡೆ ನೋಡುತ್ತಾ "ಎಂತಹವರು ಅಲ್ಲಿಗೆ ಹೋಗಬೇಕು ?" ಎಂದರು

"ಹೊಸದಾಗಿ ಮದುವೆಯಾದ ಗಂಡ-ಹೆಂಡತಿ ಮಾತ್ರ ಅಲ್ಲಿಗೆ ಹೋಗಬೇಕು "

"ನಾನು, ಗೀತ ಯಾವಾಗಲೂ ಬಾಕ್ಸ್‌ಗೇ ಹೋಗ್ತೀವಿ "

"ನೀವು ಸರಿ ಆದರೆ ನಾನು " ಮುಂದೆ ಏನು ಹೇಳಲೂ ತೋರದೆ ಪದ್ಮಿನಿ ತುಟಿ ಕಚ್ಚಿ ಸುಮ್ಮನಾದಳು

ಅವಳು ಹಿಂಸೆಪಡುತ್ತಿರುವುದನ್ನು ನೋಡಿ ಮೂರ್ತಿ,

"ಹೋಗಲಿ ಬಾಲ್ಕನಿಗೆ ಹೋಗೋಣ" ಎಂದರು

"ಊಹೂಂ ನೀವು ಎಲ್ಲಾದರೂ ಹೋಗಿ ನಾನು ಐದಾಣೆ ಸೀಟಿಗೆ ಹೆಂಗಸರ ಕಡೆ ಹೋಗ್ತೀನಿ "

ಮೂರ್ತಿ ಮೊದಲ ಬಾರಿಗೆ ಪದ್ಮಿನಿಯ ಮೇಲೆ ಕೋಪಿಸಿಕೊಂಡರು ಅವರು ಮಾತನಾಡದೆ ಎರಡು ಟಿಕೇಟು ತೆಗೆದುಕೊಂಡು ಒಂದು ಟಿಕೇಟನ್ನು ಪದ್ಮಿನಿಯ ಕೈಗಿತ್ತು,

"ನಾನೇನೋ ಬಾಲ್ಕನಿಯ ಟಿಕೇಟು ನಿನಗೂ ತಗೊಂಡಿದೀನಿ ಎಲ್ಲಿಗೆ ಬೇಕಾದರೂ ಹೋಗು" ಎಂದು ಹೇಳಿ ದಡದಡನೆ ಮೆಟ್ಟಿಲು ಹತ್ತಿದರು

ಅವರು ಕೋಪಗೊಂಡಿರುವರೆಂದು ತಿಳಿದು, ಪದ್ಮಿನಿ ಅವರ ಹಿಂದೆ ತಾನೂ ನಿಧಾನವಾಗಿ ಮೆಟ್ಟಿಲೇರಿದಳು

ಪದ್ಮಿನಿ ಒಳಗೆ ಹೋಗುವಷ್ಟರಲ್ಲಿ ಮೂರ್ತಿ ಸೀಟಿನ ಮೇಲೆ ಕುಳಿತು ಎಲ್ಲೋ ನೋಡುತ್ತಿದ್ದರು

ಭಾನುವಾರವಾದ್ದರಿಂದ ಗಲಾಟೆ ಹೆಚ್ಚಾಗಿತ್ತು

ಪದ್ಮಿನಿ 'ಕ್ಷಮಿಸಿ' ಎಂದು ಹೇಳುತ್ತಾ ಜಾಗ ಮಾಡಿಕೊಂಡು ಮೂರ್ತಿಯ ಬಳಿಗೆ ಹೋದಳು ಮೂರ್ತಿ ತಿರುಗಲಿಲ್ಲ

ಪದ್ಮಿನಿ ಅವರ ಪಕ್ಕದಲ್ಲಿ ಕುಳಿತು "ಎಷ್ಟೊಂದು ಬೇಗ ಸಿಟ್ಟು ಬಂದು ಬಿಡುತ್ತದೆ ನಿಮಗೆ ?" ಎಂದಳು

ಮೂರ್ತಿ ಮಾತನಾಡಲಿಲ್ಲ

"ಕೋಪ ಮಾಡಿಕೋಬೇಡಿ ಪ್ಲೀಸ್ "

ಅವಳ ಮುದ್ದುಮಾತುಗಳನ್ನು ಕೇಳುವ ಆಸೆಯಿಂದ ಮೂರ್ತಿ ಸುಮ್ಮನೆ ಕುಳಿತಿದ್ದರು

"ನನ್ನ ಜತೆ ಮಾತನಾಡೋದಿಲ್ಲಾಂತ ಪ್ರತಿಜ್ಞೆ ಮಾಡಿರುವವರ ಜೊತೆ ಸಿನಿಮಾ ನೋಡೋದು ನಂಗಿಷ್ಟವಿಲ್ಲ ನೀವೊಬ್ಬರೇ ನೋಡಿ ನಾನು ಹೋಗ್ತೀನಿ ಹೋಗಲಾ ?"

"ನೋ ಕಾಮೆಂಟ್ಸ್ "

ಮೂರ್ತಿ–ಪದ್ಮಿನಿ ಒಟ್ಟಿಗೇ ನಕ್ಕರು

ಇಂಟರ್‌ವಲ್‌ನಲ್ಲಿ ದೀಪ ಹತ್ತಿದಾಗ ಮುಂದುಗಡೆ ಕುಳಿತಿದ್ದ ಯಮುನಾ ಹಿಂತಿರುಗಿ ಮೂರ್ತಿಯನ್ನು ನೋಡಿ ನಕ್ಕಳು

"ಯಾರು ಆಕೆ ?"

"ನಮ್ಮ ಕ್ಲಬ್ಬಿನ ಸದಸ್ಯೆ—ಮಿಸೆಸ್ ದೀಕ್ಷಿತ್ "

"ಓ ! ಸರಿ "

ಯಮುನಾ ಎರಡು ನಿಮಿಷದನಂತರ ಎದ್ದು ಮೂರ್ತಿಯ ಬಳಿಗೆ ಬಂದು "ಹಲೋ !" ಎಂದಳು ಅವಳು ಪದ್ಮಿನಿಯನ್ನು ತೀಕ್ಷ್ಣವಾಗಿ ನೋಡುತ್ತಾ "ಗೀತ ಬರಲಿಲ್ಲವೇ?" ಎಂದಳು

"ಇಲ್ಲ "

"ಕ್ಲಬ್ಬಿನಲ್ಲಿ ಈಚೆಗೆ ನೀವು ಕಾಣಿಸುವುದೇ ಇಲ್ಲವಲ್ಲ ?"

"ಏನಾದರೂ ಕೆಲಸವಿರುತ್ತದೆ ಆದ್ದರಿಂದ ಬರೋಕಾಗೋದಿಲ್ಲ "

ಪದ್ಮಿನಿಯನ್ನು ಮೂರ್ತಿ ತಾವಾಗಿಯೇ ತನಗೆ ಪರಿಚಯ ಮಾಡಿ ಕೊಡಬಹುದು ಎಂದು ಯಮುನಾ ಭಾವಿಸಿದ್ದಳು ಆದರೆ ಅವರು ಸುಮ್ಮನಿರುವುದನ್ನು ನೋಡಿ ಯಮುನಾ,

"ಈಕೆ ಪರಿಚಯ ಮಾಡಿಕೊಡ್ತೀರಾ ?" ಎಂದಳು

"ಪದ್ಮಿನಿ—ಮಿಸೆಸ್ ದೀಕ್ಷಿತ್ "

ತನ್ನ ಅಕ್ಕಪಕ್ಕದಲ್ಲಿ ಕುಳಿತಿದ್ದ ಪದ್ಮಿನಿ, ಯಮುನೆಯನ್ನು ಒಂದು ಸಲ ಮೂರ್ತಿ ನೋಡಿದರು ಪದ್ಮಿನಿಗೆ ತಾನೇಕೆ ಮರುಳಾಗಿರುವೆನೆಂಬುದು ಅವರಿಗೆ ತಿಳಿಯಿತು.

ಬೆಳಗಿನ ಜಾವದ ಮಂಜುಹನಿಯಲ್ಲಿ ತೊಯ್ದು ಶುಭ್ರವಾಗಿದ್ದ ಕಾಡಿನ ಸುಗಂಧಪೂರಿತ ಮಲ್ಲಿಗೆ ಹೂ ಪದ್ಮಿನಿ. ಅಗ್ಗವಾದ ಬಣ್ಣದ ಕಾಗದ ದಿಂದ ನಿರ್ಮಿತವಾದ ಕೃತಕ ಹೂ ಯಮುನಾ

ಯಮುನಾ ಮೂರ್ತಿಯೊಡನೆ ಬಹಳ ಸಲಿಗೆಯಿಂದ ಮಾತನಾಡ ತೊಡಗಿದಳು ಮೂರ್ತಿ ಅವಳ ಮಾತಿಗೆ 'ಹೂಂ' 'ಉಹೂಂ' ಎಂದು ಮಾತ್ರ ಹೇಳುತ್ತಿದ್ದರು ಒಂದು ಸಲವಂತೂ ಯಮುನಾ ಮಾತಿನ ಭರ ದಲ್ಲಿ ಮೂರ್ತಿಯ ತೊಡೆಯ ಮೇಲೆ ಕೈ ಇಟ್ಟಾಗ ಪದ್ಮಿನಿಯ ಹೃದಯಕ್ಕೆ ಚೇಳು ಕುಟುಕಿದಂತಾಯಿತು ಕುಳಿತಿದ್ದ ಸೀಟು ಮುಳ್ಳಿನಂತೆ ಭಾಸವಾಗಿ ಎದ್ದು ಓಡಿಹೋಗಬೇಕೆನಿಸಿತು ಅವಳು ಮತ್ತೆ ಅವರ ಕಡೆ ತಿರುಗಿ ನೋಡುವ ಸಾಹಸ ಮಾಡಲಿಲ್ಲ ಪದ್ಮಿನಿ ಉದ್ದೇಶಪೂರ್ವಕವಾಗಿ ಎಲ್ಲೋ ನೋಡುತ್ತಾ ಕುಳಿತಳು

ಮತ್ತೆ ದೀಪಗಳು ಆರಿದರೂ ಯಮುನಾ ತನ್ನ ಮೊದಲಿನ ಜಾಗಕೆ ಹೋಗಲಿಲ್ಲ ಮೂರ್ತಿಯಾದರೂ ಅವಳನ್ನು 'ಹೋಗಿ' ಎಂದು ತಳ್ಳಲು ಸಾಧ್ಯವೇ ?

ಚಿತ್ರ ನೋಡುವ ಉತ್ಸಾಹ ಮೂರ್ತಿಯಿಂದ ಮರೆಯಾಯಿತು ಸೊಗಸಾದ ಬಾದಾಮಿಹಾಲು ಕುಡಿಯುವಾಗ ಬಟ್ಟಲಿನಲ್ಲಿ ಜಿರಲೆ ಸಿಕ್ಕಿದಂತೆ ಈಕೆ ಎಲ್ಲಿಂದ ಬಂದಳು ಎಂದು ಮೂರ್ತಿ ಒದ್ದಾಡಿದರು

ಅಲ್ಲಿಂದ ಮುಂದೆ ಪದ್ಮಿನಿ ಒಂದು ಮಾತೂ ಆಡಲಿಲ್ಲ ಚಿತ್ರ ಮುಗಿದ ಮೇಲೆ ಪದ್ಮಿನಿ ಅವರಿಬ್ಬರನ್ನೇ ಬಿಟ್ಟು ಸರಸರನೆ ಕೆಳಗಿಳಿದು ಮೂರ್ತಿಯ ಕಾರಿನ ಬಳಿ ನಿಂತಳು

ಮೂರ್ತಿಗೆ ಹೇಳದೇ ಕೇಳದೇ ಯಾಕೆ ಸೀದಾ ಮನೆಗೆ ಹೊರಟು ಹೋಗಬಾರದು ? ಬೇಡ ಆಮೇಲೆ ಅವರು ತನ್ನನ್ನು ಹುಡುಕಬಹುದು ಹುಡುಕಲಿ ತನಗೇನಂತೆ ಪದ್ಮಿನಿಯ ಮನಸ್ಸು ಉರಿದುಹೋಯಿತು

ಅಲ್ಲಾ, ತಾನಾದರೂ ಯಾಕೆ ಹೀಗೆ ಉರಿಯಬೇಕು ? ಅವರ ಕ್ಲಬ್ಬಿನ ಗೆಳತಿಯೊಬ್ಬಳು ಪರಿಚಿತರಾದ ಮೂರ್ತಿಯನ್ನು ಬಂದು ಮಾತ ನಾಡಿಸಿದರೆ ತಾನೇಕೆ ಹೀಗೆ ಸಿಡಿಮಿಡಿಗೊಳ್ಳಬೇಕು ? ಮೂರ್ತಿಯೇನು ತನ್ನನ್ನು ಉಳಿದು ಬೇರೆ ಯಾರೊಡನೆಯೂ ಮಾತನಾಡುವುದಿಲ್ಲವೆಂದು

ಕಾಗದ ಬರೆದುಕೊಟ್ಟಿದ್ದಾರೆಯೇ ?

ತನಗೆ ಕೋಪವೋ ಮಾತ್ಸರ್ಯವೋ ?

ಮೂರ್ತಿ, ಯಮುನಾ ಪದ್ಮಿನಿಗೆ ಸ್ವಲ್ಪ ದೂರದಲ್ಲಿ ನಿಂತರು ಎರಡು ನಿಮಿಷಗಳನಂತರ ಬಣ್ಣದ ಬೊಂಬೆ ಯಮುನಾ ತನ್ನ ದೇಹವನ್ನು ಎಳೆಯುತ್ತಾ ಹೊರಟಳು

ಮೂರ್ತಿ ತಮ್ಮ ಕಾರಿನ ಬಳಿಗೆ ಬಂದರು ಪದ್ಮಿನಿ ಕಾರನ್ನೊರಗಿ ಉಗುರು ಕಚ್ಚುತ್ತಾ ನಿಂತಿದ್ದ

"ದೀಪ ಹಚ್ಚುವುದರೊಳಗೇ ಓಡಿಬಂದಿದೀಯಲ್ಲಾ, ನಿನಗೆ ಏನು ಮಾಡೋಣ ?" ಮೂರ್ತಿ ಕೇಳಿದರು

"ನೀವಿಬ್ಬರೂ ಮಾತನಾಡೋವಿತ್ತೇನೋ, ನಾನೇಕೆ ಅಡ್ಡಿ ಬರಲೀಂತ ಬಂದುಬಿಟ್ಟೆ "

"ಅಂತಹ ಏಕಾಂತವೇನೂ ಇರಲಿಲ್ಲ" ಎಂದರು ಮೂರ್ತಿ ನಗುತ್ತಾ ಪದ್ಮಿನಿಯ ಮಾತ್ಸರ್ಯ ಅವರನ್ನು ಸ್ವರ್ಗಲೋಕಕ್ಕೆ ಕರೆದೊಯ್ದಿತ್ತು

'ಜಲಸೀ ದೈ ನೇಮ್ ಈಸ್ ವುಮನ್' ಎಂದುಕೊಂಡರು ಮೂರ್ತಿ ಮನಸ್ಸಿನಲ್ಲಿ ದಾರಿಯಲ್ಲಿ ಪದ್ಮಿನಿ ಯಮುನೆಯ ಬಗ್ಗೆ ಕುತೂಹಲವನ್ನು ತೋರಬಹುದೆಂದು ಮೂರ್ತಿ ಎಣಿಸಿದ್ದರು ಆದರೆ ಪದ್ಮಿನಿ ಯಮುನೆಯ ಬಗ್ಗೆ ಒಂದು ಮಾತನ್ನೂ ಕೇಳಲಿಲ್ಲ

ಪದ್ಮಿನಿ ಏನಾದರೂ ಕೇಳಿದರೆ ತಾವೇನು ಹೇಳಬಹುದು ಅವಳು ಸುಮ್ಮನೆ ತಪ್ಪು ಅಭಿಪ್ರಾಯಕ್ಕೆ ಮನಸ್ಸಿನಲ್ಲಿ ಮನೆ ಮಾಡಿಕೊಟ್ಟರೆ ? ಆದುದರಿಂದ ಮೂರ್ತಿ ತಾವಾಗಿಯೇ ಮಾತಿಗೆ ಮೊದಲು ಮಾಡಿದರು

"ಮಿಸೆಸ್ ದೀಕ್ಷಿತ್ ನಮ್ಮ ಕ್ಲಬ್ಬಿನ ಸದಸ್ಯೆ "

"ಓಹೋ !"

"ಚೆನ್ನಾಗಿ ಟೆನ್ನಿಸ್ ಆಡ್ತಾರೆ "

"ಸಂತೋಷ."

"ನೋಡೋಕೆ ಹೇಗಿದಾರೆ ?"

"ನೋ ಕಾಮೆಂಟ್ಸ್."

"ನೋ ಕಾಮೆಂಟ್ಸ್ ಅಂದರೆ ಏನರ್ಥ ?"

"ನನ್ನ ಸ್ವಂತ ಅಭಿಪ್ರಾಯವನ್ನು ತಿಳಿಸಲು ಇಷ್ಟವಿಲ್ಲದಿದ್ದಾಗ ನೋ ಕಾಮೆಂಟ್ಸ್ ಎಂದು ಹೇಳುವ ಪದ್ಧತಿ "

ಪದ್ಮಿನಿ ಮೂರ್ತಿಯ ಹಿಂದೆ ಕುಳಿತಿದ್ದುದರಿಂದ ಅವರಿಗೆ ಅವಳ ಮುಖ ಕಾಣಿಸಲಿಲ್ಲ ಡ್ರೈವ್ ಮಾಡುತ್ತಿದ್ದಂತೆಯೇ ಮೂರ್ತಿ ಕಷ್ಟ ಪಟ್ಟು ಹಿಂತಿರುಗಿ ಪದ್ಮಿನಿಯನ್ನು ನೋಡಿದರು

ಅವಳ ತುಟಿಗಳ ಮೇಲೆ ಲಾಸ್ಯವಾಡುತ್ತಿದ್ದ ನಗು ಅವರ ಹೃದಯ ವನ್ನು ಹಗುರಗೊಳಿಸಿತು ಪದ್ಮಿನಿ ಒಂದು ನಿಮಿಷ ಅವರ ಮೇಲೆ ಮುನಿಸಿ ಕೊಂಡಿದ್ದನ್ನು ತಡೆಯುವುದೇ ಮೂರ್ತಿಗೆ ಕಷ್ಟವಾಗಿತ್ತು

"ರಾಜಿ ಆಯಿತಲ್ಲವೇ ?" ಮೂರ್ತಿ ಕೇಳಿದರು

"ರಸ್ತೆಯ ಮೇಲೆ ಕೊಂಚ ನಿಗಾ ಇರಲಿ, ಹಾಗೂ ಕತ್ತು ಉಳು ಕೀತು ನೆಟ್ಟಗೆ ನೋಡಿದರಾಯಿತು "

"ಸೂರ್ಯ ಎಲ್ಲಿದ್ದರೆ ಆ ಕಡೆ ತಿರುಗುವುದು ಸೂರ್ಯಕಾಂತಿ ಹೂವಿ ಗೇನು ಕಷ್ಟವಿಲ್ಲ ಅದು ಅದರ ಸ್ವಭಾವ "

"ಸೂರ್ಯನಲ್ಲ—ಬರೀ ಪದ್ಮಿನಿ "

"ಚಿತ್ತೂರಿನ ಪದ್ಮಿನಿಯನ್ನು ಒಂದು ಸಲ ನೋಡುವ ಆಸೆಯಿಂದ ಅಲ್ಲಾವುದ್ದೀನ್ ಸಹಸ್ರಾರು ಜನರನ್ನು ರಣರಂಗದಲ್ಲಿ ಬಲಿಕೊಟ್ಟ "

"ನಾನು ಚಿತ್ತೂರಿನ ಪದ್ಮಿನಿಯಲ್ಲ "

"ನೀನು ಎಂತಹವಳೇ ಆಗಿರು—ಹಿಂದೆ ಕುಳಿತು ನನಗೆ ಬಹಳ ಹಿಂಸೆ ಕೊಡ್ತಿದೀಯಾ "

ಸ್ವಲ್ಪ ಹೊತ್ತು ಸುಮ್ಮನಿದ್ದು ಪದ್ಮಿನಿ ಇದ್ದಕ್ಕಿದ್ದಂತೆ ಕೇಳಿದಳು

"ನನಗೆ ಡ್ರೈವಿಂಗ್ ಹೇಳಿಕೊಡ್ತೀರಾ ?"

"ನಿನಗೆ ಎಷ್ಟು ವರ್ಷ ?"

"ಅಯ್ಯೊ ! ನನಗೆ ಗೊತ್ತಿಲ್ಲ ಮೂವತ್ತೈದು ಅಲ್ಲ ಆ ನಿಮ್ಮ ಮಿಸೆಸ್ ದೀಕ್ಷಿತರಷ್ಟು ವಯಸ್ಸಾಗಿದೆ ನಂಗೆ "

"ಮತ್ತೆ ಬಹಳ ಚಿಕ್ಕವಳ ಹಾಗೆ ಕಾಣಿಸುತ್ತೀಯಾ ?"

"ನಂಗೆ ಎಷ್ಟು ವರ್ಷ ಹೇಳಬಹುದು ?"

"ನಿನಗೆ ಹದಿನೆಂಟು ವರ್ಷವೂ ಆಗಿರಲಾರದು ಹೌದಾ ?"

"ಹೂಂ ಇನ್ನೆರಡು ತಿಂಗಳಿಗೆ ಹದಿನೆಂಟಾಗುತ್ತದ ಆಮೇಲೆ ನಾನು ಮೆಜಾರಿಟಿಗೆ ಬಂದುಬಿಡ್ತೀನಿ" ಹೆಮ್ಮೆಯಿಂದ ಹೇಳಿಕೊಂಡಳು

"ಹಾಗಾದರೆ ನಿನಗೆ ಡ್ರೈವಿಂಗ್ ಕಲಿಸೋಕಾಗೋದಿಲ್ಲ "

"ಕಲಿತುಕೊಳ್ಳುವುದಕ್ಕೇನಂತೆ ? ನಾನೇನು ಒಂಟಿಯಾಗಿ ನಿಮ್ಮ ಕಾರನ್ನು ತಗೆದುಕೊಂಡು ಎಲ್ಲೂ ಹೋಗೋದಿಲ್ಲ "

"ನಾನೂ ನಿನ್ನ ಜೊತೆಗೆ ಬರ್ತೀನೀಂತ ತಿಳ್ಕೊಂಡಿದೀಯಾ ?" ಮೂರ್ತಿ ಕುಹಕದಿಂದ ಕೇಳಿದರು

"ಮತ್ತೆ ನೀವು ಬರೋದಿಲ್ಲವೇ ?"

"ನೀನು ಕರೆದರೆ ಬರ್ತೀನಿ "

"ನಿಮ್ಮ ಕಾರಿನಲ್ಲಿ ನೀವು ಬರೋದಿಕ್ಕೆ ನಾನು ಕರೆಯಬೇಕೆ ?"

"ನೀನು ಕಾರನ್ನು ಡ್ರೈವ್ ಮಾಡುವ ಸ್ಥಾನದಲ್ಲಿ ಕುಳಿತಮೇಲೆ ನೀನೇ ಅದರ ಮಾಲೀಕಳಾದ ಹಾಗೆ ಆಗುತ್ತದೆ "

"ನಿಮ್ಮ ತರ್ಕ ಬಲು ನ್ಯಾಯವಾಗಿದೆ ಓ ! ಇಲ್ಲೇ ಇಳಿಸಿಬಿಡಿ ಮನೆಗೆ ಹತ್ತಿರವಾಗಿದೆ ನಾನು ಇಲ್ಲಿಳಿದು ಹೊರಟುಹೋಗ್ತೀನಿ "

"ಮನೆಗೆ ಬರೋದಿಲ್ಲವೇ ?"

"ಬಂದಿದ್ದೆನಲ್ಲಾ ?"

"ಇನ್ನೊಂದು ಸಲ ಬರಬಾರದೇನು ?"

"ಗೀತಾ ಇಲ್ಲವಲ್ಲಾ ?"

"ನಾನಿದೀನಲ್ಲಾ "

"ನೀವು ಕಾರು ನಿಲ್ಲಿಸುತ್ತೀರೋ ಅಥವಾ ನಾನು ಬಾಗಿಲು ತೆಗೆದು ಕೆಳಗೆ ಧುಮುಕಿಬಿಡಲೋ ?" ಎಂದು ಕೇಳುತ್ತಾ ಪದ್ಮಿನಿ ಬಾಗಿಲಿನ ಹಿಡಿಗೆ ಕೈ ಹಾಕಿದಳು

"ನಾನು ಬಾಗಿಲನ್ನು ಲಾಕ್ ಮಾಡಿದೀನಿ. ಈಗ ನಿನ್ನನ್ನು ನನ್ನಿಷ್ಟ ಬಂದ ಕಡೆಗೆ ಕರೆದುಕೊಂಡು ಹೋದರೂ ನೀನು ಏನೂ ಮಾಡುವ ಹಾಗಿಲ್ಲ "

"ನಾನು ಮನೆಗೆ ಹೋಗಬೇಕು."

"ಇವತ್ತಿನಿಂದ ಪಾಠ ಮೊದಲು ಮಾಡೋಣಾಂತ ಇದ್ದೆ"

"ಯಾವ ಪಾಠ ?"

"ಡ್ರೈವಿಂಗ್"

"ಓ! ನಾನು ತಮಾಷೆಗೆ ಕೇಳಿದೆ ಡ್ರೈವಿಂಗ್ ಕಲಿತು ನಾನು ಯಾವ ರಾಜ್ಯ ಆಳಬೇಕು"

"ಆದರೂ ನಾನು ನಿನಗೆ ಡ್ರೈವಿಂಗ್ ಕಲಿಸೋಣಾಂತ ಮನಸ್ಸು ಮಾಡಿದೀನಿ"

"ಕಲಿಯುವುದಕ್ಕೆ ನಾನು ಸಿದ್ಧ"

ಮೂರ್ತಿ ಊರ ಹೊರಗೆ ಕಾರನ್ನು ತೆಗೆದುಕೊಂಡು ಹೋದರು

"ಇಲ್ಲಿಯವರೆವಿಗೆ ಯಾಕೆ ಬಂದಿರಿ ?"

"ಜನರಿಲ್ಲದ ಕಡೆ ಕಾರು ಬಿಟ್ಟರೆ ಒಳ್ಳೆಯದಲ್ಲವೇ ? ಪಾಪ ! ಅವರೇಕೆ ಸಾಯಬೇಕು ?"

"ಕಲಿತುಕೊಳ್ಳುವುದಕ್ಕೆ ಮುಂಚೇನೆ ನನ್ನ ಕಾರಿನ ಅಪಘಾತಕ್ಕೇಡು ಮಾಡ್ತಿದೀರಲ್ಲಾ"

ಮೂರ್ತಿ ಬಯಲಿನಲ್ಲಿ ಕಾರು ನಿಲ್ಲಿಸಿ ಹಿಂತಿರುಗಿ,

"ಇಲ್ಲಿಯೇ ಬಂದು ಕುಳಿತುಕೊಂಡರೆ ಕಲಿಯಲು ಅನುಕೂಲ" ಎಂದರು ಪದ್ಮಿನಿ ಮುಂದೆ ಮೂರ್ತಿಯ ಪಕ್ಕದಲ್ಲಿ ಕುಳಿತಳು

"ನೋಡು ಈಗ ಕಾರನ್ನ ಸ್ಟಾರ್ಟ್ ಮಾಡುವುದು ಹೀಗೆ ಇದ ನ್ನೆಳೆದು ಬಲಗಾಲಿನಿಂದ ಇದನ್ನೊತ್ತಬೇಕು ತಿಳಿಯಿತಾ"

"ತಿಳಿಯಿತು"

"ಆಮೇಲೆ ಹೀಗೆ ಹಿಡಿಯಬೇಕು ಆಮೇಲೆ ಇದು ಮೊದಲನೆಯ ಗೇರು—ಇದನ್ನು ಹಾಕಿದಾಗ ಕಾರು ಹೊರಡುತ್ತದೆ ಎರಡು ಮೂರನೆಯ ಗೇರು ಹಾಕಿದಾಗ ಕಾರಿನ ವೇಗ ಹೆಚ್ಚುತ್ತದೆ ಈಗ ಕಾರನ್ನು ಹೊರಡಿಸಲಾ ?"

"ಹೂಂ."

ಪದ್ಮಿನಿ ಕುತೂಹಲದಿಂದ ಅವರ ಕೈಗಳನ್ನೇ ನೋಡುತ್ತಿದ್ದಳು ಕಾರು ಹೊರಟಿತು ಮೂರ್ತಿ ಕಾರನ್ನು ಮತ್ತೆ ನಿಲ್ಲಿಸಿ,

"ಈಗ ನೀನು ಇಲ್ಲಿ ಕುಳಿತಿಕೋ" ಎಂದರು

ಪದ್ಮಿನಿ ಡ್ರೈವರಿನ ಜಾಗದಲ್ಲಿ ಕುಳಿತುಕೊಂಡಳು

"ಇಲ್ಲಿ ಹೀಗೆ ಸ್ಟೀರಿಂಗ್ ಹಿಡಿದುಕೋ ಇದನ್ನು ಎಳೆದು ಕಾಲನ್ನು ಒತ್ತು ಇನ್ನೂ ಜೋರಾಗಿ ಒತ್ತಬೇಕು ಕಾರಿಗೆ ನೋವಾಗತ್ತೇಂತ ಭಯ ಬೇಡ ಒಂದು, ಎರಡು, ಮೂರು ರೈಟ್ ಕಾರನ್ನು ಎಡ ಗಡೆಗೆ ತಿರುಗಿಸಬೇಕಾದರೆ ಸ್ಟೀರಿಂಗನ್ನು ಎಡಗಡೆ ತಿರುಗಿಸು ಹೀಗೆ "

ಮೂರ್ತಿ ಪದ್ಮಿನಿಯ ಭುಜದ ಸುತ್ತಲೂ ಕೈಹಾಕಿ ಅವಳ ಕೈಗಳನ್ನು ಹಿಡಿದು ಸ್ಟೀರಿಂಗನ್ನು ಎಡಕ್ಕೆ ತಿರುಗಿಸಿದರು

"ಬಿಡಿ ಬಿಡಿ ನಂಗೊತ್ತಾಯಿತು" ಪದ್ಮಿನಿ ನಾಚಿಕೆಯಿಂದ ಒಂದು ಹಿಡಿಯಾಗಿ ಹೇಳಿದಳು

"ಈಗ ಬಲಕ್ಕೆ ತಿರುಗಿಸಬೇಕಾದರೆ ಹೀಗೆ "

ಅವರ ತೋಳಿನ ಒತ್ತಡಕ್ಕೆ ಸಿಕ್ಕಿ ಪದ್ಮಿನಿ ಮುಡಿದಿದ್ದ ಹೂವಿನ ದಂಡೆ ನಲುಗಿತು ಪದ್ಮಿನಿ ಆದಷ್ಟು ಮೂರ್ತಿಯಿಂದ ದೂರ ಸರಿದು ಕುಳಿತಳು

ಮೂರ್ತಿ ಎಂದೂ ಪದ್ಮಿನಿಗೆ ಅಷ್ಟೊಂದು ಹತ್ತಿರ ಬಂದಿರಲಿಲ್ಲ

ಕತ್ತಲೆಯ ಕೋಣೆಯಲ್ಲಿ ಸೆರೆಮನೆ ವಾಸದಲ್ಲಿದ್ದ ಕೈದಿ ಬಿಡುಗಡೆ ಯಾದ ಮೇಲೆ ಮೊದಲ ಬಾರಿಗೆ ಸ್ವಾತಂತ್ರ್ಯದ ಹೊಸ ಗಾಳಿಯನ್ನುಂಡು ಸಂತೋಷಪಡುವಂತೆ ಮೂರ್ತಿ ಪದ್ಮಿನಿಯ ಸಾನ್ನಿಧ್ಯದಿಂದಾಗಿ ಹರೆಯದ ಹೊಸತನ, ಎಳೆತನವನ್ನು ಅನುಭವಿಸಿದರು ದಿಣ್ಣೆಯಿಂದ ಹಳ್ಳಕ್ಕೆ ಹರಿ ಯುವ ನೀರಿನಂತೆ ಪದ್ಮಿನಿಯಲ್ಲಿದ್ದ ಏರುಯೌವನ ಮೂರ್ತಿಯ ಕಡೆಗೆ ಹರಿಯಿತು

"ಓ ! ಗೊತ್ತಾಯಿತು ಬಿಡಿ "

"ನೀನು ಇನ್ನೂ ಆ ಕಡೆ ಸರಿದರೆ ಬಾಗಿಲು ತೆಗೆದುಕೊಂಡು ಕೆಳಗೆ ಬೀಳ್ತೀಯ, ಅಷ್ಟೆ "

"ಮತ್ತೆ ನಂಗೆ ಸ್ವಲ್ಪ ಜಾಗ ಕೊಡಿ "

ಮೂರ್ತಿ ದೂರ ಸರಿದರು ಪದ್ಮಿನಿ ನಿರಾಂತಕವಾಗಿ ಉಸಿರಾಡಿದಳು

"ಈಗ ನೋಡಿ, ಕಾರು ಸರಿಯಾಗಿ ಹೋಗ್ತಿದೆಯಾಂತ "

"ಹೂಂ ಆದರೂ ಕಂಟ್ರೋಲ್ ಸಾಲದು ಇನ್ನೂ ಒಂದಿಷ್ಟು ದಿವಸ ಕಲಿಯಬೇಕು"

"ಕಲಿಸುತ್ತೀರಾ ?"

"ಅಗತ್ಯವಾಗಿ"

"ಫೀಸು ?"

ತಾನು ಕೇಳುವ ಫೀಸನ್ನು ಅವಳು ನಿಜವಾಗಿಯೂ ಕೊಡುತ್ತಾಳೆಯೇ ? ಅವರ ಕಣ್ಣುಗಳು ನಿಧಾನವಾಗಿ ಅವಳ ತುಟಿಗಳ ಕಡೆ ಹರಿದುವು

ಪುಣ್ಯಕ್ಕೆ ಪದ್ಮಿನಿ ಅವರ ಕಡೆ ನೋಡುತ್ತಿರಲಿಲ್ಲ ಮೂರ್ತಿ ನಿಟ್ಟುಸಿರಿನೊಡನೆ ಹೇಳಿದರು :

"ಇವತ್ತಿಗೆ ಸಾಕಲ್ಲವೇ ?"

"ಸಾಕು"

ಮೂರ್ತಿ ತಾವು ಕುಳಿತಿದ್ದಂತೆಯೇ ಬಗ್ಗಿ ಕಾರನ್ನು ನಿಲ್ಲಿಸಿ,

"ಇನ್ನು ಸ್ಥಳಪಲ್ಲಟವಾಗಲಿ" ಎಂದರು ಪದ್ಮಿನಿ ಹಿಂದೆ ಹೋಗಲು ಯತ್ನಿಸಿದಾಗ ಮೂರ್ತಿ,

"ಇಲ್ಲೇ ಕುಳಿತುಕೊಂಡರೆ ನಾನು ಕಾರು ಬಿಡುವಾಗ ನೀನೂ ನೋಡಿ ತಿಳಿದುಕೊಳ್ಳಬಹುದು" ಎಂದರು

ಪದ್ಮಿನಿ ಅಲ್ಲಿಯೇ ಕುಳಿತಳು ಆದರೆ ಅವಳು ಮೂರ್ತಿ ಕಾರು ನಡೆಸುತ್ತಿರುವುದನ್ನು ನೋಡುತ್ತಿರಲಿಲ್ಲ

ನಿಜವಾಗಿಯೂ ಪದ್ಮಿನಿಗೆ ಡ್ರೈವಿಂಗ್ ಕಲಿಯುವ ಆಸೆಯಿತ್ತೇ ? ಊಹೂಂ ಖಂಡಿತ ಇರಲಿಲ್ಲ ತನ್ನ ಮನೆಯಲ್ಲಿ ಯಾರೂ ಕಾರು ತೆಗೆದುಕೊಳ್ಳುವಷ್ಟು ಶ್ರೀಮಂತರಿರಲಿಲ್ಲ ಅಂದಮೇಲೆ ಡ್ರೈವಿಂಗ್ ಕಲಿಯುವ ಅವಶ್ಯಕತೆ ಇದೆಯೇ ?

ಅಥವಾ ಅಥವಾ ತನಗೆ ಮೂರ್ತಿಯೊಡನೆ ಒಂಟಿಯಾಗಿ ಕಾಲ ಕಳೆಯುವ ಅಪೇಕ್ಷೆ ಇದೆಯೇ ? ಇದೆಯೇ ? ಇದ್ದರೂ ಇರಬಹುದು ಯಾಕೆ ? ಗೀತಳ ಮನೆಯಲ್ಲಿ ಮೂರ್ತಿಯನ್ನು ತಾನು ನೋಡುತ್ತಿರಲಿಲ್ಲವೇ ? ಆದರೂ ಅವರೊಡನೆ ಒಂಟಿಯಾಗಿ ಕಾಲಕಳೆಯುವ ಅಪೇಕ್ಷೆ ತನಗೇಕೆ ? ಕಾರಣ ಏನು ?

ಕಾರಣ ಏನಿರಬಹುದು ಎಂದು ನೆನೆದು ಪದ್ಮಿನಿ ಗಡಗಡನೆ ನಡುಗಿದಳು ಅವಳು ನಡುಗಿದುದನ್ನು ಗಮನಿಸಿ ಮೂರ್ತಿ,

"ಚಳಿಯಾಗುತ್ತಿದೆಯೇ ?" ಎಂದರು

"ಇಲ್ಲ" ಪದ್ಮಿನಿ ನಗಲು ಯತ್ನಿಸಿದಳು

"ಸುಳ್ಳು ಯಾಕೆ ಹೇಳ್ತೀಯಾ? ನನ್ನ ವುಲ್ಲನ್ ಕೋಟು ಹಾಕಿಕೋ ಬೇಕಾದರೆ " ಎನ್ನುತ್ತಾ ಮೂರ್ತಿ ತಾವು ತೆಗೆದಿರಿಸಿದ್ದ ಕೋಟನ್ನು ಎಡಗೈಯಿಂದ ತೆಗೆದು ಅವಳ ಭುಜದ ಮೇಲೆ ಹಾಕಿದರು

ಸೊಗಸಾದ ಕಂದುಬಣ್ಣದ ಉಲ್ಲನ್ ಕೋಟನ್ನು ಪದ್ಮಿನಿ ತನ್ನ ತೊಡೆಯ ಮೇಲಿರಿಸಿಕೊಂಡಳು

"ಯಾಕ್ರೆ ಹಾಕಿಕೊಳ್ಳೋದಿಲ್ಲವೇ ?"

"ಊಹೂಂ "

"ಹಾಗಾದರೆ ತೆಗೆದಿಟ್ಟುಬಿಡು "

"ಇಲ್ಲೇ ಇರಲಿ ಬಿಡಿ" ಎಂದಳು ಪದ್ಮಿನಿ.

ತಮ್ಮ ಮನೆಗೆ ತಿರುಗಿಕೊಳ್ಳುವ ರಸ್ತೆಗೆ ಕಾರು ಬಂದೊಡನೆ ಪದ್ಮಿನಿ,

"ಇಲ್ಲೇ ನಿಲ್ಲಿಸಿಬಿಡಿ ನಾನು ಹೋಗ್ತೀನಿ" ಎಂದಳು.

"ಮನೆಯ ಹತ್ತಿರ ಇಳಿಸುತ್ತೇನೆ "

"ಬೇಡ "

"ಅಮ್ಮ ಬೈತಾರೇಂತ ಹೆದರಿಕೆಯೇ ?"

"ಹಾಗೇನಿಲ್ಲ "

"ಹಾಗಾದರೆ ನಾನಿಲ್ಲಿ ನಿಲ್ಲಿಸೋದಿಲ್ಲ" ಎನ್ನುತ್ತಾ ಮೂರ್ತಿ ಕಾರನ್ನು ಅವಳ ಮನೆಯ ಮುಂದೆ ನಿಲ್ಲಿಸಿದರು

ತೊಡೆಯ ಮೇಲೆ ಮಲಗಿದ್ದ ಮಗುವನ್ನು ಎಚ್ಚರದಿಂದ ತೊಟ್ಟಿಲಿಗೆ ಹಾಕುವ ತಾಯಿಯಂತೆ ಪದ್ಮಿನಿ ಮೂರ್ತಿಯ ಕೋಟನ್ನು ಮೃದುವಾಗಿ ಕಾರಿನ ಸೀಟಿನ ಮೇಲಿರಿಸಿ ಕೆಳಗಿಳಿದು ನಿಂತು,

"ಬರಲಾ ?" ಎಂದಳು

ಜಲಜಮ್ಮ ಅಡಿಗೆಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಮಗಳು ಒಳಗೆ ಬಂದುದನ್ನು ನೋಡಿ ಜಲಜಮ್ಮ,

"ಯಾಕೆ, ಇಷ್ಟು ಹೊತ್ತಾಯಿತು ?" ಎಂದರು

"ಸಿನಿಮಾಕ್ಕೆ ಹೋಗಿದ್ದೆ "

"ಯಾರ ಜೊತೆ ?"

"ನಾನು, ಗೀತಾ ಆಮೇಲೆ ಗೀತನ ತಂದೆ "

"ನೀನು ಯಾಕೆ ಹೇಳಿದ ಮಾತು ಕೇಳೋದಿಲ್ಲ " ಎನ್ನುತ್ತಾ ಜಲಜಮ್ಮ ಹೊರಗೆ ಬಂದರು

"ಅಮ್ಮಾ, ಗೀತನ ತಂದೆ ತುಂಬಾ ಒಳ್ಳೆಯವರಮ್ಮ ಸುಮ್ಮನೆ ಜನ ಅವರನ್ನು ಅನ್ನುತ್ತಾರೇಂತ ನಾವೂ ಅನ್ನಬೇಕೆ ? ನಿಜವಾಗಿಯೂ ಅವರು ಒಳ್ಳೆಯವರು ಎಷ್ಟು ನಯವಿನಯದ ಮನುಷ್ಯ ಅವರು ! ಐಶ್ವರ್ಯವಂತರಾದರೂ ಸ್ವಲ್ಪವೂ ಜಂಭವಿಲ್ಲ "

"ಸಾಕು ಬಿಡು ನಿನ್ನದೇಕೋ ಎಲ್ಲಾ ಅತಿಯಾಯಿತು ಆತನಿಗೆ ಸ್ವಲ್ಪವೂ ನಡತೆ ಇಲ್ಲಾಂತ ಊರಿಗೆ ಊರೇ ಹೇಳುತ್ತದೆ ನೀನು ಅವರನ್ನು ಇಂದ್ರ, ಚಂದ್ರಾಂತ ಹೊಗಳ್ತೀಯ "

ಮೂರ್ತಿಯ ನಡತೆ ಚೆನ್ನಾಗಿಲ್ಲವೇ ? ಯಮುನೆಗೂ ಅವರಿಗೂ ಅಷ್ಟೊಂದು ಸಲಿಗೆ ಇರಲು ಕಾರಣವೇನು ? ಯಮುನಾ ಆತನೊಡನೆ ಮಾತನಾಡುವಾಗ ಕಣ್ಣು ಬಾಯಿ ಕುಣಿಸುವುದನು ಯಾರು ನೋಡಬಹುದು ? ಮಾತಿನ ಆವೇಶದಲ್ಲಿ ಯಮುನಾ ತನ್ನ ಹಸ್ತವನ್ನು ಮೂರ್ತಿಯ ಭುಜದ ಮೇಲೆ ಸಹ ಇರಿಸಿದ್ದಳು ಇವುಗಳ ಅರ್ಥವೇನು ?

ಪದ್ಮಿನಿಯ ರಕ್ತ ಕೋಪದಿಂದ ಬಿಸಿಯೇರಿತು

ಇನ್ನೊಂದು ಸಲ ಮೂರ್ತಿಯನ್ನು ನೋಡಿದಾಗ ತಾನು ಕೇಳಿಯೇ ಬಿಡಬೇಕು—ನಿಮಗೂ ಯಮುನೆಗೂ ಏನು ಸಂಬಂಧ ಎಂದು ?

ತನ್ನ ವಿಚಿತ್ರ ಕೋಪ ಕಂಡು ಪದ್ಮಿನಿಗೆ ನಗ ಬಂತು

ಅಲ್ಲಾ—ಇಷ್ಟಕ್ಕೂ ತಾನು ಯಾರು ಮೂರ್ತಿಯನ್ನು ಪ್ರಶ್ನಿಸಲು ? ಅವರು ಯಮುನೆಯೊಡನೆ ಸಲಿಗೆಯಿಂದಿದ್ದರೆ ತನಗಾಗಬೇಕಾದುದೇನು ?

ತಾನು, ಗೀತನ ತಂದೆ ಇಬ್ಬರೇ ಚಿತ್ರಕ್ಕೆ ಹೋಗಿದ್ದರೆಂದು ಹೇಳಲು ತಾನು ಅಳುಕಿದ್ದೇಕೆ ? ಈ ರಹಸ್ಯ ಸರಿಯೇ ?

ಪದ್ಮಿನಿ ಎಂದೂ ತಾಯಿಗೆ ಸುಳ್ಳು ಹೇಳಿರಲಿಲ್ಲ ಆದರೆ ಈ ದಿನ

ಅವಳ ಪ್ರಯತ್ನ ಮೀರಿ ಸುಳ್ಳು ಬಾಯಿಂದ ಹೊರಗೆ ಬಂದುಬಿಟ್ಟಿತ್ತು

ತಾಯಿಯ ಮಾತಿಗೆ ಪದ್ಮಿನಿ ಮುನಿಸಿನಿಂದ,

"ನಾನೇನೂ ಅವರನ್ನು ಹೊಗಳಲಿಲ್ಲಮ್ಮ ಇರುವ ವಿಷಯ ಹೇಳ್ತಿದೇನೆ ಜನ ಅವರ ವಿಷಯ ಏನು ಬೇಕಾದರೂ ಮಾತನಾಡಲಿ ಆದರೆ ಗೀತನ ತಂದೆ ಒಳ್ಳೆಯವರು" ಎಂದಳು

"ಅವರು ಹೆಂಡತೀನ ತಾವಾಗಿಯೇ ಕೈಯಾರೆ " ಎಂದು ಜಲಜಮ್ಮ ಹೇಳುವಷ್ಟರಲ್ಲಿ ರೂಮಿಗೆ ಹೋಗಿ ಟಪ್ಪೆಂದು ಬಾಗಿಲನ್ನು ತಾಯಿಯ ಮುಖಕ್ಕೆ ಹೊಡೆಯುವ ಹಾಗೆ ಹಾಕಿಕೊಂಡಳು

ಮಾರನೆಯ ದಿನ ಪದ್ಮಿನಿಗೆ ಗೀತನ ಮನೆಗೆ ಹೋಗಲು ನಾಚಿಕೆ

ಒಂದು ಪಕ್ಷ ಮೂರ್ತಿ ತಾವಿಬ್ಬರೂ ಚಿತ್ರ ನೋಡಲು ಹೋಗಿದ್ದುದನ್ನು ಅವಳಿಗೆ ಹೇಳಿಬಿಟ್ಟಿದ್ದರೆ ಅವಳು ತನ್ನ ಬಗ್ಗೆ ಏನು ತಿಳಿದುಕೊಳ್ಳಬಹುದು ?

ಪದ್ಮಿನಿಗೆ ಗೀತನ ಮನೆಗೆ ಹೋಗುವ ಧೈರ್ಯ ಬರಲಿಲ್ಲ ಕಾಲೇಜಿನಲ್ಲಿಯೂ ಅವಳು ಕದ್ದ ಕಳ್ಳಿಯಂತೆ ಗೀತಳ ಕಣ್ಣು ತಪ್ಪಿಸಿ ಓಡಾಡಿದಳು ಆದರೂ ಗೀತ ಅವಳನ್ನು ಬಿಡದೆ,

"ಯಾಕೆ, ಮನೆಗೆ ಬರೋದಿಲ್ಲವಾ ?" ಎಂದು ಕೇಳಿದ್ದಳು

"ಯಾಕೋ, ಬಿಡುವಾಗೋದೇ ಇಲ್ಲ" ಎಂದು ಹೇಳಿ ಪದ್ಮಿನಿ ಜಾರಿಕೊಂಡಿದ್ದಳು

ಎರಡು ದಿನ ಪದ್ಮಿನಿಯ ಹಾದಿ ನೋಡಿ ನಿರಾಶೆಗೊಂಡ ಗೀತ ತಾನೇ ಪದ್ಮಿನಿಯ ಮನೆಗೆ ಒಂದು ಸಂಜೆ ಬಂದಳು ಗೀತಾ ಬಂದಾಗ ಪದ್ಮಿನಿ ಮನೆಯ ಮುಂದಿದ್ದ ಜಗುಲಿಯ ಮೇಲೆ ಕುಳಿತು ಮೊಲ್ಲೆಮೊಗ್ಗುಗಳನ್ನು ಪೋಣಿಸುತ್ತಿದ್ದಳು ಗೀತಳನ್ನು ನೋಡಿ ಪದ್ಮಿನಿ ಯಾಕೋ ಏನೋ ಅಧೀರೆಯಾದಳು ಗೀತ ಪದ್ಮಿನಿಯ ಬಳಿಗೆ ಬಂದವಳೇ ಜಗಳಕ್ಕೆ ಮೊದಲುಮಾಡಿದಳು,

"ಯಾಕೆ ಈಚೀಚೆಗೆ ನೀನು ಬರುತ್ತಾನೆ ಇಲ್ಲ—ನನಗೂ ನಿನ್ನ ನೋಡಿ ನೋಡಿ ಬೇಜಾರಾಗಿ ಕೊನೆಗೆ ನಾನೇ ಬಂದೆ ಜಾಯಿಂಟ್ ಸ್ಟಡೀಗೆ ಎಷ್ಟು ಚೆನ್ನಾಗಿ ಬರುತ್ತಿದೀಯೋ ?"

ಸೆರೆ ಹಾಕಬಹುದು, ಎಂಬ ಹರ್ಷವೂ ಇತ್ತು

ಪರೀಕ್ಷೆ ಮುಗಿದೊಡನೆ ರಜಾ ದಿನಗಳು ಕಾಲಿರಿಸಿದುವು ರಜಾ ಪ್ರಾರಂಭವಾದ ಮೇಲೆ ಒಂದು ದಿನ ಗೀತನ ಮನೆಗೆ ಹೋಗಿದ್ದಾಗ ಗೀತ ಸಂಭ್ರಮದಿಂದ ಹೇಳಿದ್ದಳು

"ನಾಳೆ ನಮ್ಮ ಸೋದರತ್ತೆ, ಅವಳ ಮಕ್ಕಳು ಎಲ್ಲಾ ಇಲ್ಲಿಗೆ ಬರ್ತಾರೆ ನೀನು ಖಂಡಿತಾ ಬಾ ನಿನ್ನ ಅವರಿಗೆಲ್ಲಾ ಗುರುತು ಮಾಡಿ ಕೊಡ್ತೀನಿ"

"ನೋಡೋಣ" ಎಂದಿದ್ದಳು ಪದ್ಮಿನಿ

ಆದರೆ ಅವರ ಸಂಭ್ರಮದ ನಡುವೆ ತಾನು ಹೋಗಿ ಅಲ್ಲಿ ಕುಳಿತು ಕೊಳ್ಳುವುದು ಸರಿಯಲ್ಲವೆಂದು ಅವಳಿಗೆ ತೋರಿತು

ಗೀತನ ಮನೆಗೆ ನೆಂಟರು ಬಂದು ನಾಲ್ಕು ದಿನಗಳಾದರೂ ಪದ್ಮಿನಿ ಅವರ ಮನೆಗೆ ಹೋಗಲಿಲ್ಲ

ಆ ದಿನ ಪದ್ಮಿನಿಯ ಮನಸ್ಸಿಗೆ ಏಕೋ ತುಂಬಾ ಬೇಸರವಾಗಿತ್ತು ಅವಳು ಬಟ್ಟೆ ಬದಲಾಯಿಸಿ ತಾಯಿಯ ಬಳಿಗೆ ಹೋಗಿ,

"ಅಮ್ಮ, ಕಪಿಲನ ಮನೆಗೆ ಹೋಗಿದ್ದು ಬರ್ತೀನಿ" ಎಂದಳು ತಾಯಿ ಹೂಂಗುಡುವಷ್ಟರಲ್ಲಿ ಮನೆಯ ಹೊರಗೆ ಕಾರಿನ ಸದ್ದಾಯಿತು ಪದ್ಮಿನಿ ಕಿಟಕಿಯಲ್ಲಿ ನೋಡಿದಳು

ಮನೆಯ ಮುಂದೆ ಕಾರು ನಿಂತಿತ್ತು ಕಾರಿನ ತುಂಬ ಹುಡುಗಿಯರು, ಮಕ್ಕಳು ತುಂಬಿಕೊಂಡಿದ್ದರು ಎಲ್ಲರೂ ಜೋರಾಗಿ ನಗುತ್ತಾ ಅಸಾಧ್ಯ ವಾಗಿ ಗಲಾಟೆ ಮಾಡುತ್ತಿದ್ದರು ಚಿಕ್ಕ ಮಗುವೊಂದು ಒಂದೇ ಸಮನೆ ಕಾರಿನ ಹಾರನ್ನು ಒತ್ತಿ ಸದ್ದುಮಾಡುತ್ತಿತ್ತು

ಗೀತಾ ಬಿರುಗಾಳಿಯಂತೆ ಒಳಗೆ ನುಗ್ಗಿಬಂದು "ಪದ್ಮಿನಿ, ಈಗಲೇ ನಮ್ಮ ಜೊತೆ ಹೊರಡು" ಎಂದು ಅವಸರಪಡಿಸಿದಳು

"ಎಲ್ಲೀಗಮ್ಮ ?" ಜಲಜಮ್ಮ ಕೇಳಿದರು

"ಬೆಟ್ಟಕ್ಕೆ ಹೋಗ್ತೀವಿ ಹೊರಡು, ಹೊರಡು"

"ಕಾರಿನಲ್ಲಿ ಮೊದಲೇ ಜಾಗವಿರುವ ಹಾಗಿಲ್ಲ ಇನ್ನು ನಾನೂ ಬಂದರೆ ನಿಮಗೆ ತುಂಬಾ ತೊಂದರೆಯಾಗುತ್ತದೆ."

ಗೀತ ಪದ್ಮಿನಿಗೆ ಮುಂದೆ ಮಾತಿಗವಕಾಶಕೊಡದೆ ಅವಳನ್ನು ಎಳೆದು ಕೊಂಡು ಹೋದಳು

ಹತ್ತು ವರ್ಷದೊಳಗಿನ ನಾಲ್ಕು ಜನ ಹುಡುಗರು, ಗೀತಳ ವಯಸ್ಸಿನ ಹುಡುಗಿಯೊಬ್ಬಳು, ಇಪ್ಪತ್ಮೂರು ಇಪ್ಪತ್ನಾಲ್ಕು ವರ್ಷದ ತರುಣನೊಬ್ಬ, ಮೂರ್ತಿ, ಮೂರ್ತಿಯ ಅಕ್ಕ ಕಾವೇರಮ್ಮ ಕಾರಿನಲ್ಲಿ ಹೇಗೋ ಜಾಗ ಮಾಡಿಕೊಂಡು ಕುಳಿತಿದ್ದರು

ಗೀತಾ ಹಿಂದೆ ಕುಳಿತಿದ್ದ ಇಬ್ಬರು ಹುಡುಗರನ್ನು ಮೂರ್ತಿ ವಿಶ್ವನಾಥನ ನಡುವೆ ತುರುಕಿ ಪದ್ಮಿನಿಗೆ ಹಿಂದೆ ಜಾಗ ಮಾಡಿಕೊಟ್ಟಳು, ಕಾವೇರಮ್ಮ ಗೀತನ ನಡುವೆ ಇರುಕಿಕೊಂಡಳು

ಪದ್ಮಿನಿ ಕುಳಿತ ಕೂಡಲೇ ಗೀತಾ ಉತ್ಸಾಹದಿಂದ "ರೈಟ್" ಎಂದಳು

ಕಾರು ಬೆಟ್ಟಕ್ಕಭಿಮುಖವಾಗಿ ಹೊರಟಿತು

ಹುಡುಗರ ಗಲಾಟೆ, ನಗು, ಅಬ್ಬರ ಗಾಳಿಯ ಮೊರೆತವನ್ನು ಮೀರಿ ಬರುತ್ತಿತ್ತು

ಮಹಿಷಾಸುರನ ರಾಕ್ಷಸಾಕಾರವನ್ನು ನೋಡಿದ ಕೂಡಲೇ ಚಿಕ್ಕ ಹುಡುಗರು,

"ಮಾಮಾ, ಕಾರು ನಿಲ್ಲಿಸು " ಎಂದು ಚೀರಿದರು

ಮೂರ್ತಿ ಕಾರನ್ನು ನಿಲ್ಲಿಸಿದ ಕೂಡಲೇ ಹುಡುಗರೆಲ್ಲಾ ಹೊರಗೆ ಹಾರಿದರು ಕಾವೇರಮ್ಮ ಮೂರ್ತಿಗೆ,

"ನಾವೂ ಇಲ್ಲೇ ಇಳಿಯೋಣ" ಎಂದರು

ಎಲ್ಲರೂ ಕೆಳಗಿಳಿದಮೇಲೆ ಗೀತಾ ಅಧಿಕಾರಯುಕ್ತ ವಾಣಿಯಲ್ಲಿ,

"ಎಲ್ಲರೂ ಸಾಲಾಗಿ ನಿಂತುಕೊಳ್ಳಿ" ಎಂದಳು

"ಇವನು ಪಮ್ಮು, ನಮ್ಮ ಸೋದರತ್ತೆಯ ಚಿಕ್ಕ ಮಗು, ಇವನು ಪಾಪಚ್ಚಿ, ಪುಟ್ಟಣ್ಣ, ಕುಳ್ಳ "

ಗೀತಾ ಕಾವೇರಮ್ಮನ ನಾಲ್ಕು ಗಂಡುಮಕ್ಕಳ ಪರಿಚಯವನ್ನು ಪದ್ಮಿನಿಗೆ ಮಾಡಿಕೊಟ್ಟು ತನ್ನ ವಯಸ್ಸಿನ ಹುಡುಗಿಯ ಕಡೆ ಕೈತೋರಿಸಿ,

"ಇವಳು ಭವಾನಿ—ಹೆಸರಿನಲ್ಲಿ ಮಾತ್ರವಲ್ಲ ಕೋಪದಲ್ಲಿಯೂ ಸಹ!"

ಎಂದು ಹೇಳಿ, ಭವಾನಿಯ ಪಕ್ಕದಲ್ಲಿ ನಿಂತಿದ್ದ ತರುಣನ ಕಡೆ ಕೈತೋರಿಸಿ

"ಇವನು ಬೇಬಿ" ಎಂದಳು

ಅವನನ್ನು 'ಬೇಬಿ' ಎಂದು ಗೀತ ಪರಿಚಯ ಮಾಡಿಕೊಟ್ಟಿದ್ದನ್ನು ನೋಡಿ ಪದ್ಮಿನಿಗೆ ತುಂಬಾ ನಗು ಬಂತು 'ಬೇಬಿ'ಗೆ ಮಾತ್ರ ಕೋಪದಿಂದ ಮುಖ ಕೆಂಪಾಯಿತು ಅವನು ಅಸಮಾಧಾನದಿಂದ ಗೀತಳ ಜಡೆ ಜಗ್ಗಿ,

"ತಪ್ಪಾಯಿತು ಎನ್ನುವವರೆಗೆ ಬಿಡೋದಿಲ್ಲ" ಎಂದ

"ಹಾ ಹಾ ! ಬಿಡೋ, ನೋವಾಗ್ತಿದೆ"

"ತಪ್ಪಾಯಿತು ಎನ್ನು"

"ತಪ್ಪಾಯಿತು"

'ಬೇಬಿ' ಗೀತಳ ಜಡೆಯನ್ನು ಬಿಟ್ಟ

"ಈಗ ನನ್ನ ಸರಿಯಾದ ಪರಿಚಯ ಮಾಡಿಕೊಡು "

"ಇವನು ಭವಾನಿಯ ಅಣ್ಣ ವಿಶ್ವನಾಥ ಮನೆಯವರೆಲ್ಲರೂ ಅವನನ್ನ ಮುದ್ದಿಗೆ 'ಬೇಬಿ' ಎಂದು ಕರೆಯುತ್ತಾರೆ "

ವಿಶ್ವನಾಥ ಗೀತಳನ್ನು ಹೊಡೆಯಲು ಅಟ್ಟಿಸಿಕೊಂಡು ಹೋದ ಗೀತ ಅವನ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಓಡಿದಳು

"ನೀನು ನನ್ನ ಕೈಗೆ ಸಿಕ್ಕಿದಾಗ ನಿನಗೆ ಬುದ್ಧಿ ಕಲಿಸುತ್ತೇನೆ" ಎಂದ ವಿಶ್ವನಾಥ ಗಟ್ಟಿಯಾಗಿ

ಶರಾಯಿಯ ಎರಡು ಜೇಬುಗಳಲ್ಲಿ ತಮ್ಮೆರಡು ಕೈಯನ್ನು ಇರಿಸಿ ಎಳೆಯರ ಹರ್ಷ, ಸಂತೋಷವನ್ನು ಮುಗುಳ್ನಗೆಯಿಂದ ಮೂರ್ತಿ ನೋಡುತ್ತ ನಿಂತಿದ್ದರು ಹಿಂದುಗಡೆಯಿಂದ ಗಾಳಿ ಜೋರಾಗಿ ಬೀಸು ತ್ತಿದ್ದುದರಿಂದ ಅವರ ದಟ್ಟಕೂದಲಿನ ಕ್ರಾಪು ಕೆದರಿ ಹಣೆಯ ಮೇಲೆ ಕವಿದುಬಂದಿತ್ತು

ಪದ್ಮಿನಿ ಮೂರ್ತಿಯನ್ನೇ ಎವೆಯಿಕ್ಕದೆ ನೋಡುತ್ತಿದ್ದಳು.

ಅರ್ಧ ತೋಳಿನ ಬಿಳಿಯ ಶರಟು, ತಿಳಿನೀಲಿ ಬಣ್ಣದ ಉಲ್ಲನ್ ಶರಾಯಿ ಅವರಿಗೆಷ್ಟು ಚೆನ್ನಾಗಿ ಒಪ್ಪುತ್ತಿತ್ತು !

ಸುತ್ತ ಜನರಿರುವುದನ್ನು ಮರೆತು ಪದ್ಮಿನಿ ಅನಿಮಿಷನೇತ್ರೆಯಾಗಿ ದ್ದಳು.

ಮೂರ್ತಿಯ ಸುತ್ತಲೂ ಪಮ್ಮಿ, ಪುಟ್ಟಣ್ಣ, ಪಾಪಚ್ಚಿ, ಕುಳ್ಳ ಜೂಟಾಟವಾಡುತ್ತಿದ್ದರು ವಿಶ್ವನಾಥ ಮಹಿಷಾಸುರನ ಭಾವಚಿತ್ರ ತೆಗೆದು ಕೊಳ್ಳುವುದರಲ್ಲಿ ಮಗ್ನನಾಗಿದ್ದ ಕಾವೇರಮ್ಮ ಗೀತಾ ತೆಂಗಿನಕಾಯಿ, ಹೂವು ಮಾರುವವನೊಡನೆ ವ್ಯಾಪಾರ ಮಾಡುತ್ತಿದ್ದರು

ಮೂರ್ತಿಯ ಸುತ್ತಲೂ ಅವರಿಗೆ ಅತ್ಯಂತ ಪ್ರಿಯರಿದ್ದರು

ಆದರೂ ಮೂರ್ತಿ ಒಂಟಿ, ಏಕಾಂಗಿ, ಸಾಗರದ ನಡುವೆ ಇರುವ ಒಂದೇ ಒಂದು ಬಂಡೆಯಂತೆ ಮೂರ್ತಿ ತಮ್ಮವರ ನಡುವೆ ನಿಂತಿದ್ದರು ಬಂಡೆಯ ಸುತ್ತಲೂ ಹರಡಿರುವ ಅಗಾಧವಾದ ಜಲಸಾಗರ ನೀರಿನ ಸಂಪರ್ಕದಿಂದಾಗಿ ಬಂಡೆ ಯಾವಾಗಲೂ ತೇವಮಯ ಆದರೂ ಅದು ನೀರಿನೊಡನೆ ನೀರಾಗಿ ಬೆರೆಯುವಂತಿಲ್ಲ ಅಲೆಗಳೊಡನೆ ಅಲೆಯಾಗಿ ದಡಕ್ಕೆ ಓಡಿಬರುವಂತಿಲ್ಲ

ಗಾಳಿಗೆ ಮೈಯೊಡ್ಡಿ ನಿಂತಿದ್ದ ಮೂರ್ತಿ ಪದ್ಮಿನಿಯ ಕಣ್ಣಿಗೆ ತುಂಬಾ ಆಕರ್ಷಣೀಯವಾಗಿ ಕಾಣಿಸಿದರು

ಪದ್ಮಿನಿ ತನ್ನನ್ನು ನೋಡುತ್ತಿರುವಳೆಂಬುದು ಮೂರ್ತಿಗೆ ತಿಳಿದಿತ್ತು ಆದುದರಿಂದಲೇ ಅವರು ಅವಳ ಕಡೆ ನೋಡಲಿಲ್ಲ

ವಿಶ್ವನಾಥ ಚಿತ್ರ ತೆಗೆದು ಮಾವನ ಹತ್ತಿರ ನಿಂತು,

"ದೇವಸ್ಥಾನದೊಳಗೆ ಹೋಗೋಣವೇ, ಮಾವ ?" ಎಂದ

ಕಾವೇರಮ್ಮ ಗೀತ ವ್ಯಾಪಾರ ಮುಗಿಸಿಕೊಂಡು ಬಂದರು

ಕಾವೇರಮ್ಮ ಮಕ್ಕಳಿಗೆ,

"ಚಪ್ಪಲಿ, ಬೂಟ್ಸುಗಳನ್ನೆಲ್ಲಾ ಕಾರಿನಲ್ಲೇ ಬಿಟ್ಟುಬಿಡಿ" ಎಂದರು

ದೇವಸ್ಥಾನದಲ್ಲಿ ಹಣ್ಣು ಕಾಯಿಯನ್ನು ಸಮರ್ಪಿಸಿ, ಅಮ್ಮನವರಿಗೆ ಕುಂಕುಮಾರ್ಚನೆಯಾಯಿತು

ಕಾವೇರಮ್ಮ ತಮ್ಮ ಪತಿಯ ಹೆಸರಿನಲ್ಲಿ ಕುಂಕುಮಾರ್ಚನೆ ಮಾಡಿಸಿದರು ಅವರಾದಮೇಲೆ ಗೀತಾ,

"ಇನ್ನೊಂದು ಪೂಜೆ ಇರಲಿ" ಎಂದಳು

"ಯಾರ ಹೆಸರಿನಲ್ಲಿ ?" ಅರ್ಚಕರು ಕೇಳಿದರು

"ನಮ್ಮ ತಂದೆಯ ಹೆಸರಿನಲ್ಲಿ" ಎಂದಳು ಗೀತಾ

ವಿಶ್ವನಾಥ, "ನಿನ್ನ ಗಂಡನ ಹೆಸರಿನಲ್ಲಿ ಮಾಡಿಸೇ, ಗೀತಾ" ಎಂದು ಪಿಸುಗುಟ್ಟಿದ.

ದೇವಸ್ಥಾನವಾಗಿದ್ದುದರಿಂದ ಗೀತಾ ಅಲ್ಲಿ ದನಿಯೇರಿಸಿ ಜಗಳವಾಡು ವಂತಿರಲಿಲ್ಲ

ಪೂಜೆ ಮುಗಿಸಿಕೊಂಡು ಎಲ್ಲರೂ ಹೊರಗೆ ಬಂದಾಗ ವಿಶ್ವನಾಥ ಮತ್ತೆ ಚೇಷ್ಟೆಯಿಂದ ಕೇಳಿದ,

"ಗೀತಾ, ಪೂಜೆ ಮಾಡಿಸುವವರು ಏನಾದರೂ ಒಂದು ಆಸೆ ಇಟ್ಟು ಕೊಂಡು ಮಾಡಿಸುತ್ತಾರೆ ನೀನು ಏನು ಆಸೆ ಇಟ್ಟುಕೊಂಡಿದ್ದೆ ? ಬೇಗ ಮದುವೆ ಆಗಲೀಂತಾನ ?"

"ಹೂಂ, ಆದರೆ ನನ್ನ ಮದುವೆ ಅಲ್ಲ "

"ಮತ್ತೆ ಯಾರ ಮದುವೆ ?"

"ನಿನಗ್ಯಾಕೋ ಅವೆಲ್ಲಾ ? ಸುಮ್ಮನೆ ಇರು "

ಕಾವೇರಮ್ಮ ನಸುನಗುತ್ತಾ, "ಮದುವೆಗೆ ಮುಂಚೇನೆ ನೀವಿಬ್ಬರೂ ಹೀಗೆ ಜಗಳವಾಡಿದರೆ ಮುಂದೇನು ಗತಿ ?" ಎಂದರು

"ಈ ಬೇಬೀನ ಯಾರು ಮದುವೆ ಮಾಡಿಕೊಳ್ಳುತ್ತಾರೆ ? ಇವನಿಗೆ ಬದಲು ಈ ಮಹಿಷಾಸುರನನ್ನಾದರೂ ಮದುವೆ ಮಾಡ್ಕೊಳ್ತೀನೆಯೇ ಹೊರತು ಖಂಡಿತ ಇವನನ್ನು ಮದುವೆಯಾಗೋದಿಲ್ಲ" ಎಂದಳು ಗೀತ

"ಕೈಮುಗಿದು ಅಡ್ಡಬಿದ್ದೆ ಗೀತಾದೇವಿ ಹೇ ಚಾಮುಂಡಾಂಬಿಕೇ, ನಿನ್ನ ಭಕ್ತೆಗೆ ಇಷ್ಟು ದೊಡ್ಡ ಮನಸ್ಸು ಕೊಟ್ಟಿರುವುದಕ್ಕಾಗಿ ನಾನು ನಿನಗೆ ಇನ್ನೊಮ್ಮೆ ಕೈಮುಗಿಯುತ್ತೇನೆ" ಎಂದ ವಿಶ್ವನಾಥ

ಸಂಜೆಯ ಸೂರ್ಯ ಪಶ್ಚಿಮದಿಗಂತದಂಚಿನಲ್ಲಿದ್ದಾಗ ಎಲ್ಲರೂ ಹೊಂಗೆ ಮರದ ಬಳಿ ಊಟಕ್ಕೆ ಕುಳಿತುಕೊಂಡರು , ಮನೆಯಿಂದ ಕಟ್ಟಿತಂದಿದ್ದ ಬುತ್ತಿಯನ್ನು ಕಾವೇರಮ್ಮ ಬಿಚ್ಚಿದರು ಗೀತಾ ಅವರ ಬಳಿಗೆ ಓಡಿಬಂದು,

"ನೀವು ಕುಳಿತುಕೊಳ್ಳಿ, ಅತ್ತೆ ನಾನು, ಭವಾನಿ, ಪದ್ಮಿನಿ ಬಡಿಸು ತ್ತೇವೆ" ಎಂದಳು ಕಾವೇರಮ್ಮ ಹುಡುಗರೊಡನೆ ತಾವೂ ಕುಳಿತು ಕೊಂಡರು

"ಏಳೇ ಪದ್ಮಿನಿ, ರಾಣಿ ಹಾಗೆ ಕುಳಿತುಕೋಬೇಡ ತಗೋ ಈ

ಹುಳಿ ಅನ್ನದ ತಪ್ಪಲೇನ ." ಎನ್ನುತ್ತಾ ಗೀತಾ ಪದ್ಮಿನಿಗೆ ಕೆಲಸವನ್ನು ಹಚ್ಚಿದಳು

ಎಲ್ಲರ ಊಟ ಮುಗಿಯುತ್ತಲೇ ಮತ್ತೆ ಹುಡುಗರಿಗೆ ಬೆಟ್ಟ ಇಳಿಯುವ ಆತುರ

ರಾತ್ರಿ ಎಂಟು ಗಂಟೆಗೆ ಪದ್ಮಿನಿ ಮನೆ ಸೇರಿದಳು ಪದ್ಮಿನಿ ಹೊರಟಾಗ ವಿಶ್ವನಾಥ,

"ನೀವೂ ನಮ್ಮೊಡನೆ ಬಂದು ನಮ್ಮ ಸಂತೋಷದಲ್ಲಿ ಭಾಗಿಯಾಗಿದಕ್ಕೆ ತುಂಬಾ ಧನ್ಯವಾದಗಳು" ಎಂದ

"ನಮ್ಮ 'ಬೇಬಿ'ಗೆ ಕಾಲೇಜಿನ ನಾಟಕದಲ್ಲಿ ಪಾರ್ಟ್ ಮಾಡಿಮಾಡಿ ಅದೇ ಅಭ್ಯಾಸವಾಗ್ಹೋಗಿದೆ" ಎಂದಳು ಗೀತಾ

ಪದ್ಮಿನಿ ನಸುನಕ್ಕು ಕಾವೇರಮ್ಮನ ಕಡೆ ತಿರುಗಿ "ಬರ್ತೀನಿ" ಎಂದಳು.

"ಈಗ ಬರ್ತೀನೀಂತ ರಾಗ ಎಳೆದರೆ ನಾನು ಕೇಳುವವಳಲ್ಲ ಬರ್ತಾನೇ ಇರಬೇಕು" ಎಂದಳು ಗೀತಾ ದರ್ಪದಿಂದ

"ಬರದೇ ಇದ್ದರೆ ಏನು ಮಾಡ್ತೀಯ ?"

"ನಿಂಗೆ ಅಷ್ಟೊಂದು ಧೈರ್ಯ ಎಲ್ಲಿದೆ !"

ಗೀತಳ ಮಾತು ಅಕ್ಷರಶಃ ನಿಜವೆನ್ನಿಸಿತು ಪದ್ಮಿನಿಗೆ ಅವಳ ಮಾತನ್ನು ಮೀರಿ ಮನೆಯಲ್ಲಿಯೇ ಉಳಿಯುವುದು ಪದ್ಮಿನಿಗೆ ಸಾಧ್ಯವಿರಲಿಲ್ಲ

ಎರಡು ದಿನಗಳ ಮೇಲೆ ಗೀತಾ ಮತ್ತೆ ಬಿರುಗಾಳಿಯಂತೆ ಪದ್ಮಿನಿಯ ಮನೆಗೆ ಬೀಸಿ ಬಂದು ಅವಳನ್ನು ಹಾರಿಸಿಕೊಂಡು ಹೋದಳು

ಈ ಬಾರಿ ಅವರು ಹೋದುದು ಬೃಂದಾವನಕ್ಕೆ

ಕಾವೇರಿ ಜಲಾಶಯದ ಬಳಿ ಎಲ್ಲರೂ ದೋಣಿಗಳಲ್ಲಿ ವಿಹಾರ ಹೋಗಿ ಬಂದರು ಹಿಂತಿರುಗಿ ಮತ್ತೆ ದಡಕ್ಕೆ ಬಂದನಂತರ ಗೀತಾ ತಮಾಷೆಯಾಗಿ,

"ನಮ್ಮಲ್ಲೀ ಯಾರಿಗಾದರೂ ಹುಟ್ಟು ಹಾಕೋಕೆ ಬಂದಿದ್ದರೆ ಚೆನ್ನಾಗಿತ್ತು—ಆಗ ನಾವು ನಾವೇ ಹೋಗಬಹುದಾಗಿತ್ತು" ಎಂದಳು.

"ನನಗೆ ಬರುತ್ತದೆ ಬರ್ತೀಯ, ನಾನು ಕರ್ಕೊಂಡು ಹೋಗ್ತೀನಿ" ಎಂದು ವಿಶ್ವನಾಥ

"ನಿನಗೆ ಬರೋದು ನನ್ನ ಜೊತೆ ಜಗಳ ಕಾಯೋದು " ವಿಶ್ವನಾಥ !

ಅಲ್ಲಿಯೇ ಇದ್ದ ಅಂಬಿಗನ ಕೈಲಿ ಒಂದು ರೂಪಾಯಿ ನಾಣ್ಯವನ್ನೆಸೆದು, "ಈ ದೋಣಿ ನನಗೆ ಕೊಟ್ಟಿರು ಇನ್ನು ಹತ್ತು ನಿಮಿಷಗಳಲ್ಲಿ ನಿನಗೇ ಕೊಡುತ್ತೇನೆ" ಎಂದ

ಅಂಬಿಗ ಮೊದಲು ಸ್ವಲ್ಪ ಹಿಂಜರಿದರೂ ಆಮೇಲೆ ಒಪ್ಪಿಕೊಂಡು ದೋಣಿಯನ್ನು ವಿಶ್ವನಾಥನ ವಶಕ್ಕೆ ಒಪ್ಪಿಸಿದ

"ನಡೆಯಿರಿ, ಗೀತಾದೇವಿ" ವಿಶ್ವನಾಥ ಹೇಳಿದ

ಈಗ ಗೀತಳಿಗೆ ನಿಜವಾಗಿಯೂ ಹೆದರಿಕೆಯಾಯಿತು ಆದರೆ ಹೆದರಿಕೆಯಾಗುತ್ತಿದೆ ಎಂದು ಹೇಳಲು ಅಭಿಮಾನ ಅವಳನ್ನು ಬಿಡಲಿಲ್ಲ

"ಬೇಡಪ್ಪ—ಆಮೇಲೆ ತುಂಬಾ ಕಷ್ಟವಾಗಿಬಿಡುತ್ತದೆ "

"ಹೆದರಿಕೆ ಬರೋಕೆ ಅಲ್ವಾ ?" ವಿಶ್ವನಾಥ ರೇಗಿಸಿದ

"ನಂಗೇನು ಹೆದರಿಕೆಯಿಲ್ಲ" ಎಂದು ಗೀತ ರಭಸದಿಂದ ದೋಣಿಯೊಳಗೆ ಕಾಲಿಟ್ಟು ಕುಳಿತುಕೊಂಡಳು

ವಿಶ್ವನಾಥ ದಡದ ಮೇಲಿನಿಂದ ದೋಣಿಯೊಳಗೆ ಹಾರಿದ ಅವನು ಹಾರಿದ ಆ ವೇಗಕ್ಕೆ ಉಯ್ಯಾಲೆಯಾಡಿತು ಗೀತಳಿಗೆ ಹೆದರಿಕೆಯಿಂದ ಚೀರಿಕೊಳ್ಳುವಂತಾಯಿತು

ವಿಶ್ವನಾಥ ಹುಟ್ಟನ್ನು ಕೈಗೆ ತೆಗೆದುಕೊಂಡ

ದೋಣಿ ನಿಧಾನವಾಗಿ ಸಾಗಿತು ವಿಶ್ವನಾಥ ಗೀತನ ಕಡೆ ತಿರುಗಿ,

"ದಡದಲ್ಲಿ ನಿಂತಿರುವವರಿಗೆ 'ಗುಡ್ ಬೈ' ಹೇಳಿಬಿಡು ಇನ್ನು ನಾನು ನೀನು ದಡಕ್ಕೆ ಹಿಂತಿರುಗುವ ಹಾಗಿಲ್ಲ" ಎಂದ

ಗೀತ ಭೀತಿಯಿಂದ ಯಾಕೋ !" ಎಂದಳು

"ನನಗೆ ಹುಟ್ಟುಹಾಕೋದಕ್ಕೆ ಬರೋದಿಲ್ಲ ದೋಣಿ ಆಗಲೇ ನನ್ನ ಹತೋಟಿ ಮೀರಿ ಹೋಗುತ್ತಿದೆ ನೋಡು, ನೀನು ಹಾಗೆ ಕೈಯನ್ನು ನೀರಿನೊಳಗೆ ಆಡಿಸಬೇಡ ಇಲ್ಲಿ ತುಂಬಾ ಮೊಸಳೆಗಳಿವೆ ಆಮೇಲೆ ಯಾವುದಾದರೂ ಮೊಸಳೆ ನಿನ್ನ ಕೈಯನ್ನ ಕತ್ತರಿಸಿಕೊಂಡುಹೋದರೆ ಆಮೇಲೆ ನಾನೇ ನಿನ್ನ ಮದುವೆ ಮಾಡಿಕೊಳ್ಳಬೇಕಾಗುತ್ತದೆ !"

"ನಿನ್ನ ಮದುವೆ ಮಾಡಿಕೊಳ್ಳೋಕೆ ಬದಲಾಗಿ ಮೊಸಳೆ ಕೈಲಿ ಎಳೆಸಿಕೊಂಡು ಹೋಗುವುದೇ ವಾಸಿ !"

"ನಾನು ಮೊಸಳೆಗಿಂತಲೂ ಕ್ರೂರಳಾಂತ ನಿನ್ನ ಭಾವನೆಯೇ ?ಆಗಲಿ, ದೋಣೀನ ಬೇಕೆಂದು ಮುಳುಗಿಸಿಬಿಡುತ್ತೀನಿ "

"ನಾನು ಮುಳುಗಿದರೆ ನೀನೂ ಮುಳುಗುತ್ತೀಯಾ "

"ನನಗೆ ಈಜು ಬರುತ್ತದೆ ನಾನು ಈಜಿಕೊಂಡು ಹೋಗಿ ದಡ ಸೇರುತ್ತೇನೆ "

"ಆಮೇಲೆ ಅಣ್ಣನಿಗೆ ಮುಖ ತೋರಿಸುವ ಧೈರ್ಯ ನಿನಗಿರುತ್ತದೆಯೇ ?"

"ನಾನೇನು ಮಾವನಿಗೆ ಹೆದರಿಕೊಳ್ಳೋದಿಲ್ಲ "

"ಮಾವನ ಮಗಳಿಗೆ ?"

"ಯಾರಿಗೂ ಹೆದರೋಲ್ಲ "

"ನನ್ನ ಮುಳುಗಿಸಬೇಕೂಂತ ನಿನಗೆ ಅಷ್ಟೊಂದು ಆಸೆ ಇದೆಯೇನೊ ?"

"ಹೂಂ "

"ಹಾಗಾದರೆ ನಾನಾಗೇ ನೀರಿನಲ್ಲಿ ಧುಮುಕಿ ಬಿಡುತ್ತೇನೆ ನನ್ನ ನೀರಿನಲ್ಲಿ ಮುಳುಗಿಸಿದ ಪಾಪ ನಿನಗೇಕೆ ?"

"ಬಹಳ ಸಂತೋಷ "

ಗೀತ ಎದ್ದು ನಿಂತು ಸೆರಗನ್ನು ನಡುವಿಗೆ ಬಿಗಿಯಾಗಿ ಕಟ್ಟಿ ಕೈ ಮುಗಿದು,

"ಗಂಗಾಮಾತಾ, ನನ್ನ ನಿನ್ನ ಮಡಿಲಲ್ಲಿ ಸೇರಿಸಿಕೊಳ್ಳಮ್ಮ " ಎನ್ನುತ್ತಿದ್ದಂತೆ ವಿಶ್ವನಾಥ ಅವಳ ಕೈಯನ್ನು ಬಿಗಿಯಾಗಿ ಹಿಡಿದು ಹಿಂದ ಕ್ಕೆಳೆದು,

" ನೀನು ಮುಳುಗಿಬಿಟ್ಟಿದ್ದರೆ ನನ್ನ ಗತಿ ?" ಎಂದ

"ಅಣ್ಣನಿಗೆ ಹೆದರೋದಿಲ್ಲಾಂತ ಹೇಳಿದೆ ?"

"ಮಾವನಿಗೆ ಹೆದರೋದಿಲ್ಲ ಆದರೆ ನೀನು ಮುಳುಗಿದರೆ ನಾನೂ ನಿನ್ನ ಜೊತೆ ಮುಳುಗಬೇಕಾಗುತ್ತದೆ "

"ಯಾಕೋ ? "

"ನೀನಿಲ್ಲದ ಮೇಲೆ ನಾನು ಹೇಗೆ ಬದುಕಿರಲಿ?"—ಮಾತಿಗೆ ಮಾತು,

ಸವಾಲಿಗೆ ಸವಾಲು ಜೋಡಿಸುತ್ತಿದ್ದ ಗೀತಾ ಈಗ ನಿರುತ್ತರಳಾದಳು

ಗೀತ ವಿಶ್ವನಾಥ ಹಿಂತಿರುಗಿ ಬಂದೊಡನೆ ಎಲ್ಲರೂ,

"ಸದ್ಯ, ಕ್ಷೇಮವಾಗಿ ಬಂದಿರಲ್ಲಾ" ಎಂದರು

"ನೋಡಣ್ಣ, ಇವನು ನನ್ನ—ನೀರಿಗೆ ತಳ್ಳಿ ಬಿಡ್ತೀನೀಂತ ಹೆದರಿಸಿದ" ಗೀತ ಹೇಳಿದಳು

"ಈ ಚಾಮುಂಡೇಶ್ವರೀನ ನಾನು ಹೆದರಿಸೋದು ಸಾಧ್ಯವೇ ? ನಾನು ಜೀವಸಹಿತ ನಿಮ್ಮೆದುರಿಗಿರೋದೇ ಒಂದು ಪವಾಡ !"

ಕಾವೇರಮ್ಮ "ಲಕ್ಷಣವಾಯ್ತು ! ನೀವಿಬ್ಬರೂ ಹೀಗೆ ಜಗಳ ವಾಡುತ್ತಾ ಕುಳಿತರೆ ಗತಿಯೇನು ?" ಎಂದರು

ಮಿತಭಾಷಿ ಭವಾನಿ ನಸುನಗೆಯಿಂದ ಹೇಳಿದಳು

"ಸುಮ್ಮನಿರಮ್ಮ ನಮ್ಮಗಳ ಎದುರಿಗೆ ಇಬ್ಬರೂ ಕಚ್ಚಾಡುತ್ತಾರೆ ನಾವುಗಳು ಯಾರೂ ಇಲ್ಲದಿದ್ದರೆ ಇಬ್ಬರೂ ಒಬ್ಬರ ಕೈಲೊಬ್ಬರು ಮಾತು ಸಹ ಆಡೋದಿಲ್ಲ ಸುಮ್ಮನೆ ಒಬ್ಬರನ್ನೊಬ್ಬರು ನೋಡ್ತಾ ಕೂತಿರುತ್ತಾರೆ"

"ಕಂಡೋಳಿಗಿಂತ ಹೆಚ್ಚಾಗಿ ಹೇಳ್ತಿಯಲ್ಲೇ, ಭವಾನಿ ?" ವಿಶ್ವನಾಥ ಕೇಳಿದ

"ನೆನ್ನೆ ಗೀತಾ ರೂಮಿನಲ್ಲಿ ಸ್ವೆಟರ್ ಹಾಕುತ್ತಿದ್ದಾಗ ನೀನು ಯಾರಿಗೋ ಗೆಳೆಯನಿಗೆ ಕಾಗದ ಬರೆಯೋಕೆ ಪೆನ್ನು ಬೇಕೂಂತ ಅವಳ ರೂಮಿಗೆ ಹೋದಾಗ ನೀವಿಬ್ಬರೂ ಒಂದು ಮಾತನಾಡಿದಿರಾ? ಮಂಚದ ಮೇಲೆ ಹಾಸಿಗೆಯ ಸುರುಳಿಯನ್ನೊರಗಿಕೊಂಡು ಗೀತಾ, ಕುರ್ಚಿಯ ಮೇಲೆ ತಾವು ತಾವೇನು ಗೀತನ ತಲೇಲಿದ್ದ ಕೂದಲನ್ನು ಎಣಿಸುತ್ತಿದ್ದಿರಾ, ರಾಯರೇ ? ಕೊನೆಗೆ ಸ್ನೇಹಿತನಿಗೆ ಕಾಗದ ಬರೆದಿರಾ ? ನಾನು ಯಾಕೋ ರೂಮಿಗೆ ಹೋದ ಕೂಡಲೇ ಜಗಳಕ್ಕೆ ಪ್ರಾರಂಭಿಸಿದರು"

"ಸುಳ್ಳಣ್ಣ, ನಂಬಬೇಡ" ಗೀತ ಪ್ರತಿಭಟಿಸಿದಳು

ಮೂರ್ತಿ ಸ್ನೇಹದಿಂದ ಮಗಳ ಭುಜ ತಟ್ಟಿದರು ಆದರೆ ಏನೂ ಮಾತನಾಡಲಿಲ್ಲ

ಮೂರ್ತಿಯ ಹೃದಯ ಮಾವಿನ ಚಿಗುರನ್ನು ಕಂಡ ಕೋಗಿಲೆಯಂತೆ ಉಲಿಯಿತು. ಗೀತ, ವಿಶ್ವನಾಥ ಇವರ ಜೀವನದಿಗಳ ಸಂಗಮ ಎಲ್ಲರಿಗೂ

ಅತ್ಯಂತ ಪ್ರಿಯವಾಗಿತ್ತು

ಆದರೆ ಯಾರೂ ಈ ಬಗ್ಗೆ ಒಂದೂ ಮಾತನ್ನಾಡಿರಲಿಲ್ಲ ಆದರೂ ಅವರಿಬ್ಬರೂ ಒಂದಲ್ಲ ಒಂದು ದಿನ ದಂಪತಿಗಳಾಗುವರೆಂದು ಎಲ್ಲರಿಗೂ ತಿಳಿದಿತ್ತು

ಪ್ರೇಮಪಾಶಕ್ಕೆ ಸಿಕ್ಕಿ ಒದ್ದಾಡುವಷ್ಟು ದೊಡ್ಡ ಮಗಳ ತಂದೆಯಾದ ತಾನು ತರುಣನಂತೆ

ಮೂರ್ತಿ ಪ್ರಯತ್ನಪೂರ್ವಕವಾಗಿ ಆಲೋಚನೆಯನ್ನು ತಮ್ಮ ಮನಸ್ಸಿನಿಂದ ತಳ್ಳಿದರು

ಆದರೆ ಬೆಳುದಿಂಗಳ ರಾತ್ರಿಯಲ್ಲಿನ ಉಬ್ಬರವಿಳಿತಗಳಿಂದ ಕೂಡಿದ ಮಹಾಸಾಗರವಾಗಿತ್ತು ಅವರ ಮನಸ್ಸು ಅವರ ಬದುಕಿನಲ್ಲಿ ಪ್ರೇಮ ಚಂದ್ರನ ಉದಯವಾಗಿತ್ತು ಚಂದ್ರಿಕೆಯ ಚೆಲುವಿನಲ್ಲಿ ತೆರೆಗಳ ಮೇಲೆ ತೆರೆಗಳೇಳುತ್ತಿದ್ದುವು ಪೂರ್ಣಿಮೆಯ ರಾತ್ರಿ ಅಲೆಗಳಾಟ ಹೆಚ್ಚು ಅದನ್ನು ತಡೆಗಟ್ಟುವವರು ಯಾರು ?

ಪದ್ಮಿನಿಯ ಎದುರಿಗೆ ಮೂರ್ತಿ ವಿಹ್ವಲರಾಗುತ್ತಿದ್ದರು ಅವಳ ಮಾತುಗಳನ್ನು ಕೇಳಿ ತನ್ಮಯರಾಗುತ್ತಿದ್ದರು ಅವಳು ಕಣ್ಮರೆಯಾದಾಗ ಪ್ರಿಯರಾದವರನ್ನು ಕಳೆದುಕೊಂಡ ಮಗುವಿನಂತೆ ಚಡಪಡಿಸುತ್ತಿದ್ದರು ಪದ್ಮಿನಿ ತಮ್ಮ ಬಳಿ ಸುಳಿದಾಗ ಅವಳ ಯೌವನ ಇವರಲ್ಲಿಯೂ ಯೌವನ ವನ್ನು ಚಿಮ್ಮಿಸುತ್ತಿತ್ತು ತಮ್ಮ ಸುತ್ತಲೂ ತಾವಾಗಿಯೇ ಹೆಣೆದುಕೊಂಡ ಒಲವಿನ ಬಲೆಯಲ್ಲಿ ಮೂರ್ತಿ ನಿತ್ಯಪ್ರೇಮಿ, ಚಿರವಿರಹಿ, ಚಂಚಲಸನ್ಯಾಸಿ

ಇದು ತೀರದ ದಾಹ, ಆರದ ಬಯಕೆ, ನನಸಾಗದ ಕನಸು ಎಂದು ಕೊಂಡರು ಮೂರ್ತಿ ತಮಗೆ ಸ್ವಲ್ಪ ಹಿಂದೆ ಬರುತ್ತಿದ್ದ ಗುಂಪಿನ ಕಡೆ ದೃಷ್ಟಿ ಹಾಯಿಸಿದಾಗ, ಬಣ್ಣದ ಬೆಳಕಿನ ಮಾಯಾನಗರದಲ್ಲಿ ಅಪ್ಸರೆಯಂತೆ ಕಂಗೊಳಿಸುತ್ತಿದ್ದ ಪದ್ಮಿನಿ ಅವರ ಕಣ್ಣಿಗೆ ಬಿದ್ದಳು

ಭಾರವಾಗಿದ್ದ ಕಾಲುಗಳನ್ನು ಎಳೆಯುತ್ತಾ ಮೂರ್ತಿ ವಿಶ್ವನಾಥನಿಗೆ,

"ಕಾರನ್ನು ನೀನೇ ಡ್ರೈವ್ ಮಾಡು, ವಿಶ್ವನಾಥ. ನನಗೇಕೋ ತಲೆ ನೋಯುತ್ತಿದೆ" ಎಂದರು

"ಅಣ್ಣಾ, ನಮಗೆಲ್ಲ ಇನ್ನೊಂದಿಷ್ಟು ವರ್ಷ ಬದುಕಬೇಕೂಂತ ಆಸೆ

ಯಿದೆ” ಎಂದಳು ಗೀತಾ

“ನೀನು ಹೀಗೇ ಹೇಳ್ತಾ ಇರು—ಕಾರನ್ನು ತಗೊಂಡು ಹೋಗಿ ಹಳ್ಳಕ್ಕೆ ಕೆಡವಿಬಿಡುತ್ತೇನೆ ”

“ಸಾಕ್ರೆ ಜಗಳ” ಎಂದು ಗದರಿಸಿದರು ಕಾವೇರಮ್ಮ

ಹದಿನೈದು ದಿನಗಳ ಕಾಲ ‘ಸುದರ್ಶನ’ದಲ್ಲಿ ಸಂಭ್ರಮದ ಬೆಳಕನ್ನು ಚೆಲ್ಲಿ ಮಾತಿನ ಪಟಾಕಿ ಹಾರಿಸುತ್ತಿದ್ದ ನೆಂಟರು ಊರಿಗೆ ಹೊರಟು ನಿಂತರು

ಕಾವೇರಮ್ಮ ಗೀತಳನ್ನು ತಮ್ಮೊಡನೆ ಹದಿನೈದು ದಿನಗಳ ಮಟ್ಟಿಗೆ ಬರುವಂತೆ ಬಲವಂತ ಮಾಡಿದರು

“ಇಲ್ಲ, ಅತ್ತೆ ನಾನು ಇನ್ನ್ಯಾವಾಗಲಾದರೂ ಬರ್ತೀನಿ ನಾಳೆ ಯಿಂದ ಕಾಲೇಜು ಬಾಗಿಲು ತೆಗೆಯುತ್ತದೆ ನಾನು ಈಗ ಬರೋಲ್ಲ” ಎಂದಳು ಗೀತ

“ನೀನು ಬಂದರೆ ನಮಗೆಲ್ಲಾ ಸಂತೋಷವಾಗುತ್ತದೆ ”

“ನನ್ನೊಬ್ಬನನ್ನು ಬಿಟ್ಟು” ಎಂದ ವಿಶ್ವನಾಥ

ಗೀತ ರೇಗಿ ನುಡಿದಳು “ವಿಶ್ವನಾಥ ಬೆಂಗಳೂರಿನಲ್ಲಿರುವವರೆಗೆ ನಾನು ಅಲ್ಲಿಗೆ ಬರೋದಿಲ್ಲ, ಅತ್ತೆ ಈ ಸಲ ರಿಸರ್ಚ್ ಮುಗಿಸಿ ಯಾವುದಾದರೂ ಊರಿಗೆ ಕೆಲಸಕ್ಕೆ ಹೋದಮೇಲೆ ಬರ್ತೀನಿ ನಾನು ಖಂಡಿತ ಬರೋದಿಲ್ಲ ”

“ಅಯ್ಯೋ ! ಅಷ್ಟೊಂದು ಪುಣ್ಯ ನಾನೆಲ್ಲಿ ಮಾಡಿದೀನಿ ನೀನು ಬಂದೇ ಬರ್ತೀಯ ನಿನ್ನ ಸಹಿಸುವುದು ನನಗೆ ಅನಿವಾರ್ಯವಾಗಿದೆ ”

“ನೋಡಿ—ಅತ್ತೆ ”

“ಸಾಕು ಸುಮ್ಮನಿರೊ ಹುಡುಗೀನ ಎಷ್ಟೊಂತ ಕೀಟಲೆಮಾಡ್ತೀಯ? ನಾಳೆ ಮದುವೆಯಾದಮೇಲೂ ಹೀಗಾಡಿದರೆ ಏನು ಗತಿ ?”

“ಗೀತಾದೇವಿ, ಈ ಬಗೆಯ ಮಾತಿನ ಶಿಕ್ಷೆಯನ್ನು ನನಗೆ ತಪ್ಪಿಸಿದರೆ ಈ ದಾಸ ತಮ್ಮ ಪಾದಸೇವೆ ಮಾಡಿಯಾನು ”

“ಇವನನ್ನು ಮದುವೆ ಮಾಡಿಕೊಳ್ಳುವ ಬದಲು ನಾನು ಹಾಳು ಬಾವಿಗೆ ಬೀಳ್ತೀನಿ”

“ದಯವಿಟ್ಟು ಹಾಗೆ ಮಾಡಿದರೆ ನಾನು ಬದುಕಿಕೊಳ್ಳುತ್ತೇನೆ ಇಲ್ಲೆಲ್ಲೂ ಬಾವಿ ಇಲ್ಲದೆ ಇದ್ದರೆ ಬೇಕಾದರೆ ಮಾವನಿಗೆ ಹೇಳಿ ನಾನೇ

ಬಾವಿ ತೋಡಿಸುತ್ತೇನೆ "

"ನಿಮ್ಮ ಜಗಳಕ್ಕೆ ಕೊನೆಮೊದಲೇ ಇಲ್ಲ" ಎಂದು ಗೊಣಗಿ ಕಾವೇರಮ್ಮ ಒಳಗೆ ಹೋದರು ಅವರು ಕಣ್ಮರೆಯಾದ ಕೂಡಲೇ ವಿಶ್ವನಾಥ ಗೀತಳ ಕಡೆ ಸಿಹಿನಗೆ ಬೀರಿ ಮೃದುವಾಗಿ ಕೇಳಿದ

"ಬರೋದಿಲ್ಲವೇ ಗೀತಾ ನಮ್ಮ ಜೊತೆ ?"

"ಬರುತ್ತೀನಿ "

"ಮತ್ತೆ ಅಮ್ಮನ ಕೈಲಿ ಬರೋದಿಲ್ಲಾಂತ ಹೇಳುತ್ತಿದ್ದೆ?"

"ನಿನ್ನಿಂದ ನನಗೆ ಆಹ್ವಾನ ಬರಲೀಂತ ಹಾಗೆ ಹೇಳುತ್ತಿದ್ದೆ "

ವಿಶ್ವನಾಥ ಎರಡು ಕೈಗಳನ್ನೂ ಜೋಡಿಸಿ ನಾಟಕದ ಪಾತ್ರಧಾರಿಯಂತೆ,

"ಗೀತಾದೇವಿ, ತಾವು ಬಡವರ ಗುಡಿಸಿಲಿಗೆ ದಯಮಾಡಿಸಿ ತಮ್ಮ ಪಾದಧೂಳಿನಿಂದ ನಮ್ಮ ಕುಟೀರವನ್ನು ಪವಿತ್ರವನ್ನಾಗಿಸಬೇಕಾಗಿ ಈ ದೀನನ ಪ್ರಾರ್ಥನೆ" ಎಂದ

"ತಥಾಸ್ತು" ಎಂದಳು ಗೀತಾ ಗಂಭೀರಳಾಗಿ ಮರುಕ್ಷಣವೇ ಏನನ್ನೋ ಜ್ಞಾಪಿಸಿಕೊಂಡು ಗೀತಾ ಹೇಳಿದಳು

"ನಾಳೆಯಿಂದ ಕಾಲೇಜು ಬಾಗಿಲು ತೆಗೆಯುತ್ತದೆ ಅನ್ಯಾಯವಾಗಿ ಪಾಠಗಳು ತಪ್ಪಿಹೋಗುತ್ತದೆ "

"ನಿನ್ನ ಗೆಳತಿ ಕೈಲಿ ಪಾಠ ಹೇಳಿಸಿಕೋ "

"ಅದೇನೋ ಸರಿ ಆದರೂ "

"ಸರಿ ನಿನ್ನಿಷ್ಟಾವಮ್ಮ" ಎಂದ ವಿಶ್ವನಾಥ ದಪ್ಪ ದನಿಯಲ್ಲಿ

"ಸದ್ಯ ಬರುತ್ತೀನಿ, ಮಹರಾಯ ನೀನು ಹಾಕಿರುವ ಹುಬ್ಬುಗಂಟನ್ನು ಮೊದಲು ಬಿಚ್ಚು "

ಗೀತ ಅವರೊಡನೆ ಹೊರಡುವುದು ನಿಶ್ಚಯವಾಯಿತು

ಗೀತಳನ್ನೂ ಕಳುಹಿಸಿಬಿಟ್ಟು ಅಷ್ಟು ದೊಡ್ಡ ಮನೆಗೆಲ್ಲಾ ತಾವು ಒಬ್ಬರೇ ಹೇಗೆ ಇರುವುದು ಎಂದು ಮೂರ್ತಿಗೆ ದಿಗಿಲಾಯಿತು

ಮನೆಗೆ ಬಂದಿದ್ದವರು ಗೀತಳನ್ನು ಕರೆದುಕೊಂಡು ಹೊರಟುಹೋದ ಮೇಲೆ ಮೂರ್ತಿಗೆ ತಾವು ಮರುಭೂಮಿಯಲ್ಲಿ ವಾಸವಾಗಿರುವಂತೆ ಭಾಸ

ವಾಯಿತು.

ವಿಶ್ವನಾಥ, ಗೀತನ ವಾಗ್ವಾದ, ಚಿಕ್ಕ ಹುಡುಗರ ಆಟ, ಭವಾನಿಯ ಸಂಗೀತ ಇವುಗಳಿಂದ ಮನೆ ಯಾವಾಗಲೂ ಮದುವೆಯ ಮನೆಯಂತಿತ್ತು

ಮುಂದಾದರೂ ಇಷ್ಟೇ—ಗೀತ ಎಷ್ಟು ದಿನ ಈ ಮನೆಯಲ್ಲಿ ಇರುತ್ತಾಳೆ ? ಒಂದಲ್ಲ ಒಂದು ದಿನ ವಿಶ್ವನಾಥ ಅವಳನ್ನು ತನ್ನೊಡನೆ ಕರೆದುಕೊಂಡು ಹೊರಟುಹೋಗುತ್ತಾನೆ ಆಮೇಲೆ ಮನೆಯಲ್ಲಿ ತಾನು, ತಾತ ಇಬ್ಬರೇ

ಮನಸ್ಸಿನ ಬೇಸರವನ್ನು ತಡೆಯಲಾರದೇ, ಜನಶೂನ್ಯವಾಗಿದ್ದ ಮನೆಯಲ್ಲಿ ಒಂದು ಗಳಿಗೆ ನಿಲ್ಲಲಾರದೇ ಮೂರ್ತಿ ಕ್ಲಬ್ಬಿನ ಕಡೆ ಧಾವಿಸಿದರು

ಮೂರ್ತಿಯ ಗೆಳೆಯರು ಹರ್ಷೋದ್ಗಾರಗಳಿಂದ ಅವರನ್ನು ಸ್ವಾಗತಿಸಿದರು

"ಯಾವ ಬಿರುಗಾಳಿ ನಿನ್ನ ಇಲ್ಲಿ ತಂದು ಎಸೆಯಿತೋ ?" ಎಂದು ಮಹದೇವ್ ಕೇಳಿದರು

"ಗೀತಾ ಊರಿನಲ್ಲಿಲ್ಲ, ಅದಕ್ಕೇ ಬೇಜಾರಾಯಿತು "

"ಪ್ರಿನ್ಸೆಸ್ ಎಲ್ಲಿಗೆ ಹೋದಳು ?"

"ಅವಳ ಅತ್ತೇ ಮನೆಗೆ "

"ನಮಗೆ ಭರ್ಜರಿ ಊಟ ಹಾಕಿಸದೆ ಅವಳನ್ನು ಅತ್ತೆ ಮನೆಗೆ ಕಳುಹಿಸಿಬಿಟ್ಟೆಯಾ ?"

"ಈಗ ಅನ್‌ಅಫಿಶಿಯಲ್ ಆಗಿ ಕಳುಹಿಸಿದ್ದೇನೆ ಅಫಿಶಿಯಲ್ ಆಗಿ ಕಳುಹಿಸುವಾಗ ಹಾಕುತ್ತೇನೆ "

ದುಂಡುಮೇಜೊಂದರ ಮುಂದ ಕುಳಿತು ಬ್ರಿಡ್ಜ್ ಆಡುತ್ತಿದ್ದ ಯಮುನಾ ಮೂರ್ತಿಯನ್ನು ನೋಡಿ ರಂಗು ಬಳಿದಿದ್ದ ತುಟಿಗಳನ್ನು ಅರಳಿಸಿ ನಕ್ಕಳು ಮೂರ್ತಿಯೂ ನಕ್ಕರು–ಯಾಂತ್ರಿಕವಾಗಿ. ಆಕೆ ಕೈಲಿ ಹಿಡಿದಿದ್ದ ಕಾರ್ಡ್ಸ್‌ನ್ನು ಮೇಜಿನ ಮೇಲೆ ಒಗೆದು, ಮೂರ್ತಿಯ ಬಳಿಗೆ ಎದ್ದು ಬಂದಳು

ಬಣ್ಣ ಬಳಿದಿದ್ದ ಮುಖ, ಕೆಂಪು ಬಳಿದಿದ್ದ ತುಟಿಗಳು , ದೂರದಿಂದ ಮನೋಹರವಾಗಿ ಕಂಡರೂ ಅವಳು ಹತ್ತಿರ ಬಂದಂತೆ ಅವಳ ಮುಖ

ವಿಕಾರವಾಗಿ ಕಾಣತೊಡಗಿತ್ತು ಮೂರ್ತಿಗೆ

ಮುಖವನ್ನು ಕಬಳಿಸತೊಡಗಿದ್ದ ಮುಪ್ಪನ್ನು ಮುಚ್ಚಲು ಆಕೆ ಭಗೀರಥ ಪ್ರಯತ್ನ ಮಾಡಿದಂತಿತ್ತು

ಆ ಬೊಜ್ಜು ಮೈ, ಮಾಂಸದ ಪದರುಗಳಿಂದ ಜಗ್ಗುತ್ತಿದ್ದ ಕೆನ್ನೆಗಳು ತಿಳಿನೀಲಿ ಬಣ್ಣದ ಬೆಳಕಿನಲ್ಲಿ ಯಮುನಾ ಛಾಯೆಯಿಂದ ನರಳುತ್ತಿರುವವಳಂತೆ ಕಂಡಳು

'ನಾನು ಬೆಳ್ಳಗಿದ್ದೇನೆ ಇವಳು ನನ್ನ ಮುಖಕ್ಕೆ ಕಪ್ಪು ಬಳಿದಿದ್ದಾಳೆ' ಎಂದು ತಲೆಗೂದಲಿನ ಒಳಪದರ ಕೂಗಿ ಹೇಳಿತು

ಅವಳು "ಹಲೋ !" ಎಂದಳು

"ಯಾಕೆ, ಆಟ ಬಿಟ್ಟು ಎದ್ದು ಬಂದಿರಿ ?"

"ಬೇಜಾರಾಯಿತು "

"ಸರಿ "

"ನೀವೆಲ್ಲಾ ದೊಡ್ಡ ಮನುಷ್ಯರು ನಮ್ಮಂತಹ ಬಡವರನ್ನು ಲಕ್ಷಿಸುವುದೇ ಇಲ್ಲ "

"ಹೌದೇನು ?"

"ಇವತ್ತು ಬರ್ತೀರಾ ಮನೆಗೆ ?"

"ಕ್ಷಮಿಸಿ, ಮಿಸೆಸ್ ದೀಕ್ಷಿತ್"

"ಯಾವತ್ತಿನಿಂದ ನಾನು ಮಿಸೆಸ್ ದೀಕ್ಷಿತಳಾದೆನೋ ?" ಎಂದು ವ್ಯಂಗ್ಯ ನಗೆ ಬೀರಿ ಕೇಳಿದಳು ಯಮುನಾ

ಪದ್ಮಿನಿಯನ್ನು ನೋಡಿದಾಗಿನಿಂದ–ಅಷ್ಟೇಕೆ ಪರಿಚಯವಾದ ದಿನದಿಂದಲೂ ಆಕೆಯನ್ನು ತಾನು 'ಯಮುನಾ' ಎಂದು ಮನಃಪೂರ್ವಕವಾಗಿ ಕರೆದಿರಲಿಲ್ಲ

ಯಮುನಾ ಮೂರ್ತಿಯ ಕರುಣಾಕಟಾಕ್ಷಕ್ಕೆ ಪಾತ್ರಳಾದ ಮೇಲೂ ಅವರು 'ಮಿಸೆಸ್ ದೀಕ್ಷಿತ್' ಎಂದೇ ಅವಳನ್ನು ಸಂಬೋಧಿಸುತ್ತಿದ್ದರು. 'ಯಮುನಾ' ಎಂಬ ಆತ್ಮೀಯ ಕರೆ ಅವರ ಬಾಯಿಂದ ಸುಲಭವಾಗಿ ಬರುತ್ತಿರಲಿಲ್ಲ ಆದರೆ 'ಮಿಸೆಸ್ ದೀಕ್ಷಿತ್' ಎಂದು ಮೂರ್ತಿ ಒಂದು ಬಾರಿ ಕೂಗಿದಾಗ ಯಮುನಾ ಕಣ್ಣಿನಲ್ಲಿ ಕಂಬನಿ ಮಿಡಿದು,

"ಯಮುನಾ ಎಂದು ಕರೆಯಿರಿ" ಎಂದು ಕೇಳಿಕೊಂಡಿದ್ದಳು ಅವಳು ಹಾಗೆ ಕೇಳಿಕೊಂಡಾಗಲೂ ಮೂರ್ತಿಯ ನಾಲಗೆ ಒಂದು ಕ್ಷಣ ತಡೆಯಿತು ಅವಳನ್ನು ನೋಯಿಸಬಾರದೆಂಬ ಒಂದು ಉದ್ದೇಶದಿಂದ ಮಾತ್ರ ಅವರು ಅವಳನ್ನು 'ಯಮುನಾ' ಎಂದು ಕರೆಯುತ್ತಿದ್ದರು

ಇನ್ನು ಆಕೆ 'ಯಮುನ'ಳಾಗುವುದು ಈ ಜನ್ಮದಲ್ಲಿ ಸಾಧ್ಯವಿರಲಿಲ್ಲ

ಯಮುನಾಳ ಪ್ರಶ್ನೆಗೆ ಮೂರ್ತಿಯಿಂದ ದೊರೆತ ಉತ್ತರ—ಒಂದು ತುಂಟ ನಗೆ

"ಇವತ್ತು ಡಾಕ್ಟರ್ ಬೆಳ್ಳಿಯಪ್ಪ, ನಾಯಿಡು, ಚೆನ್ನಕೇಶವಯ್ಯ ನವರನ್ನು ನಮ್ಮ ಮನೆಗೆ ಆಹ್ವಾನಿಸಿದ್ದೇನೆ ನೀವೂ ಬನ್ನಿ "

"ಏನಿವತ್ತು ನಿಮ್ಮ ಮನೇಲಿ ?"

"ಅವತ್ತು ಟೆನ್ನಿಸ್ ಆಡಿದಾಗ—ನಾನು ಗೆದ್ದರೆ ಪಾರ್ಟಿ ಇಟ್ಟು ಕೊಳ್ಳುತ್ತೀನೀಂತ ಹೇಳಿದ್ದೆ ನನ್ನ ಮಾತು ಉಳಿಸಿಕೊಳ್ಳಬೇಕೋ ಬೇಡವೋ ?"

"ಸರಿ "

"ಬರ್ತೀರಾ ?"

"ಊಹೂಂ "

"ಯಾಕೆ ಬರೋದಿಲ್ಲ ? ಗೀತ ಮನೇಲಿ ಕಾಯ್ತಿರುತ್ತಾಳೆ ಎನ್ನುವ ಹಾಗಿದ್ದರೆ ನಾನು ಕ್ಲಬ್ಬಿನ ಜವಾನನ ಕೈಲಿ ನಿಮ್ಮ ಮನೆಗೆ ಚೀಟಿ ಕಳುಹಿ ಸುತ್ತೇನೆ "

"ಗೀತ ಊರಿನಲ್ಲಿಲ್ಲ "

"ಹಾಗಾದರೆ ಬರೋಕೆ ಏನು ಅಡ್ಡಿ ?"

"ಕ್ಷಮಿಸಿ, ಮಿಸೆಸ್ ದೀಕ್ಷಿತ್ ನಾನು ಬರಲಾರೆ "

ಏಟು ತಿಂದ ಮಗು ಛಲದಿಂದ ತಾಯಿಯ ಮೇಲೆ ಬೀಳುವಂತೆ ಯಮುನಾ ಸಿಡುಕಿನಿಂದ ನುಡಿದಳು

"ನೀವು ಯಾಕೆ ಬರೋದಿಲ್ಲ ಎನ್ನುವುದು ನನಗೆ ಗೊತ್ತು "

ಮೂರ್ತಿಗೆ ಒಂದು ಗಳಿಗೆ ಭಯವಾಯಿತು ತಮ್ಮ ಅಂತರಂಗ ಅವಳಿ ಗೇನಾದರೂ ತಿಳಿದಿದೆಯೋ ? ಅವರು ಮಾತನಾಡದೆ ಕಾಂಪೌಂಡಿನಲ್ಲಿದ್ದ

ಬೆಂಚೊಂದರ ಮೇಲೆ ಕುಳಿತರು ಯಮುನಾ ಹಿಂಬಾಲಿಸಿದಳು

"ನನಗೆ ಗೊತ್ತು"—ಅವಳು ವ್ಯಂಗ್ಯವಾಗಿ ಹೇಳಿದಳು

"ನಿನಗೇನು ಗೊತ್ತು ?"

"ಹೇಳಲಾ ?" ವಿಷಲೇಪಿತ ನುಡಿಗಳವು

"ಹೂಂ "

"ನೀವು ಆ ಹುಡುಗಿಯನ್ನು ಪ್ರೀತಿಸುತ್ತಿದ್ದೀರಿ "

ಮೂರ್ತಿಯ ಹೃದಯ ಸ್ತಬ್ಧವಾಯಿತು ಅವರ ಮುಖ ಹುಚ್ಚುಚ್ಚಾಯಿತು

"ಯಾ ಯಾವ ಹುಡುಗಿ ?" ಎಂದವರು ತೊದಲಿದರು

"ನಿಮ್ಮೊಡನೆ ಆ ದಿನ ಚಿತ್ರಕ್ಕೆ ಬಂದಿದ್ದ ಹುಡುಗಿ "

ಆ ಕೊಬ್ಬಿದ ಕೆನ್ನೆಗಳಿಗೆ ಛಟೀಲನೆ ಹೊಡೆಯುವ ಮನಸ್ಸಾಯಿತು ಮೂರ್ತಿಗೆ

"ನೀವು ಹಾಕಿಕೊಂಡಿರುವ ಶರಟಿಗೂ ನಿಮ್ಮ ಮುಖಕ್ಕೂ ಈಗ ಏನೂ ವ್ಯತ್ಯಾಸವಿಲ್ಲ "

"ಹಾಗೇನು ?"

"ನನ್ನ ಮಾತು ನಿಜ ಅಲ್ಲವೇ ?"

ಮೂರ್ತಿ ಒಂದು ಕ್ಷಣ ಸುಮ್ಮನಿದ್ದು "ಹೌದು" ಎಂದು ಒಪ್ಪಿಕೊಂಡರು

"ಅವಳ ತಂದೆಯಾಗುವಷ್ಟು ವಯಸ್ಸಾಗಿದೆ ನಿಮಗೆ "

"ನಿನಗೆ ಹೇಗೆ ತಿಳಿಯಿತು ?"

ಯಮುನಾ ಇಡೀ ಗಂಡಸು ಜಾತಿಯನ್ನೇ ಕೊಚ್ಚಿ ಹಾಕುವ ತಿರಸ್ಕಾರದಿಂದ ನಕ್ಕು "ಹ! ಈ ಗಂಡು ಜಾತಿ ನನಗೆ ತಿಳಿಯದೇ? ನಾನೇನು ಗಂಡಸರ ಪರಿಚಯವಿರದ ಮುಗ್ಧೆಯೇ? ನಿಮ್ಮಂತಹವರನ್ನು ಬೇಕಾದಷ್ಟು ನೋಡಿದ್ದೇನೆ ಹೆಸರು ಬೇರೆ, ರೂಪ ಬೇರೆ ವಯಸ್ಸು ಬೇರೆ ಆದರೆ ಬುದ್ಧಿ ಮಾತ್ರ ನಾಯಿಬುದ್ಧಿ !"

ಅವಳ ಮಾತು ಕೇಳಿ ಕೊಳ್ಳಿತಗುಲಿದ ಜೇಳಿನ ಗೂಡಿನಂತೆ ಮೂರ್ತಿಯ ಹೃದಯ ಕಸಿವಿಸಿಗೊಂಡಿತು. ಅವರು ಅತ್ಯಂತ ನಮ್ರವಾಗಿ,

ಮೃದುವಾಗಿ ಹೇಳಿದರು "ನಾನು ಅವಳನ್ನು ಪ್ರೀತಿಸುತ್ತೇನೆ"

"ಇದೇ ಮಾತನ್ನು ಎಷ್ಟೋ ಜನ ಗಂಡಸರು ನನಗೆ ಹೇಳಿದ್ದಾರೆ ಪ್ರೀತಿ ಎನ್ನುವ ಶಬ್ದವನ್ನು ಹೊಲಸು ಮಾಡಬೇಡಿ"

"ಆದರೆ ನಾನು ಎಂದಾದರೂ ನಿಮಗೆ ಹಾಗೆ ಹೇಳಿದ್ದೇನೇ ?"

"ಇಲ್ಲ ಆದುದರಿಂದಲೇ ನನಗೆ ನಿಮ್ಮಲ್ಲಿ ಹೆಚ್ಚು ಆಸಕ್ತಿಯಿದೆ ಐ ಲೌವ್ ಯು ಎಂದು ಹೇಳಿ ನನ್ನ ಹಿಂದೆಮುಂದೆ ಓಡಾಡುವ ನಾಯಿಗಳ ಕಪಟತನ ನನಗೆ ಗೊತ್ತು ನೀವು ಎಲ್ಲರಂತಲ್ಲ ಆದುದರಿಂದಲೇ"

"ನಾನಾಗಿಯೇ ನಿನ್ನ ಸ್ನೇಹವನ್ನು ಯಾ' ಸಿದೆನೇ ?"

"ಇಲ್ಲ" ಯಮುನಾ ತಲೆ ಅಲುಗಿಸಿದಳು

"ನಾನಾಗಿಯೇ ಅಪೇಕ್ಷಪಟ್ಟು ನಿಮ್ಮಲ್ಲಿಗೆ ಎಂದಾದರೂ ಬಂದಿರುವೆನೇ ?"

"ಇಲ್ಲ"

"ನಿಮ್ಮ ಆಪಾದನೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರಾ ?"

ಯಮುನಾ ಮೂರ್ತಿಯ ಪಕ್ಕದಲ್ಲಿ ಕುಳಿತು ಒಣಗಿದ ಕಂಠದಿಂದ ಹೇಳಿದಳು

"ನೀವು ನಿರ್ದಯಿಗಳು, ಹೃದಯಹೀನರು, ಕಟುಕರು !"

"ನಾನು ಕಟುಕನಾಗಿದ್ದಿದ್ದರೇ ಚೆನ್ನಾಗಿತ್ತು ಆಗ ನೀವು ಎಂದೆಂದಿಗೂ ನನಗೆ ಅಪರಿಚಿತರಾಗಿಯೇ ಉಳಿಯುತ್ತಿದ್ದಿರಿ ನಿಮ್ಮ ಮೇಲಿನ ದಯೆಯೇ ನನ್ನನ್ನು ಇಲ್ಲಿಯವರೆವಿಗೆ ತಂದಿದೆ"

ಯಮುನಾ ಮಾತನಾಡಲಿಲ್ಲ ಅವಳು ನೊಂದಿರುವಳೆಂದು ತಿಳಿದು ಮೂರ್ತಿ ಹೇಳಿದರು

"ಕ್ಷಮಿಸು, ನಿನ್ನನ್ನು ನೋಯಿಸಬೇಕೆಂಬ ಆಸೆ ನನಗಿಲ್ಲ ಕೊನೆಯದಾಗಿ ಕೇಳಿಕೊಳ್ಳುತ್ತೇನೆ—ಮರೆತು ಬಿಡು, ಕ್ಷಮಿಸಿಬಿಡು"

ನಾಯಿಡು "ಮಿಸೆಸ್ ದೀಕ್ಷಿತ್" ಎಂದು ಕೂಗುತ್ತಾ ಹತ್ತಿರ ಬಂದರು ಸಪ್ಪೆಯಾಗಿದ್ದ ಯಮುನೆಯ ಮುಖ ಮತ್ತೆ ಉಜ್ವಲವಾಗಿ ಬೆಳಗಿತು ಆಕೆ ನಾಲಗೆಯಿಂದ ತುಟಿಯನ್ನೊಮ್ಮೆ ಸವರಿಕೊಂಡು, ಬಲವಂತದ ನಗೆಯನ್ನು ಅದಕ್ಕೆ ಅಂಟಿಸಿ ಮೇಲೆದ್ದಳು

* * *

ಮಾರನೆಯ ದಿನ ಕೋರ್ಟು ಶುರುವಾಗಿದ್ದುದರಿಂದ ಮೂರ್ತಿಗೆ ಬೇಗ ಸಮಯ ಕಳೆಯಿತು ಕೋರ್ಟು ಮುಗಿಸಿಕೊಂಡು ಅವರು ಮನೆಗೆ ಬಂದಾಗ ಸಂಜೆ ಐದು ಗಂಟೆಯಾಗಿತ್ತು

ಕಕ್ಷಿಗಾರರ ಜೊತೆ ಹೊಡೆದಾಡಿ ಮಾತನಾಡಿದ್ದರಿಂದಲೋ ಏನೋ ಮೂರ್ತಿಗೆ ಸಣ್ಣಗೆ ತಲೆ ನೋಯುತ್ತಿತ್ತು ಅವರು ಪೋರ್ಟಿಕೋದಲ್ಲಿ ಕುಳಿತು ತಾತನಿಗೆ ಇನ್ನೊಂದು ಲೋಟ ಬಿಸಿ ಹಾಲು ತರಲು ಹೇಳಿದರು.

ಜೂಲಿ 'ಬೌ ಬೌ' ಎಂದು ಬೊಗಳುತ್ತಾ, ಬಾಲ ಅಲ್ಲಾಡಿಸುತ್ತಾ ಗೇಟಿನ ಬಳಿಗೆ ಓಡಿ ಹೋಯಿತು ಪದ್ಮನಿ ಒಳಗೆ ಬಂದು ಜೂಲಿಯನ್ನೆತ್ತಿ ಎದೆಗೊತ್ತಿಕೊಂಡು,

"ಯಾಕಮ್ಮಾ ಜೂಲೀ ಹೀಗೆ ಹಾರಾಡ್ತೀಯಾ ? " ಎಂದು ಲಲ್ಲೆಗರೆದಳು

"ಈಗ ನಿನಗೂ ಜೂಲಿಗೂ ಬಹಳ ಸ್ನೇಹ ಅಲ್ಲವೇ ?"

ಪದ್ಮಿನಿ ಚಕಿತಳಾಗಿ ತತ್ಕ್ಷಣ ಜೂಲಿಯನ್ನು ಕೆಳಗೆ ಬಿಟ್ಟಳು

"ಹೌದು ನಾನೂ ಜೂಲಿ ತುಂಬಾ ಗೆಳೆಯರು "

"ಕುಳಿತುಕೋ "

"ಗೀತಾ ಎಲ್ಲಿ ? ಇವತ್ತು ಕ್ಲಾಸಿನಲ್ಲಿ ಕನ್ನಡ ಪೇಪರ್ ಕೊಟ್ಟರು ಅದನ್ನು ನಾನು ತೆಗೆದುಕೊಂಡು "

"ಗೀತಾ ಊರಿನಲ್ಲಿಲ್ಲ "

"ಓ !"

"ನಮ್ಮ ಅಕ್ಕನೊಡನೆ ಹೋದಳು "

"ಬರೋದು ಎಷ್ಟು ದಿವಸವಾಗುತ್ತದೆ ?"

"ಹದಿನೈದು ದಿವಸವಾಗಬಹುದು "

"ಅವಳು ಹೀಗೆ ಕ್ಲಾಸಿಗೆ ತಪ್ಪಿಸಿಕೊಂಡರೆ ಖಂಡಿತ ಪಾಸಾಗೋದಿಲ್ಲ. ಸಾಲದುದಕ್ಕೆ ಕನ್ನಡದಲ್ಲಿ ಫೆಯಿಲಾಗಿದ್ದಾಳೆ "

"ಎಷ್ಟು ನಂಬರು ಬಂದಿದೆ ?"

"ನೂರಕ್ಕೆ ಮೂವತ್ತೆರಡು ನಂಬರು ತೆಗೆದುಕೊಂಡಿದಾಳೆ "

"ಅಷ್ಟು ಬಂದರೆ ಸಾಕು "

"ಸಾಕಂತೆ ಸಾಕು ಅಜೀರ್ಣವಾಯಿತು ! ನಾನೇನಾದ್ರೂ ಗೀತನ ಪೇಪರನ್ನು ಕರೆಕ್ಟ್ ಮಾಡಿದ್ದಿದ್ದರೆ ಅವಳಿಗೆ ಇಪ್ಪತ್ತು ನಂಬರೂ ಕೊಡು ತ್ತಿರಲಿಲ್ಲ ಪಾಪ ! ಕನ್ನಡ ಮೇಡಂ ತುಂಬಾ ಲಿಬರಲ್ ಆಗಿರುವ ಹೊತ್ತಿಗೆ ಅವಳಿಗೆ ಇಷ್ಟಾದರೂ ಬಂತು "

"ಹಾಗೇನು ? ಮತ್ತೆ ಗೀತಾ ಎಲ್ಲಾ ಪೇಪರಿನಲ್ಲಿಯೂ ಚೆನ್ನಾಗಿ ಮಾಡಿದೀನೀಂತ ಹೇಳಿದಳಲ್ಲಾ "

"ಸರಿ, ಅವಳು ಸಾವಿರ ಹೇಳ್ತಾಳೆ ನಾನು ಹೋಗ್ತೀನಿ ಈ ಕನ್ನಡ ಪೇಪರನ್ನು ಅವಳು ಬಂದ ಮೇಲೆ ಕೊಟ್ಟುಬಿಡಿ" ಎನ್ನುತ್ತಾ ಪದ್ಮಿನಿ ಉತ್ತರ ಪತ್ರಿಕೆಯನ್ನು ಮೂರ್ತಿಗೆ ನೀಡಿದಳು

"ಓವಲ್ಟೀನ್ ತಗೊಂಡು ಹೋಗುವಿರಂತೆ " ಮೂರ್ತಿ ಪದ್ಮಿನಿಗೆ ಉಪಚಾರ ಮಾಡಿದರು

ತಾತ ಮೂರ್ತಿಗೆ ಹಾಲು ತಂದಾಗ ಅವರು ಪದ್ಮಿನಿಗೆ ಓವಲ್ಟೀನ್ ತರು ವಂತೆ ಹೇಳಿದರು ತಾತ ತಂದ ಓವಲ್ಟೀನ್ ಕುಡಿದು ಪದ್ಮಿನಿ ಲೋಟವನ್ನು ಹೂದಾನಿಯನ್ನಿರಿಸಿದ್ದ ಪುಟ್ಟ ಮೇಜಿನ ಮೇಲಿಟ್ಟು ಹೂಗಳಕಡೆ ನೋಡಿ,

"ಹೂವೆಲ್ಲಾ ಒಣಗಿಹೋಗಿದೆ" ಎಂದಳು

"ಗೀತಾ ಇದ್ದಿದ್ದರೆ ಬದಲಾಯಿಸಿ ಹೊಸ ಹೂವು ಇಡುತ್ತಿದ್ದಳು. ಈಗ ಈ ಕೆಲಸ ಮಾಡೋರಿಲ್ಲ "

"ನಾನು ಹೊಸ ಹೂವು ತಂದಿಡಲಾ ?" ಪದ್ಮಿನಿ ಉತ್ಸಾಹದಿಂದ ಕೇಳಿದಳು

"ಹೂಂ "

"ಎರಡು ನಿಮಿಷಗಳಲ್ಲಿ ಬರುತ್ತೇನೆ" ಎನ್ನುತ್ತಾ ಹಳೆಯ ಹೂವು ಗಳನ್ನು ಕೈಗೆ ತೆಗೆದುಕೊಂಡು ಮೆಟ್ಟಿಲುಗಳನ್ನು ಹಾರಿ ಪದ್ಮಿನಿ ಹೂವಿನ ಗಿಡಗಳ ಕಡೆ ಹೋದಳು ಎರಡು ನಿಮಿಷಗಳಲ್ಲಿ ಹಸಿರು ಎಲೆಗಳ ಸಮೇತ ಸಣ್ಣ ಹೂಗೊಂಚಲೊಂದನ್ನು ಅಣಿಮಾಡಿ ತಂದು,ಹೂದಾನಿಯೊಳಗಿರಿಸಿ,

"ಹೇಗಿದೆ ?" ಎಂದಳು

"ನಿನ್ನ ಆಯ್ಕೆ ಸೊಗಸಾಗಿಯೇ ಇದೆ "

"ನೀವು ಗೀತಳಿಗೆ ಪಾಠ ಹೇಳಿಸದಿದ್ದರೆ ಅವಳು ಈ ಸಲ ಪಾಸಾ

ಗೋದಿಲ್ಲ "

"ಯಾತರಲ್ಲಿ ಅವಳು ವೀಕಾಗಿದಾಳೆ ?"

"ಕನ್ನಡದಲ್ಲಂತೂ ಅವಳು ಖಂಡಿತ ಪಾಸಾಗೋದಿಲ್ಲ" ಎನ್ನುತ್ತಾ ಪದ್ಮಿನಿ ಬಾಗಿ ಮೇಜಿನ ಮೇಲಿದ್ದ ಪೇಪರನ್ನು ಕೈಗೆ ತೆಗೆದುಕೊಂಡು ಪೇಪರಿನ ಮೇಲೆ ಇಲ್ಲಿ ಅಲ್ಲಿ ನೋಟ ಹರಿಸುತ್ತಾ ಟೀಕಿಸಿದಳು

"ಇವಳಿಗೆ ನೆಟ್ಟಗೆ ಒಂದು ವಾಕ್ಯ ಕನ್ನಡದಲ್ಲಿ ಬರೆಯೋಕೆ ಬರೊದಿಲ್ಲ ವ್ಯಾಕರಣ, ವಾಕ್ಯರಚನೆ, ಸ್ಪೆಲ್ಲಿಂಗು ರಾವು ರಾವು ! ನನಗೆ ನಾಚಿಕೆಯಾಗುತ್ತದೆ—ಕನ್ನಡದಲ್ಲಿ ಫೇಲಾಗೋದೂಂದ್ರೆ ಶುದ್ಧ ಅವಮಾನ ಮಾತೃಭಾಷೆ ಕನ್ನಡವಾಗಿ ಈ ಅವಾಂತರ ಅಲ್ಪಪ್ರಾಣ ಮಹಾಪ್ರಾಣಗಳಿಗೆ ವ್ಯತ್ಯಾಸವೇ ತಿಳೀದು ಈ ಹುಡುಗಿಗೆ ವ್ಯಾಕರಣವಂತೂ ತಲೆ ಚಚ್ಚಿಕೊಳ್ಳಬೇಕು "

"ತಲೆತಗ್ಗಿಸಿ ಪೇಪರನ್ನೇ ನೋಡುತ್ತಿದ್ದ ಪದ್ಮಿನಿ ಮೂರ್ತಿಯಿಂದ ಯಾವ ಬಗೆಯ ಪ್ರತಿಕ್ರಿಯೆಯೂ ಬಾರದಿರುವುದನ್ನು ನೋಡಿ ತಲೆ ಎತ್ತಿದಳು

ಚಲಿಸದ ಜೋಡಿನಕ್ಷತ್ರ ಅವರ ಕಣ್ಣುಗಳು

ಪದ್ಮಿನಿ ತಟ್ಟನೆ ತಲೆ ತಗ್ಗಿಸಿ ಮತ್ತೆ ಗೀತನ ಪೇಪರಿನ ಕಡೆ ದೃಷ್ಟಿ ಹರಿಸಿದಳು ಮಾತುಗಳು ಮೊದಲಿನಂತೆ ನಿರರ್ಗಳವಾಗಿ ಅವಳ ಬಾಯಿಂದ ಹರಿದುಬರಲಿಲ್ಲ ಬದಲಾಗಿ ಮಾತುಗಳು ತಡೆದು ತಡೆದು ಹೊರಟವು—ಜೊತೆಗೆ ಮಾತಿಗೊಂದು ಸಲ ಅವಳು ತಲೆ ಎತ್ತಿ ಅವರ ಕಡೆ ನೋಡಿದಳು

"ನೀವು ಅವಳಿಗೆ ಮೇಷ್ಟರನ್ನಿಡಿಸಿ ಇಲ್ಲದೆ ಹೋದರೆ ತುಂಬಾ ಕಷ್ಟವಾಗುತ್ತದೆ "

ಅವಳ ನೋಟ ಆಗಾಗ್ಗೆ ಅವರ ಕಡೆ ಹೊರಳುತ್ತಿತ್ತು ಮೂರ್ತಿಯ ನೋಟದೆದುರು ಪದ್ಮಿನಿ ಅಧೀರೆಯಾದಳು ಕೊನೆಗೆ ಅವಳ ಬಾಯಿಂದ ಒಂದು ಮಾತೂ ಹೊರಡಲಿಲ್ಲ ಏನಾದರೂ ಮಾತನಾಡಬೇಕೆಂದು ಪದ್ಮಿನಿ ವಿಶ್ವಪ್ರಯತ್ನ ಮಾಡಿದಳು ಆದರೆ ಗಂಟಲಿಂದ ಸದ್ದು ಹೊರಡಲಿಲ್ಲ

ಪದ್ಮಿನಿ ನಿರುಪಾಯಳಾಗಿ ತನ್ನ ಕಾರಿನ ಬಳಿ ಸುಳಿದ ಜೂಲಿಯನ್ನೆತ್ತಿ ತೊಡೆಯ ಮೇಲೆ ಕೂರಿಸಿಕೊಂಡು,

"ಜೂಲಿ, ವಾಕಿಂಗ್ ಹೋಗೋಣ ಬರ್ತ್ತೀಯಾ?" ಎಂದಳು. ಜೂಲಿ ಬಾಲ ಅಲ್ಲಾಡಿಸಿತು ಪದ್ಮಿನಿ ಜೂಲಿಯನ್ನೆತ್ತಿಕೊಂಡು ಎದ್ದುನಿಂತು,

"ನಾನು ಹೋಗ್ತೀನಿ" ಎಂದಳು

ಆಗ ಮೂರ್ತಿ ಎಚ್ಚರಗೊಂಡರು ಅವರು ಗಲಿಬಿಲಿಯಿಂದ,

"ಎಲ್ಲಿಗೆ ಹೋಗ್ತೀಯ ?" ಎಂದರು

"ನಮ್ಮ ಮನೆಗೆ "

"ಡ್ರೈವಿಂಗ್ ಕಲಿಸಿಕೊಡೀಂತ ಹೇಳಿದ್ದೆಯಲ್ಲಾ "

"ಡ್ರೈವಿಂಗ್ ಕಲಿತು ನಾನೇನು ಮಾಡಬೇಕು ? ನಮ್ಮ ಮನೆಯಲ್ಲಂತೂ ಕಾರಿಲ್ಲ ಮುಂದೆ ಅದನ್ನು ಕೊಳ್ಳುವ ಭರವಸೆಯೂ ಇಲ್ಲ ಆದುದರಿಂದ ಸುಮ್ಮನೆ ಸಮಯ ವ್ಯರ್ಥ "

"ಒಂದು ಪಕ್ಷ ನಿನ್ನ ಗಂಡ ಕಾರಿಟ್ಟುಕೊಂಡರೆ ?"

"ಆಗ ಬೇಕಾದರೆ ಕಲಿತುಕೊಂಡರಾಯಿತು "

"ಈಗನಿಂದ ಕಲಿತಿದ್ದರೆ ಆಗ ಕಲಿಯುವ ತಾಪತ್ರಯವೇ ಇರೋದಿಲ್ಲ ನಂಗೂ ಕಾರು ಬಿಡೋಕೆ ಬರುತ್ತದೇಂತ ಹೇಳಿ ನಿನ್ನ ಗಂಡನಿಗೆ ಆಶ್ಚರ್ಯವನ್ನುಂಟುಮಾಡಬಹುದು ಅಲ್ಲವೇ ?"

" "

"ಗೀತಾ ಊರಿನಿಂದ ವಾಪಸ್ಸು ಬರುವುದರೊಳಗೆ ನೀನು ಡ್ರೈವಿಂಗ್ ಕಲಿತು ಅವಳಿಗೆ ಬೆಪ್ಪು ಹಿಡಿಸಬಹುದು ಗೀತಾ ಊರಿಗೆ ಬರುವ ದಿನ ನೀನೇ ಹೋಗಿ ಅವಳನ್ನು ಕರೆದುಕೊಂಡು ಬರಬಹುದು ಏನು ಹೇಳ್ತೀಯ ?"

"ಏನು ಮಾಡಲಿ ನೀವೇ ಹೇಳಿ "

"ನಾನು ಹೇಳಿದ ಹಾಗೆ ಕೇಳ್ತೀಯಾ ?"

"ಓಹೋ "

"ಒಂದು ನಿಮಿಷ" ಎನ್ನುತ್ತಾ ಮೂರ್ತಿ ಗ್ಯಾರೇಜಿನ ಕಡೆ ಓಡಿ ಕಾರನ್ನು ತೆಗೆದುಕೊಂಡು ಬಂದು ತಮ್ಮ ಸೀಟಿನ ಬಾಗಿಲನ್ನು ತೆಗೆದು,

"ಹಾಪ್ ಇನ್" ಎಂದರು.

ಜನಶೂನ್ಯ ಬಯಲಿನಲ್ಲಿ ಪಾಠ ಪ್ರಾರಂಭವಾಯಿತು

"ಕೈ ಇಲ್ಲಿರಲಿ ಸ್ಟೀರಿಂಗ್‌ನ ಇಷ್ಟೊಂದು ಬಿಗಿಯಾಗೇನೂ ಹಿಡಿದು ಕೊಳ್ಳುವ ಅಗತ್ಯವಿಲ್ಲ ಊಹೂಂ .ಹಾಗಲ್ಲ ನೀನು ಹೀಗೆ ಹಿಡಿದು ಕೊಂಡಿರು ನಿನ್ನ ಕೈ ಹಿಡಿದು ನಾನು ತೋರಿಸುತ್ತೇನೆ "

"ಏನೂ ಬೇಕಿಲ್ಲ ನೀವು ದೂರದಿಂದಾನೇ ಹೇಳಿಕೊಡಿ ಸಾಕು. ನಾನು ಕಲಿತುಕೊಳ್ಳುತ್ತೇನೆ "

"ಹೀಗೆ ಕಲಿಸಿದರೆ ಇನ್ನೂ ಒಂದು ವರ್ಷವಾಗುತ್ತದೆ ಕಲಿಯೋಕೆ "

"ಪರವಾಗಿಲ್ಲ "

"ನಿನಗೇನು ಅದರಿಂದ ನಷ್ಟ ?"

"ಅಪಾರ ನಷ್ಟ "

ಅವಳಿಗಾದ ನಷ್ಟವೇನು ಸ್ವಲ್ಪವೇ ? ಪ್ರಾಣಕ್ಕಿಂತಲೂ ಅತ್ಯ ಮೂಲ್ಯವಾದ ಹೃದಯವನ್ನು ಅವಳು ಕಳೆದುಕೊಳ್ಳಲಿಲ್ಲವೇ ?

"ಹಾಗೇನು ?"

"ಈಗಾಗಲೇ ನನಗೆ ಬಹಳ ನಷ್ಟವಾಗಿ ಹೋಗಿದೆ ಇನ್ನೂ ನಾನು ನಷ್ಟ ಅನುಭವಿಸಬೇಕೂಂತ ನಿಮಗೆ ಆಸೆಯೇ ?"

"ರಿಬ್ಬನ್ನು, ಕ್ಲಿಪ್ಪು ಏನಾದರೂ ಕಳೆದುಕೊಂಡೆಯಾ ?" ಮೂರ್ತಿ ಕೃತಕ ಸಹಾನುಭೂತಿಯಿಂದ ಕೇಳಿದರು.

"ನಾನೇನು ಎಳೇ ಮಗುವೇ ರಿಬ್ಬನ್ ಹಾಕೋಕೆ ?"

"ಮತ್ತೆ ನೀನು ಇನ್ನೇನು ಕಳೆದುಕೊಳ್ಳೋಕೆ ಸಾಧ್ಯ "

"ಹೇಳಲಾ ? ನೀವು ನಗಬಾರದು "

"ನಾನು ಆಲಿಸಲು ಸಿದ್ಧ ದೇವಿ "

"ನೀವು ದೇವಿಗೀವಿ ಅನ್ನಬಾರದು "

"ಮತ್ತೇನು ಅನ್ನಬೇಕು ?"

"ಜಸ್ಟ್ ಪದ್ಮಿನಿ "

ಮೂರ್ತಿ ಕೃತ್ರಿಮ ಆಶ್ಚರ್ಯದಿಂದ "ಜಸ್ಟ್ ಪದ್ಮಿನಿ ! ಈ ಹೆಸರು ನಾನು ಎಲ್ಲೂ ಕೇಳೇ ಇರಲಿಲ್ಲ ಜಸ್ಟ್ ಪದ್ಮಿನಿಗಿಂತಲೂ ಸ್ವೀಟ್ ಪದ್ಮಿನಿ ಎಂದರೆ ಎಷ್ಟೋ ಚೆನ್ನ ಕೇಳುವವರಿಗೆ ನಾಲಗೆಗೂ ಕಲ್ಲುಸಕ್ಕರೆ ಚಪ್ಪರಿ ಸಿದ ಅನುಭವವಾಗಲಿ "

"ಹಾಗೆಲ್ಲಾ ನೀವು ಕರೆಯಲೇಬಾರದು" ಪದ್ಮಿನಿ ಕೋಪಗೊಂಡಳು.

"ಇಲ್ಲ. ನಿನ್ನ ನಾನು ಹೆಸರು ಹಿಡಿದು ಕರೆಯೋದೇ ಇಲ್ಲ "

"ನಮ್ಮಮ್ಮ ಅಷ್ಟು ಮುದ್ದಾಗಿರುವ ಹೆಸರಿಟ್ಟಿದ್ದಾರೆ ನನಗೆ ನೀವು ಹೆಸರು ಹಿಡಿದು ಕೂಗೋದಿಲ್ಲಾಂದ್ರೆ ನಾನು ಒಪ್ಪೋದಿಲ್ಲಾ "

"ಅದೇನೋ ಹೇಳ್ತೀನೀಂತ ಹೇಳಿದೆಯಲ್ಲಾ "

"ನಗೋದಿಲ್ಲವಾ ?"

"ಇಲ್ಲ" ಮೂರ್ತಿ ನುಡಿದರು.

"ಪ್ರಮಾಣ ಮಾಡಿ ಹೇಳಿ" ಪದ್ಮಿನಿ ಅವರನ್ನು ನಂಬದೆ ಕೇಳಿದಳು.

"ಯಾರ ಮೇಲೆ ಮಾಡಲಿ ?"

"ನನ್ನ ಮೇಲೆ ಪ್ರಮಾಣ ಮಾಡಿ "

"ನಾನು ನಿನಗೆ ಒಂದು ಚೂರೂ ಕೇರ್ ಮಾಡೋದಿಲ್ಲ ಹೀಗಿರುವಾಗ ಬಹಳ ಅಗ್ಗದ ಪ್ರಮಾಣ ಎನಿಸಿಕೊಳ್ಳುತ್ತದೆ ಇದು ಆದುದರಿಂದ ನಿನ್ನ ಮೇಲೆ ಬೇಡ "

"ಪರವಾಗಿಲ್ಲ ನಾನು ಮುಡಿದಿರುವ ಹೂವಿನಾಣೆ ಮಾಡಿ ಸಾಕು."

ಮೂರ್ತಿ ಅವಳ ಮುಡಿಯ ಕಡೆ ಕಣ್ಣು ಹೊರಳಿಸಿದರು ಅವಳ ಮುಡಿಯ ಮೇಲಿದ್ದ ಜಾಜಿ ದಂಡೆ ಅದೇ ತಾನೇ ಅರಳಲು ಮೊದಲಾಗಿತ್ತು ಅರೆಬಿರಿದ ಮೊಗ್ಗುಗಳಿಂದ ಉನ್ಮಾದಕಾರಕ ಪರಿಮಳ ಹೊರ ಹೊಮ್ಮಿ ಮೂರ್ತಿಯ ಹೃದಯವನ್ನು ಮೀಟಿತು

ಅವರು ಅವಳ ಮುಡಿಯಮೇಲಿದ್ದ ದಂಡೆಯನ್ನು ಬೆರಳಿನಿಂದ ಸ್ಪರ್ಶಿಸಿ,

"ಇದೊಂದೇ ಸಾಕು ನನ್ನನ್ನು ಸೋಲಿಸಲು" ಎಂದರು.

"ಆಣೆ ಮಾಡಿ "

"ನನ್ನ ಮಾತಿನಲ್ಲಿ ನಿನಗೆ ನಂಬಿಕೆ ಇಲ್ಲವೇ ? ನಾನು ಖಂಡಿತ ನಗೋದಿಲ್ಲ ಹೇಳು "

ಪದ್ಮಿನಿ ಏನೂ ತಿಳಿಯದಂತೆ "ನಾನು ನಿಮಗೆ ಏನು ಹೇಳ್ತೀನೀಂತ ಹೇಳಿದ್ದೆ ?" ಎಂದಳು

ಅವಳೇನು ಹೇಳುವಳೋ ಎಂದು ಆಸೆಯಿಂದ ಕುಳಿತಿದ್ದ ಮೂರ್ತಿಗೆ ಸ್ವಲ್ಪ ಕೋಪ ಬಂತು.

"ಅದೇನೋ ನಷ್ಟ—ಲಾಭ ಎಂದು ಹೇಳ್ತಿದ್ದೆ "

"ನನಗೆ ನಷ್ಟ—ಆದರೆ ಇನ್ನೊಬ್ಬರಿಗೆ ಲಾಭ "

"ಏನು ನಷ್ಟ ?"

"ನನ್ನ ಸರ್ವಸ್ವಾನೂ ಕಳೆದುಹೋಯಿತು "

"ಹಾಗಂದರೆ ?"

"ಮನುಷ್ಯನಿಗೆ ಎಲ್ಲಕ್ಕಿಂತಲೂ ಮುಖ್ಯವಾದುದು ಯಾವುದು ಹೇಳಿ ?"

"ಪ್ರಾಣ "

"ಅದನ್ನು ಬಿಟ್ಟರೆ ?"

"ಹೃದಯ ಹೃದಯ ! ಅದನ್ನು ಕಳೆದುಕೊಂಡೆಯಾ?" ಮೂರ್ತಿ ಅಚ್ಚರಿಯಿಂದ ಕೇಳಿದರು

ಪದ್ಮಿನಿ ತಲೆ ಅಲುಗಿಸಿದಳು

"ಲಾಭ ಯಾರಿಗೆ ?"

"ಯಾರು ಅದನ್ನು ಕದ್ದುಕೊಂಡರೋ ಅವರಿಗೆ "

"ಆ ಅದೃಷ್ಟಶಾಲಿ ಯಾರು ?"

"ಮಾತು ಸಾಕಿನ್ನು ನನಗೆ ಪಾಠ ಹೇಳಿಕೊಡಿ. ಆಗಲೇ ಕತ್ತಲಾಗ್ತಿದೆ ನಾನು ಲೇಟಾಗಿ ಮನೆಗೆ ಹೋದರೆ ಅಮ್ಮ ಬೈಯುತ್ತಾಳೆ "

"ಅಮ್ಮನಿಗೆ ತುಂಬಾ ಹೆದರಿಕೊಳ್ಳುತ್ತೀಯಾ ?"

"ಹೂಂ "

"ನಿಮ್ಮ ತಂದೆಗೆ ?"

"ಅವರು ಯಾವುದಕ್ಕೂ ಜಾಸ್ತಿ ಬರೋದಿಲ್ಲ ಅದೂ ಅಲ್ಲದೆ. " ಎನ್ನುತ್ತಾ ಪದ್ಮಿನಿ ಸಾಲಗೆ ಕಚ್ಚಿಕೊಂಡಳು

"ಪೂರ್ತಿ ಹೇಳಿಬಿಡು "

"ಅಮ್ಮನಿಗೆ ನಿಮ್ಮನ್ನು ಕಂಡರೆ ಇಷ್ಟವಿಲ್ಲ "

"ಮಗಳಿಗೆ ?"

"ಪಾಠ ಶುರುಮಾಡಿ. ನೀವು ಮಾತಿನಲ್ಲೇ ಕಾಲ ಕಳೆಯುತ್ತಿದ್ದೀರಿ."

"ಆಗಲಿ, ಇಲ್ಲಿ ಕೈ . ಇದನ್ನು ಕಾಲಿನಿಂದ ಒತ್ತು ಇಲ್ಲಿ ಎಳಿ...

ನೋಡಿದೆಯಾ ಕಾರು ಹೇಗೆ ಸ್ಟಾರ್ಟ್ ಆಯಿತು ತಿರುಗಿಸಿಕೊಳ್ಳುವಾಗ ಸ್ಟೀರಿಂಗನ್ನ ಎಕ್ಸ್‌ಕ್ಯೂಸ್ ಮಿ " ಎನ್ನುತ್ತಾ ಮೂರ್ತಿ ಅವಳ ಭುಜದ ಸುತ್ತಲೂ ಹಗುರವಾಗಿ ಕೈ ಬಳಸಿ ತಂದು ಸ್ಟಿರಿಂಗ್‌ನ್ನು ಹಿಡಿದು,

"ಹೀಗೆ ತಿರುಗಿಸಬೇಕು" ಎಂದರು

ಅವರ ತೋಳಿನ ಸ್ಪರ್ಶದಿಂದ ಪದ್ಮಿನಿಗೆ ನಿದ್ದೆ ಬರುವಂತಾಯಿತು.

ಅವಳು ಅರೆಗಣ್ಣು ತೆರೆದು ಅವರ ಕಡೆ ನೋಡಿ,

"ನನಗೆ ನಿದ್ದೆ ಬರುತ್ತಿದೆ?" ಎಂದಳು

"ಜೋಗುಳ ಹಾಡಲೇ ?"

ತಾಯಿಯ ಜೋಗುಳಕ್ಕಿದ್ದ ಶಕ್ತಿ ಅವರ ತೋಳುಗಳಿಗಿತ್ತು

ಪದ್ಮಿನಿ ಸೀಟಿಗೆ ತಲೆ ಒರಗಿಸಿ ಕಣ್ಣು ಮುಚ್ಚಿಕೊಂಡಳು ಅವಳು ಮುಡಿದಿದ್ದ ಜಾಜಿ ದಂಡೆ ಮೂರ್ತಿಯ ಕೋಟಿನ ತೋಳಿಗೆ ಒತ್ತಿ ಕೊಂಚ ನಲುಗಿತು

"ಹೂವಿನ ದಂಡೆ ನಲುಗುತ್ತಿದೆ ಪದ್ಮಿನಿ "

ಪದ್ಮಿನಿ ನಿದ್ದೆಯಲ್ಲಿರುವಂತೆ "ಊಂ ಊಂ" ಎಂದಳು.

"ನಿನ್ನ ಸುತ್ತಲೂ ಕೈ ತಂದು ಕಾರು ನಡೆಸುವುದು ಕಷ್ಟ "

ಕಾದಿದ್ದ ಸನ್ನಿವೇಶವನ್ನು ಮುರಿಯಬೇಕಾಗಿ ಬಂದುದರಿಂದ ಮೂರ್ತಿ ತಮ್ಮನ್ನು ತಾವೇ ದ್ವೇಷಿಸಿದರು

"ಬೇಡ—ಕಾರು ನಡಸಲೇಬೇಡಿ "

"ಆಮೇಲೆ ಕಾರು ಮಗುಚಿಕೊಂಡರೆ ?"

"ನಿಲ್ಲಿಸಿಬಿಡಿ "

ಮೂರ್ತಿ ತಟ್ಟನೆ ಬ್ರೇಕು ಹಾಕಿದರು ಕಾರು ನಿಂತ ಸದ್ದಿಗೆ ಪದ್ಮಿನಿ ಎಚ್ಚರಗೊಂಡು ಹೇಳಿದಳು,

"ಏನೇನೋ ಹುಚ್ಚುಚ್ಚಾಗಿ ಮಾತನಾಡಿಬಿಟ್ಟೇಂತ ಕಾಣುತ್ತೆ ನಾನು "

"ಇಷ್ಟು ಸೆನ್ಸಿಬಲ್ ಆಗಿ ನೀನು ಯಾವಾಗಲೂ ಮಾತನಾಡಿರಲಿಲ್ಲ "

"ಪಾಠ ಮತ್ತೆ ಶುರುಮಾಡಿ "

"ಒಳ್ಳೆಯ ಶಿಷ್ಯೆ ನೀನು ನಾನು ಪಾಠ ಶುರುಮಾಡಿದರೆ ನೀನು

ನಿದ್ದೆ ಮಾಡೋಕೆ ಶುರುಮಾಡ್ತೀಯ"

"ಇನ್ನು ಮೇಲೆ ಹಾಗೆ ಮಾಡೋದಿಲ್ಲ ನಿಮ್ಮ ಕೈ ತೆಗೆದು ಕೊಳ್ತೀರಾ ? ನಾನು ಆ ಕಡೆ ಕೂರ್ತೀನಿ "

ಮೂರ್ತಿಗೆ ಆಗ ಜ್ಞಾಪಕ ಬಂತು ಅವರು ಪದ್ಮಿನಿಯನ್ನು ಇಕ್ಕಟ್ಟಿನಿಂದ ಬಿಡುಗಡೆ ಮಾಡಿದರು

"ಗಂಟೆ ಎಷ್ಟು ?"

"ಏಳೂಕಾಲು "

"ಹಾಗಾದರೆ ನಾನು ಮನೆಗೆ ಹೋಗಬೇಕು "

"ನಾಳೆ ಎಷ್ಟು ಹೊತ್ತಿಗೆ ಬರುತ್ತೀಯಾ ?"

"ಐದು ಗಂಟೆಗೆ ಬರುತ್ತೇನಿ "

ಪದ್ಮಿನಿಯ ಮನೆ ತಲುಪುವವರೆಗೆ ಯಾರೂ ಮಾತನಾಡಲಿಲ್ಲ ತಂಗಾಳಿಗೆ ಮೈಯೊಡ್ಡಿ ಕುಳಿತಿದ್ದ ಪದ್ಮಿನಿಗೆ ಜೊಂಪು ಹತ್ತಿದಂತಾಗಿತ್ತು ಮನೆಯ ಬಾಗಿಲಿನಲ್ಲಿ ಕಾರು ನಿಲ್ಲಿಸಿ ಮೂರ್ತಿ,

"ಪದ್ಮಿನಿ" ಎಂದು ಕೂಗಿದರು

ಪದ್ಮಿನಿ ಗಡಬಡಿಸಿ ಕೆಳಗಿಳಿದು ಒಳಗೆ ಓಡಿ ಹೋದಳು

ಭಾಗವತ ಓದುತ್ತಿದ್ದ ಪದ್ಮಿನಿಯ ತಂದೆ ಪುಸ್ತಕದೊಳಗಿನಿಂದ ತಲೆ ಎತ್ತಿ,

"ಎಲ್ಲಿಗೆ ಹೋಗಿದ್ದೆ ?" ಎಂದರು

"ಗೀತನ ಮನೆಗೆ ಹೋಗಿದ್ದೆ ಅಲ್ಲಿಂದ ನಾನು, ಗೀತಾ, ಅವಳ ತಂದೆ ಕಾರಿನಲ್ಲಿ ವಾಕಿಂಗಿಗೆ ಹೋಗಿದ್ದೆವು "

"ಆ ಹುಡುಗಿ ತಂದೆ ಅಷ್ಟೇನೂ " ಎಂದು ಅವರು ಹೇಳುವಷ್ಟರಲ್ಲಿ ಪದ್ಮಿನಿ ಅಲ್ಲಿಂದ ಮಾಯವಾಗಿದ್ದಳು.

ಪದ್ಮಿನಿ ದೇವರ ಮನೆಗೆ ಹೋಗಿ ಮಂದಾಸನದ ಮುಂದೆ ಮೊಣಕಾಲೂರಿ ಕುಳಿತು,

"ನಾನು ಸುಳ್ಳು ಹೇಳುತ್ತಿರುವ ತಪ್ಪನ್ನು ಕ್ಷಮಿಸು ದೇವರೇ" ಎಂದು ಬೇಡಿ ತನ್ನ ಕೆನ್ನೆಗಳಿಗೆ ಹೊಡೆದುಕೊಂಡಳು

ಹೊರಗಿನಿಂದ ತಂದೆ ತನ್ನನ್ನು ಗಟ್ಟಿಯಾಗಿ ಕೂಗುವುದು ಕೇಳಿಸಿತು.

ಪದ್ಮಿನಿ ವಿಧಿಯಿಲ್ಲದೆ ತಂದೆಯ ಮುಂದೆ ನಿಲ್ಲಬೇಕಾಯಿತು ಮಗಳನ್ನು ನೋಡಿ ಅವರು

"ಇನ್ನು ಮೇಲೆ ನೀನು ಆ ಹುಡುಗಿಯ ಸ್ನೇಹ ಮಾಡಬಾರದು" ಎಂದರು

"ಸಾಧ್ಯವಿಲ್ಲ "

"ಅವಳೊಬ್ಬಳನ್ನು ಬಿಟ್ಟು "

"ನನ್ನ ಗೆಳತಿಯರನ್ನು ನೀವು ಆರಿಸಿಕೊಡಬೇಕೆ ? ನನಗಿಷ್ಟಬಂದವರೊಡನೆ ಸ್ನೇಹ ಬೆಳೆಸುವ ಸ್ವತಂತ್ರವೂ ನನಗಿಲ್ಲವೇ ?"

" ಆ ಸ್ನೇಹದಿಂದ ನಿನಗೆ ಹಾನಿಯಾದರೆ ?"

"ಗೀತಳಂತಹ ಸ್ನೇಹಿತೆ ಸಿಗಬೇಕಾದರೆ ಪುಣ್ಯ ಮಾಡಿರಬೇಕು ನನಗೆ ಅವಳನ್ನು ಕಂಡರೆ ತುಂಬಾ ಇಷ್ಟ. ಅವಳೂ ನನ್ನನ್ನು ಪ್ರೀತಿಯಿಂದ ಕಾಣುತ್ತಾಳೆ "

"ಆದರೆ ಗೀತನ ತಂದೆಗೆ ನಡತೆ ಸರಿಯಾಗಿಲ್ಲವೆಂದು "

ಇದುವರೆಗೂ ಶಾಂತವಾಗಿ ಮಾತನಾಡುತ್ತಿದ್ದ ಪದ್ಮಿನಿ ಗೀತನ ತಂದೆಯ ವಿಷಯ ಬರಲು ಹುಬ್ಬು ಗಂಟಿಕ್ಕಿ ಒರಟಾಗಿ ಹೇಳಿದಳು,

"ಇತರ ಹೆಂಗಸರ ವಿಷಯದಲ್ಲಿ ಅವರ ನಡತೆ ಹೇಗಿದೆಯೋ ನನಗೆ ಗೊತ್ತಿಲ್ಲ ಆದರೆ ನನ್ನ ಮಟ್ಟಿಗೆ ಅವರು ತುಂಬಾ ಗೌರವದಿಂದ ನಡೆದುಕೊಳ್ಳುತ್ತಾರೆ. ನನಗೆ ಅಷ್ಟು ಸಾಕು."

"ಅವರ ಬುದ್ಧಿ ಒಂದೇ ಸಮ ಇರದಿದ್ದರೆ ?"

"ನಾನು ಅವರ ಮನೆಗೆ ಹೋಗುವುದು ಗೀತನಿಗೋಸ್ಕರವೇ ಹೊರತು ಗೀತನ ತಂದೆಗಾಗಿ ಅಲ್ಲ. ಗೀತ ನನ್ನೊಡನಿರುವಾಗ ಏನು ಭಯ?"

'ಸುಳ್ಳು ಸುಳ್ಳು' ಎಂದವಳ ಮನಸ್ಸು ಪಿಸುಗುಟ್ಟಿತು

ತಾನು ಕೇವಲ ಗೀತನಿಗೋಸ್ಕರ ಅಲ್ಲಿಗೆ ಹೋಗುತ್ತಿರುವುದು ನಿಜವೇ ?

ಗೀತ ಊರಿನಲ್ಲಿಲ್ಲದಿದ್ದರೂ ತಾನು ನಾಳೆ ಅಲ್ಲಿಗೆ ಬರುವುದಾಗಿ ಅವಳ ತಂದೆಗೆ ಬರುವುದಕ್ಕೆ ಮಾತು ಕೊಟ್ಟಿದ್ದೇಕೆ ? ಗೀತಳಿಲ್ಲದ ಮೇಲೆ ಅವರ ಮನೆಯಲ್ಲಿ ತನಗೇನು ಕೆಲಸ ?

"ಬಿಡಣ್ಣ ಅವರೇನೂ ಹುಲಿಯಲ್ಲ ನನ್ನ ತಿಂದುಬಿಡುವುದಿಲ್ಲ" ಎಂದವಳೇ ಪದ್ಮಿನಿ ಮಲಗಲು ಹೋದಳು

ಮಾರನೆಯ ದಿನ ಕಾಲೇಜಿನಿಂದ ಮನೆಗೆ ಬರುವಾಗ ಪದ್ಮಿನಿಯ ಮನಸ್ಸಿನಲ್ಲಿ ನಿರಂತರ ಹೋರಾಟ ಸಾಗಿತ್ತು

ತಂದೆಯ ಮಾತನ್ನು ಮನ್ನಿಸಿ ಅವರ ಮನೆಗೆ ಹೋಗದಿರುವುದೇ, ಅಥವಾ ಕೊಟ್ಟ ಮಾತಿಗೆ ತಪ್ಪದೇ ಹೋಗುವುದೇ ?

ಎಲ್ಲರೂ ಗೀತಳ ತಂದೆಯ ವಿಷಯದಲ್ಲಿ ಯಾಕೆ ಅಷ್ಟೊಂದು ಅನುಮಾನ ಪಡುತ್ತಾರೋ? ಅವರ ನಯ, ವಿನಯ ಎಲ್ಲರಿಗೂ ಇದ್ದರೆ ಸಾಕು

ಪದ್ಮಿನಿ ಮನೆಗೆ ಬರುವಷ್ಟರಲ್ಲಿ ಐದು ಗಂಟೆಯಾಗಿತ್ತು ಮನೆಗೆ ಬಂದವಳೇ ಪದ್ಮಿನಿ ತಿಂಡಿ ಮುಗಿಸಿ,

"ಅಮ್ಮ, ನನ್ನ ಸ್ನೇಹಿತೆ ಮನೆಗೆ ಹೋಗ್ತೀನಿ" ಎಂದು ಹೊರಟು ಬಿಟ್ಟಳು ಯಾರ ಮನೆಗೆ ಎಂಬುದನ್ನು ಹೇಳಲಿಲ್ಲ

'ಸುದರ್ಶನ'ದ ಬಾಗಿಲಿನಲ್ಲಿ ತನ್ನನ್ನು ಸ್ವಾಗತಿಸಿದ ಜೂಲಿಯನ್ನೆತ್ತಿಕೊಂಡು ಮುದ್ದಿಸುತ್ತಾ ಪದ್ಮಿನಿ ಒಳಗೆ ಹೋದಳು

ಮೂರ್ತಿ ಕೋರ್ಟಿನ ಕಾಗದವನ್ನು ತಮ್ಮ ಮುಂದೆ ಹರಡಿಕೊಂಡು ಕುಳಿತಿದ್ದರು ಪದ್ಮಿನಿಯನ್ನು ನೋಡಿದ ಕೂಡಲೇ ಅವರು ಕಾಗದವನ್ನು ಒಂದು ಪಕ್ಕಕ್ಕೆ ಸರಿಸಿದರು

"ಯಾಕೆ ತೆಗೆದಿಟ್ಟುಬಿಡುತ್ತಿದೀರಲ್ಲಾ ?"

"ನೀನು ಬಂದ ಮೇಲೆ ಕೋರ್ಟಿನ ಕೆಲಸಕ್ಕೆ ರಜಾ "

"ನನ್ನಿಂದ ನಿಮಗೆ ತೊಂದರೆ ಆಗುವ ಹಾಗಿದ್ದರೆ ನಾನು ಹೋಗ್ತೀನಿ "

"ಹೋಗೋದಕ್ಕೇನು ನೀನೀಗ ಬಂದಿದ್ದು"

"ಇಲ್ಲೇ ಇರೋದಕ್ಕೆ ಬಂದೇಂತ ತಿಳ್ಕೊಂಡಿದೀರಾ ?"

"ಒಂದು ಕೆಲಸ ಮಾಡ್ತೀಯಾ ?"

"ಏನು ?" ಪದ್ಮಿನಿ ಕೇಳಿದಳು

"ನಿನಗೆ ಚೆನ್ನಾಗಿ ಡ್ರೈವಿಂಗ್ ಕಲಿಸಿಬಿಟ್ಟು ಆಮೇಲೆ ನಿನ್ನೇ ನನ್ನ ಕಾರಿನ ಡ್ರೈವರನ್ನಾಗಿ ಮಾಡಿಕೊಳ್ಳುತ್ತೇನೆ ಆಗ ನಿನಗೆ ಇಲ್ಲೇ ಒಂದು ರೂಮು ಕೊಡುತ್ತೇನೆ. ನಿನ್ನ ಕೆಲಸ ಏನೆಂದರೆ ನಾನು ಎಲ್ಲಿಗೆ ಹೊರಟರೂ

ನನ್ನ ಜೊತೆ ಬರಬೇಕು "

"ಸಂಬಳ ?"

"ನೂರು ರೂಪಾಯಿ ಸಾಕೆ ?"

"ನೂರು ರೂಪಾಯಿಗೆ ಹತ್ತು ರೂಪಾಯಿನ ಹತ್ತು ವಾಯಿಲ್ ಸೀರೆಗಳು ಬರುತ್ತವೆ ವಾಯಿಲ್ ಸೀರೆ ಬೇಡದಿದ್ದರೆ ಒಂದು ವೈಸೂರು ಸಿಲ್ಕ್ ಸೀರೆ ತಗೊಳ್ಳಬಹುದು ಅಲ್ಲಿಗೆ ವರ್ಷಕ್ಕೆ ಬೇಕಾದಷ್ಟು ಸೀರೆಗಳು ಆಗುತ್ತವೆ ಓಹೋ ಆಗಲಿ ನನಗೆ ನೂರು ರೂಪಾಯಿ ಸಂಬಳ ಸಾಕು "

"ನಿನ್ನ ಡ್ರೈವರ್ ಅಂತ ಇಟ್ಟುಕೊಂಡ ಮೇಲೆ ಆಗಾಗ್ಗೆ ಯಾತಕ್ಕಾದರೂ ರೇಗಿದರೆ ನೀನು ಸಿಟ್ಟು ಮಾಡಬಾರದು" ಮೂರ್ತಿ ತಮ್ಮ ಷರತ್ತನ್ನು ಅವಳ ಮುಂದಿಟ್ಟರು

"ಆಗಲಿ "

"ಆ ಜ್ಯೂಲಿನೇನು ಸುಮ್ಮನೆ ಮುದ್ದು ಮಾಡುತ್ತೀಯಾ, ಕೆಳಗೆ ಬಿಡು " ಅವರ ಧ್ವನಿಯಲ್ಲಿದ್ದ ಕಾಠಿಣ್ಯ ಗುರುತಿಸಿ ಪದ್ಮಿನಿ ಪೆಚ್ಚಾಗಿ ಜೂಲಿಯನ್ನು ತೊಡೆಯ ಮೇಲಿಂದ ಕೆಳಗಿಳಿಸಿದಳು ಅವಳ ಮುಖ ಕಳೆಗುಂದಿದ್ದನ್ನು ನೋಡಿ ಮೂರ್ತಿಗೆ ಪಶ್ಚಾತ್ತಾಪವಾಯಿತು

"ನಾನು ರೇಗಿದರೂ ಸಿಟ್ಟು ಮಾಡಿಕೊಳ್ಳುವುದಿಲ್ಲಾಂತ ಹೇಳಿದ್ದೆ ?"

"ನಾನೇನು ಈಗ ಸಿಟ್ಟು ಮಾಡಿಕೊಂಡಿಲ್ಲ "

"ಜ್ಯೂಲಿನೇಕೆ ಅಷ್ಟೊಂದು ಮುದ್ದು ಮಾಡಬೇಕು ? ಅದು ಎಷ್ಟೇ ಆಗಲಿ ನಾಯಿ ಹೂಂ ನಿನಗೆ ಇಷ್ಟ ಇದ್ದರೆ ಬೇಕಾದರೆ ಎತ್ತಿಕೋ "

"ಏನೂ ಬೇಕಿಲ್ಲ "

"ನಾನು ಈ ಕಾಗದಾನ ನೋಡುವವರೆಗೆ ನೀನೇನು ಮಾಡ್ತೀಯ?"

"ಸುಮ್ಮನೆ ಕುಳಿತಿರುತ್ತೇನೆ "

"ಸಿಟ್ಟಿಲ್ಲ ತಾನೇ ?"

ತನಗೆ ಸಿಟ್ಟು ಬಂದಿಲ್ಲವೆಂದು ತೋರಿಸಲು ಪದ್ಮಿನಿ ನಕ್ಕಳು ಪರಿಮಳವನ್ನು ಹೊತ್ತುತಂದ ಮಂದಮಾರುತದಂತೆ ಅವಳ ನಗು. ಆ ಎಳೆ ನಗುವಿನ ಹೊಂಬೆಳಕಿನಲ್ಲಿ ಮೂರ್ತಿಗೆ ದಿವ್ಯಾನುಭವವಾಯಿತು.

ಅವರು ತಮ್ಮ ನೋಟವನ್ನು ಕಾಗದದ ಕಡೆ ಹರಿಸಿ ಕೆಂಪು ಬಣ್ಣದ ಪೆನ್ಸಿಲನ್ನು ಕೈಗೆತ್ತಿಕೊಂಡರು

ಪದ್ಮಿನಿ ಅವರನ್ನು ನೋಡುತ್ತಾ ಕುಳಿತುಕೊಂಡಳು ಮೂರ್ತಿ ತಮ್ಮ ಕೆಲಸ ಮುಗಿಸಿ ತಲೆ ಎತ್ತಿ,

"ಹೋಗೋಣವೇ" ಎಂದರು

ಪಾರಕ್ಕಿಂತಲೂ ಹೆಚ್ಚಾಗಿ ಅವರ ನಡುವೆ ಮಾತು ಬೆಳೆಯಿತು.

*　　　*　　　*

ಪದ್ಮಿನಿಗೆ ಶಿಕ್ಷಣ ಕೊಟ್ಟು ಮೂರ್ತಿ ಕಾರನ್ನು ಮರವೊಂದರ ಕೆಳಗೆ ನಿಲ್ಲಿಸಿದರು

"ನಾಳೆ ದಿನ ಕಾರನ್ನು ನಾನೇ ನಡೆಸುತ್ತೇನೆ, ಬೇಕಾದರೆ ನೋಡಿ" ಎಂದಳು ಪದ್ಮಿನಿ

"ಈಗಲೇ ಬೇಡ ಇನ್ನೂ ಸ್ವಲ್ಪ ದಿನಗಳಾಗಲಿ"

"ಆಗೋದಿಲ್ಲ ನಾಳೆಯೇ ನನ್ನ ಪರೀಕ್ಷೆಯಾಗಲಿ"

"ನಾಳೆ ಖಂಡಿತಾ ಬೇಡ"

"ಊಹೂಂ ನಾನೇ ಧೈರ್ಯವಾಗಿರುವಾಗ ನೀವು ಯಾಕೆ ಹೆದರಿಕೊಳ್ಳಬೇಕು"

"ಹಾಗಾದರೆ ನಾನೂ ನಿನ್ನ ಪಕ್ಕದಲ್ಲಿರ್‍ತೀನಿ"

"ಬೇಡ, ನೀವು ಕೆಳಗಿರಿ ನಾನೊಬ್ಬಳೇ ನಡೆಸುತ್ತೇನೆ"

"ಬಹಳ ಮೊಂಡು ಹುಡುಗಿ ನೀನು"

"ಸಹವಾಸದೋಷ"

"ನೀನೊಬ್ಬಳಾದರೂ ನನ್ನ ಮೊಂಡು ಎಂದು ಹೇಳಿದೆಯಲ್ಲಾ"

"ಪ್ರಪಂಚಾನೇ ಹಾಗೆ ಹೇಳುತ್ತೆ"

"ಮಹಾ ನೀನು ಪ್ರಪಂಚ ಕಂಡಿರೋದು"

"ನಾಳೀನೆ ನಾನು ಎಷ್ಟು ಒಳ್ಳೆಯ ಚಾಲಕಳು ಎಂಬುದನ್ನು ನಿಮಗೆ ಸಾಬೀತು ಮಾಡುತ್ತೇನೆ ನಾಡಿದ್ದಿನಿಂದ ನೀವು ನನ್ನ ಕೆಲಸಕ್ಕೆ ತೆಗೆದುಕೊಂಡು ಬಿಡಿ. ಆಮೇಲೆ ದೇಖೋ ರಾಜಾ—ಸೀರೆಗಳ ಸುರಿಮಳೆ." ಪದ್ಮಿನಿ ಮೃದುವಾಗಿ ಚಪ್ಪಾಳೆ ತಟ್ಟಿದಳು.

"ದೇಖೋ ರಾಜಾಂದರಿ !"

"ಸುಮ್ಮನೆ ಮಾತಿನ ಆವೇಗದಲ್ಲಿ ಹಾಗೆ ಹೇಳಿದೆ "

"ನಾಳೆ ಬೇಡ ಹೇಳಿದ ಹಾಗೆ ಕೇಳು "

"ನೀವು ಪರೀಕ್ಷೆ ಮಾಡಿನೋಡಿ ನನಗೆ ನನ್ನಲ್ಲಿ ತುಂಬಾ ನಂಬಿಕೆಯಿದೆ ದಯವಿಟ್ಟು ಒಪ್ಪಿಕೊಳ್ಳಿ" ಎಂದಳು ಪದ್ಮಿನಿ ಅತ್ಯಂತ ದೈನ್ಯದಿಂದ

"ಏನಾದರೂ ಹೆಚ್ಚುಕಡಿಮೆಯಾದರೆ ?" ಮೂರ್ತಿ ಅನುಮಾನಿಸಿದರು

"ಏನೂ ಆಗೋದಿಲ್ಲ ಬೇಕಾದರೆ ಬೆಟ್ ಕಟ್ಟುತ್ತೀನಿ "

"ನಾನೂ ನಿನ್ನ ಹತ್ತಿರ ಇರಬಾರದೂಂತ ಹೇಳಿದರೆ ನನಗೇಕೋ ಇಷ್ಟವಾಗುವುದಿಲ್ಲ "

"ನಾನೇ ಧೈರ್ಯವಾಗಿರುವಾಗ ನೀವೇಕೆ ಹೆದರಿಕೊಳ್ಳಬೇಕು ? ನೀವು ಇದಕ್ಕೆ ಒಪ್ಪಿಕೊಳ್ಳದಿದ್ದರೆ ನಾನು ನಾಳೆಯಿಂದ ನಿಮ್ಮ ಮನೆಗೇ ಬರುವುದಿಲ್ಲ "

ಅವಳ ಮಾತು ಕೇಳಿ ಮೂರ್ತಿ ನಕ್ಕು "ಈಗ ಎಳೆಯ ಮಗುವಿನ ಹಾಗೆ ಹಠ ಮಾಡ್ತಿದೀಯಾ" ಎಂದರು

ಪದ್ಮಿನಿ ಮಾತನಾಡಲಿಲ್ಲ

"ನನ್ನ ಮಾತನ್ನು ಮೀರುವ ಹಾಗಿದ್ದರೆ ನಿನ್ನಿಷ್ಟ "

ಪದ್ಮಿನಿ ಮೌನ ಮುರಿಯಲಿಲ್ಲ

"ಸತ್ಯಾಗ್ರಹ ಸಾಕು ನೀನು ಹೇಳಿದ್ದಕ್ಕೆ ನಾನು ಒಪ್ಪಿಕೊಂಡೆ "

ಪದ್ಮಿನಿಯ ಮುಖದ ಮೇಲೆ ಗೆಲುವಿನ ನಗೆ ಕಾಣಿಸಿತು ಆದರೂ ಅವಳು ಸುಮ್ಮನಿದ್ದಳು

"ಶರಣಾಗತರ ಮೇಲೆ ಕೋಪ ತರುವುದು ಧರ್ಮವಲ್ಲ "

ಪದ್ಮಿನಿ ಮುಖ ತಿರುಗಿಸಿ ನಕ್ಕಳು ಕೊರಳಿನ ಕುಣಿತಕ್ಕೆ ಕಿವಿಯಲ್ಲಿದ್ದ ಕೆಂಪಿನ ಲೋಲಕ್ಕುಗಳು ಉಯ್ಯಾಲೆಯಾಡಿದುವು

"ಪ್ರಸನ್ನಳಾದೆಯಾ ?"

ಕತ್ತಲೆ ಜಗತ್ತನ್ನು ನಿಧಾನವಾಗಿ ನುಂಗುತ್ತಿತ್ತು ಮರದ ಮೇಲೆ ಹಕ್ಕಿಗಳು ಸದ್ದು ಮಾಡುತ್ತಿದ್ದವು.

"ತುಂಬಾ ಕತ್ತಲಾಯಿತು" ಎಂದಳು ಪದ್ಮಿನಿ

ಮೂರ್ತಿ ಕಾರಿನೊಳಗಿದ್ದ ದೀಪವನ್ನು ಹತ್ತಿಸಿದರು. ಪದ್ಮಿನಿ ಅದನ್ನು ಆರಿಸಿ,

"ದೀಪ ಬೇಡ" ಎಂದಳು.

"ನಿನ್ನ ಮುಖ ನನಗೆ ಕಾಣಿಸೋದೆ ಇಲ್ಲ"

"ಮಾತನಾಡಬೇಕಾದರೂ ಬೆಳಕಿರಬೇಕೆ ?"

"ಮುಖ ಕಾಣಿಸದೇ ಇದ್ದಾಗ ಮಾತನಾಡುವುದಕ್ಕೆ ಮುಜುಗರ" ಎನ್ನುತ್ತಾ ಮೂರ್ತಿ ಮತ್ತೆ ದೀಪ ಹತ್ತಿಸಿದರು

"ಕತ್ತಲೇಲಿ ಮಾತನಾಡುವುದೇ ಸೊಗಸು ಬ್ಯಾಟರಿ ದಂಡವಾಗುತ್ತದೆ" ಎನ್ನುತ್ತಾ ಮತ್ತೆ ಸ್ವಿಚ್ಚು ಒತ್ತಿದಳು

"ಇಷ್ಟೊಂದು ಮಿತವ್ಯಯ ಯಾವಾಗ ಕಲಿತೆ ?"

"ನಾನು ದುಂದುಗಾರ್ತಿಯಾಗಿದ್ದುದು ಯಾವಾಗ ?"

"ಮಾತಿನಲ್ಲಿ ಸ್ಕಾಲರ್ ನೀನು ದೀಪ ಹತ್ತಿಸಲಾ ?"

"ಯಾಕೆ ?"

"ಯಾಕೇಂತ ಹೇಳಲೀ ನೀನೇನೂ ತಿಳಿದುಕೊಳ್ಳಬಾರದು"

"ಇಲ್ಲ"

"ನಾನು ನಿನ್ನ ನೋಡುತ್ತಿರಬೇಕು"

"ಎಂದೂ ನನ್ನ ನೋಡಿಲ್ಲವೆ ? ಅಥವಾ ಕಣ್ಣಿಗೆ ಹಿತಕೊಡುವಂತಹ ಸೌಂದರ್ಯವೇನೂ ಅಲ್ಲ ನನ್ನದು"

"ಹಾಗೆ ಯಾರು ಹೇಳಿದರು ?"

"ಯಾರೇನು ಹೇಳುವುದು ? ಕನ್ನಡಿ ಹೇಳಿತು"

"ಅದೆಲ್ಲೋ ಭೂತಕನ್ನಡಿ ಇರಬೇಕು"

"ಸೊಗಸಾದ ಬೆಲ್ಜಿಯಂ ಕನ್ನಡಿ ಭೂತಕನ್ನಡಿಯಾಗುತ್ತದೆಯೇ ? ನೀವು ಅದನ್ನೇ ಭೂತಕನ್ನಡಿ ಎಂದರೆ ಒಳ್ಳೆಯ ಕನ್ನಡಿ ಎನಿಸಿಕೊಳ್ಳುವುದು ಯಾವುದು ?"

"ನನ್ನ ಕಣ್ಣುಗಳು."

"ಓ ಲಕ್ಷಣವಾಯ್ತು ಇನ್ನು ಮೇಲೆ ತಲೆಬಾಚಿಕೊಂಡು ಅಲಂಕಾರ

ಮಾಡಿಕೊಳ್ಳುವಾಗಲಿಲ್ಲಾ ನಿಮ್ಮ ಮನೆಗೆ ಬಂದು ನಿಮ್ಮ ಕಣ್ಣಿನಲ್ಲಿ ಮೂಡುವ ನನ್ನ ಪ್ರತಿಬಿಂಬವನ್ನು ನೋಡಿಕೊಂಡು ಮಾಡಿಕೊಳ್ಳುತ್ತೇನೆ" ಪದ್ಮಿನಿ ಚೇಷ್ಟೆಯಿಂದ ಹೇಳಿದಳು

"ನೀನು ಅಲಂಕರಿಸಿಕೊಂಡಾದರೂ ಬಾ, ಹಾಗೇನಾದರೂ ಬಾ— ನನ್ನ ಕಣ್ಣುಗಳು ಏನು ಹೇಳುತ್ತವೆ ಎಂಬುದು ಗೊತ್ತಾದರೆ ಸಾಕು "

"ಈವಾಗ ಹೇಗೆ ಕಾಣಿಸುತ್ತಿದ್ದೇನೆ ಹೇಳಿ "

"ದೀಪ ಹಾಕಿ ಹೇಳುತ್ತೇನೆ "

"ಹೂಂ "

ಮೂರ್ತಿ ದೀಪ ಹತ್ತಿಸಿ ಪದ್ಮಿನಿಯ ಕಡೆ ಒಂದು ಗಳಿಗೆ ನೋಡಿ ತತ್‌ಕ್ಷಣ ಹೆದರಿದವರಂತೆ ದೀಪ ಆರಿಸಿದರು

"ಯಾಕೆ ದೀಪ ಆರಿಸಿಬಿಟ್ಟಿರಿ ? ಅಷ್ಟೊಂದು ಭಯಂಕರವಾಗಿ ದೇನೆಯೇ "

"ನಿನ್ನ ಕ್ಷೇಮಕ್ಕೋಸ್ಕರವೇ ನಾನು ದೀಪ ಆರಿಸಿದೆ "

"ಕ್ಷೇಮಾ !"

"ಸೌಂದರ್ಯವನ್ನು ನೋಡಬೇಕೆ ಹೊರತು ಮುಟ್ಟಬಾರದು ಆದರೆ ಹಾಗೆ ನೋಡುತ್ತಾನೇ ಇದ್ದರೆ ನನಗೂ ಕಷ್ಟ ನಿನಗೂ ತೊಂದರೆ ನಮ್ಮಿಬ್ಬರ ಹಿತದ ದೃಷ್ಟಿಯಿಂದಲೇ ನಾನು ದೀಪ ಆರಿಸಿದೆ "

"ನಾನು ಈಗ ಹತ್ತಿಸುತ್ತೇನೆ" ಪದ್ಮಿನಿ ಹಠದಿಂದ ಹೇಳಿದಳು

"ಆಮೇಲೆ ಆಗುವ ಅನಾಹುತಗಳಿಗೆ ನಾನು ಜವಾಬ್ದಾರನಲ್ಲ "

"ಎಲ್ಲಾ ಬರೀ ಸ್ಟಂಟು "

"ಹಾಗೋ ? ಸರಿ ಬೇಕಾದರೆ ದೀಪ ಹಾಕು ಆಮೇಲೆ ನನ್ನ ಮಾತ್ರ ಬೈಯ್ಯಬಾರದು" ಎಂದು ಎಚ್ಚರಿಕೆಯ ದನಿಯಲ್ಲಿ ಮೂರ್ತಿ ಹೇಳಿದರು.

ಆದರೆ ಅದೇಕೋ ಪದ್ಮಿನಿಗೆ ದೀಪ ಹಾಕುವ ಧೈರ್ಯ ಬರಲಿಲ್ಲ

"ಗಂಟೆ ಎಷ್ಟು ?"

"ಏಳೂವರೆಯ ಸಮಯವಿರಬಹುದು "

"ನಾನಿನ್ನು ಮನೆಗೆ ಹೋಗ್ತೀನಿ. ನೀವು ಮನೆಯವರೆವಿಗೆ ಕಾರು

ತರಬೇಡಿ ”

“ಯಾಕೆ ?”

“ಅಮ್ಮ, ಅಣ್ಣ ಬೈತಾರೆ ”

“ಹಾಗೇನು ?”

“ಅವರಿಗೆ ನಿಮ್ಮನ್ನು ಕಂಡರೆ ಇಷ್ಟವಿಲ್ಲ ”

“ಓ !” ಮೂರ್ತಿ ನಿರಾಸೆಯಿಂದ ನುಡಿದರು

“ಆದುದರಿಂದ ನಮ್ಮ ಮನೆ ಹತ್ತಿರ ಕಾರು ನಿಲ್ಲಿಸಬೇಡಿ ನೀವು ಈಗ ಸೀದಾ ಮನೆಗೆ ಹೋಗ್ತೀರೇನು ?”

“ಇಲ್ಲ ಆಫೀಸಿಗೆ ಹೋಗಿ ಅಲ್ಲಿಂದ ಒಂಭತ್ತೂವರೆಯಷ್ಟು ಹೊತ್ತಿಗೆ ಮನೆಗೆ ಹೋಗ್ತೀನಿ ”

“ಹೊರಡೋಣ?”

ಮೂರ್ತಿ ದೀಪ ಹತ್ತಿಸಿ ಕಾರನ್ನು ಸ್ಟಾರ್ಟ್ ಮಾಡಿದರು

“ಮತ್ತೆ ಈಗ ದೀಪ ಹತ್ತಿಸಿದಿರಿ ?”

“ನಾನು ನಿನ್ನ ಕಡೆ ನೋಡುತ್ತಾ ಕಾರನ್ನು ಡ್ರೈವ್ ಮಾಡೋದಿಲ್ಲ ನನ್ನ ದೃಷ್ಟಿಯೆಲ್ಲಾ ರಸ್ತೆಯ ಮೇಲಿರುತ್ತದೆ ”

ಆಮೇಲೆ ಅವರ ನಡುವೆ ಮಾತು ನಡೆಯಲಿಲ್ಲ ಪದ್ಮಿನಿಯನ್ನು ರಸ್ತೆಯಲ್ಲಿ ಇಳಿಸಿ ಮೂರ್ತಿ ಆಫೀಸಿನ ಕಡೆ ಹೊರಟರು

ತಾನೆಂತಹ ಹೇಡಿ ! ನಿನ್ನೆ ಮೊನ್ನೆ ಪ್ರಪಂಚ ಕಂಡ ಹುಡುಗಿಯ ಎದುರಿಗೆ ತಾವೆಷ್ಟು ದುರ್ಬಲರು, ಅಸಹಾಯಕರು ! ಪ್ರೇಮದ ಗಣಿಯೊಳಗೆ ಆಳವಾಗಿ ಇಳಿದುಹೋದಷ್ಟೂ ತಮ್ಮ ಶಕ್ತಿ ಕ್ಷೀಣವಾಗತೊಡಗಿದೆ ಎಂದು ಅವರಿಗೆ ಭಾಸವಾಯಿತು

ಆದಿ ಅಂತ್ಯವಿಲ್ಲದ ಕನಸು ಹೆಣೆಯುವುದರಿಂದ ಏನನ್ನು ಸಾಧಿಸಿದ ಹಾಗಾಯಿತು ?

ಪ್ರೇಮದ ಹೊನ್ನಿನರಮನೆಯಿಂದ ಕಾನೂನಿನ ಕಲ್ಲುಕಟ್ಟಡದೊಳಗೆ ಮೂರ್ತಿ ಪ್ರವೇಶಿಸಿದರು

* * *

ಮನೆಯನ್ನು ಪ್ರವೇಶಿಸಿದಾಗ ಪದ್ಮಿನಿಯ ಮನಸ್ಸು ಅನೇಕ ಭಾವನೆ

ಗಳ ಸಮರಭೂಮಿಯಾಗಿತ್ತು. ಹರ್ಷ, ಹೆದರಿಕೆಗಳೆರಡೂ ಭೀಷಣ ಸಮರಕ್ಕೆ ತೊಡಗಿದ್ದುವು.

ಪ್ರೇಮದ ವಿಜಯಪತಾಕೆ ಮನಸ್ಸಿನ ಗುಡಿಯ ಮೇಲೆ ಹಾರಾಡುತ್ತಿತ್ತು. ಆದರೆ ಅದೇ ಸಮಯದಲ್ಲಿ ಮನೋವೇಗುಲದ ಕಡುಕತ್ತಲಿನಲ್ಲಿ ಭೀತಿ ಹಣಿಕಿ ಹಾಕುತ್ತಿತ್ತು.

ಬಹಳಕಾಲ ಬಾರದ ಮಳೆ ಬಂದಾಗ ಆಗುವ ಸಂತೋಷ, ಸಂತಸದೊಡನೆ ಸಿಡಿಲಿನ ಭಯವೂ ಬೆರೆತಿರುವಂತೆ.

ಒಂದು ಬಾರಿ ಅಸಹಾಯಕತೆ ಅವಳನ್ನು ಮುಸುಗಿ ದುರ್ಬಲಳನ್ನಾಗಿ ಮಾಡಿದರೆ ಮತ್ತೊಂದು ಗಳಿಗೆಯಲ್ಲಿ ಇಡೀ ವಿಶ್ವವನ್ನು ಗೆಲ್ಲಬಲ್ಲೆನೆಂಬ ಆತ್ಮವಿಶ್ವಾಸ ಮೂಡುತ್ತಿತ್ತು.

ಈ ಘರ್ಷಣೆ ಮನಸ್ಸಿನಲ್ಲಿ ನಡೆದಿರುವಾಗಲೇ ಪದ್ಮಿನಿ ಸೋತು ಮಲಗಿದಳು.

ಮಾರನೆಯ ದಿನ ಅವಳು ಎಂದಿನಂತೆ ತಾಯಿಗೆ ಸುಳ್ಳು ಹೇಳಿ ಗೀತನ ಮನೆಯ ಕಡೆ ಹೊರಟಳು.

ಇನ್ನೂ ಎಷ್ಟು ದಿನ ಈ ರೀತಿ ಸುಳ್ಳು ಹೇಳಲು ಸಾಧ್ಯ ? ಸತ್ಯ ಒಂದಲ್ಲ ಒಂದು ದಿನ ಬಯಲಿಗೆ ಬಂದೇ ಬರುತ್ತದೆ. ತನ್ನ ತಾಯಿತಂದೆಗೆ ಪರಿಚಯವಿರುವ ಯಾರಾದರೂ ತಮ್ಮಿಬ್ಬರನ್ನೂ ಒಟ್ಟಿಗೆ ಕಂಡರೆ ಮುಂದಿನ ಪರಿಣಾಮ ?

ಅದನ್ನು ಈಗಿನಿಂದ ಯೋಚಿಸಿ ಯಾಕೆ ತಲೆ ಕೆಡಿಸಿಕೊಳ್ಳಲಿ, ಎಂದು ಮನಸ್ಸನ್ನು ಗಟ್ಟಿಮಾಡಿ ಪದ್ಮಿನಿ ಹೆಜ್ಜೆ ಹಾಕಿದಳು.

ಮೂರ್ತಿ ಮನೆಯಲ್ಲಿದ್ದರೂ ಹೊರಗೆ ಹೊರಡುವ ಸಿದ್ಧತೆ ನಡೆಸಿರಲಿಲ್ಲ. ಪದ್ಮಿನಿ ಕುಣಿತದ ನಡಗೆಯಲ್ಲಿ ಅವರ ಮುಂದೆ ನಿಂತು

"ಹೋಗೋಣ" ಎಂದಳು.

"ಹೋಗಲೇಬೇಕೆ ?"

"ಹೂಂ. ಇವತ್ತು ನನ್ನ ಪರೀಕ್ಷೆ ಎನ್ನುವುದು ಮರೆತುಹೋಯಿತೆ ?"

"ಪರೀಕ್ಷೆ ಈಗಲೇ ಬೇಡ. ನಿನ್ನ ವ್ಯಾಸಂಗ ಬಹಳ ಕಡಿಮೆಯದಾಗಿದೆ."

"ಆದರೇನು ? ನನಗೆ ಶ್ರದ್ಧೆಯಿದೆ ಆದುದರಿಂದ ಪರೀಕ್ಷೇಲಿ ಖಂಡಿತ ಸೋಲೋಗುವುದಿಲ್ಲ ನಾನು ಗೆದ್ದರೆ ನಿಮ್ಮ ಮನೆಯ ಡ್ರೈವರ್ ಅಂ"

"ಸೋತರೆ ?" ಮೂರ್ತಿ ಕೇಳಿದರು

"ನಿಮಗೆ ನಾನು ಮುಖವನ್ನೇ ತೋರಿಸುವುದಿಲ್ಲ "

"ಹಾಗಾದರೆ ಪರೀಕ್ಷೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿದ್ದೇನೆ."

ಪದ್ಮಿನಿ ಕಳವಳದಿಂದ "ಇಲ್ಲ ಇಲ್ಲ ಹಾಗೆ ಮಾಡೋದಿಲ್ಲ ನೀವು ಏನು ಹೇಳ್ತೀರೋ ಹಾಗೆ ಮಾಡ್ತೀನಿ "

"ನಿಜವಾಗಿ ?"

ಪದ್ಮಿನಿ ಬಾಗಿಲಿನಿಂದ ಒಳಗೆ ಬಂದ ಜೂಲಿಯನ್ನು ಮಾತನಾಡಿಸುವ ಸಲುವಾಗಿ ತಿರುಗಿ ನಿಂತು "ಹೂಂ" ಎಂದಳು

ಆ ನಿಡುಜಡೆಯನ್ನು ಹಿಡಿದು ಅವಳನ್ನು ಹತ್ತಿರಕ್ಕೆಳೆದುಕೊಳ್ಳುವ ಬಯಕೆ ಮೂರ್ತಿಯ ಮನಸ್ಸಿನಲ್ಲಿ ಹಸಿದ ಹೆಬ್ಬುಲಿಯಂತೆ ಭೋರ್ಗರೆಯಿತು ಅವರ ಕೈ ಯಾವುದೋ ಮೋಡಿಗೆ ಒಳಗಾದಂತೆ ಮುಂದೆ ಬಂತು

ಪದ್ಮಿನಿ 'ಜೂಲಿ' ಎನ್ನುತ್ತಾ ಮುಂದೆ ಸರಿದು ಮೊಳಕಾಲೂರಿ ಕುಳಿತು ಜೂಲಿಯನ್ನೆತ್ತಿಕೊಂಡಳು

ಮೂರ್ತಿಯ ಕೈ ಮರದ ತುಂಡಿನಂತೆ ಕೆಳಗೆ ಬಿತ್ತು.

'ಸದ್ಯ, ಅವಳು ಮುಂದೆ ಸರಿದುದೇ ಒಳ್ಳೆಯದಾಯಿತು' ಎಂದು ಕೊಂಡರು ಮೂರ್ತಿ.

ನಿರ್ಜನವಾಗಿದ್ದ ಬಯಲನ್ನು ಸೇರುವವರೆಗೆ ಯಾರೂ ಮಾತನಾಡಲಿಲ್ಲ ಪರಸ್ಪರ ಹೃದಯಗೀತೆಯನ್ನು ಆಲಿಸುವುದರಲ್ಲಿ ಅವರು ಮಗ್ನರಾಗಿದ್ದರು ಕೊಂಚವೂ ಅಪಶ್ರುತಿಯಿಲ್ಲದ, ಹೃದಯಕ್ಕೆ ಹಿತವಾದ ಹೃದಯಗೀತೆ–ಬೀಸುತ್ತಿದ್ದ ತಂಗಾಳಿಯಷ್ಟೇ ಚೇತೋಹಾರಿಯಾಗಿತ್ತು , ಮುಳುಗುತ್ತಲಿದ್ದ ಸೂರ್ಯನ ಅರುಣವರ್ಣದಷ್ಟೇ ಆಕರ್ಷಣೀಯವಾಗಿತ್ತು. ಅವರಿಬ್ಬರೂ ಪರಸ್ಪರ ವಯಸ್ಸಿನ ಅಂತರವನ್ನು ಮರೆತು ಕೇವಲ ಪದ್ಮಿನಿ—ಮೂರ್ತಿ ಮಾತ್ರವಾಗಿದ್ದರು

ಪ್ರೇಮಸರಸ್ಸಿನಲ್ಲಿ ಅತ್ಯಂತ ನಯಮನೋಹರವಾಗಿ ಕಾಣುತ್ತಿದ್ದ

ಎರಡು ಹೃದಯಕಮಲಗಳಿಗೆ ವಯಸ್ಸಿನ ತೊಡಕು ಬೇರು ಇರಲಿಲ್ಲ

ಮೂರ್ತಿ ಕಾರನ್ನು ನಿಲ್ಲಿಸಿ ಮತ್ತೆ ಪದ್ಮಿನಿಗೆ ಸ್ವಲ್ಪ ಹೊತ್ತು ಶಿಕ್ಷಣ ವಿತ್ತರು ಪದ್ಮಿನಿ ಆತುರದಿಂದ,

"ಎಲ್ಲಾ ಗೊತ್ತಾಯಿತು ನೀವಿನ್ನು ಇಳಿಯಿರಿ" ಎಂದಳು

"ಸ್ಟಾರ್ಟ್ ಮಾಡುವುದು, ನಿಲ್ಲಿಸುವುದು ಎಲ್ಲಾ "

"ನಂಗೆಲ್ಲಾ ಗೊತ್ತು" ಎಂದಳು ಅಸಹನೆಯಿಂದ ಅವಳು

"ಆಮೇಲೆ "

ಪದ್ಮಿನಿ ಆತುರದಿಂದ ಮೂರ್ತಿಯ ಭುಜವನ್ನು ಮೃದುವಾಗಿ ತಳ್ಳಿ, "ನೀವು ಇಳಿಯಿರಿ" ಎಂದಳು

ಮೂರ್ತಿ ನಿರುಪಾಯರಾಗಿ ಕೆಳಗೆ ಇಳಿದರು

ಪದ್ಮಿನಿ ಕುಳಿತಿದ್ದಂತೆಯೇ ಕಾರನ್ನು ಸ್ಟಾರ್ಟ್ ಮಾಡಿದಳು

ಕಾರನ್ನು ಸ್ಟಾರ್ಟ್ ಮಾಡಿ ಪದ್ಮಿನಿ ಹೆಮ್ಮೆಯಿಂದ ಮೂರ್ತಿಯ ಕಡೆ ತಿರುಗಿ "ಬೈ ಬೈ" ಎಂದು ಕೈ ಬೀಸಿದಳು

ಕಾರು ನಿಧಾನವಾಗಿ ಚಲಿಸಲು ಮೊದಲಾಯಿತು ಮೂರ್ತಿ ನಿಧಾನವಾಗಿ ಕಾರಿನ ಹಿಂದೆ ಹಜ್ಜೆ ಹಾಕಿದರು ಕ್ರಮೇಣ ಕಾರಿನ ವೇಗ ಹೆಚ್ಚುತ್ತಾ ಬಂದಿತು

ಇದ್ದಕ್ಕಿದಂತೆ ಪದ್ಮಿನಿ ಚೀರಿದಳು ಮೂರ್ತಿ ಗಾಬರಿಯಾಗಿ ಕಾರಿನ ಹಿಂದೆ ಓಡಿದರು

"ನನಗೆ ಹೇಗೆ ನಿಲ್ಲಿಸಬೇಕೋ ಗೊತ್ತಾಗೋದಿಲ್ಲ "

ಗಾಳಿಯನ್ನು ಮೆಟ್ಟಿ ಪದ್ಮಿನಿಯ ಮಾತುಗಳು ಕೇಳಿಬಂದವು

"ಮೂರ್ತಿಗೆ ದಿಗ್ಭ್ರಮೆಯಾಯಿತು ಒಂದು ಗಳಿಗೆ ಅವರಿಗೆ ಏನು ಮಾಡಲೂ ತೋರಲಿಲ್ಲ ಕಾರನ್ನು ನಿಲ್ಲಿಸುವ ರೀತಿಯನ್ನು ಅವರು ಕೂಗಿ ಹೇಳಿದರೂ ಗಾಬರಿಯಿಂದ ಮತಿಗೆಟ್ಟಿದ್ದ ಪದ್ಮಿನಿಗೆ ಯಾವುದೂ ಅರ್ಥ ವಾಗಲಿಲ್ಲ

"ನಂಗೋತ್ತಾಗೋದಿಲ್ಲ ನಂಗೆ "

ಮಿತಿಮೀರಿದ ಭಯದಿಂದ ಅವಳ ಮಾತುಗಳು ತಡೆದು ಬಂದವು.

ಮೂರ್ತಿಗೆ ತಲೆತಿರುಗಿ ಕಣ್ಣು ಕತ್ತಲಿಟ್ಟಂತಾಯಿತು ಒಂದು ಪಕ್ಷ

ಕಾರು ಆಘಾತದಿಂದ ಹಿಡಿತದಲ್ಲಿರದೆ ಹೋಗಿ ಮರಕ್ಕೆ ಡಿಕ್ಕಿ ಹೊಡೆದು ಪದ್ಮಿನಿ ಒಂದು ಪಕ್ಕ

ತಮ್ಮ ಜೀವನವನ್ನು ಪಣವಾಗಿರಿಸಿ ಮೂರ್ತಿ ಕಾರಿನ ಹಿಂದೆ ಓಡಿದರು ಪದ್ಮಿನಿ ಉನ್ಮಾದಿನಿಯಂತೆ ಚೀರಿದಳು. ಕ್ರಮೇಣ ಕಾರಿಗೂ, ಮೂರ್ತಿಗೂ ಇದ್ದ ಅಂತರ ಕಡಿಮೆಯಾಗುತ್ತಾ ಬಂತು ಮೂರ್ತಿ ಚಲಿಸುತ್ತಿದ್ದ ಚಕ್ರಗಳ ಕಡೆ ನೋಡಿದಳು. ತಾವು ಕಾರಿನ ಫುಟ್ ಬೋರ್ಡಿನ ಮೇಲೆ ನೆಗೆಯುವುದರಲ್ಲಿ ಒಂದು ಕೂದಲಿನಷ್ಟು ಹೆಚ್ಚು ಕಡಿಮೆ ಬಂದರೂ ಆ ಚಕ್ರಗಳ ಕೆಳಗೆ ಸಿಕ್ಕಿಕೊಳ್ಳಬಹುದು. ಹಾಗಾದರೆ ಪದ್ಮಿನಿ ಹೇಗಾದರೂ ಆದರೆ ಇಬ್ಬರೂ ಸಾಯಬಹುದು ಇಲ್ಲದಿದ್ದರೆ ಇಬ್ಬರೂ ಬದುಕಬಹುದು

ಮೂರ್ತಿ ಒಂದು ಕ್ಷಣ ಸಿಂಹಾವಲೋಕನ ಮಾಡಿ ಬಲಿಯ ಮೇಲೆ ಗುರಿಯಿಟ್ಟು ಹಾರುವ ಸಿಂಹದಂತೆ ಕಾರಿನ ಫುಟ್ ಬೋರ್ಡಿನ ಮೇಲೆ ನೆಗೆದರು. ಎರಡು ಕ್ಷಣದಲ್ಲಿ ಇಷ್ಟೆಲ್ಲಾ ನಡೆಯಿತು.

ಕಾರಿನ ಬಾಗಿಲಿನ ಹಿಡಿಯನ್ನು ತಿರುಗಿಸಿ ಪದ್ಮಿನಿಯ ಪಕ್ಕಕ್ಕೆ ಹಾರಿದರು. ಮೂರ್ತಿ ಒಳಗೆ ಬಂದುದನ್ನು ನೋಡಿ ಪದ್ಮಿನಿ ಸ್ಟೀರಿಂಗಿನ ಮೇಲಿದ್ದ ಎರಡು ಕೈಗಳನ್ನೂ ತೆಗೆದು ಅವರ ಬಲತೋಳನ್ನು ಕಪಿಮುಷ್ಟಿಯಿಂದ ಹಿಡಿದುಕೊಂಡಳು

"ನನ್ನ ಕೈ ಬಿಡು... ಬಿಡು..." ಎಂದು ಮೂರ್ತಿ ಜೋರಾಗಿ ಅವಳನ್ನು ತಳ್ಳಲು ಯತ್ನಿಸಿದರು ಅದರೆ ಗಿಡದಿಂದ ಗಿಡಕ್ಕೆ ಹಾರುವ ತಾಯಿ ಕೋತಿಯನ್ನು ಬಿಗಿಯಾಗಿ ಅಪ್ಪುವ ಮರಿಯಂತೆ ಪದ್ಮಿನಿ ಮೂರ್ತಿಯನ್ನು ಅಪ್ಪಿಕೊಂಡಳು

ಅವಳನ್ನು ಕೊಸರುತ್ತಲೇ ಮೂರ್ತಿ ಕಾರಿನ ಬ್ರೇಕು ಹಾಕಿದರು ಕಾರು ಗಕ್ಕನೆ ನಿಂತಿತು

ಮೃತ್ಯುವಿನಿಂದ ತಾವಿಬ್ಬರೂ ಪಾರಾಗಿದ್ದೇವೆ ಎಂಬುದರ ಅರಿವಾದೊಡನೆ ಭೀಕರಾದ್ರೋಗದಿಂದ ಮೂರ್ತಿಯ ದೇಹಾದ್ಯಂತವೂ ಹುಚ್ಚುಕ್ರೋಧದ ಬೆಂಕಿ ಹೊಳೆ ಹರಿದಾಡಿ ವ್ಯಕ್ತಿಯನ್ನು ತಿರಸ್ಕಾರ ನರ್ತನಗೊಳಿಸಿತು

ಕೊನೆಯ ಆಸರೆ, ಇದೊಂದೇ ಆಧಾರ ಎನ್ನುವಂತೆ ತನ್ನನ್ನು ಹಿಡಿದ

ಕೊಂಡಿದ್ದ ಪದ್ಮಿನಿಯ ಆ ಸುಂದರ ತಲೆಯನ್ನು ಒಡೆದು ಪುಡಿಪುಡಿ ಮಾಡ ಬೇಕೆನಿಸಿತು ಮೂರ್ತಿಗೆ

ಸುಂದರವಾದ ತಲೆ—ಚೆಲುವಾದ ಮುಖ.

ಆದರೆ ಒಳಗೆ ಬರಿಯ ಶೂನ್ಯ, ಪೊಳ್ಳು

ತನ್ನನ್ನು ಹೆದರಿಸಿದ ಆ ಮೂಢ ಹುಡುಗಿಗೆ ಬುದ್ಧಿ ಕಲಿಸುವ ಉದ್ದೇಶದಿಂದ ಅವಳ ಕೆನ್ನೆಗಳಿಗೆ ಪ್ರಹಾರಮಾಡುವ ಅಭಿಲಾಷೆಯಿಂದ ಮೂರ್ತಿ ತನ್ನೆದೆಗೆ ಮುಖ ಹುದುಗಿಸಿ ಭೀತಿಯಿಂದ ನಡುಗುತ್ತಿದ್ದ ಪದ್ಮಿನಿ ಯನ್ನು ದೂರ ತಳ್ಳಲು ಯತ್ನಿಸಿದರು

ಪದ್ಮಿನಿ ಅವರೆದೆಯಿಂದ ಮುಖ ತೆಗೆಯಲಿಲ್ಲ ಮೂರ್ತಿ ಬಲವಂತ ದಿಂದ ತಮ್ಮೆದುರಿಗಿದ್ದ ಮುಖವನ್ನು ಎರಡು ಕೈಗಳಿಂದಲೂ ಕಿತ್ತು ದೂರ ಹಿಡಿದು ಅವಳನ್ನು ನೋಡಿದರು

ಮೃತ್ಯುದರ್ಶನ ಮಾಡಿದ ಅವಳ ಕಣ್ಣುಗಳು ಗಾಬರಿಯಿಂದ ದೊಡ್ಡ ದಾಗಿದ್ದುವು ಕತ್ತಲೆಯನ್ನು ಕಂಡು ಹೆದರಿದ ಮಗುವಿನಂತೆ ಅವಳು ಮೂಕಳಾಗಿದ್ದಳು. ಭೀತಿ ಅವಳ ನಾಲಗೆಯ ಶಕ್ತಿಯನ್ನು ಉಡುಗಿ ಸಿತ್ತು

"ಯೂ ಫೂಲ್" ಎಂಬ ಕರ್ಕಶವಾದ ಬೈಗಳೊಡನೆ ಅವರ ಬಲಿಷ್ಠ ವಾದ ಕೈ ಮೇಲೆದ್ದು ಅವಳ ಕೆನ್ನೆಯ ಮೇಲೆ ರಭಸದಿಂದ ಹೊಡೆಯಿತು

ಹೊಡೆತದ ನೋವಿಗೆ ಅವಳ ಮುಖವನ್ನು ಕವಿದಿದ್ದ ಭೀತಿಯ ಹಿಮಕರಗಿತು ಪದ್ಮಿನಿ ಇದ್ದಕ್ಕಿದ್ದಂತೆಯೇ ಎಳೆಯ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು

ಅವಳ ಸ್ವಚ್ಛವಾದ ಕೆನ್ನೆಯ ಮೇಲೆ ಮೂಡಿದ ತಮ್ಮ ಬೆರಳುಗಳ ಗುರುತನ್ನು ನೋಡಿ ಮೂರ್ತಿಯ ರೋಷ ಹಿಮ್ಮೆಟ್ಟಿತು

ಕೈ ಬೊಗಸೆಯಿಂದ ದೂರ ಕಿತ್ತಿರಿಸಿದ್ದ ಮುಖವನ್ನು ಅವರು ಮತ್ತೆ ತಮ್ಮೆದೆಗೆ ಒತ್ತಿಕೊಂಡರು—ಉಕ್ಕಿಬಂದ ಕ್ರೋಧದಲ್ಲಿ ಹೊಡೆದ ಮಗ ವನ್ನು ತಾಯಿ ಮತ್ತೆ ತಬ್ಬಿಕೊಳ್ಳುವಂತೆ.

"ಒಂದು ಗಳಿಗೆಯಲ್ಲಿ ನನ್ನ ಸರ್ವನಾಶ ಮಾಡಿದ್ದೆಯಲ್ಲಾ....ನಿನ್ನ ಏನು ಮಾಡೋಣ ?"

ಪದ್ಮಿನಿಯ ಅಳು ನಿಲ್ಲಲಿಲ್ಲ

"ಒಂದು ಪಕ್ಷ ನಿನಗೇನಾದರೂ ಆಗಿದ್ದಿದ್ದರೆ ನಿಮ್ಮ ತಾಯಿತಂದೆಗೆ ನಾನು ಏನು ಉತ್ತರ ಹೇಳಬೇಕಿತ್ತು ?"

" "

"ಗೀತಾಗೆ ಏನು ಹೇಳಬಹುದಿತ್ತು ?"

" "

"ನನ್ನ ಗತಿ ಏನಾಗುತ್ತಿತ್ತು ?"

" "

"ನೋಡು ನನ್ನ ಕಾಲುಗಳಿನ್ನೂ ಹೆದರಿಕೆಯಿಂದ ನಡುಗುತ್ತಿವೆ ಕಾಲುಗಳಿನ್ನೂ ಸ್ಥಿರವಾಗಿಲ್ಲ "

" "

"ನಿನ್ನನ್ನು ನಂಬಿದ ನಾನು ಮೂರ್ಖ ನಿನ್ನಂತಹ ಮೂಢ, ಮೊಂಡ, ಹರಮಾರಿ ಹುಡುಗಿಯನ್ನು ನಾನು ನೋಡಿರಲೇ ಇಲ್ಲ "

" "

"ಇನ್ನು ಇದೇ ಕೊನೆ, ಇದೇ ಮೊದಲು—ನಿನಗೆ ಕಾರಿನ ಸಹವಾಸ ಸಾಕು."

" "

"ನನಗಾದ ಶಾಕಿನಿಂದ ನಾನು ಚೇತರಿಸಿಕೊಳ್ಳಬೇಕಾದರೆ ಇನ್ನೂ ಒಂದು ತಿಂಗಳು ಬೇಕು "

" "

"ಏಯ್ ಮೂರ್ಖ ಹುಡುಗಿ ಮಾತನಾಡು ಹುಡುಗಿಯರು ಇಷ್ಟೊಂದು ಹರಮಾರಿಯರಾಗಬಾರದು. ನಿನ್ನ ತಲೆಬುರುಡೆ ಒಡೆದು ಅದರೊಳಗೆ ಏನಿದೆ ನೋಡೋಣ ಎನಿಸುತ್ತಿದೆ ನನಗೆ."

ತಮ್ಮ ಮುಷ್ಟಿಯಿಂದ ಅವಳ ತಲೆಯನ್ನು ಒಡೆಯುವವರಂತೆ ಮೂರ್ತಿ ಅವಳ ತಲೆಯ ಮೇಲೆ ಕೈಯಿರಿಸಿದರು. ಆ ಮೃದುವಾದ ಕೂದಲಿನ ಸ್ಪರ್ಶದಿಂದ ಅವರ ಮುಷ್ಟಿ ಸಡಿಲವಾಯಿತು

"ನಿನಗೆ ಧೈರ್ಯವಿದ್ದರೆ ತಲೆ ಎತ್ತಿ ನೋಡು "

ತಪ್ಪು ತನ್ನದು ಎಂದು ಪದ್ಮಿನಿಗೆ ತಿಳಿದಿತ್ತು. ಆದುದರಿಂದ ಅವಳು ಯಾವ ಮಾತಿಗೂ ಉತ್ತರಕೊಡದೆ ಮೌನವಾಗಿದ್ದಳು

ಪ್ರೇಮ ಸಮುದ್ರಮಥನದಲ್ಲಿ ಮೊದಲು ಹರಿದುಬಂದುದು ಕ್ರೋಧದ ವಿಷ. ಅವಳ ಬಗ್ಗೆ ಅವರಿಗಿದ್ದ ರೋಷವೆಲ್ಲ ಮಾತಿನ ಮೂಲಕ ಹೊರಗೆ ಹರಿದುಹೋದಮೇಲೆ ಉಳಿದಿದ್ದುದು ಎಂದೆಂದಿಗೂ ಇಂಗದ ಪ್ರೇಮಾಮೃತ

ಪದ್ಮಿನಿಯನ್ನು ಬೈಯ್ಯುತ್ತಿದ್ದಂತೆಯೇ ಮೂರ್ತಿಯ ಕೈ ಅವಳನ್ನು ಬಳಸಿ ಮತ್ತಷ್ಟು ಹತ್ತಿರಕ್ಕೆಳೆದುಕೊಂಡಿತು ಅವರು ಅವಳ ನೆತ್ತಿಯ ಮೇಲೆ ತಮ್ಮ ಕೆನ್ನೆಯೊರಗಿಸಿ ಮೃದುವಾಗಿ ಕೇಳಿದರು,

"ನಾನು ಹೊಡೆದಾಗ ತುಂಬಾ ನೋವಾಯಿತೇ ಪದ್ಮಿನಿ ?"

ಈ ದನಿಯೀಗ ಮೂರ್ತಿಯದು ಎಂದುಕೊಂಡಳು ಪದ್ಮಿನಿ.

"ನಿಜವಾಗಿ ಹೇಳುವುದಾದರೆ ನಿನ್ನ ಸಾಯಿಸಿಬಿಡುವಷ್ಟು ಕೋಪ ಬಂದಿತ್ತು ನನಗೆ ನನ್ನ ಎಷ್ಟೊಂದು ಹೆದರಿಸಿಬಿಟ್ಟಿದ್ದೆ "

ನಿಜ, ಮೂರ್ತಿಯ ಎದೆಗೆ ತಲೆ ಒರಗಿಸಿದ್ದ ಪದ್ಮಿನಿಗೆ ಅವರ ಎದೆಯ ಬಡಿತ ಕೇಳಿಸುತ್ತಿತ್ತು. ಕಳವಳದಿಂದ ಹೃದಯವಿನ್ನೂ ಜೋರಾಗಿ ಮಿಡಿಯುತ್ತಿತ್ತು—ಪದ್ಮಿನಿ, ಪದ್ಮಿನಿ

"ನನಗೆ ಎಂದೆಂದಿಗೂ ಬೈ ಬೈ ಹೇಳಿ ಹೊರಟುಬಿಟ್ಟಿದ್ದೆಯಲ್ಲಾ ಪರಲೋಕ ಪ್ರವಾಸಕ್ಕೆ. "

ಅವರ ಮಾತು ಕೇಳಿ ಅಳುವಿನಲ್ಲೂ ಪದ್ಮಿನಿಗೆ ನಗು ಬಂತು ಅಳುವನ್ನು ಒಂದು ಕ್ಷಣ ಮರೆತು ಅವಳು ಕಿಲಕಿಲನೆ ನಕ್ಕಳು

"ನಿನಗೆ ನಗುವಾದರೂ ಹೇಗೆ ಬರುತ್ತದೋ ? ನಿನ್ನ ಕತ್ತು ಹಿಸುಕಿ ಸಾಯಿಸಿಬಿಡುವಷ್ಟು ಕೋಪ ಬಂದಿತ್ತು ನನಗೆ "

"ಊಂ ಈಗಲೂ ಹಾಗೇ ಮಾಡಬಹುದು ಹೇಗಿದ್ದರೂ ಬಯಲು ನಿರ್ಜನವಾಗಿದೆ ಒಂದು ಪಕ್ಷ ನಾನು ಕೂಗಿಕೊಂಡರೂ ನನ್ನ ಸಹಾಯಕ್ಕೆ ಯಾರೂ ಬರೋದಿಲ್ಲ "

"ಒಳ್ಳೆಯ ಸಲಹೆ " ಎನ್ನುತ್ತಾ ಮೂರ್ತಿ ಆಟಕ್ಕಾಗಿ ಅವಳ ಕೊರಳಿಗೆ ಕೈ ಹಾಕಿದರು. ಅವಳ ಕೊರಳಿನ ಕೋಮಲತೆ ಅವರನ್ನು

ಬೆಚ್ಚುವಂತೆ ಮಾಡಿತು ಮೂರ್ತಿ ತತ್‌ಕ್ಷಣ ಹಿಮ್ಮೆಟ್ಟಿದರು.

ದೂರದಲ್ಲಿ ಕಾರಿನ ಸದ್ದೊಂದನ್ನು ಕೇಳಿ ಪದ್ಮಿನಿ ತಲೆ ಎತ್ತಿದಳು ತಮ್ಮ ಕೋಟಿನ ಗುಂಡಿಗೆ ಸಿಕ್ಕಿಕೊಂಡಿದ್ದ ಅವಳ ಕೂದಲನ್ನು ಮೃದುವಾಗಿ ಬಿಡಿಸಿ ಮೂರ್ತಿ ಹೇಳಿದರು,

"ಇನ್ನು ಮನೆಗೆ ಹೋಗೋಣ "

ಅವರು ದೂರ ಸರಿದ ಕೂಡಲೆ ಪದ್ಮಿನಿಗೆ ಮತ್ತೆ ಹೆದರಿಕೆಯಾಯಿತು. ಅವರ ತೋಳಿನೊಳಗೆ ಅವಳಿಗೆ ಯಾವ ಭಯವೂ ಇರಲಿಲ್ಲ ತುಂಬಿದ ಪ್ರೇಮದಿಂದ ಅವಳಿಗೆ ತನ್ನ ಹೃದಯ ಬಿರಿದುಹೋಗುತ್ತಿರುವಂತೆ ಭಾಸವಾಯಿತು ಮೂರ್ತಿಯ ಬಗ್ಗೆ ತನಗಿರುವ ಉತ್ಕಟಪ್ರೇಮವನ್ನು ನಿವೇದಿಸಲು ಅವಳ ತುಟಿಗಳರಳಿದವು ಮರುಕ್ಷಣವೇ ಪದ್ಮಿನಿ ಒಂದು ಕೈಯಿಂದ ಹೃದಯವನ್ನೂ, ಮತ್ತೊಂದು ಕೈಯಿಂದ ಬಾಯನ್ನೂ ಒತ್ತಿ ಹಿಡಿದು ದೂರ ಸರಿದಳು

ಆ ಗಳಿಗೆಯಲ್ಲಿ ಅವಳು ಅವರನ್ನು ಜಗತ್ತಿನ ಕೊನೆಯವರೆವಿಗೆ ಹಿಂಬಾಲಿಸಲು ಸಿದ್ಧಳಾಗಿದ್ದಳು ಅವರ ಒಂದೇ ಒಂದು ಮಾತು ಅವಳನ್ನು ತನ್ನ ಮನೆ, ಮಠ, ತಾಯಿ, ತಂದೆಯನ್ನು ಮರೆತು ಅವರನ್ನು ಹಿಂಬಾಲಿಸುವಂತೆ ಮಾಡುವ ಶಕ್ತಿಯನ್ನು ಪಡೆದಿತ್ತು

ಅರ್ಪಣೆ—ಸ್ವೀಕಾರ, ಆರಾಧನೆ ಪಡೆಯುವ—ಆರಾಧಿಸುವ ಉಗ್ರ ಹಂಬಲದಿಂದ ಅವಳೆದೆ ಭಾರವಾಗಿತ್ತು ಹೃದಯದ ಆಳದಲ್ಲಿ ನೋವಿನ ನರವೊಂದು ಮಧುರವಾಗಿ ಮೀಟುತ್ತಿತ್ತು

ಅವಳು ಮೂರ್ತಿಯ ಕಡೆ ನೋಡಿದಳು

ಅವರು ರಸ್ತೆಯ ಮೇಲೆ ತಮ್ಮ ದೃಷ್ಟಿಯನ್ನು ನಾಟಿ, ಗಂಭೀರವಾಗಿ ಕಾರನ್ನು ನಡೆಸುತ್ತಿದ್ದರು

ಬಿಸಿ ಹೃದಯಕ್ಕೆ ಒಂದೇ ಒಂದು ತಂಪು ನುಡಿ ಬೇಡವೇ ? ಮನೆ ಹತ್ತಿರವಾದಂತೆ ಪದ್ಮಿನಿ ಚಂಚಲಳಾದಳು ; ಮೂರ್ತಿ ಮೌನವ್ರತಧಾರಣೆ ಮಾಡಿದಂತೆ ತೋರಿತು ಪದ್ಮಿನಿ ಮೂರ್ತಿಯ ಬಳಿಗೆ ಸರಿದು,

"ನಿಮ್ಮ ಮನಸ್ಸಿಗೆ ತುಂಬಾ ಬೇಜಾರು ಮಾಡಿಬಿಟ್ಟೆ, ಕ್ಷಮಿಸಿ" ಎಂದಳು

"ಇನ್ನು ಆ ವಿಷಯ ಬೇಡ ಮರೆತುಬಿಡೋಣ."

ತನ್ನನ್ನು ರಕ್ಷಿಸಿದ ಮೂರ್ತಿಯನ್ನು, ತನ್ನಲ್ಲಿದ್ದ ಭೀತಿಯನ್ನು ಹೊಲ ಗಿಸಿ ಆಶ್ರಯ ನೀಡಿದ ಆ ತೋಳುಗಳನ್ನು, ಅವರ ಎದೆಯ ಮಿಡಿತವನ್ನು ಮರೆಯಲು ಸಾಧ್ಯವೇ ?

ಅದೊಂದು ರುದ್ರ ಅಮೃತ ಮುಹೂರ್ತ—ಮೃತ್ಯು, ಪ್ರೇಮಿ ಇಬ್ಬರೂ ಜೊತೆಯಾಗಿ ತನ್ನನ್ನು ಅಪ್ಪಿಕೊಂಡ ಗಳಿಗೆ ಪ್ರೇಮಿಯ ಬಾಹು ಗಳಲ್ಲಿದ್ದ ಬಲ ಮೃತ್ಯುವನ್ನು ಹೊಡೆದೋಡಿಸಿತ್ತು. ಬಂಧನ ಸೊಗಸಲ್ಲ ವೆಂದು ಹೇಳಿದವರು ಯಾರೋ? ತನಗೆ ಸ್ವಾತಂತ್ರ್ಯ ಬೇಕಿಲ್ಲ ಮೂರ್ತಿಯ ಬಾಹು ಬಂಧನವೊಂದು ಶಾಶ್ವತವಾಗಿ ಉಳಿದರೆ ತನಗಿನ್ನೇನೂ ಬೇಡ

"ಊಹೂಂ ನನಗಂತೂ ಮರೆಯೋಕೆ ಸಾಧ್ಯವಿಲ್ಲ ಇದೆಲ್ಲಾ ಮತ್ತೊಮ್ಮೆ ಮರುಕಳಿಸುವುದಾದರೆ ಎಷ್ಟು ಚೆನ್ನ !"

ಎಂತಹ ವಿಚಿತ್ರ ಹುಡುಗಿ ! ತನಗೆಂತಹ ಗಂಡಾಂತರ ಬಂದಿತ್ತೆಂಬು ದನ್ನೂ ಮರೆತು ಈಗ ಮತ್ತೊಮ್ಮೆ ಅದು ಮರುಕಳಿಸಲಿ ಎಂದು ಬಯಸು ತ್ತಿದ್ದಾಳೆ ! ಅವಳ ವಯಸ್ಸೇ ಹಾಗಿದೆ

ಮೂರ್ತಿ ಕಾರು ನಿಲ್ಲಿಸಿದರು ಪದ್ಮಿನಿ ಸ್ಟೀರಿಂಗಿನ ಮೇಲಿದ್ದ ಅವರ ಕೈಯನ್ನು ಮೃದುವಾಗಿ ಅದುಮಿ ಕೆಳಗೆ ಧುಮುಕಿ ಒಳಗೆ ಓಡಿಹೋದಳು

ಅವಳ ಹಿಂದೆ ಹಾರಾಡಿದ ಸೆರಗನ್ನು ಹಿಡಿದು ಹಿಂದಕ್ಕೆಳೆದು ನಿಲ್ಲಿಸುವ ಅಪೇಕ್ಷೆಯಾಯಿತು ಮೂರ್ತಿಗೆ ಅಷ್ಟರಲ್ಲಿ ಪದ್ಮಿನಿ ಅವರ ಕೈಗೆ ಸಿಕ್ಕದಷ್ಟು ದೂರ ಓಡಿಹೋಗಿದ್ದಳು

'ಒಳ್ಳೆಯದೇ ಆಯಿತು' ಎಂದುಕೊಂಡರು ಮೂರ್ತಿ

* * *

ಐದು ದಿನಗಳಿಂದಲೂ ಪದ್ಮಿನಿಯ ಮನಸ್ಸಿನಲ್ಲಿ ಒಂದೇ ಸಮನೆ ಕಾಳಗವಾಗುತ್ತಿತ್ತು ತನ್ನ ಪ್ರೇಮವನ್ನು ನಿವೇದಿಸಿಕೊಳ್ಳುವ ಹಂಬಲ ಅವಳೆದೆಯಲ್ಲಿ ಪೆಟ್ಟಿಗೆಯಿಂದ ಹಾವಿನಂತೆ ಹೆಡೆಯಪ್ಪಳಿಸುತ್ತಿತ್ತು

'ನಾನು ನಿಮ್ಮನ್ನು ಪ್ರೀತಿಸುತ್ತೇನೆ' ಎಂದು ತಾನವರಿಗೆ ಹೇಳಿದಾಗ ಅವರೇನು ಹೇಳಬಹುದು ?

- ಆಶ್ಚರ್ಯಗೊಳ್ಳಬಹುದು, ಪರಿಹಾಸ್ಯ ಮಾಡಿ ನಗಬಹುದು,

'ಪ್ರೇಮ ! ಹ ಹ ನೀನಿನ್ನೂ ಮಗು ಪ್ರೇಮದ ಅರ್ಥ ವಾದರೂ ನಿನಗೆ ತಿಳಿದಿದೆಯೇ ? ಹೋಗು ಬೊಂಬೆಗಳ ಜೊತೆ ಆಟ ವಾಡು. ಪರೀಕ್ಷೆಗೆ ಓದಿಕೋ ಹೋಗು '

ಆಗ ತಾನೇನು ಮಾಡಬೇಕು ? ತಾನು ನಿಜವಾಗಿಯೂ ಅವರನ್ನು ಪ್ರೀತಿಸುತ್ತೇನೆಂದು ಹೇಗೆ ತೋರಿಸಿಕೊಡಬೇಕು ?

'ಒಂದು ಪಕ್ಷ ಅವರು ಕೋಪಿಸಿಕೊಂಡರೆ ?'

ಅಬ್ಬ ! ಕೋಪಬಂದಾಗ ಅವರು ಕಾಲಭೈರವನಾಗುತ್ತಿದ್ದರು ಅವರು ತನಗೆ ಹೊಡೆದ ಏಟು ಎರಡು ದಿನಗಳಾದರೂ ಮರೆಯಲಾಗಲಿಲ್ಲ ಮನೆಯಲ್ಲಿ ಅವಳಿಗೆ ಬುದ್ಧಿ ಬಂದಾಗಿನಿಂದ, ಯಾರಿಂದಲೂ ಪೆಟ್ಟು ತಿಂದುದು ನೆನಪಿರಲಿಲ್ಲ ತನ್ನ ಪ್ರೇಮನಿವೇದನೆ ಕೇಳಿ ಅವರು ಕೋಪಿಸಿ ಕೊಳ್ಳಬಹುದು ಹೂಂ, ಕೋಪಿಸಿಕೊಳ್ಳಲಿ ಅದರಿಂದ ಮತ್ತೊಂದು ಏಟು ಬೀಳಬಹುದು ಅಷ್ಟೆ ತಾನೆ

ಆದರೆ ಅವರು ಉದಾಸೀನರಾಗಿದ್ದುಬಿಟ್ಟರೆ ಮಾತ್ರ ಕಷ್ಟ

'ಇಲ್ಲ ಖಂಡಿತ ಅವರು ಉದಾಸೀನರಾಗುವುದಿಲ್ಲ' ಎಂದಿತು ಯಾವುದೋ ಒಂದು ಒಳನುಡಿ

ಆತ್ಮಭರವಸೆಯಿಂದ ಅವಳ ಮನಸ್ಸು ಗಟ್ಟಿಯಾಯಿತು

ಐದು ದಿನಗಳಿಂದಲೂ ಅವಳ ಅನ್ಯಮನಸ್ಕತೆಯನ್ನು ತಾಯಿ ಗಮ ನಿಸಿದ್ದರು ಅವಳು ಯಾವಾಗಲೂ ಏನನ್ನೋ ಯೋಚಿಸುತ್ತಿರುವುದನ್ನು ನೋಡಿ ಅವರು 'ಏನೇ ಅದು ಅಷ್ಟೊಂದು ಯೋಚನೆ ?' ಎಂದು ಕೇಳಿ ದ್ದರು. ಆದರೆ ಪದ್ಮಿನಿಯಿಂದ ಅವರ ಪ್ರಶ್ನೆಗೆ ಸರಿಯಾದ ಉತ್ತರ ಬಂದಿರ ಲಿಲ್ಲ

ಪದ್ಮಿನಿ ಸ್ವಲ್ಪ ಶ್ರದ್ಧೆಯಿಂದ ಅಲಂಕರಿಸಿಕೊಂಡು ಹೊರಟಳು ತಾನು ಹೇಗಿದ್ದರೂ ಅವರು ಮೆಚ್ಚುವರೆಂಬುದು ಅವಳಿಗೆ ತಿಳಿದಿತ್ತು ಆದರೂ ಯುದ್ಧಕ್ಕೆ ಬಾಹುಬಲವೊಂದಿದ್ದರೆ ಸಾಲದು ಆದುದರಿಂದ ಪದ್ಮಿನಿ ಸಾಕಷ್ಟು ಆಯುಧಗಳನ್ನು ಕೂಡಿಹಾಕಿಕೊಂಡು ಹೊರಟಿದ್ದಳು

'ಸುದರ್ಶನ'ದ ಮುಂಭಾಗದಲ್ಲಿ ಪದ್ಮಿನಿಗೆ ಯಾರೂ ಕಾಣಲಿಲ್ಲ. ಮುಂಬಾಗಿಲು ತೆಗೆದಿದ್ದರಿಂದ ಪದ್ಮಿನಿ ನೆಟ್ಟಗೆ ಹೋದಳು. ಅಡಿಗೆ ಮನೆ

ಯಲ್ಲಿ ತಾತ ತಮ್ಮ ಕೆಲಸಗಳಲ್ಲಿ ತೊಡಗಿದ್ದರು ಪದ್ಮಿನಿಯನ್ನು ನೋಡಿ ಅವರು ನಗುತ್ತಾ,

"ಯಜಮಾನರು ಇನ್ನೂ ಕೋರ್ಟಿನಿಂದ ಮನೆಗೆ ಬಂದಿಲ್ಲ"ಎಂದರು ಪದ್ಮಿನಿ ಕೆಂಪೇರಿದ್ದಳು ತಾನು ಬರುವುದು ಈತನ ಯಜಮಾನರಿಗಾಗಿ ಎಂದು ಇವರು ತಿಳಿದುಕೊಂಡಿರುವರೇ ?

ಪದ್ಮಿನಿ ನಸುನಾಚಿ "ಗೀತ ಇನ್ನೂ ಬಂದಿಲ್ಲವೇ ತಾತ ?" ಎಂದಳು

"ಇಲ್ಲಮ್ಮ ಗೀತ ನಾಳೆ ಬರ್ತಾಳೆ ಇವತ್ತು ಅವಳಿಂದ ಕಾಗದ ಬಂದಿದೆ ಓವಲ್ಟೀನ್ ಮಾಡಿಕೊಡಲಾ ?"

"ಹೂಂ" ಎನ್ನುತ್ತಾ ಪದ್ಮಿನಿ ಅಲ್ಲಿದ್ದ ಸ್ಟೂಲೊಂದರ ಮೇಲೆ ಕುಳಿತು ಕಾಲುಗಳನ್ನು ಅಲ್ಲಾಡಿಸಿದಳು

ತಾತ ತಮ್ಮ ಕೆಲಸದಲ್ಲಿ ಮಗ್ನರಾದರು

"ತಾತ, ಬಂದುಬಿಟ್ಟೆ ಐದು ನಿಮಿಷ " ಎಂದವಳೇ ಪದ್ಮಿನಿ ಹೊರಗೆ ಓಡಿದಳು

ಹೂದಾನಿಯಲ್ಲಿದ್ದ ಹಳೆಯ ಹೂವನ್ನು ಎಸೆದು ತೋಟದಿಂದ ಹೊಸ ಹೂಗಳನ್ನು ಆಯ್ದು ತಂದು ಮೇಜಿನ ಮೇಲೆ ಅಂದವಾಗಿ ಹೂ ದಾನಿಯಲ್ಲಿ ಜೋಡಿಸಿ ಮತ್ತೆ ಅಡಿಗೆ ಮನೆಯೊಳಗೆ ಬಂದಳು

"ತಗೋಮ್ಮ ಓವಲ್ಟೀನ್ "

ಪದ್ಮಿನಿ ಓವಲ್ಟೀನ್ ಕುಡಿದು ಮುಗಿಸಿ "ನಾನೇನಾದರೂ ನಿಮಗೆ ಸಹಾಯ ಮಾಡಲೇ ?" ಎಂದು ಕೇಳಿದಳು

"ನೀನು ಈ ಸ್ಟೂಲಿನ ಮೇಲೆ ನಗುತ್ತಾ ಕುಳಿತುಕೊಂಡಿರಮ್ಮ ಅಷ್ಟೇ ನನಗೆ ಸಾಕು "

ಹೊರಗೆ ಹಾರನ್ನಿನ ಸದ್ದಾಯಿತು. ಪದ್ಮಿನಿ ತಟ್ಟನೆ ಎದ್ದು ನಿಂತ್ಳು,

"ಅವರು ಬಂದರು" ಎಂದಳು ತಾತ ಅವಳ ಮುಖ ನೋಡಿ ನಕ್ಕರು ಹೊರಗೆ ಬೂಟ್ಸಿನ ಸದ್ದಾಯಿತು ಮಹಡಿಯ ಮೆಟ್ಟಲೇರಿದ್ದ ಸದ್ದು ಕ್ರಮೇಣ ಕ್ಷೀಣವಾಯಿತು

ತಾತ ತಿಂಡಿ, ಹಾಲನ್ನು ಓರಣವಾಗಿ ಟ್ರೇಯಲ್ಲಿ ಸಜ್ಜುಗೊಳಿಸಿ ಕೈಗೆ ತೆಗೆದುಕೊಂಡರು. ಪದ್ಮಿನಿ ಆತುರದಿಂದ ಮುಂದೆ ಕೈ ನೀಡಿ

"ನನಗೆ ಕೊಡಿ ತಾತ, ನಾನು ತಗೊಂಡುಹೋಗಿ ಕೊಡ್ತೀನಿ" ಎಂದಳು

"ಹುಷಾರಾಗಿ ತಗೊಂಡುಹೋಗಮ್ಮ ಮೆಟ್ಟಿಲುಗಳನ್ನೇರುವಾಗ ಹಾಲನ್ನು ತುಳುಕಿಸಬೇಡ ಯಜಮಾನರಿಗೆ ಎಲ್ಲಾ ತುಂಬಾ ಅಚ್ಚುಕಟ್ಟಾಗಿರಬೇಕು ಬಟ್ಟೆ ಬರೆ, ಕಾಫಿ ತಿಂಡಿ "

ಪದ್ಮಿನಿ ತಂತಿಯ ಮೇಲೆ ನಡೆಯುವಷ್ಟು ಎಚ್ಚರಿಕೆಯಿಂದ ಮೆಟ್ಟಿಲೇರಿದಳು

ಮೂರ್ತಿ ಮಂಚದ ಮೇಲಿದ್ದ ಹಾಸಿಗೆಯ ಸುರುಳಿಯನ್ನೊರಗಿ ಆದೇ ತಾನೆ ಬಂದಿದ್ದ ಪತ್ರಿಕೆಯನ್ನೋದುತ್ತಿದ್ದರು ಪದ್ಮಿನಿ ಮೇಜಿನ ಮೇಲೆ ಸದ್ದಾಗದಂತೆ ತಟ್ಟೆ ಇರಿಸಿದಳು

"ಸ್ವಲ್ಪ ಹನುಮನ್ನ ಇಲ್ಲಿಗೆ ಕಳಿಸಿ ತಾತ "

ಪದ್ಮಿನಿ ನಗುವನ್ನು ನುಂಗುತ್ತಾ ಲೋಟವನ್ನು ಅವರ ಮುಂದೆ ಹಿಡಿದಳು ತಮ್ಮ ಮುಂದೆ ಬಂದ ಬಳೆತುಂಬಿದ ದುಂಡುಗೈ ನೋಡಿ ಮೂರ್ತಿ ಚಕಿತರಾಗಿ ತಟ್ಟನೆ ತಲೆ ಎತ್ತಿ ನೋಡಿದರು

ಆಶ್ಚರ್ಯದಿಂದ ಅವರು "ನೀನು ! ಯಾವಾಗ ಬಂದೆ ?" ಎಂದರು.

"ನಾನು ಬಂದು ಸುಮಾರು ಅರ್ಧಗಂಟೆಯಾಯಿತು "

"ಏನು ಮಾಡುತ್ತಿದ್ದೆ ?"

"ತಾತನ ಜೊತೆ ಮಾತಾಡುತ್ತಿದ್ದೆ ಹನುಮನ್ನ ಕರೆಯಲೇನು ?"

"ಬೇಡ ಈಗ ಅವನ ಆವಶ್ಯಕತೆಯಿಲ್ಲ "

"ಅಲ್ಲ ಅವನಿರದ ಏನಾದರೂ "

"ಯಾರೋ ನಿನಗೆ ಬೇಕಾದವರೊಬ್ಬರಿಗೆ ಮನೆಗೆ ಬನ್ನೀಂತ ಚೀಟಿ ಬರೆದು ಕಳಿಸೋಣಾಂತ ಇದ್ದೆ ಆದರೆ ಈಗ ಮನಸ್ಸು ಬದಲಾಯಿಸಿಬಿಟ್ಟೆ "

"ನಾನು ಬಂದಿದ್ದರಿಂದ ನಿಮಗೆ ತೊಂದರೆ ಆಯಿತೇನೋ ?"

"ಒಂದು ಪಕ್ಷೆ ನಾನು ನಿನಗೇ ಚೀಟಿ ಬರೆದು ಕಳಿಸೋಣಾಂತ ಇದ್ದರೂ ಇರಬಹುದು ಅಲ್ಲವೇ ?"

"ಯಾರಿಗೆ ಗೊತ್ತು ?"

"ಕುಳಿತುಕೋ."

ಪದ್ಮಿನಿ ಅಲ್ಲಿಯೇ ಇದ್ದ ಕುರ್ಚಿಯೊಂದರಮೇಲೆ ಕುಳಿತಳು. ಮೂರ್ತಿ ಎದ್ದು ಮೇಜಿನ ಹತ್ತಿರವಿದ್ದ ಮತ್ತೊಂದು ಕುರ್ಚಿಯಮೇಲೆ ಕುಳಿತು ಹಾಲು ಕುಡಿಯುತ್ತಾ,

"ನಿಂಗೆ ?" ಎಂದರು

"ನನ್ನದಾಯಿತು "

ಅವರು ಮಾತನಾಡದೆ ತಿಂಡಿ ತಿನ್ನತೊಡಗಿದರು ಪದ್ಮಿನಿ ಪುಸ್ತಕ ವೊಂದರ ಪುಟಗಳನ್ನು ತಿರುವಿ ಹಾಕುತ್ತಾ ಕುಳಿತಳು

"ಐದು ದಿನಗಳಿಂದ ಕಾಣಲೇ ಇಲ್ಲ "

"ಎಲ್ಲೋ ಬರೋಕಾಗಲಿಲ್ಲ "

"ಏನು ಸಮಾಚಾರ ?"

ಪದ್ಮಿನಿ ಮಾತನಾಡಲು ಯತ್ನಿಸಿದಳು ಅವಳು ಮನೆಯಿಂದ ಹೊರಟಾಗ ಯಾವ ಯಾವ ಮಾತನಾಡಬೇಕೆಂಬುದನ್ನು ಯೋಚಿಸಿಕೊಂಡು ಬಂದಿದ್ದಳು ಆದರೆ ಮೂರ್ತಿಯ ಎದುರುಗಡೆ ಮಾತು ಹೊರಡಲಿಲ್ಲ

ಅವಳು ಸುಮ್ಮನಿದ್ದುದನ್ನು ನೋಡಿ ಮೂರ್ತಿ ಕೇಳಿದರು :

"ನಿಮ್ಮ ಮನೇಲಿ ಏನು ಹಬ್ಬ ಇವತ್ತು ?"

"ಏನೂ ಇಲ್ಲವಲ್ಲಾ "

ಅವರ ಕಣ್ಣುಗಳು ಮೆಚ್ಚಿಗೆಯಿಂದ ತನ್ನ ದೇಹದ ಮೇಲೆ ಹರಿದಾಡಿದಾಗ ಪದ್ಮಿನಿ ಪುಲಕಿತಳಾಗಿ,

"ಇದಕ್ಕೋಸ್ಕರ ಕೇಳಿದಿರಾ ? ಯಾವ ಹಬ್ಬವೂ ಇಲ್ಲದಿದ್ದರೆ ಹೊಸ ಸೀರೆ ಉಡಬಾರದೂಂತ ನಿಯಮವಿದೆಯೇನು ?" ಎಂದಳು

"ಹೆಂಗಸರು ಎರಡು ಕಾರಣಗಳಿಗಾಗಿ ಅಲಂಕಾರ ಮಾಡಿಕೊಳ್ತಾರೆ. ಮೊದಲನೆಯದಾಗಿ ಏನಾದರೂ ಹಬ್ಬ ಇದ್ದರೆ—ಎರಡನೆಯದಾಗಿ ಯಾರನ್ನಾದರೂ ಮೆಚ್ಚಿಸೋಕೆ ಇವೆರಡರಲ್ಲಿ ನಿನ್ನ ಅಲಂಕಾರ ಯಾತಕ್ಕಾಗಿ ? ಹಬ್ಬ ಇಲ್ಲಾಂತ ಮೊದಲೇ ಹೇಳಿಬಿಟ್ಟೆ ಯಾರನ್ನು ಮೆಚ್ಚಿಸೋಕೆ ಈ ಶೃಂಗಾರ ?"

"ನಾನೇನು ಯಾರನ್ನು ಮೆಚ್ಚಿಸೋಕೂ ಅಲಂಕಾರ ಮಾಡಿಕೊಳ್ಳೋದಿಲ್ಲ. ನನ್ನ ಸಂತೋಷಕ್ಕಾಗಿ ಮಾಡಿಕೊಂಡೆ."

"ಹಾಗಾದರೆ ಅಲಂಕಾರ ಮಾಡಿಕೊಂಡು ಮನೆಯ ರೂಮಿನಲ್ಲಿ ಬಾಗಿಲು ಹಾಕ್ಕೊಂಡು ಕುಳಿತುಕೊಳ್ಳಬಹುದಾಗಿತ್ತಲ್ಲಾ ?"

ಪದ್ಮಿನಿ ರೇಗಿ ನುಡಿದಳು "ನೀವು ಅಂದ್ಕೊಂಡಿದೀರೇನೋ ನಿಮ್ಮನ್ನು ಮೆಚ್ಚಿಸೋಕೆ ಹೀಗೆ ಬಂದಿದೀನೀಂತ ನಿಮ್ಮ ಭಾವನೆ ಶುದ್ಧ ಸುಳ್ಳು ಬೇಕಾದರೆ ಈಗಲೇ ಪ್ರೂವ್ ಮಾಡಿ ತೋರಿಸಿಬಿಡುತ್ತೇನೆ "

"ಏನು ಮಾಡ್ತೀಯಾ ?"

"ಮುಡಿದಿರುವ ದಂಡೆ ಬಿಸಾಡಿ, ಹಣೆಯ ತಿಲಕವನ್ನೊರಸಿ, ಕಣ್ಣಿನ ಕಪ್ಪು ತೊಳೆದು "ಎನ್ನುತ್ತಾ ಪದ್ಮಿನಿ ಮುಡಿದಿದ್ದ ಹೂವಿನ ದಂಡೆಗೆ ಕೈ ಹಾಕಿದಳು

ಮೂರ್ತಿ ಎದ್ದು ಬಂದು ಅವಳ ಕೈ ಹಿಡಿದು,

"ಬೇಡ ನನ್ನ ಮೆಚ್ಚಿಸೋಕಲ್ಲದಿದ್ದರೂ ನನ್ನ ಕಣ್ಣುಗಳಿಗಾಗಿ ಈ ಅಲಂಕಾರಾನ ಹೀಗೇ ಉಳಿಸು ಈ ಅಲಂಕಾರಕ್ಕೆ ಸರ್ಟಿಫಿಕೇಟ್ ಕೊಡಲಾ ? ನೀನಿವತ್ತು ತುಂಬಾ ಚೆನ್ನಾಗಿ ಕಾಣಿಸುತ್ತಿದೀಯೆ ತಿಳಿ ಹಳದಿ ಸೀರೆ ನಿನಗೆ ಚೆನ್ನಾಗಿ ಒಪ್ಪುತ್ತದೆ ಯಾವಾಗಲೂ ನೀನು ಹೀಗೇ ಇದ್ದರೆ ನಾನು ತುಂಬಾ ಒಪ್ಕೋತೀನಿ" ಎಂದರು

"ನಿಮ್ಮ ಒಪ್ಪಿಗೆ ಯಾರು ಕೇಳಿದರು ?" ಪದ್ಮಿನಿ ಮತ್ತೆ ಸಿಡುಕಿದಳು ಮೂರ್ತಿ ಅವಳ ಕೈ ಬಿಟ್ಟು ದೂರ ನಿಂತು,

"ಅಬ್ಬ ! ಮಾತೆತ್ತಿದರೆ ಚಿನಕುರುಳಿ ಹಾಗೆ ಪಟಪಟಾಂತ ರೇಗಿ ಬಿಡ್ತೀಯಲ್ಲ ನನ್ನ ಒಪ್ಪಿಗೆ ನಿನಗೆ ಬೇಕಿಲ್ಲವೋ ?"

"ಇಲ್ಲ "

"ಖಂಡಿತವಾಗಿ ?"

"ಹೂಂ" ಎಂದಳು ಪದ್ಮಿನಿ ತಲೆ ತಗ್ಗಿಸಿ

"ತಲೆ ಎತ್ತಿ ನನ್ನ ಕಡೆ ನೋಡಿ ಹೇಳು "

"ತಿಂಡಿ ತಿಂದು ಮುಗಿಸಿ, ಆಮೇಲೆ ಮಾತನಾಡೋಣ "

ಮೂರ್ತಿ ನಕ್ಕು ಮತ್ತೆ ತಟ್ಟೆಯನ್ನು ತಮ್ಮ ಕೈಗೆ ತೆಗೆದುಕೊಂಡರು

"ಗೀತಾ ನಾಳೆ ಬರ್ತಾಳೆ "

"ಹಾಗಂತ ತಾತ ಹೇಳಿದರು."

"ಅವಳು ಬಂದಮೇಲೆ ಈ ಬಡಪಾಯಿೀನ ನೀನು ಮಾತನಾಡಿಸುತ್ತೀಯೋ ಇಲ್ಲವೋ ?"

"ಮಾತನಾಡಿಸೋಕೇನಾಗಬೇಕು ? ನಾನು, ನೀವು, ಗೀತಾ ಎಲ್ಲರೂ ಚದುರಂಗ ಆಡಬಹುದು "

"ಚದುರಂಗಾನ ಇಬ್ಬರೇ ಆಡೋಕ್ಕಾಗುವುದು ಮೂರು ಜನ ಆಡುವುದಕ್ಕಾಗುವುದಿಲ್ಲ "

"ಗೀತಾ ಯಾವ ಟ್ರೈನಿಗೆ ಬರುತ್ತಾಳೆ ?"

"ಸಂಜೆ ಆರೂವರೆಗೆ ಬರುತ್ತಾಳೆ "

"ಸ್ಟೇಷನ್ನಿಗೆ ಹೋಗ್ತೀರಾ ?"

"ಹೂಂ ನೀನೂ ಬರ್ತೀಯೇನು ?"

"ನಾನು ಬರುವುದಿಲ್ಲ ತಂದೆ, ಮಗಳ ಪುನರ್ಮಿಲನದ ನಡುವೆ ನಾನೇಕೆ ?"

"ಪುನರ್ಮಿಲನದ ಸಿಹಿ ಹೆಚ್ಚಿಸೋಕೆ "

"ಸಿಹಿಯೋ ಖಾರವೋ ಯಾರಿಗೆ ಗೊತ್ತು ?"

"ಸಕ್ಕರೆ ಹಾಕಿ ಮಾಡಿದ್ದು ಸಿಹಿಯಾಗಿರಲೇಬೇಕು "

"ಸಕ್ಕರೇಂತಾನೇ ನಿಮಗೇನು ಗೊತ್ತು ?"

"ನೋಡು ನಿನ್ನ ಕತ್ತಿನ ಮೇಲೆ ಇರುವೆಯೊಂದು ಹರಿಯುತ್ತಿದೆ ಇರುವೆ ನಿನ್ನ ಹತ್ತಿರ ಇರಬೇಕಾದರೆ ಸಕ್ಕರೇನೆ ಇರಬೇಕು ಅಲ್ಲವೇ ?"

ಪದ್ಮಿನಿ ಕುತ್ತಿಗೆಗೆ ಕೈಹಾಕಿ ಇರುವೆಯನ್ನು ತಡಕಿ ನೆಲದ ಮೇಲೆ ಎಸೆದು

"ತಿಂಡಿ ಮುಗಿಸಿ" ಎಂದಳು

"ಇನ್ನು ಸೇರುವುದಿಲ್ಲ ಯಾಕೋ ಹೆಚ್ಚಾಯಿತು" ಮೂರ್ತಿ ತಟ್ಟೆಯನ್ನು ಮೇಜಿನ ಮೇಲಿಟ್ಟರು

ಪದ್ಮಿನಿ ತಟ್ಟೆ ಬಟ್ಟಲನ್ನು ಜೋಡಿಸಿ ಕೈಗೆ ತೆಗೆದುಕೊಂಡು,

"ಕೆಳಗಿಟ್ಟು ಬರುತ್ತೇನೆ" ಎಂದಳು ಮೂರ್ತಿ ಮಾತನಾಡಲಿಲ್ಲ. ಪದ್ಮಿನಿ ಕೆಳಗಿಳಿದು ಹೋದಳು ಅವಳು ಮತ್ತೆ ಮೇಲಕ್ಕೆ ಬಂದಾಗ ಮೂರ್ತಿ ಕ್ರಾಪು ಬಾಚಿಕೊಳ್ಳುತ್ತಿದ್ದರು.

ಪದ್ಮಿನಿ ಪ್ರತಿಮೆಯಂತೆ ಕುಳಿತಳು ಪುಸ್ತಕವೊಂದರೊಡನೆ ಅವಳ ಬೆರಳುಗಳು ಆಟವಾಡಿದುವು

"ನಾಳೆ ಬರೋದಿಲ್ಲವೇ ನೀನು ಸ್ಟೇಷನ್ನಿಗೆ ?"

"ಇಲ್ಲ "

ಮತ್ತೆ ಇಬ್ಬರಿಗೂ ಮಾತನಾಡುವುದು ಏನೂ ಉಳಿಯಲಿಲ್ಲ ಪದ್ಮಿನಿ ಮೇಜಿನ ಮೇಲಿದ್ದ ತಂದೆ, ಮಗಳ ಭಾವಚಿತ್ರವನ್ನು ಎವೆಯಿಕ್ಕದೆ ನೋಡ ತೊಡಗಿದಳು

"ಅದನ್ನೇನು ನೋಡ್ತೀಯ—ಎದುರಿಗೆ ನಾನೇ ಇರೋವಾಗ "

"ಆದರೂ ಫೋಟೋನ ನೋಡುವುದು ಕ್ಷೇಮ "

"ನಮ್ಮನ್ನು ನೋಡಿದರೆ ನಾವೇನು ತಿಂದುಬಿಡುತ್ತೇವೇನೋ ?"

ಪದ್ಮಿನಿ ಬದಲು ಹೇಳಲಿಲ್ಲ ಅವಳು ಮೇಜಿನ ಮೇಲಿದ್ದ ಚಿತ್ರವನ್ನು ಕೈಗೆ ತೆಗೆದುಕೊಂಡಳು ಮೂರ್ತಿ ಎದ್ದುಬಂದು ಅವಳ ಕೈಲಿದ್ದ ಚಿತ್ರ ವನ್ನು ಕಿತ್ತುಕೊಂಡು ಮೇಜಿನ ಮೇಲೆ ಮಗುಚಿಹಾಕಿ,

"ನೀನು ಹಾಗೆ ನೋಡಿದರೆ ನನ್ನ ಫೋಟೋನೇ ನಾನು ಏನಿ ಮಾಡ್ತೀನಿ" ಎಂದರು

"ನಾನು ಗೀತನಿಗಾಗಿ ಆ ಚಿತ್ರ ನೋಡಿದೆ "

ಮೂರ್ತಿ ಗೋಡೆಯ ಮೇಲಿದ್ದ ಗೀತಳೊಬ್ಬಳೇ ಇದ್ದ ಭಾವಚಿತ್ರ ವನ್ನು ಕೆಳಗಿಳಿಸಿ ಪದ್ಮಿನಿಯ ಕೈಗೆ ಕೊಟ್ಟು, ಅರ್ಧ ಓದಿದ್ದ ಪೇಪರನ್ನು ಮತ್ತೆ ಕೈಗೆ ತೆಗೆದುಕೊಂಡರು

"ನೀವು ಯಾರನ್ನ ಬರಹೇಳಬೇಕೂಂತ ಇದ್ದಿರೋ ನಾನು ಬಂದು ಅಡ್ಡಿಯಾಯಿತು ಬೇಕಾದರೆ ಈಗಲೂ ಹನುಮಾನ ಕೈಲಿ ಹೇಳಕಳಿಸಿ ನಾನು ಹೋಗ್ತೀನಿ "

"ನಾನು ನಿನಗೇ ಹೇಳಿಕಳಿಸೋಣಾಂತ ಇದ್ದೆ "

"ನನಗೆ ? ಯಾಕೆ ?"

'ನಿನ್ನ ಕೈಲಿ ಸ್ವಲ್ಪ ಮಾತನಾಡುವುದಿತ್ತು. ನಾಳೆ ಗೀತ ಬಂದ್ರನ್ಮೇಲೆ ನೀನು ಒಬ್ಬಳೇ ನನ್ನ ಕೈಗೆ ಸಿಕ್ಕುವುದು ಕಷ್ಟ. ಅದ್ದರಿಂದ ನಾನು ಮಾತನಾಡಬೇಕಾಗಿರುವುದನ್ನೆಲ್ಲಾ ಇವತ್ತೇ ಹೇಳಿ ಮುಗಿಸಿಬಿಡೋಣಾಂತ

ನಿರ್ಧಾರಮಾಡಿ ಆತನ ಕೈಲಿ ಹೇಳಿಕಳಿಸೋಣಾಂತ ಇದ್ದೆ ಅಷ್ಟರಲ್ಲಿ ನೀನೇ ಬಂದೆ ”

ಅವರು ಮುಖಕ್ಕೆ ಪೇಪರನ್ನು ಅಡ್ಡಲಾಗಿ ಹಿಡಿದುಕೊಂಡಿದ್ದರಿಂದ ಮುಖದ ಮೇಲೆ ಮೂಡುತ್ತಿದ್ದ ಭಾವತರಂಗಗಳನ್ನು ನೋಡುವುದು ಪದ್ಮಿನಿಗೆ ಸಾಧ್ಯವಾಗಲಿಲ್ಲ

“ಪದ್ಮಿನಿ, ನೀನು ಇನ್ನುಮೇಲೆ ನಮ್ಮ ಮನೆಗೆ ಬರಬೇಡ ”

“ಯಾಕೆ ?”

“ನೀನು ಇಲ್ಲಿಗೆ ಬರದಿದ್ದರೆ ನಾನು ಕ್ರಮೇಣ ನಿನ್ನ ಮರೆಯುತ್ತೇನೆ ನೀನಿಲ್ಲಿಗೆ ಬಂದು ಮಿಂಚಿನ ಬಳ್ಳಿಯಾಗಿ,ಕಾಮನಬಿಲ್ಲಾಗಿ ತುಂಬುಚಂದಿರನಾಗಿ ಸುಳಿದಾಡಿದರೆ ನಾನು ಅಸಹಾಯಕನಾಗುತ್ತೇನೆ ನಿನ್ನ ಹಿತದದೃಷ್ಟಿಯಿಂದಲೇ ನಾನು ಈ ಮಾತು ಹೇಳುತ್ತಿದ್ದೇನೆ ನಾಳೆಯಿಂದ ನೀನು ನಮ್ಮ ಮನೆಗೆ ಬರಬೇಡ ಬೇಕಾದರೆ ಗೀತಾನ ನಿಮ್ಮ ಮನೆಗೇ ಹೋಗುವಂತೆ ಹೇಳುತ್ತೇನೆ ನನ್ನ ದುರ್ಬಲ ಮನಸ್ಸಿನ ಚಂಚಲತೆಯನ್ನು ನೀನು ಹೆಚ್ಚಿಸಬೇಡ ನನ್ನ ಮೇಲೆ ನಿನಗೆ ಸ್ವಲ್ಪವಾದರೂ ಕರುಣೆ ಇದ್ದರೆ ನಾಳೆಯಿಂದ ನೀನು ಬರಬೇಡ ”

“ನಾನು ಬಂದೇ ಬರುತ್ತೇನೆ ”

“ನೀನು ಬಂದರೆ ನಾನು ಭಿಕ್ಷುಕನಾಗಬಹುದು, ದರೋಡೆಗಾರನಾಗಬಹುದು, ಸರ್ವಾಧಿಕಾರಿಯಾಗಬಹುದು ಆಮೇಲೆ ನೀನು ಪಶ್ಚಾತ್ತಾಪ ಪಡಬೇಕಾಗುತ್ತದೆ ನೀನಿನ್ನೂ ಚಿಕ್ಕವಳು ”

“ಇಲ್ಲ ಇಲ್ಲ ನನಗೆ ವಯಸ್ಸಾಗಿದೆ ನನಗಾಗಲೇ ಹತ್ತೊಂಬತ್ತು ವರ್ಷ. ನಾನಿನ್ನೂ ಎಳೇ ಮಗುವೆಂದು ನಿಮ್ಮ ಭಾವನೆಯೇ ?”

“ಹತ್ತೊಂಬತ್ತು ವರ್ಷದ ಹುಡುಗಿಯನ್ನು ಯಾರೂ ಮುದುಕಿ ಎಂದು ಹೇಳುವುದಿಲ್ಲ ”

“ಮಗೂಂತಾನೂ ಯಾರೂ ಹೇಳುವುದಿಲ್ಲ ”

“ಮಗುವಲ್ಲದೆ ಮತ್ತೇನು ? ನಿನಗೆ ಪ್ರಪಂಚ ಏನು ಗೊತ್ತು ? ನಿನಗೇನು ಅನುಭವ ಇದೆ ? ನೀನಿನ್ನೂ ಚಿಕ್ಕವಳು ನಿನ್ನ ಭವಿಷ್ಯಾನ ಹಾಳು ಮಾಡಿಕೊಳ್ಳಬೇಡ ”

“ನನಗೂ ಭವಿಷ್ಯ ಹಾಳುಮಾಡಿಕೊಳ್ಳೋಕೆ ಇಷ್ಟವಿಲ್ಲ ಆದುದ

ರಿಂದಾನೇ ನಾನು ಇಲ್ಲಿಗೆ ಬಂದೇ ಬರುತ್ತೇನೆ ಎಂದು ಹೇಳಿದ್ದು ”

“ನಿನ್ನ ವಯಸ್ಸಿನವರಿಗೆ ಒಳ್ಳೆಯವರೆಂದು ತೋರುವ ಪ್ರತಿಯೊಬ್ಬ ಪುರುಷನನ್ನು ಪ್ರೀತಿಸುತ್ತಿದ್ದೇನೆ ಎಂದು ಭಾವಿಸುವ ವಯಸ್ಸಿದು ಆತ ಉಪಾಧ್ಯಾಯನಾಗಬಹುದು, ಅಣ್ಣನ ಗೆಳೆಯನಾಗಬಹುದು, ಕಾಲೇಜಿನಲ್ಲಿ ಓದುವ ಸಹಪಾಠಿಗನಾಗಿರಬಹುದು. ಆದರೆ ಈ ಬಗೆಯ ಭಾವನೆ ತಿರುಳಿಲ್ಲದ ಪೊಳ್ಳು ಭಾವನೆ ಆ ಗಳಿಗೆಗೆ, ಎಳೆಯ ಮನಸ್ಸಿಗೆ ಬಣ್ಣದ ಭಾವನೆಯೇ ನಿಜ ಎಂದು ತೋರುತ್ತದೆ ಆದರೆ ಮನಸ್ಸು ಪಕ್ವಗೊಂಡಂತೆ, ಪ್ರೌಢವಾದಂತೆ ಕೃತಕ ಬಣ್ಣ ಬಯಲಾಗಿ ಅಲ್ಲಿ ಶೂನ್ಯದ ಹೊರತು ಮತ್ತೇನೂ ಇರುವುದಿಲ್ಲ ಯಾವನನ್ನು ತನ್ನ ಸರ್ವಸ್ವವೆಂದು ಒಪ್ಪಿಕೊಂಡು ಅವನಿಗಾಗಿ ಪ್ರಾಣಕೊಡಲು ಸಿದ್ಧವಾಗಿದ್ದ ಮನಸ್ಸೇ ಅನಂತರ ಇವನಲ್ಲಿ ನಾನು ಏನು ಕಂಡಿದ್ದೆ ಎಂದು ಆಶ್ಚರ್ಯಗೊಳ್ಳುತ್ತದೆ ಇದು ಏರು ಯೌವ್ವನದ ಹುಚ್ಚು ಭಾವನೆಯೇ ಹೊರತು ನಿಜವಾದ ಪ್ರೀತಿಯಲ್ಲ ಹುಚ್ಚುಭಾವನೆಯನ್ನೇ ನಿಜವೆಂದು ಭಾವಿಸಿ ಎಳೆಯ ವಯಸ್ಸಿನಲ್ಲಿ ವಿವಾಹವಾದ ಕಿಶೋರಪ್ರೇಮಿಗಳು ಅನಂತರ ಪಶ್ಚಾತ್ತಾಪ ಪಡುವುದು ಈಗ ಸಾಮಾನ್ಯವಾಗಿದೆ ನಿನ್ನ ಯೌವ್ವನದ ಹೊಳಪುಗಣ್ಣಿಗೆ ಮಣ್ಣು ಸಹ ಹೊನ್ನಾಗಿ ಕಾಣುತ್ತಿದೆ ಯೌವ್ವನದ ಕಾವಿನಲ್ಲಿ ನಿನ್ನ ಹೃದಯ ಬೆಣ್ಣೆಯಂತೆ ಮೃದುವಾಗಿದೆ ಯಾವುದನ್ನು ನೋಡಿದರೂ ಅದು ಮನಸ್ಸಿನ ಮೇಲೆ ಸುಲಭವಾಗಿ ಮೂಡಿಬಿಡುತ್ತದೆ ಆದರೆ ಆಮೇಲೆ ನೀನು ಇದರಿಂದ ಪಶ್ಚಾತ್ತಾಪಪಡಬೇಕಾಗಬಹುದು ಆದುದರಿಂದ ನಾನು ಈಗಲೇ ನಿನ್ನ ಎಚ್ಚರಿಸುತ್ತಿದ್ದೇನೆ ”

“ನೀವು ತಿಳಿದುಕೊಂಡಿರುವಷ್ಟು ನಾನು ಪೆದ್ದಳಲ್ಲ ನನ್ನ ಮನಸ್ಸು ನನಗೆ ಗೊತ್ತು ನನ್ನ ಅಣ್ಣ ಸದಾನಂದನ ಗೆಳೆಯರು ಈಗಲೂ ನಮ್ಮ ಮನೆಗೆ ಬರುತ್ತಿರುತ್ತಾರೆ ಹಾಗಾದರೆ ಅವರೇ ಏಕಾಗಬಾರದಿತ್ತು ? ನಮಗೆ ಬರುವ ತರುಣ ಉಪಾಧ್ಯಾಯರೇ ಯಾಕಾಗಬಾರದಿತ್ತು ? ನೀವು ತಪ್ಪು ತಿಳಿದುಕೊಂಡಿದೀರಿ ತಪ್ಪು ತಿಳಿದುಕೊ ”

“ಕನಸನ್ನು ನಿಜ ಎಂದು ತಿಳಿಯಬೇಡ ಪದ್ಮಿನಿ ಹಗಲುಗನಸು ಕಾಣುವ ನಿನಗೆ ಪ್ರೀತಿ ಎಂದರೆ ಏನುಗೊತ್ತು ?”

"ನಂಗೊತ್ತು. ನನಗೆ ಗೊತ್ತು."

"ನೀನು ಹೀಗೆ ಮೊಂಡುತನದಿಂದ ಮಾತನಾಡುವಾಗಲೇ ನನಗೆ ಗೊತ್ತಾಗ್ತಿದೆ—ನಿನಗೆ ಏನೇನೂ ಗೊತ್ತಿಲ್ಲಾಂತ."

"ನಾನು ಹೇಗೆ ಹೇಳಿದರೆ ನಿಮಗೆ ನನ್ನ ಮಾತಿನಲ್ಲಿ ನಂಬಿಕೆ ಬರುತ್ತದೆ? ನಾನು ಹೇಗೆ ಹೇಳಲಿ?"

ಮೂರ್ತಿ ಒಂದು ಕ್ಷಣ ಸುಮ್ಮನಿದ್ದು ಅನಂತರ "ನೀನು ಹೇಗೆ ಹೇಳಿದರೂ ನನಗೆ ನಂಬಿಕೆ ಬರೋದಿಲ್ಲ. ಕುಡಿದು ಮತ್ತನಾಗಿರುವವನಿಗೆ ರಾತ್ರಿ ಹಗಲಿನಂತೆ ಕಾಣುತ್ತದೆ. ಆಗ ಅವನು ಅದೇ ನಿಜವೆಂದು ತಿಳಿದುಕೊಂಡಿರುತ್ತಾನೆ. ಆದರೆ ಕುಡಿತದಮಲಿಳಿದ ಮೇಲೆ ಅವನಿಗೆ ತನ್ನ ತಪ್ಪು ಗೊತ್ತಾಗುತ್ತದೆ. ಹಾಗೆ ಪ್ರಾಯದ ಅಮಲಿರುವ ನಿನಗೆ..."

"ನಾನು ಆತ್ಮಹತ್ಯೆ ಮಾಡಿಕೊಂಡರೆ ನಿಮಗೆ ನನ್ನ ಮಾತಿನಲ್ಲಿ ನಂಬಿಕೆ ಬರುತ್ತದೆಯೋ?"

ಮೂರ್ತಿ ಪೇಪರನ್ನು ಅಡ್ಡ ಹಿಡಿದೇ ನುಡಿದರು:

"ನೀನೊಬ್ಬಳು ಮೂರ್ಖ ಹುಡುಗಿ. ನಿಜವಾಗಿ ಪ್ರೀತಿ ಇರುವವರು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ತಾನು ಮೆಚ್ಚಿಕೊಂಡವನಿಗೆ ಒಂದು ಕ್ಷಣ ನೋವನ್ನುಂಟುಮಾಡುವುದಕ್ಕೆ ಯಾವ ಪ್ರೇಮಿಯೂ ಇಷ್ಟಪಡುವುದಿಲ್ಲ."

ಪದ್ಮಿನಿ ವಿಹ್ವಲಳಾಗಿ ಹೇಳಿದಳು: "ನಾನು ಹೇಗೆ ತೋರಿಸಲಿ ನನ್ನ ಹೃದಯವನ್ನ? ನಿಮ್ಮಲ್ಲಿ ನಿಜವಾದ ಪ್ರೀತಿ ಇದೇಂತ ಹೇಗೆ ತೋರಿಸಲಿ?" ಅವಳ ಕಣ್ಣುಗಳು ಅವರು ಒರಗಿ ಕುಳಿತಿದ್ದ ಹಾಸಿಗೆಯ ಕಡೆ ಹರಿದುವು. ಯಾವುದೋ ಯೋಚನೆಯಿಂದ ಅವಳ ಕಣ್ಣುಗಳು ಹೊಳಪೇರಿದುವು.

"ನಾನು... ನಾನು ನಿಮ್ಮೊಡನೆ ಇದ್ದರೆ ನಿಮಗೆ..."

ಆ ಮಾತನಾಡುವಾಗ ಸಂಕೋಚ, ಅವಮಾನದಿಂದ ಪದ್ಮಿನಿ ಕೆಂಪಾದಳು. ಅವಳ ಮಾತು ಕೇಳಿ ಮೂರ್ತಿ ಬೆಚ್ಚಿದರು. ಅವರು ಉದ್ವೇಗದಿಂದ ಪೇಪರನ್ನು ಗಟ್ಟಿಯಾಗಿ ಹಿಡಿದು ಬಲವಂತದ ನಗೆ ನಕ್ಕರು. ಆ ಮಾತನ್ನಾಡುವಾಗ ಅವಳಿಗೆ ಎಷ್ಟು ಕಷ್ಟವಾಗಿರಬಹುದೆಂದು ಅವರು ಊಹಿಸಿಕೊಂಡರು.

"ಇದು ದುಡುಕುಮಾತು—ಏನೋ ಹುಚ್ಚಿನಲ್ಲಿ ಮೂರ್ಖಳಾಗಿ

ಜೊತೆಯಲ್ಲಿದ್ದ ಮಾತ್ರಕ್ಕೆ ಪ್ರೀತಿ ಇದೆ ಎಂದು ಅರ್ಥವೇ ? ಗಂಡು ಹೆಣ್ಣು ಕೇವಲ ಪ್ರೀತಿಗಾಗಿ ಜೊತೆಯಲ್ಲಿರುತ್ತಾರೆಯೇ ? ಇಷ್ಟೇನೇ ನಿನಗೆ ತಿಳಿದಿರೋದು ?"

"ನಾನು ತಿಳಿದುಕೊಂಡಿರುವುದೇನೋ ಹಾಗೆ ನಿಜವಾದ ಪ್ರೀತಿ ಇಲ್ಲದಿದ್ದರೆ ಯಾವ ಹೆಣ್ಣು ಪುರುಷನಿಗೆ ತಾನಾಗಿಯೇ ತನ್ನನ್ನು ಒಪ್ಪಿಸಿಕೊಳ್ಳುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ "

"ನೀನು ಅಜ್ಞಾನಿ ಎನ್ನುವುದಕ್ಕೆ ನಿನ್ನ ತಿಳಿವಳಿಕೆಯೇ ಸಾಕ್ಷಿ "

"ಹಾಗಾದರೆ ನಾನೇನು ಮಾಡಲಿ ಹೇಳಿ"—ಪದ್ಮಿನಿ ವಿವಶಳಾಗಿ ಕೇಳಿದಳು

"ಏನೂ ಮಾಡಬೇಡ ಇನ್ನು ಮೇಲೆ ಇಲ್ಲಿಗೆ ಬರಬೇಡ ಇದರಿಂದ ನನ್ನನ್ನೂ ಬದುಕಿಸು, ನೀನೂ ಬದುಕಿಕೋ "

"ಇದೇ ಕೊನೆಯ ಮಾತೆ ?" ಪದ್ಮಿನಿ ಅಳು ನುಂಗಿ ಕೇಳಿದಳು

ತಮಗೂ ಅವಳಿಗೂ ನಡುವೆ ಪತ್ರಿಕೆ ಅಡ್ಡಲಾಗಿದ್ದರೂ ಅವಳ ಮುಖ ಹೇಗಿರಬಹುದೆಂದು ಅವರು ಕಲ್ಪಿಸಿಕೊಂಡಿದ್ದರು ಆದುದರಿಂದಲೇ ಅವರಿಗೆ ಅವಳನ್ನು ನೋಡುವ ಧೈರ್ಯ ಬರಲಿಲ್ಲ

"ನೀವು ನನ್ನಿಂದ ಮುಖ ಮರೆಸಿ ಯಾಕೆ ಮಾತನಾಡುತ್ತೀರಿ ಆ ಪೇಪರನ್ನು ದೂರ ಒಗೆದು ಮುಂದೆ ಬಂದು ಮಾತನಾಡಬಾರದೇ ? ಮರೆಯಲ್ಲಡಗಿ ಹೀಗೆ ನನ್ನನ್ನು ಸೋಲಿಸುವುದು ನ್ಯಾಯವಲ್ಲ ಇದು ಹೇಡಿಗಳು ಮಾಡುವ ಯುದ್ಧ ನನ್ನ ಎದುರಿಸಲಾರದೆ ಪೇಪರಿನ ಆಶ್ರಯದಲ್ಲಿ " ಮಾತನಾಡುತ್ತಾ ಪದ್ಮಿನಿ ಮುಂದೆ ಬಂದಳು

"ನಿನ್ನ ಮಾತು ನಿಜ ಪದ್ಮಿನಿ ನಿನ್ನ ಶಸ್ತ್ರಗಳನ್ನು ನಾನು ಎದುರಿಸಲಾರೆ. ನಾನು ಹೇಡಿ "

"ನಾನು ಪಿಸ್ತೂಲು, ಕತ್ತಿ ತಂದಿದೀನೀಂತ ತಿಳ್ಕೊಂಡಿದೀರಾ ? ಹೆದರಿಕೊಳ್ಳಬೇಡಿ ನಾನು ಯಾವ ಆಯುಧಗಳನ್ನೂ ತಂದಿಲ್ಲ "

"ನಿನಗೆ ಪಿಸ್ತೂಲು, ಕತ್ತಿಯ ಅಗತ್ಯವಿಲ್ಲ ನಿನ್ನ ಕಣ್ಣುಗಳೇ ನಿನಗೊಂದು ದೊಡ್ಡ ಆಯುಧ ನನ್ನನ್ನು ದೀನನನ್ನಾಗಿ ಮಾಡುವ ನಿನ್ನ ಕೆಂದುಟಿಗಳೇ ನಿನಗೊಂದು ಆಯುಧ ಹುಬ್ಬು, ಕೆನ್ನೆ, ಕೊರಳು ನೀನು

ಬಹಳ ಅಪಾಯಕಾರಿ ಪದ್ಮಿನಿ ನಾನು ಮರೆಯಲ್ಲಿ ನಿಂತು ಎದುರಿಸುವುದೇ ನ್ಯಾಯ ನಿನ್ನೆದುರಿಗೆ ನಾನು ಬಂದರೆ ಯುದ್ಧವೇ ಇಲ್ಲ ನಾನು ಶರಣಾಗತ ನಿನಗೆ ಮನೆಗೆ ಹೋಗೋಕೆ ಹೊತ್ತಾಗಲಿಲ್ಲವೇ ?"

ಪದ್ಮಿನಿ ಮೂರ್ತಿಯ ಕೈಲಿದ್ದ ಪೇಪರನ್ನು ಕಿತ್ತುಕೊಂಡು ಕೆಳಗೆ ಬಿಸುಡಿದಳು. ಮೂರ್ತಿ ಹರದಿಂದ ಕಣ್ಣುಗಳನ್ನು ಮುಚ್ಚಿಕೊಂಡರು

"ಒಂದೇ ಒಂದು ಸಲ ನನ್ನ ಕಡೆ ನೋಡಬಾರದೆ? ನೀವು ಹೇಳಿದಂತೆ ನಾನಿವತ್ತು ಹೋದ ಮೇಲೆ ಮತ್ತೆ ನಿಮ್ಮ ಮನೆಗೆ ಬರುವುದಿಲ್ಲ ನಿಮ್ಮ ಇಷ್ಟದ ಪ್ರಕಾರ ಇದೇ ಕೊನೆಯ ಭೇಟಿಯಾಗಲಿ ಆದರೆ ಹೀಗೆ ಕಣ್ಣುಮುಚ್ಚಿಕೊಂಡು ನನ್ನನ್ನು ಕಳಿಸಬೇಕೆ ?"

"ಹಾಗಾದರೆ ನೀನು ಹೊರಟುಹೋಗ್ತೀಯಾ ?"

"ಹೂಂ"

"ಇನ್ನು ಎಂದೆಂದಿಗೂ ಇಲ್ಲಿಗೆ ಬರಬಾರದು"

"ಇಲ್ಲ, ಬರೋದಿಲ್ಲ"

ಮೂರ್ತಿ ಕಣ್ಣುಬಿಟ್ಟು ಪದ್ಮಿನಿಯನ್ನು ನೋಡಿದರು ಪದ್ಮಿನಿ ಮಂಚದ ಮತ್ತೊಂದು ತುದಿಯಲ್ಲಿ ಕುಳಿತಿದ್ದಳು ಅವಳು ಮೊಳಕಾಲುಗಳನ್ನು ಕೈಗಳಿಂದ ಬಿಗಿದು ಅದರ ಮೇಲೆ ಗಲ್ಲ ಊರಿ,

"ಹಾಗಾದರೆ ನಾನಿನ್ನು ಹೋಗಲಾ ?" ಎಂದಳು

"ಹೋಗು ಮತ್ತೆ ಬರಬೇಡ"

"ನಾನು ಅಳುವುದನ್ನು ನೋಡೋಕೆ ನಿಮಗೆ ಆಸೇನಾ ?"

ಮೂರ್ತಿ ಅಪ್ರತಿಭರಾಗಿ "ಇಲ್ಲ" ಎಂದರು.

ಅವಳು ಕಣ್ಣೀರನ್ನು ಹಿಂದೆ ತಳ್ಳಲು ಹೋರಾಡುತ್ತಿದ್ದಳು

"ನನ್ನ ಕಣ್ಣು ಚುಚ್ಚಿ 'ಅಳಬೇಡ' ಎಂದರೆ ಹೇಗೆ ಸಾಧ್ಯ ?"

ಮೂರ್ತಿ ಗಡುಸಾಗಿ ನುಡಿದರು "ಮಾತು ಸಾಕಿತ್ತು. ಪದ್ಮಿನಿ ಇದುವರೆವಿಗೂ ನಾವು ಸ್ನೇಹದಿಂದ ಇದ್ದೆವು ಈಗ ಶತ್ರುಗಳಂತೆ ಬೇರೆಯಾಗುವುದು ಬೇಡ"

"ಹಾಗಾದರೆ ನಿಜವಾದ ಪ್ರೇಮಿಗಳಂತೆ ಅಗಲೋಣ."

ಪದ್ಮಿನಿಯ ಮಾತು ಅರ್ಥವಾಗದೆ ಮೂರ್ತಿ "ಅಗಲಿ" ಎಂದರು.

ಸದ್ಯ, ಅವಳು ಹೊರಟುಹೋದರೆ ಸಾಕೆನಿಸಿತ್ತು ಅವರಿಗೆ

ಪದ್ಮಿನಿ ಮೂರ್ತಿಯ ಬಳಿಗೆ ಜಿಂಕೆಯಂತೆ ಚಿಮ್ಮಿ ಬಂದು ಅವರ ಕೊರಳಿಗೆ ತನ್ನ ಕೈಮಾಲೆಯನ್ನು ಹಾಕಿದಳು

ಮೂರ್ತಿ "ಛೀ ಇದೇನು ಮಾಡ್ತಿದೀಯಾ ಬಿಡು " ಎಂದು ಅವಳ ಕೈಯನ್ನು ಕೀಳಲು ಯತ್ನಿಸಿದರು

ಪದ್ಮಿನಿ ಅನುರಾಗವನ್ನು ಕಣ್ಣುಗಳಲ್ಲಿ ತುಳುಕಿಸಿ, ಮುಗುಳ್ನಗೆಯ್ಯ ಜೇನನ್ನು ತುಟಿಗಳಿಗೆ ಸವರಿ ಕೇಳಿದಳು,

"ಪ್ರೇಮಿಗಳು ಹೇಗೆ ಅಗಲುತ್ತಾರೇಂತ ನಿಮಗೆ ಗೊತ್ತಿಲ್ಲವೇ ?"

ಆಹ್ವಾನ ನೀಡುತ್ತಿದ್ದ ಮುಖದಿಂದ ಹಿಂದೆ ಸರಿಯಲು ಯತ್ನಿಸುತ್ತಾ ಮೂರ್ತಿ "ನನಗೆ ಗೊತ್ತಿಲ್ಲ ಅದನ್ನು ತಿಳಿದುಕೊಳ್ಳುವ ಆಸೆಯೂ ಇಲ್ಲ" ಎಂದರು

"ನಿಮಗೆ ಗೊತ್ತಿಲ್ಲದಿದ್ದರೆ, ನಾನು ತೋರಿಸುತ್ತೇನೆ ತೋರಿಸಿಬಿಟ್ಟು ಹೊರಟುಹೋಗ್ತೀನಿ ಆಮೇಲೆ ಹೇಗಿದ್ದರೂ ನಾವು ಒಬ್ಬರನ್ನೊಬ್ಬರು ನೋಡುವುದಿಲ್ಲ ಸರಿಯಾ ?"

ಅವಳ ತೋಳಿನ ಕಾವಿಗೆ ಅವರ ಉಕ್ಕಿನಂತಿದ್ದ ಮನಸ್ಸು ಕರಗಿ ಮೇಣದಂತಾಯಿತು ಅವರು ಅವಳನ್ನು ಒಂದು ಕ್ಷಣ ನೋಡಿ ಅವಳ ಎದೆಯ ಮೇಲೆ ತಲೆಯಿಟ್ಟು ಕುಸಿದರು.

"ನನ್ನ ಕ್ಷಮಿಸು ಪದ್ಮಿನಿ "

ಮಗುವನ್ನು ಸಂತೈಯಿಸುವ ತಾಯಿಯಂತೆ ಪದ್ಮಿನಿ ಅವರ ಕ್ರಾಪಿನ ಮೇಲೆ ಬೆರಳಾಡಿಸಿದಳು

"ನಾನಿನ್ನು ಹೋಗಲೇ ?"

"ಬೇಡ ಬೇಡ ನನ್ನ ಬಿಟ್ಟು ಹೋಗಬೇಡ ನನ್ನ ಶೂನ್ಯ ಜಗತ್ತನ್ನು ಬೆಳಗಿಸು "

"ಬೆಳಗಿಸುವುದಕ್ಕೆ ನೀವು ಅವಕಾಶ ಕೊಡುತ್ತೀರಾ ?"

"ನಾನು ಮುದುಕ ಪದ್ಮಿನಿ ನನಗಾಗಲೇ ನಲವತ್ತೆರಡು ವರ್ಷಗಳಾಗಿವೆ."

"ಹಾಗೇನು ? ನಿಮ್ಮನ್ನು ನೋಡಿದ ದಿನ ನಾನು ನೀವು ಗೀತಳ

ಅಣ್ಣ ಇರಬಹುದೂಂತ ತಿಳಿದುಕೊಂಡಿದ್ದೆ ”

“ಶಿಸ್ತಿನ ಜೀವನದಿಂದ ಹಾಗೆ ಇದೀನಿ ಅಷ್ಟೆ ಆದರೆ ನನಗೆ ವಯಸ್ಸಾಗಿದೆ ನಾನು ಮುದುಕ ಆದರೆ ನೀನಿನ್ನೂ ”

“ಹೆಂಗಸರು ಮುದುಕಿಯರಾಗುವುದಕ್ಕೆ ಬಹಳ ಕಾಲ ಬೇಕಾಗುವುದಿಲ್ಲ ಇಪ್ಪತ್ತೆರಡು ವರ್ಷದ ಗಡಿಯನ್ನು ದಾಟಿದ ಹೆಂಗಸರೆಲ್ಲಾ ಮುದುಕಿಯರು ಇನ್ನು ಆರು ವರ್ಷಗಳಿಗೆ ನಾನೂ ಮುದುಕಿಯಾಗುತ್ತೇನೆ ”

“ನನ್ನ ಸಮಾಧಾನ ಮಾಡೋಕೆ ನೀನು ಹೀಗೆ ಹೇಳ್ತೀಯಾ ? ನಮ್ಮಿಬ್ಬರಿಗಿರುವ ವಯಸ್ಸಿನ ಅಂತರ ನಿನಗೆ ಬಹಳ ಅನ್ಯಾಯ ಮಾಡುತ್ತಿದೆ ಆದುದರಿಂದಲೇ ನಾನು ನಿನ್ನ ಕೇಳಿಕೊಂಡೆ—ಹೊರಟುಹೋಗೂಂತ ನೀನು ಕೇಳಲಿಲ್ಲ ”

“ಈಗಲೂ ಕೇಳುವುದಿಲ್ಲ ”

“ನೀನು ಸರಿಯಾದ ತರುಣನನ್ನು ಮದುವೆಯಾಗಿ ಸುಖವಾಗಿರು ಪದ್ಮಿನಿ ಮುದುಕನನ್ನ ಮದುವೆ ಮಾಡಿಕೊಳ್ಳುವುದು ಸರಿಯಲ್ಲ ”

“ನನಗೆ ತರುಣರು ಇಷ್ಟವಿಲ್ಲ ”

“ಯಾಕೆ ?”

“ನನಗೆ ಯುವಕರನ್ನು ಕಂಡರೆ ಹೆದರಿಕೆ ಯುವಕರು ಸ್ವಾರ್ಥಿಗಳು, ಕೋಪಿಷ್ಠರು , ನನ್ನನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವರು ಕ್ರೂರಿಗಳು, ಕರುಣೆಯಿಲ್ಲದವರು, ಸಹಾನುಭೂತಿ ಇಲ್ಲದವರು ಬಹಳ ಬೇಗ ಇನ್ನೊಂದು ಹೆಣ್ಣಿನಿಂದ ಆಕರ್ಷಿತರಾಗುತ್ತಾರೆ ”

“ನನ್ನ ಗೆಳತಿಯ ಗಂಡನೊಬ್ಬನನ್ನು ನಾನು ಕಣ್ಣಾರೆ ಕಂಡಿದ್ದೇನೆ ಆತ ಯುವಜನದ ಪ್ರತಿನಿಧಿಯಾಗಿದ್ದಲ್ಲಿ ನಾನು ಯುವಕರನ್ನು ದ್ವೇಷಿಸುತ್ತೇನೆ ”

“ನಾನೂ ಆತನ ಹಾಗೇ ಇರಬಹುದು ”

“ಸಾಧ್ಯವೇ ಇಲ್ಲ ನೀವು ನಿಃಸ್ವಾರ್ಥಿಗಳು ನೀವು ಸ್ವಾರ್ಥಿಗಳಾಗಿದ್ದರೆ ನನ್ನ ನಿಮ್ಮಿಂದ ಕಳಿಸುವ ಯತ್ನ ಮಾಡುತ್ತಿರಲಿಲ್ಲ ನೀವು ಕೋಪಿಷ್ಠ. ರಲ್ಲ ”

ಮೂರ್ತಿ ತಲೆ ಎತ್ತಿ ನಕ್ಕು ಕೇಳಿದರು:

"ಆ ದಿನ ಕೆನ್ನೆಗೆ ಹೊಡೆದಿದ್ದು ಮರೆತುಹೋಯಿತೇ ?"

"ನಾನು ಮಾಡಿದ ಕೆಲಸಕ್ಕೆ ಶುಕ ಮುನಿಯಾದರೂ ರುದ್ರನಾಗುತ್ತಿದ್ದ ಅದು ನನ್ನ ತಪ್ಪು, ನಿಮ್ಮದಲ್ಲ ನೀವು ನನ್ನ ಅರ್ಥಮಾಡಿಕೊಂಡಿದ್ದೀರಿ ನಿಮಗೆ ಸಹಾನುಭೂತಿಯಿದೆ ಈ ಜನ್ಮದಲ್ಲಿ ನಾನು ತರುಣನನ್ನು ಮದುವೆಯಾಗುವುದಿಲ್ಲ ಬಿಸಿ ರಕ್ತದ ಯುವಕನನ್ನು ಮದುವೆಯಾಗುವುದಕ್ಕಿಂತ ಸನ್ಯಾಸಿನಿಯಾಗುವುದು ಮೇಲು "

ಮೂರ್ತಿ ಅವಳ ಮಾತಿಗೆ ಹೆಚ್ಚು ಲಕ್ಷ್ಯಕೊಡದೆ,

"ಅವತ್ತು ತುಂಬಾ ನೋವಾಗಿದ್ದಿರಬೇಕು, ಅಲ್ಲವೇ ?" ಎಂದರು

"ನೋವು ! ನನ್ನ ದವಡೆಯ ಹಲ್ಲುಗಳು ಆಗಲೇ ಅಲುಗಾಡುತ್ತಿವೆ "

"ನಾನು ಅವತ್ತು ಯಾವ ಕೆನ್ನೆಗೆ ಹೊಡೆದೆ ಜ್ಞಾಪಕವಿದೆಯೇ ?"

"ಯಾಕೆ ?"

"ಪಂಥದಲ್ಲಿ ಸೋತವಳು ನೀನು ಏಟು ತಿಂದುದು ನಿನ್ನ ಕೆನ್ನೆ ಆ ಏಟಿನ ಮೇಲೆ ಮುತ್ತಿನ ಮುಲಾಮು ಬಳಿದು. "

ಪದ್ಮಿನಿ ತುಂಟತನದಿಂದ,

"ಹಾಗಾದರೆ ಅವತ್ತು ನೀವು ಎರಡು ಕೆನ್ನೆಗೂ ಹೊಡೆದಿರಿ" ಎಂದಳು

"ಸುಳ್ಳು ನನಗೆ ನೆನಪಿದ್ದ ಮಟ್ಟಿಗೆ "

"ನಿಮಗೆ ಯಾವುದೂ ಜ್ಞಾಪಕ ಇಲ್ಲ ನನಗೆ ಗೊತ್ತು ನೀವು ಕೊಟ್ಟದ್ದೇನೋ ಒಂದೇ ಏಟು. ಆದರೆ ಅದನ್ನೇ ಹದಿನೈದು ಜನಕ್ಕೆ ಹದಿನೈದು ಹಂಚಿದರೂ ಅವರದನ್ನು ಜೀರ್ಣಿಸಿಕೊಳ್ಳಲು ಹದಿನೈದು ದಿನ ಬೇಕಾಗುತ್ತದೆ ಆದುದರಿಂದ ಹದಿನೈದು ಇಂಟು ಹದಿನೈದು ಇಂಟು ಹದಿನೈದು ಎಷ್ಟಾಯಿತು ? ಅಲ್ಲಿಗೆ ಒಟ್ಟು ಮೂರು ಸಾವಿರದ ಮುನ್ನೂರ ಎಪ್ಪತ್ತೈದು ಗೆನನ ಹತ್ತರ ಮೇಲೆ ಕನ್‌ಸಿಷನ್ ತೋರಿಸಬೇಕಾಗೋದಿಲ್ಲ ನಿಮ್ಮ ಸಾಲ ಸಧ್ಯಕ್ಕೇನೂ ತೀರುವುದಿಲ್ಲ ಬಿಡಿ "

ಅವಳ ಮಾತು ಕೇಳುತ್ತಾ ಮೂರ್ತಿಯ ಹೃದಯ ಹೂವಾಗಿ ಅರಳಿತು, ಹಕ್ಕಿಯಾಗಿ ಹಾಡಿತು, ತಿಳಿಗೊಳವಾಗಿ ಹರಿಯಿತು, ನವಿಲಾಗಿ ಕುಣಿಯಿತು, ವೀಣೆಯಾಗಿ ಮಿಡಿಯಿತು

"ನಿನಗೆ ಇಷ್ಟು ಚೆನ್ನಾಗಿ ಮಾತನಾಡುವುದನ್ನು ಯಾರು ಕಲಿಸಿ

ದರು ?"

"ನೀವು ಕಲಿಸಿದಿರಿ ನಾನು ಕಲಿತೆ ನಿಮಗಾಗಿ ಎಂತೆಂತಹ ಮಾತು ಗಳನ್ನೋ ಆಡಬೇಕಾಯಿತು ನಾನೊಂದು ಮಾತನಾಡುವಾಗ ನನಗೆಷ್ಟು ಹಿಂಸೆಯಾಗಿತ್ತು ಗೊತ್ತೆ ?"

"ಗೊತ್ತು ಆದರೆ ಆ ಮಾತನ್ನು ಈಗ ನೀನು ಹಿಂತೆಗೆದುಕೊಳ್ಳುವು ದಿಲ್ಲವಷ್ಟೇ ?"

"ನಾನು ತಮಾಷಿಗೆ ಹಾಗೆ ಹೇಳಿದೆ ಎಂದುಕೊಂಡಿರಾ ? ನಾನು ಒಂದು ಸಲ ಹೇಳಿದ ಮಾತನ್ನುಯಾವಾಗಲೂ ಹಿಂತೆಗೆದುಕೊಳ್ಳುವುದಿಲ್ಲ "

"ಹಾಗಾದರೆ ನೀನು ಈಗಲೂ ಸಿದ್ಧ, ನಿನ್ನ ಮಾತನ್ನು ಸತ್ಯವನ್ನಾಗಿ ಸಲು."

"ಇನ್ನೂ ಅಪನಂಬಿಕೆಯೇ ?"

"ಗಾಜನ್ನು ತುಂಬಾ ಬಿಸಿಮಾಡಿದರೆ ಒಡೆದುಹೋಗುತ್ತದೆ "ಎಂದ ವರು ನುಡಿದಾಗ ಅವರೆಷ್ಟು ನೊಂದಿರುವರೆಂದು ಪದ್ಮಿನಿಗೆ ತಿಳಿಯಿತು ದುಃಖದಿಂದ ಹಣ್ಣಾದ ಮಗುವನ್ನು ರಮಿಸುವಂತೆ ಪದ್ಮಿನಿ ಕೇಳಿದಳು

"ತುಂಬಾ ಬೇಸರವಾಗಿದೆಯೇ ?"

"ನನ್ನ ಬಗೆಗೇ ನನಗೆ ಬೇಸರವಾಗಿದೆ ಶಿಶುವಿನಂತೆ ನೀನು ಪರಿ ಶುದ್ಧಳು ಆದರೆ ಆದರೆ ನಾನು ಪತಿತ "

"ಹಾಗೆಲ್ಲಾ ಮಾತನಾಡಬೇಡಿ "

"ಮಿಸೆಸ್ ದೀಕ್ಷಿತ್ "

"ನೀವು ಮುಂದೆ ಏನು ಹೇಳಬೇಡಿ ನೀವೇನು ಹೇಳಿದರೂ ನಾನು ಕೇಳೋಕೆ ತಯಾರಿಲ್ಲ ನಿಮ್ಮ ಹಿಂದಿನ ಜೀವನ ನನಗೆ ಬೇಕಾಗಿಲ್ಲ ನಿಮ್ಮ ಭವಿಷ್ಯ ಮಾತ್ರ ನನ್ನದು ಎಂದೆಂದಿಗೂ ನನ್ನದು "

ಮೂರ್ತಿಯ ಹೃದಯ ಹಗುರವಾಯಿತು

"ನಾನಿನ್ನು ಮನೆಗೆ ಹೋಗ್ತೀನಿ" ಎನ್ನುತ್ತಾ ಪದ್ಮಿನಿ ಎದ್ದಳು

"ಕಾರಿನಲ್ಲಿ ಬಿಟ್ಟು ಬರುತ್ತೇನೆ "

"ಕಾರು ಬೇಡ ನಡೆದುಕೊಂಡು ಹೋಗೋಣ ನಿಧಾನವಾಗಿ ಹೋಗಬಹುದು "

ಇಬ್ಬರೂ ಕೆಳಗಿಳಿದುಬಂದರು. ಹೂದಾನಿಯಮೇಲಿದ್ದ ಹೊಸ

ಹೂವನ್ನು ನೋಡಿ ಮೂರ್ತಿ ಪ್ರಶ್ನಾರ್ಥಕವಾಗಿ ಪದ್ಮಿನಿಯ ಕಡೆ ನೋಡಿದರು 'ಹೌದು ನಾನೇ ಹೊಸ ಹೂವನ್ನಿರಿಸಿದೆ' ಎನ್ನುವಂತೆ ಪದ್ಮಿನಿ ಕಿರುನಗೆ ಬೀರಿದಳು

* * *

ಟ್ರೈನಿನಿಂದಿಳಿದು ಗೀತನನ್ನು ಎದುರುಗೊಂಡು ಮೂರ್ತಿ ಅವಳ ಸೂಟ್‌ಕೇಸನ್ನು ಹಿಡಿದು ಹೊರಟರು

"ಏನೇ ಅತ್ತೆಮನೆಗೆ ಹೋಗಿ ಪಿಂಕುಪಿಂಕಾಗಿ ಬಂದುಬಿಟ್ಟಿದೀಯಾ" ಎನ್ನುತ್ತಾ ಮೂರ್ತಿ ವಾತ್ಸಲ್ಯದಿಂದ ಅವಳ ಕೆನ್ನೆಯನ್ನು ಹಿಂಡಿದರು.

"ನೀನು ಹೇಗಿದೀಯ ಅಣ್ಣ ?"

"ನೋಡಿದರೆ ಗೊತ್ತಾಗುವುದಿಲ್ಲವೆ "

"ನನಗೇನು ಗೊತ್ತಾಗುತ್ತೆ ಅಣ್ಣ ? ನನಗೆ ಗೊತ್ತಾಗೋದು ಇಷ್ಟು —ನೀವು ಬಹಳ ಹ್ಯಾಂಡ್‌ಸಮ್ ಫಾದರ್ ತಂದೆ ಎನಿಸಿಕೊಳ್ಳುವುದಕ್ಕೆ ಬಹಳ ಹ್ಯಾಂಡ್‌ಸಮ್ "

"ಬೆಂಗಳೂರಿನಲ್ಲಿ ಟ್ರೈನಿನ ಹತ್ತಿರ ಯಾರು ಬಂದಿದ್ದರು ?"

"ವಿಶ್ವನಾಥ, ಭವಾನಿ ಬಂದಿದ್ದರು ಅತ್ತೆ ನನಗೆ ಇವತ್ತು ಔತಣ ಮಾಡಿ ಸೊಗಸಾದ ಸೀರೆಯನ್ನು ಉಡುಗೊರೆಯಾಗಿ ಕೊಟ್ಟು ಕಳಿಸಿದಾಳೆ ಮನೆಗೆ ಹೋದಮೇಲೆ ತೋರಿಸ್ತೀನಿ "

"ಆಗಲೇ ಸೊಸೇನ ಮೆರಸೋಕೆ ಶುರುಮಾಡಿದಳೆ ಕಾವೇರಿ !"

"ಹೋಗಣ್ಣ ಏನೇನೋ ಮಾತನಾಡಬೇಡ "

"ವಿಶ್ವನಾಥ, ನೀನು ಜಗಳ ಆಡ್ತಿದ್ದೀರಾ ? ಅಥವಾ "

"ಅವನೇ ನನಗೆ ಕೀಟಲೆಮಾಡಿ ಜಗಳ ತೆಗೆಯುತ್ತಿದ್ದ ಅವನ ಹತ್ತಿರ ಎಷ್ಟು ಜಗಳ ಕಾಯಬಾರದೂಂತ ಮಾಡಿದ್ದರೂ ಆಗಲಿಲ್ಲ "

"ಇಬ್ಬರೇ ಇದ್ದಾಗ ?"

"ಪ್ರಶ್ನೆ ಬಹಳ ವೈಯಕ್ತಿಕವಾಗಿದೆ."

ಮೂರ್ತಿ ನಕ್ಕರು. ಮನೆ ಸೇರಿದಕೂಡಲೇ ಗೀತ ತನ್ನ ಟ್ರಂಕನ್ನು ತೆಗೆದು ಅತ್ತೆ ತನಗೆ ಕೊಟ್ಟಿದ್ದ ಸೀರೆಯನ್ನು ತೋರಿಸಿ,

"ಹೇಗಿದೆ ?" ಎಂದಳು

"ಉಟ್ಟುಕೊಂಡು ತೋರಿಸು. ಆಮೇಲೆ ಹೇಳ್ತೀನಿ "

ಗೀತಾ ಸಡಗರದಿಂದ ಒಳಗೆ ಓಡಿದಳು ಮೂರ್ತಿ ಕೂಗುತ್ತಲೇ ಇದ್ದರು

"ನಿಧಾನವಾಗಿ ತೋರಿಸುವಿಯಂತೆ ಈಗೇನು ಆತುರ "

ಗೀತ ಅಲ್ಲಿ ನಿಲ್ಲಲಿಲ್ಲ ಹತ್ತು ನಿಮಿಷಗಳಲ್ಲಿ ಮತ್ತೆ ಹೊರಗೆ ಬಂದಳು

"ಹೇಗಿದೆ ಅಣ್ಣ ?"

"ವಿಶ್ವನಾಥ ಈಗ ಇಲ್ಲಿದ್ದಿದ್ದರೆ ಈ ಗಳಿಗೆಯೇ ನಿನ್ನ ಧಾರೆ ಎರೆದು ಅವನಿಗೊಪ್ಪಿಸಿಬಿಡುತ್ತಿದ್ದೆ "

"ಹೀಗೆ ಹೇಳಿದರೆ ಏನರ್ಥ ?"

"ಸಾಲಂಕೃತ ಕನ್ಯೆ "

ತಂದೆಮಗಳ ಮಾತುಕತೆ ನಡೆದಿದ್ದಾಗ ತಾತ ಸಂಭ್ರಮದಿಂದ ಹೊರಗೆ ಬಂದು ಬಿಸಿ ಹಾಲಿನ ಲೋಟವನ್ನು ಗೀತನ ಕೈಗೆ ಕೊಟ್ಟು,

"ಹೇಗಿದೀಯಾ ಮಗು ?" ಎಂದರು

"ಅಣ್ಣ ಹೇಳ್ತಿದಾನೆ—ಸಾಲಂಕೃತ ಕನ್ಯೇಂತ "

"ಅವರ ಮಾತು ಅಕ್ಷರಶಃ ನಿಜ" ಎನ್ನುತ್ತಾ ತಾತ ಒಳಗೆ ಹೋದರು ತಂದೆ ಮಗಳಿಬ್ಬರೂ ಕುಳಿತುಕೊಂಡು ಹದಿನೈದು ದಿವದ ಮಾತುಕತೆಯನ್ನು ಮುಗಿಸಿದರು

"ಪದ್ಮಿನಿ ಎಂದೂ ಇಲ್ಲಿಗೆ ನನ್ನ ಹುಡುಕಿಕೊಂಡು ಬಂದಿರಲಿಲ್ಲವೇ?"

ಮೂರ್ತಿ ತಮ್ಮ ಶೂಸಿನ ಲೇಸು ಕಟ್ಟುತ್ತಾ "ನಿನ್ನೇನೂ ಬಂದಿದ್ದಳು. ಇವತ್ತು ನೀನು ಬರ್ತೀಯಾಂತ ಹೇಳಿದೀನಿ ಆಮೇಲೆ ನಿನ್ನ ಕನ್ನಡ ಪೇಪರು ಕೊಡುವುದಕ್ಕೆ ಬಂದಿದ್ದಳು ಕನ್ನಡದಲ್ಲಿ ನಿನಗೆ ತುಂಬಾ ಕಡಿಮೆ ನಂಬರು ಬಂದಿದೇಂತ ನಿನ್ನ ಬಯ್ಯುತ್ತಿದ್ದಳು "

"ಎಲ್ಲಿ ಪೇಪರು ?"

"ನಿನ್ನ ಮೇಜಿನ ಮೇಲೆ ಇಟ್ಟಿದೀನಿ. ನಾನು ಆಫೀಸಿಗೆ ಹೋಗಿ ಬರುತ್ತೀನೆ. ನನಗೋಸ್ಕರ ಕಾಯಬೇಡ, ಊಟಮಾಡಿ ಮಲಗಿಕೊಂಡು

ಬಿಡು" ಎನ್ನುತ್ತಾ ಮೂರ್ತಿ ಹೊರಗೆ ಹೋದರು

ಗೀತಾ ಧಡಧಡನೆ ಮೆಟ್ಟಿಲೇರಿದಳು

ರಾತ್ರಿ ಒಂಭತ್ತು ಗಂಟೆಗೆ ಮೂರ್ತಿ ಮನೆಗೆ ಬಂದಾಗ ಗೀತ ತಂದೆಗಾಗಿ ಕಾದು ಕುಳಿತುಕೊಂಡಿದ್ದಳು

"ಊಟ ಮಾಡಲಿಲ್ಲವೇ ?"

"ನಿನ್ನ ಜೊತೆ ಊಟಮಾಡಿ ಬಹಳ ದಿವಸ ಆಯಿತಣ್ಣ "

ತಂದೆ ಮಗಳಿಬ್ಬರಿಗೂ ಬಡಿಸಿ ತಮ್ಮ ಕೆಲಸ ಮುಗಿಸಿಕೊಂಡು ತಾತ ತಮ್ಮ ಮನೆಗೆ ಹೊರಟರು

ಗೀತ ಹಿಂಬಾಗಿಲುಗಳನ್ನು ಒಮ್ಮೆ ನೋಡಿಕೊಂಡು ಬಂದು ಮಲಗಲು ಹೊರಟಳು

ತಂದೆ ಅವಳ ರೂಮಿನ ಮುಂದೆ ಹಾದುಹೋಗುವಾಗ "ಗೀತಾ" ಎಂದರು

"ಏನಣ್ಣ ?"

"ಎಚ್ಚರವಾಗಿದೀಯಾ ?"

"ಹೂಂ "

ಮೂರ್ತಿ ಬಾಗಿಲನ್ನು ತಳ್ಳಿ ಒಳಗೆ ಬಂದರು

"ನಿನ್ನ ಕೈಲಿ ಸ್ವಲ್ಪ ಮಾತನಾಡಬೇಕಾಗಿದೆ" ಎಂದಾಗ ಯಾವಾಗಲೂ ನಗುವಿನಿಂದ ಕುಣಿಯುತ್ತಿದ್ದ ಕಣ್ಣುಗಳು ಗಂಭೀರವಾಗಿದ್ದುವು

ಗೀತಾ ಮಂಚದಿಂದ ಕೆಳಗಿಳಿದುಬಂದು ಮೇಜಿನಮೇಲೆ ಕುಳಿತುಕೊಂಡಳು

"ನೀನು ಕೂತ್ಕೋಣ್ಣ "

ಮೂರ್ತಿ ಮೇಜಿನ ಬಳಿ ಇದ್ದ ಕುರ್ಚಿಯ ಮೇಲೆ ಕುಳಿತು,

"ನಿನಗೊಂದು ವಿಷಯ ನಾನು ಹೇಳಬೇಕಾಗಿದೆ" ಎಂದರು ಗೀತಾ ಪ್ರಶ್ನಾರ್ಥವಾಗಿ ಅವರ ಕಡೆ ನೋಡಿದಳು

"ನಾನು ಪದ್ಮಿನಿಯನ್ನು ಪ್ರೀತಿಸುತ್ತೇನೆ "

ಅವರ ಎಣಿಕೆಯಂತೆ ಗೀತ ಆಶ್ಚರ್ಯಗೊಳ್ಳಲಿಲ್ಲ ಅವಳೂ ಮೃದು

ವಾಗಿ ಹೇಳಿದಳು

"ನನಗೆ ಗೊತ್ತು "

ಈಗ ಆಶ್ಚರ್ಯಗೊಂಡವರು ಮೂರ್ತಿ ಅವರು ಅಚ್ಚರಿಯಿಂದ ಮಗಳ ಕಡೆ ನೋಡಿ,

"ನಿನಗೆ ಹೇಗೆ ಗೊತ್ತು ?" ಎಂದರು

"ಹಿಂದೊಂದು ದಿನ ನಾನು, ನೀನು, ಪದ್ಮಿನಿ ಲಲಿತಮಹಲಿನ ಬಳಿ ಹೋಗಿದ್ದುದು ನೆನಪಿದೆಯೇ ? ಆ ದಿನ ನಾನು ಪದ್ಮಿನಿ ಪಂಥಕಟ್ಟಿ ನಿನ್ನ ಬಳಿಗೆ ಓಡಿಬಂದೆವು ಪದ್ಮಿನಿ ಮೊದಲು ಓಡಿಬಂದರೂ ನಿನ್ನ ಮುಟ್ಟಲು ಸಂಕೋಚಗೊಂಡು ನಿಂತುಬಿಟ್ಟಿದ್ದಳು ನಾನು ಅವಳನ್ನು ಕೀಟಲೆ ಮಾಡಿದಾಗ—ಕಾರೊಂದು ಎದುರಿನಿಂದ ಬಂದಾಗ ಅದರ ಬೆಳಕು ನಿಮ್ಮ ಮೇಲೆ ಬಿದ್ದಾಗ, ನಿನ್ನ ಮುಖಭಾವ ಅದನ್ನು ನಾನು ಎಂದೂ, ಎಲ್ಲೂ, ಯಾವಾಗಲೂ ನೋಡಿರಲಿಲ್ಲ ಆ ಸೆಳೆತ, ಆಕರ್ಷಣೆ, ತನ್ಮಯತೆ, ಏಕಾಗ್ರತೆ ಪ್ರೇಮಕ್ಕೆ ಮಾತ್ರ ಸಾಧ್ಯ "

ಮಗಳ ಮಾತು ಕೇಳಿ ತಂದೆ ನಕ್ಕುಬಿಟ್ಟರು

"ನಾನು ತಿಳಿದುಕೊಂಡಿರುವ ಗೀತಾ ಅಲ್ಲ ನೀನು ಬಹಳ ಬುದ್ಧಿ ಬಂದುಬಿಟ್ಟಿರುವಹಾಗಿದೆ ನಾನು ಏನೋ ಅಂತಿದ್ದೆ "

"ಪದ್ಮಿನಿಗೆ ಈ ವಿಷಯ ಗೊತ್ತೇ ?"

"ನಿನಗೇ ಗೊತ್ತಾಗಿದೆಯಂತೆ ಇನ್ನು ಪದ್ಮಿನಿಗೆ ಗೊತ್ತಿಲ್ಲವೇ ?"

"ಅವಳು ಏನು ಹೇಳ್ತಾಳೆ ?" ಗೀತ ಕಾತರದಿಂದ ಕೇಳಿದಳು

ತಂದೆ ಅವಳ ಪ್ರಶ್ನೆಗೆ ಉತ್ತರಕೊಡದೆ,

"ನೀನು ಏನು ಹೇಳ್ತೀಯಾ ?" ಎಂದರು

"ನನ್ನ ಅಭಿಪ್ರಾಯ ನಿನಗೆ ಅಷ್ಟೊಂದು ಮುಖ್ಯವೇ ?"

"ನಿನ್ನ ಅಭಿಪ್ರಾಯ ನನಗೆ ಬೇಕು ಗೀತಾ ನೀನೇನೂ ಎಳೆಯ ಮಗುವಲ್ಲ ಅವಳನ್ನು ಮದುವೆಮಾಡಿಕೊಳ್ಳುವುದರಿಂದ ನಿನಗೆ ಅನ್ಯಾಯ ವಾಗಬಾರದು "

"ಹಾಗಂದರೆ ?"

"ನಿನಗೆ ಹೇಗೆ ಬಿಡಿಸಿ ಹೇಳಲಿ ? ಒಂದು ಪಕ್ಷ ..ನಿನಗೆ ನಿನಗೆ

ತಮ್ಮ ತಂಗಿಯರಾದರೆ ನಿನಗೊಬ್ಬಳಿಗೇ ಬರಬಹುದಾಗಿದ್ದ ಈ ಆಸ್ತಿ ”

ತಂದೆಯ ಮಾತು ಕೇಳಿ ಗೀತಳಿಗೆ ತುಂಬಾ ನೋವಾಯಿತು

“ನನ್ನ ಅಷ್ಟೊಂದು ಸ್ವಾರ್ಥಿ ಎಂದು ತಿಳಿದುಕೊಂಡಿದೀಯಾ ಅಣ್ಣ ? ನೀನು ಸುಖವಾಗಿರುವುದಕ್ಕಿಂತಲೂ ನನಗೆ ಹಣಾ ಹೆಚ್ಚೂಂತ ಯಾವ ಬಾಯಲ್ಲಿ ಹೇಳಲಿ ? ನೀನು ಸಂತೋಷವಾಗಿರುವುದು ನನಗೆ ಮುಖ್ಯ ನೀನು ಆ ಮಿಸೆಸ್ ದೀಕ್ಷಿತ್ ಜೊತೆ ಓಡಾಡುತ್ತಿದ್ದಾಗ ನನಗೆಷ್ಟು ದುಃಖವಾಗ್ತಿತ್ತುಗೊತ್ತೆ ? ಇಂದ್ರಲೋಕದ ಪಾರಿಜಾತವೇ ನಿನ್ನದಾಗ ಬಹುದಾದಾಗ ಈ ಕಾಗದದ ಹೂವಿಗಾಗಿ ”

“ಆಗಲೂ ನಾನು ಸುಖವಾಗಿರಲಿಲ್ಲ ಗೀತಾ ”

“ನನಗೆ ಅದು ಗೊತ್ತು ರಾತ್ರಿ ನೀನು ಒಂದು ಗಂಟೆಯವರೆವಿಗೆ ಎಚ್ಚರಗೊಂಡು ಓದುತ್ತಿದ್ದಾಗ ನಾನೆಷ್ಟೋ ದಿನ ”

“ಅದೆಲ್ಲಾ ನಿನಗೆ ಹೇಗೆ ಗೊತ್ತು ?”

“ನನಗೆ ಎಲ್ಲಾ ಗೊತ್ತು ನೀನು ತಿಳಿದುಕೊಂಡಿರುವಷ್ಟು ಚಿಕ್ಕ ಹುಡುಗಿಯಲ್ಲ ನಾನು ”

“ನನ್ನ ವಿಷಯ ಇನ್ನೇನು ಗೊತ್ತು ?”

“ನಿನ್ನ ಶೂನ್ಯಜೀವನವೃತ್ತದೊಳಗೆ ನಾನೊಬ್ಬಳೇ ಹರ್ಷದ ಬಿಂದು ವಾಗಿದ್ದೆ ನನಗೋಸ್ಕರ ನೀನು ಬದುಕಿದ್ದೆ ನನಗಾಗಿ ದುಡಿಯುತ್ತಿದ್ದೆ ಪದ್ಮಿನಿ ನಿನ್ನ ಜೀವನದಲ್ಲಿ ಪ್ರವೇಶಿಸಿದನಂತರ ನೀನು ಯಾಕೆ ಇಷ್ಟು ದಿನ ಬದುಕಿದ್ದೇಂತ ನನಗೆ ಗೊತ್ತಾಯಿತು ”

“ಯಾಕೆ ?”

“ನೀನು ಅವಳಿಗೋಸ್ಕರವೂ ಬದುಕುತ್ತಿದ್ದೆ ಎಷ್ಟೋದಿನ ನಿನ್ನ ಕಣ್ಣುಗಳು ಯಾರನ್ನೋ, ಏನನ್ನೋ, ಅರಸುತ್ತಿದ್ದುವು ನೀನು ಹುಡುಕ ತ್ತಿದ್ದ ಹುಡುಗಿ ಪದ್ಮಿನಿ. ಅವಳು ಕಣ್ಣಿಗೆ ಬಿದ್ದಮೇಲೆ ನಿನ್ನಲ್ಲಿದ್ದ ಹುಡುಕು ನೋಟ ರೆಸ್ಟ್‌ಲೆಸ್‌ನೆಸ್ ಮರೆಯಾಗಿ ಶಾಂತಿ ಅದರ ಸ್ಥಾನವನ್ನು ಅಲಂಕರಿಸಿತು ”

“ಆ ದಿನ ಒಂದು ಕ್ಷಣ ನಾನು ಮತ್ಸರಗೊಂಡಿದ್ದೆ ಮರುಗಳಿಗೆಯೇ ಪದ್ಮಿನಿಯ ಕೈ ಹಿಡಿದು ನಿನಗೆ ಕೇಳಿಸದಂತೆ ಪಿಸುಗುಟ್ಟಿದ್ದೆ. ‘ನಿನ್ನ ಕಂಡರೆ

ನನಗೆ ತುಂಬಾ ಇಷ್ಟ' ಎಂದು ನಾನು ಹಾಗೇಕೆ ಹೇಳಿದೆ ಗೊತ್ತೆ ?"

ಮಗಳೊಡನೆ ಮಾತನಾಡಲು ಬಂದಿದ್ದ ತಂದೆ ತಾವೇ ಮಗಳ ಮಾತುಗಳನ್ನು ಕೇಳುತ್ತಾ ಕುಳಿತುಕೊಂಡರು

"ಊಹೂಂ "

"ನಿನ್ನ ಮನಸ್ಸಿಗೆ ಅವಳು ಶಾಂತಿ ಕೊಟ್ಟಿದ್ದಾಳೆ ಒಂಟಿಯಾಗಿದ್ದ ನಿನ್ನ ಬರಡುಬಾಳನ್ನು ಚಿಗುರಿಸುತ್ತಾಳೆ ಶೂನ್ಯವಾಗಿದ್ದ ಭವಿಷ್ಯ ಅವಳಿಂದಾಗಿ ನಿನಗೆ ಕೋಟಿ ಕಾಮನಬಿಲ್ಲಿನ ವರ್ಣಗಳಿಂದ ಕೂಡಿದ್ದಾಗಿದೆ ನನ್ನ ತಂದೆಗೆ ಇಷ್ಟೊಂದು ಸುಖ ಕೊಟ್ಟವಳನ್ನು ನಾನು ಪ್ರೀತಿಸದಿರಲು ಸಾಧ್ಯವೇ ?"

"ಇಷ್ಟು ಚೆನ್ನಾಗಿ ಮಾತನಾಡ್ತೀಯಾ ? ಕನ್ನಡದಲ್ಲಿ ಯಾಕೆ ಕಡಿಮೆ ನಂಬರು ಬಂತು "

"ಪರೀಕ್ಷೆ ಹಾಳಾಗಲಿ ಪದ್ಮಿನಿಗೆ ನಿನ್ನ ಮನಸ್ಸು ಗೊತ್ತೇ ?"

"ಹೂಂ "

"ಹೇಗೆ ಗೊತ್ತಾಯಿತು ?"

"ನಾನೇ ಹೇಳಿದೆ "

"ಏನೆಂದು ಹೇಳಿದೆ ?"

"ನೀನಿನ್ನು ನಮ್ಮ ಮನೆಗೆ ಬರಬೇಡ ಎಂದು ಹೇಳಿದೆ "

ಗೀತಾ ಮೇಜಿನಿಂದ ಕೆಳಗೆ ಧುಮುಕಿ ತಂದೆಯ ಬಳಿ ನಿಂತು

"ಯಾಕಣ್ಣ ?" ಎಂದಳು

"ನನಗೆ ವಯಸ್ಸಾಗಿದೆ ನಿನ್ನ ವಯಸ್ಸಿಗೆ ಅನುರೂಪನಾದ ವರನೊಬ್ಬನನ್ನು ಮದುವೆ ಮಾಡಿಕೊಂಡು ಸುಖವಾಗಿರು ಎಂದೆ "

"ಅವಳೂ ನಿನ್ನ ಪ್ರೀತಿಸುತ್ತಾಳೇಂತ ನಿನಗೆ ತಿಳಿದಿತ್ತೇ ?"

"ಅವಳ ಮನಸ್ಸು ತೆರೆದ ಪುಸ್ತಕದಂತೆ ನಾನು ಓದಬಲ್ಲೆ "

"ಮುಂದೇನಾಯಿತು ?"

"ಅವಳು ಒಪ್ಪಿಕೊಳ್ಳಲಿಲ್ಲ "

ತಂದೆಯ ಮಾತುಗಳನ್ನು ಕೇಳಿ ಗೀತಾ,

"ಅಣ್ಣಾ, ನಿನ್ನ ಬಳಿಗೆ ಹರಿದು ಬಂದಿರುವ ಅಮೃತವನ್ನು ನಿರಾಕರಿಸ

ಬೇಡ" ಎಂದಳು

"ಇಲ್ಲ ಗೀತಾ ಆ ಪುಣ್ಯರಾಶಿ ನನ್ನದಾಗುವಾಗ ನಾನು ಹೇಗೆ ಬೇಡವೆನ್ನಲಿ? ಆ ಸಂಯಮ, ದೃಢತೆ ನನ್ನಲ್ಲಿಲ್ಲ ನಿನ್ನ ತಂದೆಯೂ ಎಲ್ಲರಂತೆ ಮನುಷ್ಯ, ದೇವತೆಯಲ್ಲ" ಎನ್ನುತ್ತಾ ಎದ್ದು ನಿಂತು,

"ಇನ್ನು ಮಲಗಿಕೋ ನಾನು ಹೋಗ್ತೀನಿ" ಎಂದರು

ಗೀತಾ ಮಂಚ ಹತ್ತಿದ ಮೇಲೆ ಮೂರ್ತಿ ಸೊಳ್ಳೆಪರದೆಯನ್ನು ಸಿಕ್ಕಿಸಿ, ದೀಪ ಆರಿಸಿ ಹೊರಗೆ ಹೋದರು

ಮಾರನೆಯ ದಿನ ಗೀತ ಕಾಲೇಜಿಗೆ ಹೋದಾಗ ಎಂದಿನಂತೆ ಹೊತ್ತಾಗಿತ್ತು ಆದುದರಿಂದ ಅವಳಿಗೆ ಪದ್ಮಿನಿಯೊಡನೆ ಮಾತನಾಡಲು ಸಾಧ್ಯವಾಗಲಿಲ್ಲ ಕಾಲೇಜು ಮುಗಿದೊಡನೆ ಗೀತಳ ಕಣ್ಣು ತಪ್ಪಿಸಿ ಪದ್ಮಿನಿ ಮನೆಗೆ ಹೋಗಲು ನಿಶ್ಚಯಿಸಿದಳು ಅವಳು ನಾನಿಲ್ಲದಾಗ ಮನೆಗೆ ಬಂದು ನಮ್ಮ ತಂದೇನ ಮರುಳು ಮಾಡಿದಳು ಎಂದುಕೊಂಡರೆ?

ಕಾಲೇಜಿನ ಬಾಗಿಲನ್ನು ದಾಟುತ್ತಿದ್ದ ಪದ್ಮಿನಿಯನ್ನು ಗೀತಾ ಹಿಡಿದು ನಿಲ್ಲಿಸಿ "ಎಲ್ಲಿಗೆ ಹೋಗ್ತೀಯೇ?" ಎಂದಳು

"ಮನೆಗೆ"

"ನಮ್ಮ ಮನೆಗೆ ಬರ್ತೀಯಾ ಇವತ್ತು?"

ಪದ್ಮಿನಿ ಹಿಂದೆ ಮುಂದೆ ನೋಡಿ "ಬರಬೇಕಾ?" ಎಂದಳು

"ನೀನು ಬಂದರೆ ಸಂತೋಷ. ನೀನು ಬರದಿದ್ದರೆ ನಾನೇ ನಿಮ್ಮ ಮನೆಗೆ ಬರುತ್ತೇನೆ"

ಗೀತ ಬಂದರೆ ಮೂರ್ತಿ ಬಂದಹಾಗಾಯಿತೇ?

"ನೀನು ನನ್ನ ಜೊತೆ ಈಗ ನಮ್ಮ ಮನೆಗೆ ಬಾ ಆಮೇಲೆ ಇಬ್ಬರೂ ಒಟ್ಟಿಗೆ ನಿಮ್ಮ ಮನೆಗೆ ಹೋಗೋಣ"

ಗೀತ ಒಪ್ಪಿಕೊಂಡಳು ಪದ್ಮಿನಿಯ ತಾಯಿ ಗೀತನಿಗೆ ತುಂಬಾ ಉಪಚಾರ ಮಾಡಿದರು ಅವರು ಯಾಕೋ ಒಳಗೆ ಎದ್ದು ಹೋದಾಗ ಪದ್ಮಿನಿ ಗೀತನಿಗೆ ಹೇಳಿದಳು

"ನೀನು ಊರಿನಲ್ಲಿರಲಿಲ್ಲ ಎನ್ನುವ ಸಮಾಚಾರಾನ ನಮ್ಮ ತಾಯಿಗೆ ಹೇಳಬೇಡ."

"ಯಾಕೆ ?" ಗೀತಾ ಆಶ್ಚರ್ಯಗೊಂಡು ಕೇಳಿದಳು

"ಕಾರಣ ಆಮೇಲೆ ಹೇಳ್ತೀನಿ "

ಗೀತಾ ಸುಮ್ಮನಾದಳು ಆದರೆ ಹೊರಗೆ ಬಂದೊಡನೆ ಸುಮ್ಮನಿರುವುದು ಆವಳಿಂದ ಸಾಧ್ಯವಾಗಲಿಲ್ಲ

"ಕಾರಣ ಏನು ಹೇಳು" ಎಂದು ಅವಳು ಪದ್ಮಿನಿಯನ್ನು ಪೀಡಿಸಿದಳು ಆದರೆ ಪದ್ಮಿನಿ ಕಾರಣ ತಿಳಿಸಲಿಲ್ಲ

'ಸುದರ್ಶನ'ದ ಹೊಸಿಲು ದಾಟುತ್ತಲೇ ಗೀತ ಹೇಳಿದಳು :

"ಕಂಗ್ರಾಚುಲೇಷನ್ಸ್ !"

"ಈಗಲೇ ಕಂಗ್ರಾಚುಲೇಟ್ ಮಾಡಬೇಡ "

"ಯಾಕೆ ?"

"ಇನ್ನು ಮುಂದಿದೆ ಕುರುಕ್ಷೇತ್ರ" ಎನ್ನುತ್ತಾ ಪದ್ಮಿನಿ ನಕ್ಕಳು. ಗೀತಳಿಗೆ ಅವಳ ಮಾತು ಅರ್ಥವಾಯಿತು ಅವಳು ಅದನ್ನು ಹೆಚ್ಚು ಬೆಳೆಸಲಿಷ್ಟಪಡದೆ,

"ಚದುರಂಗ ಆಡೋಣ" ಎಂದಳು

ಮೇಜಿನ ಮೇಲೆ ಹಾಸನ್ನಿರಿಸಿ ಗೆಳತಿಯರಿಬ್ಬರೂ ಎರಡು ಆಟಗಳನ್ನು ಆಡಿ ಮುಗಿಸಿದರು ಆದರೂ ಮೂರ್ತಿ ಮನೆಗೆ ಬರಲಿಲ್ಲ

"ತಾತ, ಅಣ್ಣ ಕೋರ್ಟಿನಿಂದ ಮನೆಗೆ ಬಂದು ಆಫೀಸಿಗೆ ಹೋದರೋ ಅಥವಾ ಮನೆಗೆ ಬಂದಿಲ್ಲವೋ ?"

"ಮನೆಗೆ ಮಧ್ಯಾಹ್ನ ಎರಡು ಗಂಟೆಗೇ ಬಂದರು ನಾಲ್ಕು ಗಂಟೆಗೆ ಆಫೀಸಿಗೆ ಹೋದರು "

"ನಿರಾಶೆಗೊಳಿಸಿದ್ದಕ್ಕೆ ಕ್ಷಮಿಸು" ಎಂದಳು ಗೀತ.

ಮತ್ತೆರಡು ಆಟಗಳನ್ನು ಆಡಿದ್ದಾಯಿತು.

ಗೀತಾ ಕಿಟಕಿಯಿಂದಾಚೆ ನೋಡಿ "ಆಗಲೇ ಕತ್ತಲಾಗಿ ಹೋಯಿತು ಹನುಮನ್ನ ನಿನ್ನ ಜೊತೆ ಕಳಿಸುತ್ತೇನೆ ನಿನ್ನೊಬ್ಬಳನ್ನೇ ಕಳಿಸಿದರೆ ಅಣ್ಣ ಬೈತಾನೆ" ಎಂದಳು

"ಪಾಪ ! ಬಹಳ ಹೆದರೋದು ಅಣ್ಣನಿಗೆ" ಪದ್ಮಿನಿ ಮೂದಲಿಸಿದಳು.

"ಹನುಮಾ ಹನುಮಾ" ಎಂದು ಕೂಗುತ್ತಾ ಗೀತಾ ಎದ್ದು

ಹೋದಳು ಅವಳು ಹೋದ ಎರಡು ನಿಮಿಷಗಳ ಮೇಲೆ ಮೂರ್ತಿ ಒಳಗೆ ಬಂದರು ಮೇಜಿನ ಮುಂದೆ ಪದ್ಮಿನಿಯನ್ನು ನೋಡಿ,

"ಗೀತಾ ಎಲ್ಲಿ ?" ಎಂದರು

"ಹನುಮನ್ನ ಕರೆಯೋದಕ್ಕೆ ಹೋದಳು ನೀವು ಬಂದ ಸದ್ದೇ ಆಗಲಿಲ್ಲ !"

"ನಾನು ನಡೆದುಕೊಂಡೇ ಆಫೀಸಿಗೆ ಹೋಗಿದ್ದೆ " ಎನ್ನುತ್ತಾ ಮೂರ್ತಿ ಬಂದು ಮೇಜಿನ ಮತ್ತೊಂದು ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತರು

ಅವರ ಕೈಗಳು ಮೇಜಿನ ಕೆಳಗೆ ಕ್ಷಣಕಾಲ ಹೆಣೆದುಕೊಂಡವು ಗೀತನ ಹೆಜ್ಜೆಯ ಸದ್ದು ಕೇಳಿ ಅವರ ಕೈಗಳು ಬೇರೆಯಾದವು ಗೀತ ಒಳಗೆ ಬಂದು ತಂದೆಯನ್ನು ನೋಡಿ,

"ಓ ಹನುಮಾ, ನೀನು ಹೋಗು ರಾಯರು ಹೋಗ್ತಾರೆ" ಎಂದಳು

ಪದ್ಮಿನಿ ಅವಳನ್ನು ತಡೆದು, "ಬೇಡ, ರಾಯರು ಈಗ ತಾನೆ ಹೊರಗಿನಿಂದ ಬಂದಿದ್ದಾರೆ ಆಲೆದಾಟದಿಂದ ಬಳಲಿದ್ದಾರೆ. ನಾನು ಹನುಮನ ಜೊತೇನೆ ಹೋಗ್ತೀನಿ" ಎನ್ನುತ್ತಾ ಎದ್ದು ನಿಂತಳು

ಗೀತ ತಂದೆಯ ಕಡೆ ನೋಡಿದಳು

ಅವರು "ನನಗೇನೂ ಆಯಾಸವಾಗಿಲ್ಲ ನೀನು 'ಬಾ' ಎಂದರೆ ಬರುತ್ತೇನೆ 'ಬೇಡ' ಎಂದರೆ ಇಲ್ಲ" ಎಂದರು

"ನೀವು ಬರಬೇಡಿ ನಾನು ಹೋಗ್ತೀನಿ" ಎಂದು ಹೇಳಿ ಪದ್ಮಿನಿ ಹೊರಟಳು. ಹನುಮಾ ಅವಳನ್ನು ಹಿಂಬಾಲಿಸಿದ

ಅವರು ಕಣ್ಮರೆಯಾಗುತ್ತಲೇ ಗೀತಾ ನಕ್ಕು "ಈಗಿಂದಾನೂ ಮೂಗುದಾರ ಹಾಕಿಸಿಕೊಳ್ಳುತ್ತಿದೀರಾ ?" ಎಂದಳು

"ಮೂಗುದಾರ ಹಾಕುವವಳು ಪದ್ಮಿನಿಯಾದರೆ ನಾನು ಕೇರ್ ಮಾಡೋದಿಲ್ಲ" ಎಂದರು ಮೂರ್ತಿ.

ಗೀತಾ ಕುಹಕದಿಂದ "ಪಾಪ" ಎಂದಳು

"ಎಲ್ಲಾ ಗಂಡಸರ ಪಾಡೂ ಇಷ್ಟೇ ಗೀತಾ. ನಿನ್ನ ವಿಶ್ವನಾಥನೂ

ಇದಕ್ಕೆ ಹೊರತಾಗಿಲ್ಲ ಅಲ್ಲವೇ ?"

ಗೀತಾ ತಂದೆಯ ಮಾತಿಗುತ್ತರವಾಗಿ ನಕ್ಕಳು

* * *

ಮಾರನೆಯ ದಿನ ಸಂಜೆ ಗೀತ ಹಾಲಿನಲ್ಲಿ ಕುಳಿತು ಸ್ವೆಟರ್ ಹಾಕುತ್ತಿದ್ದಳು ಪದ್ಮಿನಿ ಆ ದಿನ ಮನೆಗೆ ಬರೋದಕ್ಕಾಗುವುದಿಲ್ಲವೆಂದು ತಿಳಿಸಿಬಿಟ್ಟಿದ್ದಳು ಮೂರ್ತಿ ಕೋರ್ಟಿನ ಕೆಲಸ ಮುಗಿಸಿಕೊಂಡು ಮನೆಗೆ ಬಂದು ಮತ್ತೆ ಆಫೀಸಿಗೆ ಹೊರಟುಹೋಗಿದ್ದರು

ಮನೆಯಲ್ಲಿ ಒಬ್ಬಳೇ ಉಳಿದಿದ್ದ ಗೀತಳಿಗೆ ಬೇಸರವಾಯಿತು ಸಮಯ ಕೊಲ್ಲುವುದಕ್ಕಾಗಿ ಅವಳು ಹೆಣಿಕೆಯನ್ನು ಕೈಗೆ ತೆಗೆದುಕೊಂಡಳು

ಹೊರಗೆ ಜೂಲಿ ಬಗುಳಿದ ಸದ್ದು ಕೇಳಿಸಿತು ಜೊತೆಗೆ ಪೋರ್ಟಿಕೋದ ಮೆಟ್ಟಲುಗಳ ಮೇಲೆ ಹೆಜ್ಜೆಯ ಸದ್ದಾಯಿತು ಗೀತಾ ಆಲಿಸಿದಳು

ಊಹೂಂ ಇದು ಅವಳ ಅಣ್ಣನ ಭಾರದ ಹೆಜ್ಜೆಯ ಸದ್ದಲ್ಲ ಯಾವುದೋ ಹಗುರವಾದ ಹೆಜ್ಜೆಯ ಸದ್ದು

ಬಾಗಿಲಿನಿಂದ ಒಳಗೆ ಬರುತ್ತಿದ್ದ ಬೆಳಕಿಗ ಮರೆಯಾಗಿ ವ್ಯಕ್ತಿಯೊಂದು ನಿಂತ ಮೇಲೆ ಗೀತಾ ತಲೆ ಎತ್ತಿ ನೋಡಿದಳು ಅವಳ ಕೈಲಿದ್ದ ಉಲ್ಲನ್ನಿನ ದಾರದ ಉಂಡೆ ಕೆಳಗೆ ಬಿತ್ತು ಗೀತ ಆಶ್ಚರ್ಯ, ಸಂಭ್ರಮದಿಂದ ಎದ್ದು ನಿಂತು,

"ವಿಶ್ವನಾಥ !" ಎಂದಳು ·

"ಹೌದು ದೇವಿ, ನಾನು ವಿಶ್ವನಾಥ. ಒಳಗೆ ಬರಬಹುದೆ ?"

"ಇದೇನು ಬೇಬಿ ಕಾಗದ ಪತ್ರವಿಲ್ಲದೆ ಹೀಗೆ ಏಕಾಏಕಿ ಎಲ್ಲಿಂದ ಬಂದಿಳಿದೆ ?"

ವಿಶ್ವನಾಥ ಒಳಗೆ ಬಂದು ಹುಬ್ಬುಗಂಟಿಕ್ಕಿ ಹೇಳಿದ,

"ನಿನಗೆ ನಾನು ಹೇಳಿದ್ದು ಮರೆತುಹೋಯಿತೇ ಗೀತಾ ? ನೀನು ನನ್ನ 'ಬೇಬಿ' ಎಂದು ಕೂಗಬಾರದು ಹಾಗೆ ಬಾಯಿತಪ್ಪಿ ನೀನು ಒಂದೊಂದು ಸಲ ಕೂಗಿದಾಗಲೂ ನಿನಗೆ ಏನು ಶಿಕ್ಷೆ ವಿಧಿಸುತ್ತೇನೆಂದು ಹೇಳಿದ್ದು ನೆನಪಿದೆಯೇ ?"

"ಹಾಗಾದರೆ ನಿನ್ನ ಏನೆಂದು ಕರೆಯಲಿ ?"

"ಹೆಸರಿಗೇನು ಬೇಕಾದಷ್ಟಿದೆ ತಮಿಳು ಚಿತ್ರಗಳಲ್ಲಿ ಕರೆಯುವಂತೆ 'ಕಣ್ಣೇ' ಎನ್ನು ಅಥವಾ ಹಿಂದಿ ಚಿತ್ರಗಳಲ್ಲಿರುವಂತೆ 'ಮೇರಿಜಾನ್' ಎಂದು ಕರಿ. ಅಥವಾ 'ಡಾರ್ಲಿಂಗ್'

"ಥೂ ಹೋಗಪ್ಪ ಏನೇನೋ ಮಾತನಾಡ್ತೀಯ ನಾನು ನಿನ್ನ ಏನೆಂದೂ ಕರೆಯುವುದಿಲ್ಲ ಸುಮ್ಮನೆ ಮಾತನಾಡುತ್ತೇನೆ ಅದೇನು ಇದ್ದಕ್ಕಿದ್ದಂತೆ ಬಂದುಬಿಟ್ಟೆ"

ವಿಶ್ವನಾಥ ಸೋಫಾದ ಮೇಲೆ ಕುಸಿದು ಬಿದ್ದು,

"ನಿನ್ನ ನೋಡಿ ಬಹಳ ದಿನಗಳಾಗಿದ್ದವು ಅದಕ್ಕೋಸ್ಕರ ಬಂದೆ" ಎಂದ

"ಮೊನ್ನೆ ತಾನೆ ನಿಮ್ಮೂರಿಂದ ಬಂದಿದ್ದೀನಿ ನಿಜ ಹೇಳಬಾರದೇ ?"

"ಮೂರು ದಿನ ನನ್ನ ಪಾಲಿಗೆ ಮೂರು ವರ್ಷ."

"ಹುಡುಗಾಟ ಸಾಕು "

"ಮಾವ ಎಲ್ಲಿ ?"

"ಮಾವ ಮನೇಲಿಲ್ಲ ಮಾವನ ಮಗಳಿದಾಳೆ ಸೇವೆ ಮಾಡೋಕೆ" ಎನ್ನುತ್ತಾ ಗೀತ ಅಡಿಗೆಮನೆಯೊಳಗೆ ಓಡಿಹೋಗಿ

"ತಾತ, ಅವರು ಬಂದಿದ್ದಾರೆ" ಎಂದಳು ಉತ್ಸಾಹದಿಂದ.

"ಯಾರಮ್ಮ ?"

"ಅವರು ..ಕಾವೇರಮ್ಮನ ಮಗ. .."

ತಾತ ಗಟ್ಟಿಯಾಗಿ ನಕ್ಕು "ವಿಶ್ವನಾಥ ಬಂದಿದಾನೆಯೇ ? ಕಾಫಿ ಕೊಡಲೇ ?" ಎಂದರು ಗೀತಾ ತಲೆ ಅಲುಗಿಸಿ ಹೊರಗೆ ಬಂದಳು ವಿಶ್ವನಾಥ ಬಟ್ಟೆ ಬದಲಾಯಿಸಿ ಹೊರಗೆ ಬಂದ.

"ನಾನು ಬರೋದು ನಿಮಗೆ ಗೊತ್ತಿರಲಿಲ್ಲವೇ ಗೀತಾ ?"

"ಇಲ್ಲ "

"ಮಾವ ನಿನಗೇನೂ ಹೇಳಲಿಲ್ಲವೇ ?"

"ಇಲ್ಲ."

ವಿಶ್ವನಾಥ ಆಶ್ಚರಿಯಿಂದ "ನಿನ್ನೆ ಸಂಜೆ ಮಾವನಿಂದ ನನಗೆ 'ತತ್‌ಕ್ಷಣ ಹೊರಟು ಬಾ. ನಿನ್ನೊಡನೆ ಬಹಳ ಮಾತನಾಡುವುದಿದೆ' ಎಂದು

ಟೆಲಿಗ್ರಾಂ ಬಂತು ನಾನು ಗಾಬರಿಯಾಗಿ ನಿಂತ ಕಾಲಮೇಲೆ ಬಂದೆ ನಿನಗೇನಾದರೂ ಆರೋಗ್ಯ ಚೆನ್ನಾಗಿಲ್ಲವೇನೋಂತ ಮೊದಲು ಗಾಬರಿ ಯಾಗಿತ್ತು ಆಮೇಲೆ. "

ಅವನು ಗೀತ ತನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲವೆಂದು ಗಮನಿಸಿದ ಅವಳು ಸ್ವಚಿಂತನೆಯಲ್ಲಿರುವುದನ್ನು ನೋಡಿ ವಿಶ್ವನಾಥ,

"ಗೀತ !" ಎಂದು ಕೂಗಿದ

ಗೀತ ಯಾವುದೋ ಗಾಢವಾದ ಆಲೋಚನೆಯಲ್ಲಿ ಮುಳುಗಿರುವಂತೆ ಭಾಸವಾಯಿತು

"ಕಾಫಿ ತಗೋಪ್ಪ" ಎಂದರು ತಾತ

ವಿಶ್ವನಾಥ ಕಾಫಿ ಕುಡಿದು ಮುಗಿಸಿದರೂ ಗೀತ ತನ್ನ ಸಮಾಧಿ ಯಿಂದ ಎಚ್ಚರಗೊಳ್ಳಲಿಲ್ಲ ವಿಶ್ವನಾಥ ಮತ್ತೆ ಕೂಗಿದ.

"ಗೀತಾ ?"

"ಏನು ?"

"ಏನು ಯೋಚನೆ ಮಾಡ್ತಿದೀಯಾ ?"

"ಏನಿಲ್ಲ. ಅಣ್ಣ ನಿನ್ನ ಯಾಕೆ ಕರೆಸಿರಬಹುದೂಂತ ಯೋಚಿಸುತ್ತಿದ್ದೆ."

"ಯಾಕೆ ನಿನಗೇನಾದರೂ ಗೊತ್ತೆ ?"

ಗೀತ ನಿಧಾನವಾಗಿ ನುಡಿದಳು "ಹೂಂ, ಗೊತ್ತು ಮೇಲೆ ನನ್ನ ರೂಮಿಗೆ ಹೋಗೋಣ, ಬರ್‍ತೀಯಾ ?" ಎಂದಳು

ಗೀತಾ ನಿಧಾನವಾಗಿ ಮೆಟ್ಟಿಲು ಹತ್ತಿದಳು ವಿಶ್ವನಾಥ ನಾಲ್ಕು ಮೆಟ್ಟಿಲುಗಳಂತೆ ಹಾರಿ ಕ್ಷಣದಲ್ಲಿ ಮಹಡಿಯೇರಿದ.

ಗೀತಾ ಗಂಭೀರಳಾಗಿ ಹೇಳಿದಳು. "ಕುಳಿತುಕೋ. ಅಣ್ಣ ನಿಗಿಂತಲೂ ಮುಂಚೆ ನಾನು ನಿನ್ನ ಕೈಲಿ ಮಾತನಾಡುವುದಿದೆ "

ಗಾಂಭೀರ್ಯವೇ ಮೈದಾಳಿದಂತಿದ್ದ ಗೀತಳನ್ನು ನೋಡಿ ವಿಶ್ವನಾಥ ಚಕಿತನಾದ. ಅವಳನ್ನು ಅವನು ಎಂದೂ ಹೀಗೆ ನೋಡಿರಲಿಲ್ಲ.

ಗೀತಾ ತನ್ನ ರೂಮಿನ ಬಾಗಿಲನ್ನು ಮುಚ್ಚಿದಳು.

ವಿಶ್ವನಾಥ ವಕ್ರನಗೆ ಬೀರಿ "ನನಗೇನು ಅಪಾಯವಿಲ್ಲವಷ್ಟೆ ?" ಎಂದ.

ಉಳಿದ ಸಮಯದಲ್ಲಾಗಿದ್ದರೆ ಗೀತಾ ಅವನ ಮೇಲೆ ಕೋಪಿಸಿ ಕೊಳ್ಳುತ್ತಿದ್ದಳು. ಆದರೆ ಈಗ ಅವನ ಮಾತುಗಳು ಅವಳ ಕಿವಿಯ ಮೇಲೆ ಬಿದ್ದಿದ್ದಂತೆಯೇ ತೋರಲಿಲ್ಲ

ಗೀತಾ ಮಂಚದ ಮೇಲೆ ಕುಳಿತು ಮೆಲ್ಲನೆ ಹೇಳಿದಳು,

"ಅಣ್ಣನಿಗೆ ಮದುವೆ ಗೊತ್ತಾಗಿದೆ."

"ಯಾವ ಅಣ್ಣ ! ಯಾರ ಅಣ್ಣ !" ವಿಶ್ವನಾಥ ಯಾವುದೂ ಅರ್ಥವಾಗದೆ ಕೇಳಿದ

"ನಿನ್ನ ಮಾವನಿಗೆ ನಮ್ಮ ತಂದೆಗೆ "

ವಿಶ್ವನಾಥನ ಬಾಯಿ, ಕಣ್ಣುಗಳು ಅಚ್ಚರಿಯಿಂದ ಅಗಲವಾದುವು. ಆದರೆ ಮರುಕ್ಷಣ ಅವನು ಗಟ್ಟಿಯಾಗಿ ನಕ್ಕು,

"ಮಾವನ್ನ ನೀನು ಹೀಗೆ ಹಾಸ್ಯಮಾಡೋದು ಸರಿಯಲ್ಲ" ಎಂದ ಗೀತಳ ಕಣ್ಣುಗಳಿಂದ ಕಿಡಿಗಳು ಹಾರಿದುವು ಅವಳ ಚೆಂದುಟಿಗಳಿಂದ ಮೊನಚಾದ ಮಾತುಗಳು ಹಾರಿಬಂದುವು

"ಹಾಸ್ಯ ! ಯಾಕೆ ವಿಶ್ವನಾಥ ನೀನು ಮದುವೆ ಮಾಡಿಕೊಂಡರೆ ಅದು ಹಾಸ್ಯವಲ್ಲ, ನಮ್ಮ ತಂದೆ ಮದುವೆ ಮಾಡಿಕೊಳ್ಳುವುದು ನಿನಗೆ ಹಾಸ್ಯಾಸ್ಪದವಾಗಿ ತೋರಿತೇ ?"

ವಿಶ್ವನಾಥನಿಗೆ ಗೀತಳನ್ನು ಗೇಲಿ ಮಾಡಬೇಕೆನಿಸಿತು ಆದರೆ ಅವಳ ಸ್ವರೂಪ, ಧ್ವನಿ ಕೇಳಿ ಅವನು ಹಿಂಜರಿದ

"ಈ ವಯಸ್ಸಿನಲ್ಲಿ ಮದುವೆ "

"ಮದುವೆ ಮಾಡಿಕೊಳ್ಳೋಕೆ ವಯಸ್ಸು ಬೇರೆ ಇದೆಯೇನು ? ಮನಸ್ಸು ಬಂದಾಗ, ಹೃದಯ ಬಯಸಿದಾಗ, ಮದುವೆಯಾದರೆ ತಪ್ಪೇ ? ಎಂತೆಂತಹ ಮೇಧಾವಿಗಳು, ಪ್ರತಿಭಾಶಾಲಿಗಳು, ವಯಸ್ಸಾದ ಮೇಲೆ ಮದುವೆ ಮಾಡಿಕೊಂಡಿಲ್ಲವೆ ? ಅದೂ ಅಲ್ಲದೆ ಅಣ್ಣನಿಗೆ ಏನು ವಯಸ್ಸಾಗಿದೆ ? ನಿಮ್ಮಗಳ ಜೊತೆ ಇರುವಾಗ ಇವರು ವಯಸ್ಸಾದವರು ಎಂದು ಬೇರೆ ಮಾಡಿ ಹೇಳಲು ಸಹ ಸಾಧ್ಯವಿಲ್ಲ ಅವರಿಗಿರುವ ಉತ್ಸಾಹ, ಚಟುವಟಿಕೆ, ಆಸಕ್ತಿಯಲ್ಲಿ ನೂರರಲ್ಲೊಂದು ಪಾಲು ನಿಮಗೆ ಇಲ್ಲ. "

"ಹಾಗಲ್ಲ ಚಿಕ್ಕವಯಸ್ಸಿನಲ್ಲಿ ಮಾಡಿಕೊಳ್ಳದೇ ಈಗ ಇದ್ದಕ್ಕಿದ್ದ

ಹಾಗೆ ಮದುವೆ ”

“ಅವರಿಗೆ ಎಲ್ಲರಂತೆ ದೇಹಕ್ಕೆ ತಂಪು ನೀಡುವ ಸಂಗಾತಿ ಬೇಕಿರಲಿಲ್ಲ. ಆದುದರಿಂದ ಅವರಿಗೆ ಆಗ ಮದುವೆಯ ಅಗತ್ಯವಿರಲಿಲ್ಲ. ಈಗ ಅವರಿಗೆ ಆತ್ಮಗೆಳತಿ—ಸ್ಪಿರಿಚುಯಲ್ ಕಂಪೇನಿಯನ್ ಬೇಕಾಗಿದ್ದಾಳೆ ಅವರಿಗೆ ಬೇಕಾದ ಹುಡುಗಿ ಇದುವರೆಗೂ ಸಿಕ್ಕಿರಲಿಲ್ಲ ಈಗ ಸಿಕ್ಕಿದ್ದಾಳೆ.. ”

“ಯಾರು ಅಕೆ ?” ವಿಶ್ವನಾಥ ಕುತೂಹಲದಿಂದ ಕೇಳಿದ

“ನನ್ನ ಗೆಳತಿ ಪದ್ಮಿನಿ ”

“ಆಗ ರಜದಲ್ಲಿ ಬಂದಿದ್ದಾಗ ನಮ್ಮೊಡನೆ ಬಂದಿದ್ದಳಲ್ಲಾ, ಆ ಹುಡುಗಿಯೇ ? ತೆಳ್ಳಗೆ, ಬೆಳ್ಳಗೆ, ಲಕ್ಷಣವಾಗಿ ” –

ಆವೇಶಗೊಂಡಿದ್ದ ಗೀತ ಮತ್ಸರದಿಂದ ಅವನ ಮಾತನ್ನು ಅರ್ಧಕ್ಕೇ ಕತ್ತರಿಸಿದಳು.

“ನೀನೇನೂ ಅವಳನ್ನು ವರ್ಣಿಸಬೇಕಾಗಿಲ್ಲ ”

“ಮಗಳ ವಯಸ್ಸಿನ ಹುಡುಗಿಯೊಡನೆ ಎಂತಹ ಮದುವೆ !”

“ದೇಶ, ಕಾಲ, ಜಾತಿ, ವಯಸ್ಸು, ರೂಪ, ಈ ಕ್ಷುಲ್ಲಕ ವಸ್ತುಗಳನ್ನು ಪ್ರೇಮ ಮೆಟ್ಟಿ ನಿಂತಿದೆ.”

ಕೋಪದಿಂದ, ಸಂತಾಪದಿಂದ ಗೀತಳ ಮುಖ ಕೆಂಪಾಗಿತ್ತು.

ವಿಶ್ವನಾಥ ಮತ್ತೆ ಕುಹಕದಿಂದ ಕೇಳಿದ :

“ಆ ಮಗೂನ ನಿಮ್ಮ ತಂದೆ ಮದುವೆ ಮಾಡಿಕೊಳ್ಳುತ್ತಾರೆಯೇ ?”

“ಪದ್ಮಿನಿ ಮಗುವಲ್ಲ ಅವಳೂ ನನ್ನ ಓರಗೆಯವಳು ”

“ನೀನೇನು ಪ್ರಬುದ್ಧಳೂಂತಾ ತಿಳ್ಕೊಂಡಿದೀಯಾ ?”

“ಪದ್ಮಿನಿಗೆ ಅವಳ ಹಿತಾಹಿತದ ಅರಿವಿದೆ. ತಾನೆಲ್ಲಿ ಹೆಜ್ಜೆ ಇಡುತ್ತಿದೀನಿ ಎನ್ನುವುದು ಅವಳಿಗೆ ತಿಳಿದಿದೆ.”

“ನೀನು ಯಾಕೆ ಮಾವನ ಪರ ಇಷ್ಟೊಂದು ವಕೀಲಿ ಮಾಡುತ್ತಾ ಇದೀಯ, ಕಾರಣ ಏನು ?”

“ಕಾರಣ ಇರೋದರಿಂದಾನೇ ನಾನು ನಿನಗೆ ಅವರ ಮದುವೆಯ ವಿಚಾರ ತಿಳಿಸಿದ್ದು. ಇಲ್ಲದಿದ್ದರೆ ಅವರಿಗಿಂತಲೂ ಮುಂಚಿತವಾಗಿ ಅವರಿಗೆ ತಿಳಿಯದಂತೆ ಅವರ ಮದುವೆ ವಿಷಯವನ್ನು ನಾನು ನಿನಗೇಕೆ

ಹೇಳುತ್ತಿದ್ದೆ. "

"ಹಾಗಾದರೆ ಕಾರಣ ಹೇಳಿಬಿಡು" ವಿಶ್ವನಾಥ ಅಸಹನೆಯಿಂದ ಹೇಳಿದ

"ನಾನು ನಿನ್ನ ಪ್ರೀತಿಸುತ್ತೇನೆ "

"ಒನ್ಸ್ ಮೋರ್ !"

"ನಿನಗಿಂತಲೂ ಹೆಚ್ಚಾಗಿ ಅಣ್ಣನ್ನ ಪ್ರೀತಿಸುತ್ತೇನೆ ನಿನ್ನ ಸುಖ ಸಂತೋಷಕ್ಕಿಂತಲೂ ನಾನು ಅಣ್ಣನ ಸುಖ ಸಂತೋಷಕ್ಕೆ ಹೆಚ್ಚು ಬೆಲೆ ಕೊಡುತ್ತೇನೆ ಅವನಿಗೆ ಜೀವನದಲ್ಲಿ ಈಗ ದೊರೆಯಬಹುದಾಗಿರುವ ತೃಪ್ತಿ, ಶಾಂತಿಯನ್ನು ನಾವು ಕಸಿದುಕೊಳ್ಳಬಾರದು "

ಮಾತನಾಡುತ್ತಾ ಗೀತ ವಿಶ್ವನಾಥನ ಹತ್ತಿರ ಬಂದು ನಿಂತು ಕಳಕಳಿಯಿಂದ ಹೇಳಿದಳು—

"ನಾನೂ ಹೊರಟುಹೋದ ಮೇಲೆ ಈ ದೊಡ್ಡ ಮನೆಗೆಲ್ಲಾ ಅಣ್ಣ ಒಬ್ಬನೇ ಹೇಗೆ ಇರಬೇಕು ಯೋಚಿಸು ವಿಶ್ವನಾಥ ಅಮ್ಮ ಹೋದಾಗಿನಿಂದ ಅಣ್ಣ ಹೆಣ್ಣು ಹೃದಯದ ಸಹ ಸ್ವಭೂತಿ, ಅನುಕಂಪ ಇವುಗಳಿಂದ ದೂರವಾಗಿದ್ದಾನೆ ಅವನಿಗೆ ಶಾಂತಿ ಇಲ್ಲ, ತೃಪ್ತಿಯಿಲ್ಲ ಆಗಿನಿಂದ ಇದುವರೆಗೆ ಜೀವನದ ಬೆಂಗಾಡಿನಲ್ಲಿ ನೀರಿನ ಚಿಲುಮೆಯನ್ನು ಹುಡುಕುತ್ತಿದ್ದ. ನೀರಿನ ಚಿಲುಮೆಯೇನೋ ಸಿಕ್ಕಿದೆ—ಸ್ವಲ್ಪ ತಡವಾಗಿ ಈಗ ಆ ಸೌಖ್ಯ ನಾವು ಬೇಡವೆಂದು ಹೇಳುವುದು ಸರಿಯೇ "

"ಆದರೆ ಇದರಲ್ಲಿ ನನ್ನ ಪಾತ್ರವೇನೋ ತಿಳಿಯಲಿಲ್ಲ "

"ತಾನು ಮದುವೆಯಾಗುವುದರಿಂದ ನಮ್ಮಿಬ್ಬರಿಗೂ ಹಾನಿ, ನಷ್ಟ ಎಂದು ಅಣ್ಣ ಭಾವಿಸಿದ್ದಾನೆ ನಮ್ಮಿಬ್ಬರಲ್ಲಿ ಯಾರಾದರೂ ಒಬ್ಬರು ಈ ಮದುವೆಗೆ ಒಪ್ಪದಿದ್ದರೂ ಅಣ್ಣ ತನಗೆ ಒಲಿದುಬಂದಿರುವ ಹೆಣ್ಣನ್ನು ನಿರಾಕರಿಸಲು ಸಿದ್ಧನಿದ್ದಾನೆ ನನ್ನ ಅಭಿಪ್ರಾಯವನ್ನು ಈಗ ಮೂರು ದಿನಗಳ ಹಿಂದೆ ಕೇಳಿದ ಅಣ್ಣ ನಮ್ಮ ಒಪ್ಪಿಗೆ ಪಡೆಯುವ ಅವಶ್ಯಕತೆಯೇನೂ ಇರಲಿಲ್ಲ. ಆದರೆ ಅವನದು ತುಂಬಾ ಸೂಕ್ಷ್ಮ ಮನಸ್ಸು. ನಮ್ಮಿಬ್ಬರಲ್ಲಿ ಯಾರು ಒಪ್ಪದಿದ್ದರೂ ಅವನ ಹೃದಯ ಚೂರಾಗುತ್ತದೆ. ಆದರೂ ಅಣ್ಣ ಧೈರ್ಯವಾಗಿ ಅದನ್ನು ಲಕ್ಷಿಸುವುದಿಲ್ಲ. ಅವನ ಮದುವೆಗೆ

ನಾನು ಸಂತೋಷದಿಂದ ಒಪ್ಪಿಗೆ ಕೊಟ್ಟಿದ್ದೇನೆ ಈಗ ನಿನ್ನ ಒಪ್ಪಿಗೆ ಕೇಳು ವುದಕ್ಕಾಗಿ ಅಣ್ಣ ನಿನ್ನ ಕರೆಸಿಕೊಂಡಿದ್ದಾನೆ ನೀನು ಅವನ ಮದುವೆಗೆ ಒಪ್ಪುತ್ತೀಯೆಂದು ನಾನು ನಂಬಿದ್ದೇನೆ."

ವಿಶ್ವನಾಥ ಕ್ಷಣಕಾಲ ಸುಮ್ಮನಿದ್ದು ಹೇಳಿದ :

"ನನ್ನ ಸ್ಪಷ್ಟ ಅಭಿಪ್ರಾಯ ಏನೆಂದರೆ ಮಾವ ಈ ವಯಸ್ಸಿನಲ್ಲಿ ಆ ಚಿಕ್ಕ ಹುಡುಗಿಯನ್ನು ಮದುವೆಯಾಗುವುದು ಇಷ್ಟವಿಲ್ಲ ಮುಂದೆ ಮನೆ ತನಕ್ಕೆ ಅವಳಿಂದ ಕೆಟ್ಟ ಹೆಸರು ಬರಬಾರದು "

"ಬಾಯಿ ಮುಚ್ಚು "

"ನನ್ನ ಅಭಿಪ್ರಾಯವನ್ನು ನಾನು ಹೇಳ್ತಿದೀನಿ ಮಾವ ನನ್ನ ಕೇಳಿದರೂ ಈ ಅಭಿಪ್ರಾಯವನ್ನೇ ಹೇಳುತ್ತೇನೆ ಎರಡನೆಯದಾಗಿ ಅವರ ಮದುವೆಯಿಂದ ನಮಗೆ ನಿಜವಾಗಿಯೂ ನಷ್ಟವಿದೆ "

"ಸ್ವಾರ್ಥಿ ನೀನು ಅಣ್ಣನಿಂದ ಬರಬಹುದಾಗಿರುವ ಆಸ್ತಿಗಾಗಿ ಇಷ್ಟೊಂದು ಕೀಳಾಗಬೇಡ ವಿಶ್ವನಾಥ ನನಗೆ ನಿನ್ನಲ್ಲಿ ತುಂಬಾ ಗೌರವ ವಿದೆ ನಿನ್ನ ಮಾತುಗಳಿಂದ ಅದನ್ನು ಕೊಲ್ಲಬೇಡ "

"ಭಾವುಕತೆಗಿಂತಲೂ ವ್ಯವಹಾರಕ್ಕೆ ನಾನು ಹೆಚ್ಚು ಮನ್ನಣೆ ಕೊಡು ತ್ತೇನೆ "

ಗೀತ ಅತ್ಯಂತ ದೈನ್ಯದಿಂದ ಹೇಳಿದಳು

"ನನಗಾಗಿ ನನಗಾಗಿ ಒಪ್ಪಿಕೋ "

"ಸಾಧ್ಯವಿಲ್ಲ" ಎನ್ನುವಂತೆ ವಿಶ್ವನಾಥ ತಲೆ ಅಲುಗಿಸಿದ

"ನನಗಾಗಿ ನನ್ನ ಮೇಲೆ ನಿನಗೆ ಪ್ರೀತಿ ಇಲ್ಲವೇ ?"

"ಇದೆ."

"ನನಗೋಸ್ಕರ "

ವಿಶ್ವನಾಥ ಸುಮ್ಮನಿದ್ದ.

ಅವನ ಮೌನ ನೋಡಿ ಗೀತ ಕೆರಳಿದಳು ಅವಳ ದೈನ್ಯ, ದುಃಖ ಮರೆಯಾಗಿ ಕೋಪ, ರೋಷ ಆದರ ಸ್ಥಾನವನ್ನು ಆಕ್ರಮಿಸಿದವು. ಅವಳು ವಿಶ್ವನಾಥನಿಂದ ದೂರ ಸರಿದು ಕಠಿಣ ದನಿಯಿಂದ ಹೇಳಿದಳು.

"ಒಂದು ಪಕ್ಷ....ಒಂದು ಪಕ್ಷ ..ನೀನೊಪ್ಪಿಕೊಳ್ಳದಿದ್ದರೆ...."

"ಹುಂ—ಏನು ?"
"ನನ್ನ, ನಿನ್ನ ಮದುವೆ ಈ ಜನ್ಮದಲ್ಲಿ ಸಾಧ್ಯವಿಲ್ಲ "
"ಗೀತಾ !" ವಿಶ್ವನಾಥ ಎದ್ದು ನಿಂತು ಮುಂದೆ ಬಂದ.
ಗೀತ ಹಿಂದೆ ಸರಿದು ದರ್ಪದಿಂದ ಹೇಳಿದಳು :
"ನೀನು ನನ್ನ ಹತ್ತಿರ ಬರಬೇಡ "
"ನೀನು ಹೀಗೆ ಹೇಳಿದರೆ ನಾನೇನು ಮಾಡಲಿ ಗೀತ ?"

"ಎಳೆಯರಾದ ನಾವು ಜೀವನದ ಅರ್ಧ ಆಯಸ್ಸನ್ನು ಈಗಾಗಲೇ ಕಳೆದಿರುವ ಮಾವನಿಗಾಗಿ ನಮ್ಮ ಸುಖವನ್ನು ಬಲಿಕೊಡಬೇಕೇ ? ಯೋಚಿಸು ಗೀತಾ, ದುಡುಕಬೇಡ "

"ನಾನೆಲ್ಲಾ ಯೋಚನೆ ಮಾಡಿದ್ದೇನೆ "

"ನೀನು ಹೀಗೆ ಹೇಳುವುದರಿಂದ ನನಗೆಷ್ಟು ನೋವಾಗಿದೆ ಬಲ್ಲೆಯಾ?"

"ನೀನಿನ್ನೂ ಚಿಕ್ಕವನು ಎಳೆಯ ಹೃದಯಕ್ಕಾದ ಗಾಯ, ನೋವು ಬೇಗ ಮಾಯುತ್ತದೆ ಆದರೆ ಅಣ್ಣ ಮಧ್ಯವಯಸ್ಸಿನವರು ಅವರಿಗೆ ಗಾಯವಾದರೆ ಅದು ಮಾಯುವುದೇ ಇಲ್ಲ ಒಂದೆರಡು ದಿನ ನನ್ನ ನೆನಪು ನಿನ್ನ ಕಾಡಬಹುದು ಆದರೆ ದಿನಗಳೆದಂತೆ ನೀನು ನನ್ನ ಮರೆಯುತ್ತೀಯ. ಹೊಸ ಹುಡುಗಿಯೊಬ್ಬಳ ಕೈಹಿಡಿದು ಅವಳ ಸಾನಿಧ್ಯದಲ್ಲಿ ಎಲ್ಲವನ್ನೂ ನೀನು ಮರೆಯಬಹುದು ಜೀವನದಿಂದ ಸಂತೋಷ ಹೀರಲು ನಿನಗೆ ಬಹಳ ಅವಕಾಶವಿದೆ ಆದರೆ ಅಣ್ಣನಿಗೆ ಇನ್ನು ಅವಕಾಶವೇ ಇಲ್ಲ "

ಗೀತಾ ಎಷ್ಟು ಹಠವಾದಿ, ಖಂಡಿತವಾದಿ ಎಂಬುದು ವಿಶ್ವನಾಥನಿಗೆ ತಿಳಿದಿತ್ತು ಆದುದರಿಂದಲೇ ಅವಳ ಮಾತು ಕೇಳಿ ಅವನು ಮೊದಲು ಗಾಬರಿಯಾದ. ಆಮೇಲೆ ಅವಳ ಮಾತಿನ ಧೋರಣೆ, ದರ್ಪ ನೋಡಿ ಕ್ರೋಧ ಅವನಲ್ಲೂ ಹೆಡೆಯಾಡಿಸಿತು

ಗೀತಾ ತನ್ನನ್ನು ಮದುವೆಯಾಗದಿದ್ದರೆ ತನಗೆಲ್ಲೂ ಹೆಣ್ಣು ದೊರೆಯುವುದಿಲ್ಲವೇ ? ಪ್ರಪಂಚದಲ್ಲಿ ತಾನೊಬ್ಬಳೇ ರೂಪವತಿ ಎಂದು ತಿಳಿದು ಕೊಂಡಿರುವ ಹಾಗಿದೆ. ತನ್ನನ್ನು ಹೆದರಿಸಿ ದಾರಿಗೆ ತರುತ್ತೇನೆಂದು ಭಾವಿಸಿ ಇದ್ದಾಳೇನೋ ?

ಗೀತ ಗೋಡೆಗೊರಗಿ ವಿಶ್ವನಾಥನನ್ನೇ ನೋಡುತ್ತಾ ನಿಂತಿದ್ದಳು ಅವಳು ಒಂದು ಬಾರಿ ಅವನನ್ನು ದೈನ್ಯದಿಂದ ಕೋರಿ ಅವನು ತಿರಸ್ಕರಿಸಲು ತತ್‌ಕ್ಷಣ ಕೆರಳಿದ ಹಾವಿನಂತಾಗಿದ್ದಳು. ಒಂದು ಪಕ್ಷ ಗೀತ ಅಷ್ಟು ಬೇಗ ಸಹನೆ ಕಳೆದುಕೊಳ್ಳದೇ ಮತ್ತೆರಡು ಬಾರಿ ಯಾಚಿಸಿದ್ದರೆ ಅವನು ಬಗ್ಗುತ್ತಿದ್ದನೇನೋ ಹೇಳಬೇಕಾದುದನ್ನೆಲ್ಲಾ ಹೇಳಿಯಾಯಿತು ಇನ್ನು ಪುನಃ ಹಿಂದೆ ಹೋಗುವುದು, ತಾನೇ ಬಗ್ಗುವುದು ಎಂದಿಗೂ ಸಾಧ್ಯವಿಲ್ಲ

ವಿಶ್ವನಾಥ ವ್ಯಂಗ್ಯವಾಗಿ ನಕ್ಕು ಹೇಳಿದ :

"ಏನು ನನ್ನ ಹೆದರಿಸುತ್ತೀನೆಂದು ಭಾವಿಸಿದ್ದೀಯಾ ?"

ಗೀತಾ ಶಾಂತಳಾಗಿ ಹೇಳಿದಳು "ನೀನು ಜಗತ್ತು ಕಂಡ ಆರು ವರ್ಷಗಳ ಮೇಲೆ ಜಗತ್ತನ್ನು ಪ್ರವೇಶಿಸಿದ ನಾನು, ಎಂ ಎಸ್ ಸಿ ಯಲ್ಲಿ ರ್‍ಯಾಂಕ್ ಪಡೆದು ಡಾಕ್ಟರೇಟ್ ಡಿಗ್ರಿಗಾಗಿ ಪ್ರಯತ್ನಿಸುತ್ತಿರುವ ನಿನ್ನನ್ನು, ಕಾಲೇಜಿನ ವಾಗ್ಮಿ ಎಂದು ಹೆಸರು ಪಡೆದಿರುವ ನಿನ್ನನ್ನು, ಹೆದರಿಸಲು ಸಾಧ್ಯವೇ ? ನಾನು ನಿನ್ನನ್ನು ಹೆದರಿಸುತ್ತಿಲ್ಲ ಯಥಾರ್ಥವನ್ನು ತಿಳಿಸಿದ್ದೇನೆ "

"ಇದೇ ನಿನ್ನ ಕೊನೆಯ ಮಾತೇ ?"

ಗೀತಳಿಗೆ ಗಂಟಲು ಗದ್ಗದಿತವಾಯಿತು ತನ್ನ ದೌರ್ಬಲ್ಯವನ್ನು ಅವನೆದುರಿಗೆ ತೋರಗೊಡಬಾರದೆಂದು ಅವಳು ಮಾತನಾಡದೆ ತಲೆ ಅಲುಗಿಸಿದಳು. ಕಣ್ಣಿನಿಂದ ಕಂಬನಿ ಕೆನ್ನೆಯ ಮೇಲೆ ಉರುಳುವ ಮುನ್ನ ಗೀತ ಗೋಡೆಯ ಕಡೆ ತಿರುಗಿಕೊಂಡಳು

ವಿಶ್ವನಾಥ ರೂಮಿನ ಬಾಗಿಲನ್ನು ತೆಗೆದು ಅದನ್ನು ಮತ್ತೆ ರಪ್ಪೆಂದು ಮುಚ್ಚಿ ಧಡಧಡನೆ ಮೆಟ್ಟಿಲಿಳಿದ. ಹಾಲಿನ ಗಡಿಯಾರ ಒಂಭತ್ತು ಗಂಟೆಯನ್ನು ತೋರಿಸುತ್ತಿತ್ತು. ಆಫೀಸಿನಿಂದ ಮೂರ್ತಿ ಇನ್ನೂ ಮನೆಗೆ ಬಂದಿರಲಿಲ್ಲ.

ವಿಶ್ವನಾಥ ಏಟು ತಿಂದ ಪಶುವಿನಂತೆ ಕಾಂಪೌಂಡಿನಲ್ಲಿ ಅಲೆದಾಡಿದ ಒಂದಾದ ಮೇಲೊಂದರಂತೆ, ಕೊಂಡಿ ಮುರಿಯದಂತೆ ಸಿಗರೇಟನ್ನು ಸೇದಿ ತುಂಡುಗಳನ್ನು ಬಿಸಾಡಿದ.

ಹೊರಗೆ ಬೀಸುತ್ತಿದ್ದ ತಂಗಾಳಿಯ ತಂಪಿನಿಂದಾಗಿ ಕಾವೇರಿದ್ದ

ದೇಹ, ಮನಸ್ಸು ಕೊಂಚ ಬಿಸಿಯಾಯಿತು ಮನಸ್ಸು ಕೊಂಚ ಸ್ಥಿಮಿತಕ್ಕೆ ಬಂದಮೇಲೆ ಅಲ್ಲಿಯೇ ಇದ್ದ ಕಲ್ಲುಬೆಂಚೊಂದರ ಮೇಲೆ ಕುಳಿತು ಮತ್ತೊಂದು ಸಿಗರೇಟನ್ನು ಹತ್ತಿಸಿದ

ಸ್ವಲ್ಪ ಹೊತ್ತಿನ ಹಿಂದೆ ಗೀತಳೊಡನೆ ತಾನಾಡಿದ ಮಾತುಗಳನ್ನು ಮತ್ತೆ ಮನಸ್ಸಿನಲ್ಲಿಯೇ ಮೆಲುಕುಹಾಕಿದ.

ಬಾಲ್ಯದಿಂದಲೂ ಗೀತಳೇ ತನ್ನ ಬಾಳ ಗೆಳತಿ ಎಂಬ ಭಾವನೆಯನ್ನು ಬೆಳಸಿಕೊಂಡಿದ್ದ ವಿಶ್ವನಾಥನಿಗೆ ಇನ್ನುಮುಂದೆ ಗೀತ ತನಗೇನೂ ಅಲ್ಲ ಎಂದು ಯೋಚಿಸಿದಾಗ ಗಾಬರಿಯಾಯಿತು

ಮಾತುಮಾತಿಗೆ ಇಬ್ಬರೂ ಜಗಳವಾಡಿ ಒಬ್ಬರಮೇಲೊಬ್ಬರು ರೇಗಾಡಿ ಬಿಡುತ್ತಿದ್ದರು. ಇಬ್ಬರಲ್ಲಿ ಯಾರೂ ಸೋಲುತ್ತಿರಲಿಲ್ಲ ಸ್ವಲ್ಪಕಾಲ ಮೌನವಾಗಿ ಒಬ್ಬರನ್ನೊಬ್ಬರು ದ್ವೇಷಿಸಿದ ನಂತರ ವಿಶ್ವನಾಥ,

"ಗೀತಾ" ಎಂದು ಕೂಗಿಕೊಂಡು ಹೋಗುತ್ತಿದ್ದ ಅವಳೂ ಹಿಂದ್ಯಾಗಿದ್ದ ಜಗಳವನ್ನೆಲ್ಲಾ ಮರೆತು ಅವನ ಕರೆಗೆ ಓಗೊಡುತ್ತಿದ್ದಳು

ಆದರೆ ಇಂದಿನ ಜಗಳ ಎಂದಿನಂತಿರಲಿಲ್ಲ

ಅವಳ ಮಾತಿನಿಂದಾಗಿ ಅವರ ಬಾಳದಿಕ್ಕುಗಳೇ ಕವಲೊಡೆಯುವುದ ರಲ್ಲಿತ್ತು

ಇನ್ನು ಮುಂದೆ ಗೀತಾ ತನಗೇನೂ ಅಲ್ಲ !

ಹುಂ ಇವಳೊಬ್ಬಳೇ ಏನು ಇರೋದು ಮನಸ್ಸು ಮಾಡಿದರೆ ಇವಳ ಹತ್ತರಷ್ಟು ಸುಂದರಿಯಾಗಿರುವ ಹುಡುಗಿಯು ಕೈಹಿಡಿಯುಬಲ್ಲೆ

ಆದರೆ ಆದರೆ ಗೀತಾ ?

ಇನ್ಯಾಕೆ ಅವಳ ಯೋಚನೆ ನನಗಿಂತಲೂ ಅವಳಿಗೆ ಅವಳ ಅಪ್ಪನ್ನ ಕಂಡರೆ ಪ್ರೀತಿಯಿದೆ ಮದುವೆ ಮಾಡಿಕೊಳ್ಳುವುದಿಲ್ಲಾಂತ ಹೇಳಿಬಿಟ್ಟರೆ ತನ್ನ ಕಾಲಮೇಲೆ ಬಿದ್ದು ಕ್ಷಮಾಪಣೆ ಕೇಳಿಕೊಳ್ಳುತ್ತೀನೀಂತ ತಿಳ್ಕೊಂಡಿದ್ದ ಳೇನೋ . ?

ಆದರೆ ಅವಳು ತನಗೇನೂ ಅಲ್ಲವೇ ?

ಅಲ್ಲ ಅಲ್ಲ.

ಗೀತಾ,...ಮಾವನ ಮಗಳು... ಜಗಳಗಂಟಿ ಗೀತಾ....ವಿಶ್ವನಾಥನ

ಗೀತಾ ಅಮ್ಮನ ಅಚ್ಚುಮೆಚ್ಚಿನ ಗೀತಾ....

ಬೆರಳುಗಳನ್ನು ಸುಟ್ಟ ಸಿಗರೇಟನ್ನು ವಿಶ್ವನಾಥ ರೊಯ್ಯನೆ ಪೊದೆಯೊಂದರ ಮೇಲೆ ಬೀಸಿ ಎಸೆದ

ಅವಳು ಮದ್ದು—ನಾನು ಬೆಂಕಿ

ಚಿನಕುರುಳಿಗೆ ಬೆಂಕಿಯುಟ್ಟು ಹತ್ತಿಸಿದ ಎರಡು ಕ್ಷಣ ವಾತಾವರಣವೆಲ್ಲ ಅಲ್ಲೋಲಕಲ್ಲೋಲ ಅದರ ಸದ್ದಿನಿಂದಾಗಿ "ಆಮೇಲೆ? ಬರಿಯ ಶೂನ್ಯ ಏನೇನೂ ಇಲ್ಲ ತಾವಿಬ್ಬರೂ ಯಾವಾಗಲೂ ಹಾಗೆ ಒಂದು ಸಣ್ಣ ಮಾತಿಗೆಲ್ಲಾ ಮಕ್ಕಳಂತೆ ಜಗಳವಾಡಿಬಿಡುವುದು ಆದರೆ ಅದು ಮಕ್ಕಳ ಜಗಳ ಅಷ್ಟೆ ಎರಡೇ ನಿಮಿಷಗಳಲ್ಲಿ ಮತ್ತೆ ಪರಸ್ಪರ ಸ್ನೇಹ ಬಯಸಿ ಒಂದುಗೂಡುವುದು

ಮನೆಯೊಳಗಿನಿಂದ ಗಡಿಯಾರ ಹತ್ತು ಗಂಟೆ ಹೊಡೆದ ಸದ್ದು ಕೇಳಿಸಿತು ವಿಶ್ವನಾಥ ಯೋಚನೆಗಳನ್ನೆಲ್ಲಾ ಕೊಡವಿ ಮನೆಯೊಳಗೆ ಕಾಲೆಳೆದುಕೊಂಡು ಹೊರಟ ತಲೆ ಎತ್ತಿ ಗೀತಳ ರೂಮಿನ ಕಡೆ ನೋಡಿದ· ಅವಳ ರೂಮಿನಲ್ಲಿನ್ನೂ ದೀಪ ಉರಿಯುತ್ತಿತ್ತು

ಸದ್ದು ಮಾಡದೆ ವಿಶ್ವನಾಥ ಮಹಡಿಯ ಮೆಟ್ಟಿಲುಗಳನ್ನೇರಿದ ಅವಳ ರೂಮಿನ ಬಾಗಿಲು ಮುಚ್ಚಿತ್ತು ವಿಶ್ವನಾಥ ಮೆಲ್ಲನೆ ಬಾಗಿಲು ತಳ್ಳಿದ ಬಾಗಿಲು ತೆಗೆದುಕೊಂಡಿತು ಗೀತಾ ಮೇಜಿನ ಮುಂದೆ ಕುಳಿತು ಬರೆಯುತ್ತಿದ್ದಳು

ವಿಶ್ವನಾಥ ರೂಮಿನೊಳಗೆ ಸದ್ದಿಲ್ಲದೆ ಬಂದುದನ್ನು ನೋಡಿ ಗೀತಾ ಬೆಚ್ಚಿ ಎದ್ದು ನಿಂತಳು ಅವನ ಆಗಮನ ಅವಳಿಗೆ ಅನಿರೀಕ್ಷಿತವಾಗಿತ್ತು. ತಾನು ಬರೆಯುತ್ತಿದ್ದ ಹಾಳೆಗಳನ್ನು ತಟ್ಟನೆ ಮೇಜಿನ ಮೇಲಿನಿಂದ ಎತ್ತಿ ಬೆನ್ನಿನ ಹಿಂದುಗಡೆ ಅವಿತಿಸಿಟ್ಟಳು

ವಿಶ್ವನಾಥ ಬಾಗಿಲಿನಲ್ಲಿಯೇ ನಿಂತು ಅರೆಕ್ಷಣ ನೋಡಿ,

"ಒಳಗೆ ಬರಬಹುದೇ ?" ಎಂದ

"ತಮ್ಮಿಷ್ಟ ತಮಗೆ ಬನ್ನಿ, ಬರಬೇಡಾಂತ ಹೇಳೋಕೆ ನಾನು ಯಾರು ?"

"ತಾವು, ತಮಗೇಂತ ಇದೇನು ಇಷ್ಟೊಂದು ಮರ್ಯಾದೆ ?"

"ಅಸ್ತ್ರೀಯತೆ, ಸಲಿಗೆ ಇಲ್ಲದವರಲ್ಲಿ ಮರ್ಯಾದೇನೆ ತೋರಿಸಬೇಕಾಗುತ್ತದೆ ?

ವಿಶ್ವನಾಥ ಕ್ಷಣಕಾಲ ಸುಮ್ಮನಿದ್ದು "ಗೀತಾ" ಎಂದ.

ಗೀತ ತಲೆ ಎತ್ತಿ ಅವನ ಕಡೆ ನೋಡಿದಳು

"ನಾನಾಡಿದ ಮಾತುಗಳನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ನಿನ್ನ ಮಾತುಗಳನ್ನು ನೀನೂ ವಾಪಸ್ಸು ತೆಗೆದುಕೊಳ್ಳುವೆಯಾ ?"

"ನಿನಗೆ ಅಣ್ಣನ ಆಸ್ತಿ ತಾನೇ ಬೇಕಾಗಿರುವುದು ? ನಾನು ಅಣ್ಣನಿಗೆ ಹೇಳಿ ಅವರ ಆಸ್ತಿಯಲ್ಲಿ ಅರ್ಧವನ್ನು ನಿನಗೆ ಕೊಡಿಸುತ್ತೇನೆ."

"ನಿನ್ನ ಮಾತು ಸತ್ಯವೋ ?"

"ಸತ್ಯ ಅಣ್ಣಾ,ಪದ್ಮಿನಿಯರನ್ನು ಒಪ್ಪಿಸುವುದು ನನಗೇನೂ ಕಷ್ಟವಿಲ್ಲ"

"ಅರ್ಧ ಆಸ್ತಿ ಕೊಡಿಸುವುದು ಖಂಡಿತ"

ಗೀತಾ ಹುಬ್ಬುಗಂಟಿಕ್ಕಿ "ನನ್ನಲ್ಲಿ ನಂಬಿಕೆ ಇಲ್ಲವೆ ?" ಎಂದಳು

"ಆಮೇಲೆ ನೀನು ಆಗೋದಿಲ್ಲ ಎನ್ನಬಾರದು"

"ಒಂದು ಮಾತನ್ನು ಸಾವಿರ ಸಲ ಹೇಳುವುದು ನನಗಿಷ್ಟವಿಲ್ಲ. ಇನ್ನು ತಾವು ದಯಮಾಡಿದರೆ ನಾನು ಧನ್ಯಳು "ಎನ್ನುತ್ತಾ ಗೀತ ಕಿಟಕಿಯ ಬಳಿ ಹೋಗಿ ನಿಂತು ಆಚೆ ತೇಲುತ್ತಿದ್ದ ಮೋಡವನ್ನು ನೋಡತೊಡಗಿದಳು.

ವಿಶ್ವನಾಥ ಹಿಂದಿನಿಂದ ಹೋಗಿ ಅವಳ ಕೈ ಹಿಡಿದು "ಗೀತಾ"ಎಂದ

"ಎಷ್ಟು ಧೈರ್ಯ ನಿನಗೆ ನನ್ನ ಕೈ ಹಿಡಿಯೋಕೆ ? ಪರಸ್ತ್ರೀಯರನ್ನ ಮುಟ್ಟೋಕೆ ನಾಚಿಕೆಯಾಗುವುದಿಲ್ಲವೇ ?"

ವಿಶ್ವನಾಥ ನಗುತ್ತಾ"ಮಾವನಿಗೆ ಹೇಳಿ ನನಗೆ ಅರ್ಧ ಆಸ್ತಿ ಕೊಡಿಸುತ್ತೇನೆಂದು ಹೇಳಿದ್ದೆಯಲ್ಲಾ,ಮರೆತುಹೋಯಿತೇ ?" ಎಂದ.

"ಸರಿ ಆದರೆ."

"ಮಾವನಿಂದ ನನಗೆ ಇದೊಂದು ಆಸ್ತಿ ಸಾಕು. ಉಳಿದದ್ದನ್ನು ಅವರೇ ಇಟ್ಟುಕೊಳ್ಳಲಿ ಇನ್ನು ಅರ್ಥವಾಗಲಿಲ್ಲವೇನೇ ನನ್ನ ಮಾತು ?"

"ಓಹ್!" ವಿಶ್ವನಾಥನನ್ನೇ ನೆಟ್ಟನೋಟದಿಂದ ನೋಡುತ್ತಿದ್ದ ಅವಳ ಕಣ್ಣುಗಳು ಕೆಳಕ್ಕಿಳಿದುವು.

ವಿಶ್ವನಾಥ ಕೇಳಿದ .

"ಗೀತಾ, ನಿನ್ನ ಬಿಟ್ಟುಬಿಡೋದು ನನಗೆ ಅಷ್ಟೊಂದು ಸುಲಭವಾಗಲಿಲ್ಲ ಈ ರೂಮಿನಿಂದ ರೋಷಗೊಂಡು ಹೊರಟಾಗ ನಿನ್ನ ಬಿಡೋದು ಅಂಗಿ ಕಳಚಿದಷ್ಟು ಸುಲಭ ಎಂದುಕೊಂಡಿದ್ದೆ ಅಂಗಿಯಾದರೆ ಸುಲಭವಾಗಿ ಕಳಚಬಹುದು ಆದರೆ ಚರ್ಮ ಸುಲಿಯುವುದು ಕಷ್ಟ ಅಲ್ಲವೇ?"

ಗೀತಾ "ಹೂಂ "ಎಂದಳು

"ಆದರೆ ಆದರೆ ನೀನು ಮಾತ್ರ ಎಷ್ಟು ಸುಲಭವಾಗಿ ನನ್ನ ಒದರಿ ಬಿಟ್ಟೆ ಗೀತಾ ? ನಿನಗೆ ಅದು ಹೇಗೆ ಸಾಧ್ಯವಾಯಿತು ?"

"ನನಗೂ ಸುಲಭವಾಗಿರಲಿಲ್ಲ ನೋಡು ಅದಕ್ಕೆ ದಾಖಲೆ " ಎನ್ನುತ್ತಾ ಗೀತಾ ಕೈಲಿ ಹಿಡಿದಿದ್ದ ಹಲವಾರು ಪುಟಗಳನ್ನು ತೋರಿಸಿದಳು.

"ಏನು ಬರೆದಿದೀಯ ?"

"ನಿನಗೆ ಕಾಗದ ಬರೆದಿದ್ದೇನೆ "

"ಎಲ್ಲಿ ಕೊಡು ನೋಡೋಣ" ವಿಶ್ವನಾಥ ಅವಳಿಂದ ಕಾಗದಗಳನ್ನು ಕಸಿಯಲು ನೋಡಿದ

"ಊಹೂ ಕೊಡೋದಿಲ್ಲ "

"ನನಗೆ ತಾನೆ ಬರೆದಿರೋದು ? ಕೊಡಲು ಅಡ್ಡಿ ಏನು ?"

"ತುಂಬಾ ಹುಚ್ಚು ಹುಚ್ಚಾಗಿ ಬರೆದಿದ್ದೇನೆ ಗುಡುಗು, ಸಿಡಿಲು, ಮಿಂಚು, ಮಳೆ, ತಂಗಾಳಿ, ಬಿರುಗಾಳಿ, ವಿಷ, ಅಮೃತ, ಸಾವು, ಬದುಕು ಎಲ್ಲಾ ಇದೊಂದು ಕಾಗದದಲ್ಲಿದೆ ಇನ್ನೂ ಪೂರ್ತಿ ಮಾಡೇ ಇಲ್ಲ ಅಷ್ಟರಲ್ಲಿ ನೀನು ಬಂದೆ "

"ಪೂರ್ತಿ ಮಾಡಿ ಕೊಡ್ತೀಯಾ ?"

"ಇಲ್ಲ ಅದನ್ನು ಪೂರ್ಣಗೊಳಿಸುವುದೇ ಇಲ್ಲ "

"ಯಾಕೆ ?"

"ಅದರ ಅಗತ್ಯವಿಲ್ಲ. ನಿನ್ನ ಹತ್ತಿರ ಕಡ್ಡಿ ಪೆಟ್ಟಿಗೆ ಇದೆಯಾ ?"

ವಿಶ್ವನಾಥ ಜೇಬಿನಿಂದ ಕಡ್ಡಿ ಪೆಟ್ಟಿಗೆಯನ್ನು ತೆಗೆದು ಅವಳ ಕೈಗೆ ಕೊಟ್ಟ ಗೀತ ಕಾಗದದ ಹಾಳೆಗಳಿಗೆ ಬೆಂಕಿ ತೋರಿಸಿದಳು ಕಾಗದ ಧಗ್ಗನೆ ಹತ್ತಿಕೊಂಡಿತು.

ಇಬ್ಬರೂ ಮೇಜಿನ ಮೇಲೆ ಎದ್ದ ಸಣ್ಣ ಉರಿಯನ್ನು ನೋಡುತ್ತಾ

ನಿಂತರು ವಿಶ್ವನಾಥ ಅವಳ ಕೈ ಹಿಡಿದು,

"ಅಗ್ನಿಸಾಕ್ಷಿಯಾಗಿ ಕೈಹಿಡಿದುಕೊಂಡದ್ದೂ ಆಯಿತು" ಎಂದ.

ಗೀತಾ ಬದಲು ಹೇಳದೆ ನಕ್ಕಳು.

"ಮಾವ ಯಾಕೆ ಇಷ್ಟು ಹೊತ್ತಾದರೂ ಬರಲಿಲ್ಲ "

ಗೀತ ಹಿಂದೆ ಸರಿದು ಮುಖ ಸಿಂಡರಿಸಿ "ಥೂ ಸಿಗರೇಟಿನ ವಾಸನೆ" ಎಂದಳು

ವಿಶ್ವನಾಥ ತಪ್ಪಿತಸ್ಥನಂತೆ "ಏನು ಮಾಡಲಿ, ಇದೊಂದು ಚಟ ಬಿಡೋಕಾಗಿಲ್ಲ" ಎಂದ

"ಮದುವೆ ಆದ ಮೇಲೆ ಇವುಗಳಿಗೆಲ್ಲ ಪೂರ್ಣವಿರಾಮ ಕೊಟ್ಟುಬಿಡಬೇಕು ಇಲ್ಲದಿದ್ದರೆ ನಾನು ಹತ್ತಿರ ಸೇರಿಸೋದಿಲ್ಲ. ಒಂದು ದಿನಕ್ಕೆ ಎಷ್ಟು ಸಿಗರೇಟು ಸೇದುತ್ತೀಯ ?"

"ನಾಲ್ಕು ಅಥವಾ ಐದು "

"ಈಗ ಎಷ್ಟು ಸೇದಿ ಬಂದೆ ?"

"ಲೆಕ್ಕ ಇಡಲಿಲ್ಲ ಸುಮಾರು ಇಪ್ಪತ್ತು ಸಿಗರೇಟುಗಳನ್ನು ಸೇದಿರಬಹುದು."

"ಅಬ್ಬ ! ಅಷ್ಟೊಂದು ಯಾಕೆ ಸೇದಬೇಕಾಗಿತ್ತು ?"

"ಸಿಗರೇಟಿನ ಹೊಗೆಯ ಮೂಲಕ ನಿನ್ನನ್ನೂ ಶ್ವಾಸಕೋಶಗಳಿಂದ ಆಚೆ ಕಳಿಸಿ ಬಿಡೋಣಾಂತ ನೋಡಿದೆ. ಆದರೆ ನೀನು ಮೊಂಡು ಅಲ್ಲಿಂದ ಮಿಸುಕಾಡಿದರೆ ಸರಿ "

"ಇವತ್ತಿಗಾಯಿತು ನಾಳೆಯಿಂದ ದಿನಕ್ಕೊಂದು ಸಿಗರೇಟಿನಂತೆ ಕಡಿಮೆ ಮಾಡುತ್ತಾ ಹೋಗಬೇಕು ತಿಳಿಯಿತೇ ?"

"ಕಷ್ಟ ಆಗತ್ತೆ ನಂಗೆ "

"ಖಾಯಿಲೆ ತಂದುಕೊಂಡರೆ ಅದು ಸುಖವೇನೋ ? ಸಿಗರೇಟಿನ ಬದಲು ಎರಡು ಲೋಟ ಹಾಲು ಹೆಚ್ಚಾಗಿ ಕುಡಿ "

"ಅಥವಾ ಎರಡು ಮುತ್ತು ಹೆಚ್ಚಾಗಿ ಕೊಡು ಎನ್ನಬಾರದೇ ?"

"ಪ್ರಯತ್ನಪಡುತ್ತೀಯಾ ?"

"ಸ್ವಲ್ಪವೂ ಕರುಣೆ ತೋರಿಸುವುದಿಲ್ಲವೇ ?"

"ಈ ವಿಷಯದಲ್ಲಿ ಖಂಡಿತ ಇಲ್ಲ"

"ಪರಮಾತ್ಮ, ಇವಳನ್ನ ನನಗೆಲ್ಲಿ ಗಂಟುಹಾಕಿದ "

"ಪ್ರಾಮಿಸ್ ಮಾಡು"

"ಸಾಮ್ರಾಜ್ಯಸಾಹಿತ್ಯವನ್ನು ಯಾಕೆ ನಿರ್ಮೂಲ ಮಾಡ್ತಿದಾರೇಂತ ನನಗೆ ಈಗ ಅರ್ಥವಾಯಿತು "

"ಭಾಷೆ ಕೊಡು "

"ಇಂದಿನಿಂದ ನಾನೂ ಸಮತಾವಾದಿ ವ್ಯಕ್ತಿಗಳ ಕೆಲವು ಖಾಸಗೀ ಹಕ್ಕುಗಳಿಗಾಗಿ ಹೋರಾಡಲು ನಾನು "

"ನಾಟಕ ಆಡಬೇಡ ವಿಶೂ"

ತನ್ನ ಮಾತಿಗೆ ತಾನೇ ಗಟ್ಟಿಯಾಗಿ ನಕ್ಕು ವಿಶ್ವನಾಥ ಗೀತಳ ಕೈ ಹಿಡಿದೆಳೆದು ಅವಳ ಕೈಮೇಲೆ ತನ್ನ ಕೈಯಿಟ್ಟ

ಹೊರಗೆ ಕಾರಿನ ಸದ್ದಾಯಿತು

ಗೀತ, ವಿಶ್ವನಾಥ ಕೆಳಗಿಳಿದುಬಂದು ಮುಂಬಾಗಿಲು ತೆಗೆದರು ಮೂರ್ತಿಯ ಸ್ನೇಹಿತರು ಅವರನ್ನು ಮನೆಯ ಮುಂದೆ ಇಳಿಸಿ ಹೊರಟು ಹೋಗಿದ್ದರು

"ಯಾಕಣ್ಣಾ ಇಷ್ಟು ಹೊತ್ತಾಯಿತು ?"

"ಯಾರೋ ಸ್ನೇಹಿತರು ಬಲವಂತಮಾಡಿ ಕನ್ನಂಬಾಡಿಗೆ ಕರೆದು ಕೊಂಡು ಹೋಗಿದ್ದರು ಎಷ್ಟು ಬೇಡಾಂದರೂ ಕೇಳಲಿಲ್ಲ. ನಿಮ್ಮಿಬ್ಬ ರದೂ ಊಟವಾಯಿತೇ ?"

"ಇಲ್ಲ ಮಾವ ನೀವೂ ಬಂದುಬಿಡಲಿ ಎಂದು ಕಾದುಕೊಂಡಿ ದ್ದೇವೆ" ಎಂದು ವಿಶ್ವನಾಥನೇ ಉತ್ತರಕೊಟ್ಟ

"ಮನೇಲಿ ಎಲ್ಲಾ ಆರೋಗ್ಯವೇ ?"

"ಹೂಂ ಇಲ್ಲಿಗೆ ಬಂದಮೇಲೆ ನನ್ನ ಆರೋಗ್ಯವೇ ಕೆಟ್ಟುಹೋಗಿತ್ತು. ಈಗ ಪುನಃ ಚೇತರಿಸಿಕೊಂಡಿದೀನಿ."

ಗೀತಾ ಕಳ್ಳನೋಟದಿಂದ ವಿಶ್ವನಾಥನನ್ನು ಗದರಿಸಿದಳು.

"ಬೇಗ ಬಾಣ್ಣಾ ಊಟಕ್ಕೆ ನನಗೆ ಹಸಿವಾಗುತ್ತಿದೆ" ಎಂದಳು ಗೀತ ತಂದೆ ಬಟ್ಟೆ ಬದಲಾಯಿಸಲು ಒಳಗೆ ಹೋದೊಡನೆ ಗೀತ ಮೆಲ್ಲನೆ

"ಇವತ್ತು ನಮ್ಮಿಬ್ಬರಿಗೂ ನಡೆದ ಜಗಳವನ್ನು ಅಣ್ಣನಿಗೆ ಹೇಳಬೇಡ"

ಎಂದಳು

"ಆಲೋಚನೆಮಾಡಿ ಹೇಳ್ತೇನಿ" ಎಂದ ವಿಶ್ವನಾಥ

ಗೀತ "ನೀನೊಬ್ಬ" ಎಂದು ಅಕ್ಕರೆಯಿಂದ ಬೈದು ಒಳಗೆ ಹೋದಳು.

* * *

ಮಾರನೆಯದಿನ ಭಾನುವಾರವಾಗಿದ್ದುದರಿಂದ ಕೋರ್ಟಿನ ಗಲಾಟೆ ಇರಲಿಲ್ಲ.

ಬೆಳಗಿನ ಕಾಫಿ ಮುಗಿಸಿ ಮೂರ್ತಿ, ವಿಶ್ವನಾಥ ಮಾತನಾಡುತ್ತಾ ಕುಳಿತುಕೊಂಡರು ಗೀತಳನ್ನು ಅವರು ಅಲ್ಲಿಗೆ ಬರಬೇಡವೆಂದು ಹೇಳಿರದಿದ್ದರೂ ಗೀತ ತಾನಾಗಿಯೇ ತಪ್ಪಿಸಿಕೊಂಡಿದ್ದಳು

ತಲೆಗೆ ಎಣ್ಣೆ ಹಚ್ಚಿಕೊಂಡು ನೀರು ಹಾಕಿಕೊಳ್ಳುವ ಸನ್ನಾಹದಲ್ಲಿ ಗೀತಾ ಮಗ್ನಳಾಗಿದ್ದಳು ತಲೆಗೆ ಎಣ್ಣೆ ಬಳಿದುಕೊಂಡು, ಹಳೆಯ ಸೀರೆಯೊಂದನ್ನುಟ್ಟು ಹಣೆ, ಮುಖದ ಮೇಲೆ ತಲೆಯಿಂದಿಳಿಯುತ್ತಿದ್ದ ಎಣ್ಣೆಯನ್ನು ಆಗಾಗ್ಗೆ ಒರೆಸಿಕೊಳ್ಳುತ್ತಾ ಗೀತ ಅಡಿಗೆಮನೆಯಲ್ಲಿ ತಾತನಿಗೆ ಸಲಹೆ ಕೊಡುತ್ತಿದ್ದಳು.

"ತಾತ, ಎಲ್ಲ ಅಡಿಗೆಗೂ ಉಪ್ಪು ಕಡಿಮೆ ಹಾಕಿ ಅವರಿಗೆ ಉಪ್ಪು ಜಾಸ್ತಿ ಇದ್ದರೆ ಸೇರೋದಿಲ್ಲ ಸಾರಿಗೆ ಇಂಗು ಹಾಕಬೇಡಿ ಬದನೇಕಾಯಲ್ಲಿ ಎಣ್ಣೆಗಾಯಿ ಮಾಡಿ. ಸ್ವಲ್ಪ ತಾಳಿ ಅವರಿಗೆ ಟೊಮೇಟೋ ಸಾರು ಇಷ್ಟವೋ ಅಥವಾ ಬಜ್ಜಿ ಇಷ್ಟವೋಂತ ಕೇಳಿಕೊಂಡು ಬರುತ್ತೇನೆ" ಎನ್ನುತ್ತಾ ಗೀತ ಸಂಭ್ರಮದಿಂದ ವಿಶ್ವನಾಥ, ಮೂರ್ತಿ ಮಾತನಾಡುತ್ತಿದ್ದ ಜಾಗಕ್ಕೆ ಓಡಿಬಂದಳು

ಮೂರ್ತಿ ಅವಳ ಹಣೆಯಿಂದಿಳಿಯುತ್ತಿದ್ದ ಹರಳೆಣ್ಣೆ, ಜಿನುಗುತ್ತಿದ್ದ ಮುಖ ನೋಡಿ,

"ಏನಮ್ಮಾ ಇದು !" ಎಂದರು

"ನೀರು ಹಾಕ್ಕೋಬೇಕೂಂತ ಇದೀನಿ ಅಣ್ಣ" ಎಂದು ಹೇಳಿ ವಿಶ್ವನಾಥನ ಕಡೆ ತಿರುಗಿ ಕೇಳಿದಳು :

"ನಿನಗೆ ಟೊಮೇಟೊ ಸಾರು ಇಷ್ಟವೋ ಬಜ್ಜಿನೋ ?"

ನನಗೆ ಸಾರು ಇಷ್ಟ "

"ರೈಟ್" ಎಂದು ಗೀತ ಮತ್ತೆ ಅಡಿಗೆಮನೆಯೊಳಗೆ ಓಡಿಬಂದಳು.

"ಸಾರು ಮಾಡಿಬಿಡಿ ಬಟಾಣೀಲಿ ಕೂಟು. "

ತಾತ ನಸುನಗುತ್ತಾ "ಈಗನಿಂದಲೇ ಹೀಗಾದರೆ ಮದುವೆಯಾದ ಮೇಲೆ ಹೇಗಿರುತ್ತೀಯಮ್ಮ ?" ಎಂದರು

"ಹೋಗಿ ತಾತ ಕೀಟಲೆಮಾಡಬೇಡಿ" ಗೀತ ಹರ್ಷದಿಂದ ಮುದುಕನ ಮೇಲೆ ರೇಗಿದಳು.

ಬಚ್ಚಲುಮನೆಯಲ್ಲಿ ಸೀಗೆಕಾಯನ್ನು ಗೀತ ಕಲೆಸುತ್ತಿದ್ದಾಗ ವಿಶ್ವನಾಥ ಎರಡನೆಯ ಬಾರಿ ಕುಡಿದಿದ್ದ ಕಾಫಿ ಬಟ್ಟಲುಗಳನ್ನು ಎತ್ತಿ ಕೊಂಡು ಅಲ್ಲಿಗೆ ಬಂದ ಅವನು ಗೀತಳನ್ನು ನೋಡಿ,

"ಏನೇ ಇದು ಅವತಾರ ?" ಎಂದ

"ನಿನಗೋಸ್ಕರ ಎಷ್ಟು ಅವತಾರ ತಾಳಿದರೂ ಸಾಲದು "

"ನನ್ನ ಮೆಚ್ಚಿಸುವ ರೂಪದಲ್ಲಿ ಇದೂ ಒಂದು ವೇಷವೋ ?"

"ಬೇಡಪ್ಪ ನೀನು ಮೆಚ್ಚಲೇಬೇಡ."

"ಹಮ್ . ಹಾಗಾದರೆ ಯಾರು ಮೆಚ್ಚಬೇಕು "

"ಇದಾರೆ, ಯಾರೊ ಒಬ್ಬರು ನಿನಗೆ ಹೇಳೋಲ್ಲ."

"ನಾನು ಅವನ ಕೈಲಿ ಕತ್ತಿವರಸೆಗೆ ತೊಡಗುವುದಿಲ್ಲ ಹೇಳು. ಸುಮ್ಮನೆ ಅವನ ಜುಟ್ಟನ್ನು ಹೀಗೆ ಹಿಡಿದು "

ಎನ್ನುತ್ತಾ ವಿಶ್ವನಾಥ ಹರಳೆಣ್ಣೆಯನ್ನು ಉಗುಳುತ್ತಿದ್ದ ಅವಳ ಕೂದಲನ್ನು ಹಿಡಿದು ಮರುಕ್ಷಣವೇ ಮುಖ ಸಿಂಡರಿಸಿಕೊಂಡು ಅವಳ ಕೂದಲನ್ನು ಬಿಟ್ಟ

ಗೀತಳ ನಗುವಿಗಂತೂ ಪಾರವೇ ಇರಲಿಲ್ಲ. ಅವಳು ಬಾಯಂಚನ್ನು ಕಿವಿಯವರೆಗೆ ಹಬ್ಬಿಸಿ, ಹಲ್ಲುಗಳನ್ನು ಥಳಥಳಿಸಿ, ಕಣ್ಣುಗಳನ್ನು ಕಿರಿದು ಗೊಳಿಸಿ ನಕ್ಕಳು.

"ಥೂ .ಥೂ . "ವಿಶ್ವನಾಥ ಕೈಯನ್ನು ಒದರಿದ.

"ನೀನು ಹಾಗೆ ಕೈ ಒದರಿದರೆ ಎಣ್ಣೆ ಉದುರಿಹೋಗೋಕೆ ಅರಳು ಎಂದುಕೊಂಡಿದೀಯಾ ? ಎಲ್ಲಿ ಕೈಕೊಡು" ಎಂದು ನುಡಿದವಳೇ ಗೀತ

ಅವನ ಕೈಯನ್ನು, ಕಲೆಸಿದ ಸೀಗೇಕಾಯಿ ಮೆತ್ತಿಕೊಂಡಿದ್ದ ತನ್ನ ಕೈಯಲ್ಲಿ ತೆಗೆದುಕೊಂಡು ಬಿಸಿನೀರು ಹಾಕಿ ಚೆನ್ನಾಗಿ ತೊಳೆದು ಸೆರಗಿನಿಂದ ಒರೆಸಿ,

"ಇನ್ನು ಆಟ ಆಡಿಕೋ ಹೋಗಮ್ಮ ಮಗು" ಎಂದಳು

"ನೀನು ನೀರು ಹಾಕಿಕೊಂಡು ಬಾ. ಆಗ ಪೂಜೆ ಕಾದಿರುತ್ತೆ" ಎಂದು ವಿಶ್ವನಾಥ ಮೃದುವಾಗಿ ಗದರಿಸಿದ—ಗುಲಾಬಿ ಹೂವಿನಲ್ಲಿ ಹೊಡೆಯುವಷ್ಟು ಮುನಿಸಿನಿಂದ

ಗೀತ ನೀರು ಮುಗಿಸಿಕೊಂಡು ಹೊರಗೆ ಬಂದಾಗ ಮಾವ, ಅಳಿಯನ ಮಾತುಕತೆ ಮುಗಿದಿತ್ತು

ವಿಶ್ವನಾಥ ಮನೆಯಲ್ಲಿರಲಿಲ್ಲ ಮೂರ್ತಿ ಜೂಲಿಯನ್ನೆತ್ತಿಕೊಂಡು ಮಾತನಾಡುತ್ತಿದ್ದರು ಗೀತ ತಂದೆಯನ್ನು ನೋಡಿ ಆಶ್ಚರ್ಯದಿಂದ,

"ಇದೇನಣ್ಣ, ಜೂಲಿನ ಎತ್ತಿಕೊಂಡಿದೀಯಾ—ಯಾವತ್ತೂ ಎತ್ತಿ ಕೊಳ್ಳದಿದ್ದವನು!" ಎಂದಳು

ಮೂರ್ತಿ ಜೂಲಿಯನ್ನು ಎದೆಗೊತ್ತಿಕೊಂಡು ಗೀತನ ಕಡೆ ನೋಡಿ ಮಧುರವಾಗಿ ನಕ್ಕರು ಮಾತನಾಡಲಿಲ್ಲ

ಸಂತೃಪ್ತಿ ಅವರ ಮುಖದ ಮೇಲೆ ವಿಜೃಂಭಿಸುತ್ತಿತ್ತು

ವಿಶ್ವನಾಥ ಹನ್ನೆರಡು ಗಂಟೆಗೆ ಮನೆಗೆ ಬಂದ. ಅವನು ಬಂದ ಮೇಲೆ ಎಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತುಕೊಂಡರು

ಮೆಯಿಲ್ ಟ್ರೈನಿನಲ್ಲಿ ವಿಶ್ವನಾಥ ಊರಿಗೆ ಹೊರಟು ನಿಂತಾಗ ಮೂರ್ತಿ ಹೇಳಿದರು

"ನೀನು ಕಾವೇರಿಗೆ ಯಾವ ಮಾತನ್ನು ಹೇಳಬೇಡ ವಿಶೂ ನಾನೇ ಯಾವಾಗಲಾದರೂ ಅಲ್ಲಿಗೆ ಬಂದಾಗ ತಿಳಿಸುತ್ತೇನೆ" ಎಂದರು

"ಅಮ್ಮ ಮೈಸೂರಿಗೆ ಯಾಕೆ ಕರೆಸಿಕೊಂಡಿದ್ದರೂಂತ ಕೇಳಿದರೆ ?"

"ಏನೋ ಪರೀಕ್ಷೆ ವಿಷಯ ಕೇಳೋಕೆ ಕರೆಸಿದ್ದರೂಂತ ಹೇಳಿಬಿಡು. ಸದ್ಯದಲ್ಲಿ ನಾನೇ ಅಲ್ಲಿಗೆ ಬರುತ್ತೇನೆ "

"ಗೀತಾ, ನಿನಗೂ ಮಾವನ ಜೊತೆ ಬರೋಕೆ ಆಹ್ವಾನ ಕೊಡ್ತಿ ದೀನಿ. ಆಮೇಲೆ ನಾನು ಕರೆಯಲಿಲ್ಲಾಂತ ಅಂದುಬಿಡಬೇಡ."

ಮೂರ್ತಿ ಮೃದುವಾಗಿ ನಕ್ಕು,

"ಇಷ್ಟು ದೊಡ್ಡ ಮನೆಗೆಲ್ಲಾ ಅವಳೊಬ್ಬಳನ್ನೇ ಬಿಟ್ಟು ನಾನು ಬರುತ್ತೇನೆಯೇ ? ಅವಳನ್ನೂ ಕರ್‍ಕೊಂಡು ಬರ್‍ತೀನಿ ಅವಳೊಬ್ಬಳನ್ನೇ ಬಿಟ್ಟು ಬರೋದು ನಿನ್ನ ಜೊತೆ" ಎಂದು ನಿಧಾನವಾಗಿ ಹೇಳಿದರು

ವಿಶ್ವನಾಥ ಹೊರಟುಹೋದಮೇಲೆ ಮನೆ ಬರಿದಾದಂತೆ ತಂದೆ ಮಗಳಿಗೆ ತೋರಿತು. ಕ್ಲಬ್ಬಿಗೆ ಹೋಗೋಣವೆಂದು ಮೂರ್ತಿಗೆ ಎನಿಸಿದರೂ ಒಂದು ಪಕ್ಷ ತಾವು ಅಲ್ಲಿಗೆ ಹೋಗಿದ್ದಾಗ ಪದ್ಮಿನಿ ಇಲ್ಲಿಗೆ ಬಂದರೆ ಎಂಬ ಯೋಚನೆಯೂ ಸುಳಿಯುತ್ತಿತ್ತು ಆ ದಿನ ಅವಳನ್ನು ಹನುಮನ ಜೊತೆ ಕಳುಹಿಸಿದ ಮೇಲೆ ಅವಳು ಮತ್ತೆ ಇಲ್ಲಿಗೆ ಬಂದಿರಲಿಲ್ಲ

ಅವಳ ಮಾತುಗಳನ್ನು ಕೇಳುವ, ಅವಳನ್ನು ನೋಡುವ ತೀವ್ರ ಹಂಬಲ ಮೂರ್ತಿಯ ಮನಸ್ಸಿನಲ್ಲಿ ಒತ್ತುತ್ತಿತ್ತು ಮನಸ್ಸಿನ ತೊಳಲಾಟವನ್ನು ಗೀತನೊಡನೆ ಹೇಳಿಕೊಳ್ಳೋಣನೆಂದರೆ ಸಂಕೋಚ ಅವರ ಆತುರ ಕಾತುರವನ್ನು ಹಿಂದಕ್ಕೆ ಜಗ್ಗಿ ಎಳೆಯುತ್ತಿತ್ತು ಪದ್ಮಿನಿ ಇದ್ದಲ್ಲಿಗೆ ತಾವೇ ಹೋಗಲಾರರು, ಹೋಗದಿರಲಾರರು

ಅವರ ಉತ್ಕಟ ಆಸೆ ಪದ್ಮಿನಿಯ ಹೃದಯದಲ್ಲಿಯೂ ಪ್ರತಿಧ್ವನಿಸಿದ್ದಿರಬೇಕು ಆದುದರಿಂದಲೇ ಅವಳು ಸಂಜೆ ಐದರ ಹೊತ್ತಿಗೆ ಗೀತನ ಮನೆಗೆ ಬಂದಳು

ಸಂಜೆಯ ಸೂರ್ಯನ ಅರುಣವರ್ಣ ಅವಳ ಕೆನ್ನೆಗಳನ್ನು ಮುದ್ದಿಡುತ್ತಿತ್ತು ಹೃದಯದ ತುಂಬಾ ಪ್ರೇಮ, ಬಾಯಿ ತುಂಬಾ ನಗು, ಕಣ್ಣು ತುಂಬಾ ಸ್ನೇಹ ತುಂಬಿಕೊಂಡು ಪದ್ಮಿನಿ ಮಳೆಗಾಲದಲ್ಲಿ ಉಕ್ಕಿ ಹರಿಯುವ ನದಿಯಂತೆ ತುಂಬು ಗಾಂಭೀರ್ಯದಿಂದ ಒಳಗೆ ಬಂದಳು.

ಅವಳು ಇನ್ನೊಂದು ಗಳಿಗೆ ಬಾರದಿದ್ದರೆ ಮೂರ್ತಿಯೇ ಅವಳಿರುವಲ್ಲಿಗೆ ಧಾವಿಸುತ್ತಿದ್ದರೋ ಏನೋ ?

ತಂದೆಯೊಡನೆ ಮಾತನಾಡುತ್ತಿದ್ದ ಗೀತ ಓಡಿಹೋಗಿ ಎರಡು ಕೈಗಳನ್ನೂ ನೀಡಿ ಪದ್ಮಿನಿಯನ್ನು ಸ್ವಾಗತಿಸಿದಳು

"ಯಾಕೆ ನಾಲ್ಕು ದಿನದಿಂದ ಬರಲಿಲ್ಲ ?"

"ದಿವಸಾ ನಿಮ್ಮ ಮನೆಗೆ ಬರುತ್ತೇನೆಂದು ಕಾಗದ ಬರೆದುಕೊಟ್ಟಿದ್ದೀನೇನು ನಾನು ?"

"ನನಗೇನು ಬರೆದುಕೊಟ್ಟಿಲ್ಲ ಆದರೆ. "

"ಯಾರಿಗೂ ನಾನು ಬರೆದುಕೊಟ್ಟಿಲ್ಲ "

ಗೀತನ ಹಿಂದಿನಿಂದ ಅವಳ ಭುಜದ ಮೇಲಿನಿಂದ ಅವಳನ್ನು ಹಾದು ತನ್ನನ್ನೇ ನೋಡುತ್ತಿದ್ದ ಒಂದು ಜೊತೆ ಕಣ್ಣುಗಳನ್ನು ಪದ್ಮಿನಿ ಎದುರಿಸಿ ಮತ್ತೆ ಗೀತನ ಕಡೆಗೆ ನೋಡಿದಳು

"ಹೋಗಲಿಬಿಡು ನೀನು ಬಂದತಕ್ಷಣ ಯಾಕೆ ಜಗಳ ಕಾಯೋಣ ಆಮೇಲೆ ನಿಧಾನವಾಗಿ ಜಗಳವಾಡೋಣ ಚದುರಂಗ ತರಲಾ ?"

"ಅಗತ್ಯವಾಗಿ "

ಗೀತ ಒಳಗೆ ಓಡಿಹೋಗಿ ಹಾಸನ್ನು ತಂದು ಮೇಜಿನ ಮೇಲೆ ಹರಡಿ, "ಬಾರೇ ಪದ್ಮಿನಿ" ಎಂದಳು

ಪದ್ಮಿನಿ, ಗೀತ ಆಡತೊಡಗಿದರು ಮೂರ್ತಿ ಅವರ ಆಟದ ಮೌನ ಪ್ರೇಕ್ಷಕ ಒಂದಾಟ ಮುಗಿಯುತ್ತಲೇ ಗೀತ ವೈಮುರಿದು "ನಂಗೆ ಬೇಜಾರಾಯಿತು ನೀನು ಅಣ್ಣ ಆಡುತ್ತಿರಿ ನಾನು ಕನ್ನಡ ಮೇಡಂ ಕೊಟ್ಟಿದ್ದ ಭಾಷಾಂತರವನ್ನು ಇನ್ನೂ ಮಾಡೇ ಇಲ್ಲ" ಎನ್ನುತ್ತಾ ಎದ್ದಳು

"ಇಲ್ಲೇ ತಗೊಂಬಾ. ನಾನೂ ಸ್ವಲ್ಪ ಸಹಾಯಮಾಡುತ್ತೇನೆ" ಎಂದು ಪದ್ಮಿನಿ ಕೂಗಿದಳು

"ನಿನ್ನ ಸಹಾಯ ಏನೂ ಬೇಕಾಗೋದಿಲ್ಲ" ಎಂದು ಹೇಳಿ ಗೀತ ಮಹಡಿಯ ಮೇಲೆ ಹೋದಳು.

ಪದ್ಮಿನಿ ಕಾಯಿಗಳನ್ನು ಹೂಡಿ "ಬರ್ತೀರಾ ?" ಎಂದಳು

"ನನಗೆ ಆಟ ಆಡೋಕೆ ಬರೋದಿಲ್ಲ "

"ಗೀತನ ಜೊತೆ ಅಷ್ಟು ಚೆನ್ನಾಗಿ ಆಡುತ್ತಿದ್ದೀರಿ ?"

"ನನಗೆ ಕಾಯಿ ನಡೆಸೋಕೆ ಬರೋದಿಲ್ಲ "

"ನಿಮ್ಮ ಪರವಾಗಿಯೂ ನಾನೇ ನಡೆಸುತ್ತೇನೆ "

"ನನ್ನ ಕೈ ಹಿಡಿದು ನಡೆಸುವ ಹಾಗಿದ್ದರೆ ಬರುತ್ತೇನೆ" ಎಂದರು ಮೂರ್ತಿ.

"ಆಗಲಿ" ಎಂದು ಹೇಳಿ ಪದ್ಮಿನಿ ಸೈನಿಕನನ್ನು ಮುಂದೆ ತಳ್ಳಿ ಮೂರ್ತಿಯ ಕಾಯನ್ನೂ ತಾನೇ ನಡೆಸಿದಳು

"ಪದ್ಮಿನಿ !"

"ಏನು !"

"ನಿನ್ನ ಕೈಲಿ ಮಾತನಾಡಬೇಕಾಗಿದೆ "

"ಕೇಳುವುದಕ್ಕೆ ದಾಸಿ ಸಿದ್ಧಳು."

"ನಾವೀಗ ಏನು ಮಾಡೋಣ ಪದ್ಮಿನಿ ?" ಮೂರ್ತಿ ವಿವಶರಾಗಿ ಕೇಳಿದರು

"ಅಂದರೆ ?" ಪದ್ಮಿನಿಗೆ ಅವರ ಮಾತು ಅರ್ಥವಾಗಿರಲಿಲ್ಲ

"ನಿಮ್ಮ ಮನೆಯಲ್ಲಿ ನೀನು, ನಮ್ಮ ಮನೆಯಲ್ಲಿ ನಾನು—ಇನ್ನೂ ಎಷ್ಟು ದಿನ ಹೀಗೆ ? ನನ್ನ ಮನೆಗೆ ನೀನು ಯಾವಾಗ ಬರ್ತೀಯ ?"

"ಈಗ ಬಂದಿದೀನಲ್ಲಾ "

"ಬರೋದೂಂದ್ರೆ ಹೀಗೆ ಬರೋದಲ್ಲ ನನ್ನವಳಾಗಿ ಯಾವಾಗ ಬರುತ್ತೀಯಾ ?"

"ಈಗಲೂ ನಿಮ್ಮವಳೇ "

"ನಾನಿನ್ನು ಹೆಚ್ಚು ದಿನ ಕಾಯಲಾರೆ "

ಪದ್ಮಿನಿ ಕಣ್ಣೊಡನೆ ತಲೆಯನ್ನೂ ತಗ್ಗಿಸಿ "ನೀವು ಕರೆಸಿಕೊಂಡಾಗ ನಾನು ನಿಮ್ಮಲ್ಲಿಗೆ ಬರುತ್ತೇನೆ" ಎಂದಳು

"ನಿಮ್ಮ ತಾಯಿ ತಂದೆಗೆ ಈ ವಿಷಯ ಗೊತ್ತಿದೆಯೇ ?"

'ಇಲ್ಲ' ಎನ್ನುವಂತೆ ಪದ್ಮಿನಿ ತಲೆ ಅಲುಗಿಸಿದಳು

"ಅವರಿಗೆ ಹೇಗೆ ಹೇಳಲಿ ?"

"ನೀವು ಹೇಳಬೇಡಿ ನಾನೇ ಹೇಳ್ತೀನಿ "

"ಹೇಗೆ ಹೇಳ್ತೀಯ ?"

"ಎದುರಿಗೆ ನಿಂತು ಹೇಳುವುದು ತುಂಬಾ ಕಷ್ಟವಾಗುತ್ತದೆ. ಆದುದರಿಂದ ಕಾಗದದಲ್ಲಿ ಎಲ್ಲವನ್ನೂ ಬರೆದು ತಿಳಿಸಿಬಿಡುತ್ತೇನೆ."

"ಯಾವತ್ತು ?"

ಅವರ ಆತುರವನ್ನು ನೋಡಿ ಪದ್ಮಿನಿಗೆ ನಗು ಬಂತು

"ಇವತ್ತು ರಾತ್ರೀನೇ ಕಾಗದ ಬರೆದುಕೊಡುತ್ತೇನೆ. ಮುಂದಿನ ಪರಿಣಾಮ ಏನಾಗುತ್ತದೋ ನೋಡಿಕೊಂಡು ಆಮೇಲೆ ಮುಂದಿನ

ಇಡೋಣ ”

ಮೂರ್ತಿ ಕಳವಳದಿಂದ “ಒಂದು ಪಕ್ಷ ಅವರು. ..ಅವರು ಒಪ್ಪದಿದ್ದರೆ ?” ಎಂದರು

“ಅವರು ಒಪ್ಪಲಿ, ಒಪ್ಪದಿರಲಿ—ನಾನೊಪ್ಪಿದ್ದೇನೆ ”

“ನೀನೊಪ್ಪಿರುವುದೇ ನನ್ನ ಪ್ರಾಣಕ್ಕೆ ಬಂದಿದೆ ಈಗ ಏನು ಮಾಡಬೇಕೋ ಗೊತ್ತಾಗುವುದಿಲ್ಲ ”

“ಹಾಗಾದರೆ ನಾನೊಂದು ಮಾತು ಹೇಳ್ತೀನಿ ಕೇಳ್ತೀರಾ ?”

“ಏನದು ?” ಎಂದರು ಮೂರ್ತಿ ಉತ್ಸುಕತೆಯಿಂದ

“ನಾನು ಇಲ್ಲಿಂದ ಹೋಗೋದೇ ಇಲ್ಲ ನಿಮ್ಮ ಮನೇಲೇ ಇದ್ದುಬಿಡುತ್ತೀನಿ ”

“ಶುದ್ಧ ಎಳೇ ನಿಂಬೇಕಾಯಿ ನೀನು ನಾನಾಗುವ ಹೊತ್ತಿಗೆ ಸರಿಯಾಯಿತು. ಒಂದು ಪಕ್ಷ ಮನಸ್ಸು ಚಂಚಲವಿದ್ದ ತರುಣನ ಜೊತೆ ನೀನು ಹೀಗೆ ಮಾತನಾಡಿದ್ದರೆ ಏನಾಗುತ್ತಿತ್ತು ಗೊತ್ತೇ ?”

“ಗೊತ್ತು ”

“ಏನಾಗುತ್ತಿತ್ತು ಹೇಳು ?”

“ಏನೋ ಹೇಳುವುದಿಲ್ಲ.”

“ನಾನಾಗಿರುವುದರಿಂದ ನೀನಿನ್ನೂ ಉಳಿದಿದ್ದೀಯ ಇಲ್ಲದಿದ್ದರೆ ನಿನ್ನ ಕತೆ ಎಂದೋ ಮುಗಿಯುತ್ತಿತ್ತು.”

ಪದ್ಮಿನಿ ಚದುರಂಗದ ಹಾಸಿನ ಮೇಲಿದ್ದ ಕುದುರೆಯನ್ನು ಹಾರಿಸುತ್ತಾ

“ನೀವಾಗಿರುವುದರಿಂದಾನೇ ನಾನು ಹೀಗೆಲ್ಲ ಹುಚ್ಚುಹುಚ್ಚಾಗಿ ಮಾತನಾಡುತ್ತಿರೋದು ನನಗೆ ಗೊತ್ತು ನೀವು ತುಂಬಾ ಒಳ್ಳೆಯವರೂಂತ. ಸಲಗಕ್ಕೂ, ಜಿಂಕೆಮರಿಗೂ ವ್ಯತ್ಯಾಸ ಇಲ್ಲವೇ ? ಜಿಂಕೆಮರಿ ಜೊತೆ ಆಟ ವಾಡುವ ಹಾಗೆ ಸಲಗನ ಜೊತೆ ಆಡೋಕ್ಕಾಗುತ್ತದೆಯೇ ?”

“ಜಿಂಕೆ ಮರಿಗೂ ಕ್ರಮೇಣ ಮೊನಚಾದ ಕೊಂಬುಗಳು ಹುಟ್ಟುತ್ತವೆ ಪದ್ಮಿನೀದೇವಿಯವರೇ ”

“ಆಗ ನಮ್ಮ ಹುಷಾರಿನಲ್ಲಿ ನಾವಿದ್ದರಾಯಿತು ”

“ಅಷ್ಟೊಂದು ನಿರ್ಭಯವಾಗಿರಬೇಡ. ಆಮೇಲೆ ನೋಡಿಕೋ,

ಏನಾಗುತ್ತದೇಂತ. ನಾನು ಹಸಿದ ಜಿಂಕೆ—ನೀನು ಹಸಿರು ಹುಲ್ಲು"

ಅವರ ಮಾತು ಕೇಳಿ ಪದ್ಮಿನಿ ನಕ್ಕು,

"ಆದರೂ ಜಿಂಕೆಮರಿ ಯಾಕೆ ಸುಮ್ಮನಿದೆ ಹಸಿರು ಹುಲ್ಲು ಸಿಕ್ಕಿದ ಮೇಲೂ ?"

"ಯೋಚಿಸುತ್ತಾ ಇದೆ— ಯಾವ ಕಡೆಯಿಂದ ತಿನ್ನೋಕೆ ಪ್ರಾರಂಭ ಮಾಡಲೀಂತ ಎಲ್ಲಿ ರುಚಿ ಹೆಚ್ಚೋ ಅಲ್ಲಿಂದ ಪ್ರಾರಂಭಮಾಡಬೇಕು ಅಲ್ಲವೇ ?"

" "

"ಈಗ ಏನು ಮಾಡಲಿ ಹೇಳು ?"

"ನಾನು ಸಧ್ಯಕ್ಕೆ ಕಾಗದ ಬರೆಯುತ್ತೇನೆ"

"ಆಮೇಲೆ ಅವರು ನಿನ್ನ ನನ್ನಲ್ಲಿಗೆ ಬರಲು ಬಿಡದೇ ರೂಮಿನಲ್ಲಿ ಕೂಡಿ ಬೀಗ ಹಾಕಿದರೆ ?"

"ನಿಮ್ಮ ಹತ್ತಿರ ಬರಬೇಕೆನ್ನುವ ಆಸೆಯನ್ನು ಯಾರೂ ತಡೆಗಟ್ಟ ಲಾರರು"

"ದಪ್ಪಗೋಡೆ, ಬೀಗ ತಡೆದು ನಿಲ್ಲಿಸಿದರೆ ?"

ಪದ್ಮಿನಿ ತಲೆ ಅಲುಗಿಸಿ ಮೃದುವಾಗಿ ಆದರೆ ಖಂಡಿತವಾಗಿ ಹೇಳಿ ದಳು—

"ಯಾವ ಗೋಡೆ, ಯಾವ ಬೀಗವೂ ನನ್ನನ್ನು ನಿಮ್ಮಿಂದ ದೂರವಿರಿಸ ಲಾರದು"

ಅವಳ ಮಾತಿನಲ್ಲಡಗಿದ್ದ ಕೆಚ್ಚು ನೋಡಿ ಮೂರ್ತಿ ಬೆರಗಾದರು. ಹಾಗೆಯೇ ಅವರಿಗೆ ವ್ಯಥೆಯೂ ಆಯಿತು ಅವರು ತಗ್ಗಿದ ಸ್ವರದಿಂದ "ಪದ್ಮಿನಿ, ನಿನ್ನ ಪ್ರೀತಿಗೆ ನಾನು ಯೋಗ್ಯನೇ ?" ಎಂದರು

"ಈಗ ಎಳೆ ನಿಂಬೆಕಾಯಿ ಯಾರು ಹೇಳಿ -ನಾನೋ ನೀವೋ ?"

"ನನಗೆ ನಿನ್ನಷ್ಟು ನಿರ್ಮಲ ಹೃದಯವಾಗಲಿ, ದೇಹವಾಗಲಿ ಇಲ್ಲ"

ಪದ್ಮಿನಿ ಗದರಿಸುವವಳಂತೆ ಹೇಳಿದಳು—

"ಈ ಮಾತು ಇನ್ನು ಮೇಲೆ ನಮ್ಮಿಬ್ಬರ ನಡುವೆ ಬರಬಾರದು ಎಂದು ಹೇಳಿರಲಿಲ್ಲವೇ ?"

"ಇಷ್ಟೇ ಅಲ್ಲ, ನನ್ನ ಮೇಲೆ ಒಂದು ದೊಡ್ಡ ಆರೋಪಣೆ ಇದೆ ಪದ್ಮಿನಿ "

"ನನಗೆ ಗೊತ್ತು "

ಮೂರ್ತಿ ಅಚ್ಚರಿಯಿಂದ "ನಿನಗೆ ಹೇಗೆ ಗೊತ್ತು ?"

"ಹೀಗೆ ಗಾಳಿ ಸಮಾಚಾರ ಬಂತು "

"ಅದರ ಸತ್ಯಾಸತ್ಯತೆ ತಿಳಿಯುವುದಕ್ಕೂ ನಿನಗೆ ಕುತೂಹಲವಿಲ್ಲವೇ?" ಎಂದರು ಮೂರ್ತಿ.

"ಇಲ್ಲ ಗಾಳಿಯಲ್ಲಿ ಹುಟ್ಟಿ ಗಾಳಿಯಲ್ಲಿ ಬೆಳೆದ ಸಮಾಚಾರಕ್ಕೆ ಜೀವವಿಲ್ಲ ಎನ್ನುವುದು ನನಗೆ ಗೊತ್ತು "

"ಅಷ್ಟೊಂದು ನನ್ನ ನಂಬಬೇಡ "

"ಹುಲಿ, ಸಿಂಹ ಪ್ರಾಣಿಗಳನ್ನು ಕೊಂದು ಮಾಂಸ ತಿನ್ನುತ್ತವೆ ಆದರೆ ಜಿಂಕೆ ಮರಿ ಮಾಂಸ ತಿನ್ನುವುದಿಲ್ಲ ರಕ್ತ, ಮಾಂಸ ಸಾಧುಸ್ವಭಾವದ ಮರಿಗೆ ಸೇರುವುದಿಲ್ಲ ಅದು ಯಾವಾಗಲೂ ಬಯಸುವುದು ಹಸಿರು ಹುಲ್ಲು "

ಮೂರ್ತಿ ವ್ಯಥೆಯಿಂದ ತಲೆಯ ಮೇಲೆ ಕೈಯಿಟ್ಟು ಪರವಶರಾಗಿ ಹೇಳಿದರು

"ಗೀತನ ತಾಯಿಯನ ನಾನು ಕೊಂದೆ ಎನ್ನುವ ಸಮಾಚಾರ ಈಗಲೂ ಅಲೆದಾಡುತ್ತಿದೆ. ಯಾರು ಆ ವಿಷಯವನ್ನು ಹುಟ್ಟಿಸಿದರೋ ನನಗೆ ಗೊತ್ತಿಲ್ಲ ಆದರೆ ನಾನು ನಿರಪರಾಧಿ ಪದ್ಮಿನಿ ನನ್ನ ಮಾತನ್ನು ನಂಬು. ನನ್ನಾಣೆ, ನಿನ್ನಾಣೆ, ಗೀತನಾಣೆ ನಾನು ನಿರ್ದೋಷಿ "

"ನನ್ನ ಅಳಿಸಬೇಕೂಂತ ನಿಮಗೆ ಆಸೆ ಇದೆಯಾ ?"

ಮೂರ್ತಿ ಚಕಿತರಾಗಿ ತಲೆ ಎತ್ತಿ ಅವಳ ಕಡೆ ನೋಡಿ "ಇಲ್ಲ" ಎಂದರು.

"ಹಾಗಾದರೆ ನೀವಿನ್ನು ಇದರ ವಿಷಯ ಮಾತನಾಡಬೇಡಿ ಒಂದು ಪಕ್ಷ ಒಂದು ಪಕ್ಷ, ನೀವು ಕೊಲೆಗಾರರಾಗಿದ್ದರೂ ನಾನು ಲಕ್ಷ್ಯ ಮಾಡೋದಿಲ್ಲ, ನೀವು ದೋಷಿಯೋ ನಿರ್ದೋಷಿಯೋ ನನಗೆ ಯಾವುದೂ ಬೇಡ ನನಗೆ ಬೇಕಾಗಿರುವವರು ಮೂರ್ತಿ. ಗೀತನ ತಂದೆ. . ವಿಶ್ವನಾಥನ

ಮಾವ ಸುದರ್ಶನದ ಮಾಲೀಕ ಜೂಲಿಯ ಒಡೆಯ "

ಮೂರ್ತಿ ತಮ್ಮ ವ್ಯಥೆಯನ್ನು ಮರೆತು ನಗುತ್ತಾ ಬೆರಳು ಮಡಿಸುತ್ತಾ "ಮೂರ್ತಿ ಒಂದು ಗೀತನ ತಂದೆ ಎರಡು ವಿಶ್ವನಾಥನ ಮಾವ ಮೂರು ಸುದರ್ಶನದ ಒಡೆಯ ನಾಲ್ಕು ಜೂಲಿಯ ಮಾಲೀಕ ಐದು ಅಬ್ಬ ಈ ಪಂಚಪಾಂಡವರನ್ನು ನಿನಗೆಲ್ಲಿಂದ ತರಲಿ?" ಎಂದರು

ಪದ್ಮಿನಿ ಚದುರಂಗದ ಹಾಸಿನ ಮೇಲಿದ್ದ ರಾಣಿಯನ್ನು ಕೈಗೆ ತೆಗೆದು ಕೊಂಡು ಅದನ್ನು ಗುರಿಯಿಟ್ಟು ಮೂರ್ತಿಯ ಎದೆಗೆ ಹೊಡೆದು,

"ನೋಡಿ ಇಲ್ಲೇ ಇದಾರೆ ಆ ಪಂಚಪಾಂಡವರು" ಎಂದಳು

"ಒಳ್ಳೆ ಹಿಡಿಂಬೆ ನೀನು "

"ಗಂಟೆ ಎಷ್ಟು ?" ಪದ್ಮಿನಿ ಆತುರದಿಂದ ಎದ್ದು ನಿಂತಳು.

"ಇನ್ನೇನು ಎಂಟು ಗಂಟೆಯ ಸಮಯ "

"ಇನ್ನು ನಾನು ಮನೆಗೆ ಹೋಗ್ತೀನಿ ಬಹಳ ಹೊತ್ತಾಗಿ ಹೋಯಿತು."

"ನಡಿ ನಾನು ಬರುತ್ತೇನೆ ನಿನ್ನ ಜೊತೆ, ಗೀತಾ ಅಂದ ಹಾಗೆ ನಾಳೆ ಬರುತ್ತೀಯಾ ?"

"ಪ್ರತಿ ದಿನ ದೇವಸ್ಥಾನಕ್ಕೆ ದೇವರನ್ನು ನೋಡಲು ಯಾರೂ ಹೋಗುವುದಿಲ್ಲ "

"ದೇವರಲ್ಲಿ ತುಂಬಾ ಪ್ರೀತಿ, ಭಕ್ತಿ ಇರುವವರು ಹೋಗುತ್ತಾರೆ "

"ಆಗಲಿ ಬರುತ್ತೇನೆ ನಿಮಗೇನು ಕಾಣಿಕೆ ತರಲಿ ?"

"ಮೆಲುಮಾತಿನ ಮೊಲ್ಲೆಯ ಹೂವು, ನಗೆಮಲ್ಲಿಗೆ, ಮುಗುಳ್ನಗೆಯ ರಸಾಯನ, ಬಟ್ಟಲುಗಣ್ಣಿನ ಸೊಡರು, ಕೆಂದುಟಿಯ ಕುಂಕುಮ, ನಿಡು ಜಡೆಯ ಗೆಜ್ಜೆ ವಸ್ತ್ರ, ಮುತ್ತಿನಾರತಿ "

ಪದ್ಮಿನಿ ಹುಬ್ಬು ಗಂಟಿಕ್ಕಿ "ಓ ಸಾಕು ನಿಲ್ಲಿಸಿ ನಾನು ಕೇಳಲಾರೆ " ಎನ್ನುತ್ತಾ ಮೆಟ್ಟಲಿನ ಬಳಿ ನಿಂತು,

"ಗೀತಾ" ಎಂದು ಕೂಗಿದಳು ಗೀತ ಮೇಲಿನಿಂದಲೇ "ಏನು" ಎಂದಳು

"ಕೊಂಚ ಕೆಳಗೆ ಬರುತ್ತೀಯಾ ?"

ಗೀತ ಕೆಳಗಿಳಿದು ಬಂದಳು ಮೂರ್ತಿ ಮಗಳನ್ನು ನೋಡಿ,

"ಬಾಮ್ಮಾ ಗೀತ, ಪದ್ಮಿನೀನ ಅವರ ಮನೆಗೆ ಬಿಟ್ಟು ಬರೋಣ" ಎಂದರು

* * *

ಪದ್ಮಿನಿಯೇನೋ ಮೂರ್ತಿಯೊಡನೆ ಬಹು ಸುಲಭವಾಗಿ ಹೇಳಿದ್ದಳು,

"ಕಾಗದದಲ್ಲಿ ಅವರಿಗೆ ಇರುವ ವಿಷಯವನ್ನೆಲ್ಲಾ ತಿಳಿಸಿಬಿಡುತ್ತೇನೆ" ಎಂದು. ಆದರೆ ಅವಳು ಹೇಳಿದಷ್ಟು ಸುಲಭವಾಗಿರಲಿಲ್ಲ ಈ ಕೆಲಸ

ತನ್ನ ಕಾಗದ ತಾಯಿ, ತಂದೆ, ಎಲ್ಲರಿಗಿಂತಲೂ ಮಿಗಿಲಾಗಿ ತನ್ನ ಚಿಕ್ಕಣ್ಣ ಸದಾನಂದ ಇವರುಗಳಿಗೆ ದೊಡ್ಡ ಪೆಟ್ಟು ಕೊಡುತ್ತದೆ ಎಂಬ ವಿಷಯ ಅವಳಿಗೆ ಚೆನ್ನಾಗಿ ತಿಳಿದಿತ್ತು

ನಂಜುಂಡಯ್ಯನವರು ಮೂರು ವರ್ಷಗಳ ಹಿಂದೆಯೇ ಪದ್ಮಿನಿಯ ಮದುವೆಯನ್ನು ಗೊತ್ತುಮಾಡಿದಾಗ ಅದನ್ನು ಸದಾನಂದ ಮುರಿದಿದ್ದ

"ನಮ್ಮ ಪದ್ಮಿನಿಗೆ ಇನ್ನೂ ಸೊಗಸಾದ ಹುಡುಗನನ್ನು ಆರಿಸಿತಂದು ಮದುವೆ ಮಾಡುತ್ತೇನೆ ನೀವು ಅವಳ ಮದುವೆ ಯೋಚನೆಗೇ ಹೋಗಬೇಡಿ ಅವಳ ಮದುವೆಯ ಜವಾಬ್ದಾರಿ ನನಗಿರಲಿ. ಅವಳ ಗಂಡನಾಗುವವನು ಎಲ್ಲರಂತೆ, ಸಾಮಾನ್ಯನಾಗಿರಬಾರದು ನೂರು ಜನರಲ್ಲಿ ಎದ್ದು ಕಾಣುವಂತಹ ಹುಡುಗನನ್ನು ಅವಳಿಗೆ ತರುತ್ತೇನೆ" ಎಂದು ಹೇಳಿ ತಾಯಿತಂದೆಯ ಮನಸ್ಸನ್ನು ಸಮಾಧಾನಪಡಿಸಿದ್ದ

ಆಗ ಜಲಜಮ್ಮ "ಏನೋಪ್ಪ ಈಗ ಅವರು ಗೊತ್ತುಮಾಡಿದ್ದವರನೂ ಪರವಾಗಿರಲಿಲ್ಲ" ಎಂದಾಗ ಅವನು,

"ಹದಿನೈದು ವರ್ಷಕ್ಕೆ ಎಂತಹ ಮದುವೆಯನ್ನು ? ಮೊದಲು ಅವಳು ಪದವೀಧರಳಾಗಲಿ ಆ ಮೇಲೆ ಅವಳಿಗೆ ತಕ್ಕ ಹುಡುಗನನ್ನು ಮದುವೆಮಾಡಿ ಆಮೇಲೆ ನಾನು ಮದುವೆಯಾಗುತ್ತೇನೆ ಅಲ್ಲಿಯವರೆವಿಗೆ ಮದುವೆಯಾಗುವುದೇ ಇಲ್ಲ" ಎಂದು ಪ್ರತಿಜ್ಞೆ ಮಾಡುವಂತೆ ಹೇಳಿದ್ದ

ತಾಯಿತಂದೆಗಿಂತಲೂ ತನ್ನ ಆಯ್ಕೆ ಸದಾನಂದನಿಗೆ ತುಂಬಾ ನೋವನ್ನುಂಟುಮಾಡುವುದೆಂದು ಪದ್ಮಿನಿಗೆ ತಿಳಿದಿತ್ತು. ತನ್ನ ಅಚ್ಚುಮೆಚ್ಚಿನ

'ಸದಾ'ನಿಗೆ ವ್ಯಥೆಯನ್ನು ನೀಡುವುದು ಪದ್ಮನಿಗೂ ಕಷ್ಟವಾಗಿತ್ತು

ಆದರೆ ಸದಾಗೆ ತನ್ನ ಸುಖ, ಸಂತೋಷಕ್ಕಿಂತಲೂ ಬೇರೆ ಯಾವುದು ಬೇಕು ? ತಾನು ಮೂರ್ತಿಯ ಕೈಹಿಡಿದು ಸುಖವಾಗಿ ಬಾಳುತ್ತೇನೆಂಬ ಭರವಸೆಕೊಟ್ಟರೆ ಅವನೊಪ್ಪಬಹುದೇ ? ತಾನು ಸುಖವಾಗಿರುವುದು ತಾನೇ ಅವನಿಗೆ ಮುಖ್ಯ

ಪಾಪ ! ತನಗಾಗಿ ಅವನು ಇದುವರೆಗೂ ಮದುವೆ ಮಾಡಿಕೊಂಡಿರಲಿಲ್ಲ ಬರೋಡಾದಲ್ಲಿ ಒಳ್ಳೆಯ ಕೆಲಸವಾಗಿ ಆರು ವರ್ಷಗಳಾಗಿದ್ದರೂ, ಕನ್ಯಾಪಿತೃಗಳು ಮನೆಯ ಬಾಗಿಲಿಗೆ ಅಲೆಯುತ್ತಿದ್ದರೂ ತನ್ನ ಮದುವೆ ನೆರವೇರಿಸಿ ತಾನು ಆ ಮೇಲೆ ಮದುವೆಯಾಗುವೆನೆಂದು ಒಂದೇ ಹಠ ಹಿಡಿದಿದ್ದ

ಆಗ ಅವನ ದೃಢ, ಖಂಡಿತವಾದ ನಿರ್ಧಾರ ತನ್ನ ಮೇಲಿದ್ದ ಅಚಲ ಪ್ರೀತಿ ನೋಡಿ ಪದ್ಮಿನಿ ಬಹಳ ಸುಖಿಯಾಗಿದ್ದಳು—'ಇಂತಹ ಅಣ್ಣನನ್ನು ಪಡೆದ ತಾನು ಧನ್ಯೆ' ಎಂದುಕೊಂಡಿದ್ದಳು

ಆದರೆ ಈಗ ?

ತನ್ನ ಮೇಲಿದ್ದ ಅಣ್ಣನ ಪ್ರೀತಿಯೇ ಅವಳಿಗೆ ನುಂಗಲಾರದ ತುತ್ತಾಗಿತ್ತು

ಇವನು ತಾನೇ ಏಕೆ ನನ್ನ ಇಷ್ಟೊಂದು ಮನಸ್ಸಿಗೆ ಹಚ್ಚಿಕೊಂಡು ಒದ್ದಾಡುತ್ತಿದ್ದಾನೋ ? ಜಯಾನಂದ, ರಮಾನಂದರ ಹಾಗೆ ತನ್ನ ಪಾಡಿಗೆ ತಾನಿದ್ದು ಬಿಡಬಾರದಾಗಿತ್ತೆ ? ಹೆಚ್ಚಿಗೆ ಒಬ್ಬರ ಮೇಲೆ ಪ್ರೀತಿ ತೋರ ವುದೂ ಕಷ್ಟ ಸ್ವತಂತ್ರವಾಗಿ ಹಾರಾಡುವ ಪಾರಿವಾಳದ ಮೇಲೆ ಮಾನವನ ಪ್ರೀತಿ ಹೆಚ್ಚಾದರೆ ಕೂಡಲೇ ಅದಕ್ಕೊಂದು ಬಾಗಿಲಿರುವ ಸಣ್ಣ ಗೂಡು ಸಿದ್ಧವಾಗುತ್ತದೆ ಅದು ಮೊದಲಿನಂತೆ ಆಹಾರವನ್ನು ಹುಡುಕಿಕೊಂಡು, ಕಾಳಬೆಕ್ಕನ್ನು ತಪ್ಪಿಸಿ ಹಾರಾಡಬೇಕಾದ ಪ್ರಮೇಯವಿಲ್ಲ ಹಣ್ಣು, ಹಾಲನ್ನು ಪ್ರೀತಿಯ ಒಡೆಯ ತಾನೇ ಖುದ್ದು ನಿಂತು ಗೂಡಿನೊಳಗೆ ನೀಡುತ್ತಾನೆ ಬೆಕ್ಕು ಪಂಜರದ ಬಾಗಿಲಲ್ಲಿ ನಿಂತು ಆಸೆಬುರುಕತನದಿಂದ ಪಾರಿವಾಳದ ಕಡೆ ನೋಡಿ ಜೊಲ್ಲು ಸುರಿಸುತ್ತದೆ. ರಕ್ಷಣೆ ಪ್ರೀತಿ ಇವೆರಡಕ್ಕಿಂತಲೂ ಪಾರಿವಾಳಕ್ಕೆ ಏನು ಬೇಕು ?

ಆದರೆ ಅದಕ್ಕೆ ಬಂಧನಕ್ಕಿಂತಲೂ ಸ್ವತಂತ್ರವಾಗಿರುವುದೇ ಹೆಚ್ಚು ಪ್ರಿಯವೆಂದು ಮಾನವರಿಗೆ ತಿಳಿಯುವುದಿಲ್ಲವೇನೋ? ತನಗೆ ಬೇಕಾದ ಆಹಾರವನ್ನು ತಾನೇ ಹುಡುಕಿಕೊಂಡು ಸೂರ್ಯನ ಎಳೆ ಬಿಸಿಲಿನಲ್ಲಿ, ಹಸಿರು ಮರಗಳ ಮೇಲೆ, ನೀಲ ನಭದ ಕೆಳಗೆ ಸ್ವಚ್ಛಂದವಾಗಿ ಹಾರುವುದು ಎಷ್ಟು ಚೆಂದ!

ತನ್ನನ್ನರಸಿ ಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾ ಬರುವ ಬೆಕ್ಕನ್ನು, ಅದರ ಕೈಗೆ ಸಿಕ್ಕೂ ಸಿಗದಂತೆ ಆಟವಾಡಿಸುತ್ತಾ, ಅದು ಇನ್ನೇನು ತನ್ನನ್ನು ಹಿಡಿಯುತ್ತದೆ ಎನ್ನುವಾಗ ತನ್ನ ಶುಭ್ರ ಬಿಳಿಯ ರೆಕ್ಕೆಗಳನ್ನು ಬೆಕ್ಕು ಗಾಬರಿಯಾಗುವಂತೆ ಬಡಿದು, ಅದರ ದವಡೆಯಿಂದ ನುಸುಳಿ ಸುರಕ್ಷಿತವಾದ ಸ್ಥಳದಲ್ಲಿ ಕುಳಿತು ಹೆಮ್ಮೆಯಿಂದ ಗುಬ್ಬಳಿಸುತ್ತಾ ಬಿಂಕದಿಂದ ಹೆಜ್ಜೆಯಿಡುವುದು ಎಷ್ಟು ರೋಮಾಂಚಕರ!

ಜೀವನದಲ್ಲಿ ಅಪಾಯವಾದ ಸನ್ನಿವೇಶಗಳು, ದುಗುಡದ ಗಳಿಗೆಗಳು ಬಾರದಿದ್ದರೆ ಬದುಕು ಎಷ್ಟು ನಿಸ್ಸಾರ! ವಿಧಿ ಮಾನವನತ್ತ ಬೀರುವ ಈ ಮೊನಚಾದ ಬಾಣಗಳಿಂದ ತಪ್ಪಿಸಿಕೊಳ್ಳುವುದರಲ್ಲಿದೆ ಬದುಕಿನ ಸೌಂದರ್ಯ

ಅಣ್ಣ ತಂಗಿಯರ ನಡುವೆ ಇದ್ದ ಜಾಜಿಯ ಸೌರಭದಂತಹ ನವಿರಾದ ಪ್ರೀತಿ ಕ್ರಮೇಣ ಜಾಜಿಯ ಎಳೆಯ ಹಸಿರು ಕುಡಿಯಾಗಿ, ತಂತಿಯಾಗಿ ಈಗ ಕಬ್ಬಿಣದ ಸರಪಳಿಯಾಗಿ ಮಾರ್ಪಟ್ಟಿತ್ತು

ಪ್ರೀತಿಯ ಬಂಧನ ಕಠಿಣವಾದಷ್ಟೂ ಅದನ್ನು ಕಿತ್ತೊಗೆಯುವುದು ಪದ್ಮಿನಿಗೆ ಕಷ್ಟವಾಗಿತ್ತು ಅವಳಿಗೆ ಅಣ್ಣನನ್ನು ನೋಯಿಸುವ ಮನೋಬಲವಾಗಲಿ, ಸರಪಳಿಯನ್ನು ತುಂಡರಿಸಿ ತನಗೊಲಿದವನ ಬಳಿಗೆ ಹಾರಿ ಹೋಗುವ ಚೈತನ್ಯವಾಗಲಿ, ನಲ್ಲನ ಆಹ್ವಾನ ಕರೆಯನ್ನು ನಿರಾಕರಿಸುವ ಗಟ್ಟಿ ಮನಸ್ಸಾಗಲಿ ಇರಲಿಲ್ಲ.

ಪದ್ಮಿನಿ ಅಣ್ಣನ ವಿಶ್ವಾಸ, ಪ್ರೀತಿ, ತಂದೆತಾಯಿಗಳ ಮಮತೆ ಯಾವುದನ್ನೂ ಕಳೆದುಕೊಳ್ಳಲು ಸಿದ್ಧಳಿರಲಿಲ್ಲ

ಆದರೆ ವಿಶ್ವಾಸ, ಪ್ರೀತಿ, ಮಮತೆಯ ಸಂಗಮ ಸಾಧ್ಯವೇ ಎಂದವಳು ಚಿಂತಿಸಿ ಹಣ್ಣಾಗಿದ್ದಳು

ಒಂದು ವಿಷಯದಲ್ಲಿ ಮಾತ್ರ ಅವಳಿಗೆ ಸ್ವಲ್ಪವೂ ಅನುಮಾನವಿರ

ಲಿಲ್ಲ ಸದಾನಂದ ತನ್ನ ತಂಗಿಯ ಸುಖವನ್ನು ಅಪೇಕ್ಷಿಸುವುದರಲ್ಲಿ, ತಾಯಿ ತಂದೆ ಮಗಳ ಸಂತೋಷವನ್ನು ಹಾರಯಿಸುವುದರಲ್ಲಿ, ಮೂರ್ತಿ ತನ್ನ ಪ್ರೇಯಸಿಯ ಒಳಿತನ್ನು ಬಯಸುವುದರಲ್ಲಿ ಅನುಮಾನವಿರಲಿಲ್ಲ ಪದ್ಮಿನಿಯ ಸುಖಸಂತೋಷ ಎಲ್ಲರಿಗೂ ಬೇಕಾಗಿತ್ತು ಇದೊಂದು ವಿಷಯದಲ್ಲಿ ಆ ಮೂವರೂ ಒಂದೇ

ಕತ್ತಲಿನಾಳದಿಂದ ಚಿಮ್ಮಿ ಬಂದ, ಎಲ್ಲಿಂದಲೋ ತೂರಿಬಂದ ಇದೊಂದು ಬೆಳಕಿನ ಕಿರಣವನ್ನು ನೋಡಿ ಪದ್ಮಿನಿ ಧೈರ್ಯದಿಂದ ಮುನ್ನಡೆದಳು ಅದನ್ನೇ ತನ್ನಾಸರೆಯನ್ನಾಗಿ ಮಾಡಿಕೊಂಡು ಗಟ್ಟಿಯಾಗಿ ಹಿಡಿದಳು.

ರಾತ್ರಿ ಅವಳು ಕಾಗದ ಬರೆದು ಮುಗಿಸಿದಾಗ ಹನ್ನೆರಡು ಗಂಟೆಯಾಗಿತ್ತು ಹತ್ತು ಗಂಟೆಯಾದರೂ ಅವಳಿನ್ನೂ ಕಾಗದ ಬರೆಯುತ್ತಾ ಕುಳಿತಿರುವುದನ್ನು ನೋಡಿ ಜಲಜಮ್ಮ,

"ಏನೇ ಅದು ಅಷ್ಟೊಂದು ಬರೀತಿದಿ?" ಎಂದು ಕೇಳಿದ್ದರು

"ನೋಟ್ಸ್ ಬರೀತಿದೀನಿ "

ಮಗಳ ಉತ್ತರದಿಂದ ಸಮಾಧಾನಗೊಂಡ ತಾಯಿ ಹಾಯಾಗಿ ಕಣ್ಣು ಮುಚ್ಚಿ ಮಲಗಿದ್ದರು

ತಂದೆಗೆ ಕಾಗದ ಬರೆಯುವಾಗಲೂ ಪದ್ಮಿನಿಗೆ ತುಂಬಾ ಕಷ್ಟವಾಗಿತ್ತು ಅವಳು ಹತ್ತಾರು ಕಾಗದಗಳನ್ನು ಬರೆದು, ಹರಿದು ಕೊನೆಗೆ ಒಂದು ಪತ್ರ ಸಿದ್ಧಪಡಿಸಿ ಅದನ್ನು ಕವರಿನಲ್ಲಿ ಹಾಕಿ ಅಂಟಿಸಿ ಅದರ ಮೇಲೆ ತಂದೆಯ ಹೆಸರನ್ನು ಬರೆದಳು

ತಂದೆ ಮಲಗಿದ್ದ ರೂಮಿಗೆ ಮೆಲ್ಲನೆ ಹೋಗಿ ಹಾಸಿಗೆಯ ಮೇಲೆ ಅವರ ಕಾಲಬಳಿ ಅವರು ಎದ್ದ ಕೂಡಲೇ ಕಣ್ಣಿಗೆ ಬೀಳುವಂತೆ ಕವರನ್ನಿಟ್ಟು ಮತ್ತೆ ತನ್ನ ಹಾಸಿಗೆಯ ಹತ್ತಿರ ಬಂದು ನಿಶ್ಚಿಂತೆಯಿಂದ ಮಲಗಿದಳು ಹೃದಯದಲ್ಲಿ ತುಂಬಿದ್ದ ಭಾವವನ್ನು ಕಾಗದದಲ್ಲಿ ಹೇರಿದ್ದರಿಂದ ಅವಳ ಮನಸ್ಸು ತುಂಬಾ ಹಗುರವಾಗಿತ್ತು ಬಹುಬೇಗ ನಿದ್ದೆ ಬಂತು.

ರಾತ್ರಿ ಬೆಕ್ಕೊಂದು ಅಡಿಗೆ ಮನೆಯ ಪಾತ್ರೆಯೊಂದನ್ನು ಉರುಳಿಸಿ ಸದ್ದು ಮಾಡಿದಾಗ ನಂಜುಂಡಯ್ಯನವರಿಗೆ ಎಚ್ಚರವಾಯಿತು ಅವರು

ಕೂಡಲೇ ಎದ್ದು ದೀಪ ಹಾಕಿ ಅಡಿಗೆ ಮನೆಗೆ ಹೋಗಿ ಬೆಕ್ಕನ್ನೋಡಿಸಿ ಬಂದು ಗಡಿಯಾರದ ಕಡೆ ನೋಡಿದರು

"ಇನ್ನೂ ಎರಡು ಗಂಟೆ" ಎಂದು ಗೊಣಗುತ್ತಾ ಹಾಸಿಗೆಯ ಹತ್ತಿರ ಬಂದಾಗ ರಗ್ಗಿನ ಮೇಲಿದ್ದ ಕಾಗದವನ್ನು ನೋಡಿ ಅವರು ಚಕಿತರಾದರು

'ಇದೇನು! ರಾತ್ರಿ ಇಲ್ಲಿ ನನ್ನ ಹೆಸರಿಗೆ ಯಾವ ಕಾಗದವೂ ಇರಲಿಲ್ಲ ಈಗ ಇದು ಎಲ್ಲಿಂದ ಬಂತು' ಎಂದುಕೊಳ್ಳುತ್ತಾ ಕವರನ್ನು ಕೈಗೆ ತೆಗೆದು ಕೊಂಡರು

ಕವರಿನ ಮೇಲಿನ ಪದ್ಮಿನಿಯ ಹಸ್ತಾಕ್ಷರ ಕಂಡು ಅವರ ಆಶ್ಚರ್ಯ ದ್ವಿಗುಣವಾಯಿತು

ದೀಪ ಆರಿಸಲು ಮುಂದಾಗಿದ್ದ ಕೈ ಮತ್ತೆ ಹಿಂದೆ ಬಂತು ಕಣ್ಣಿನಲ್ಲಿದ್ದ ನಿದ್ದೆ ಅವರ ಮನಸಿನಲ್ಲುತ್ಪನ್ನವಾದ ಆಶ್ಚರ್ಯದಲೆಗಳ ಹೊಡೆತಕ್ಕೆ ಗರಿಯಂತೆ ಹಾರಿಹೋಯಿತು

ನಂಜುಂಡಯ್ಯನವರು ಕವರನ್ನು ಒಡೆದು, ಕಿಟಕಿಯಲ್ಲಿದ್ದ ಕನ್ನಡಕದ ಪೆಟ್ಟಿಗೆಯನ್ನು ಕೈಗೆ ತೆಗೆದುಕೊಂಡು ಕಣ್ಣಿಗೆ ಕನ್ನಡಕ ಹಾಕಿ ಪತ್ರವನ್ನು ಓದತೊಡಗಿದರು .

"ಅಣ್ಣಾ,"

ಒಂದೇ ಮನೆಯಲ್ಲಿದ್ದುಕೊಂಡೂ ನಾನು ನಿಮಗೆ ಕಾಗದ ಬರೆದಿರುವುದನ್ನು ನೋಡಿ ನಿಮಗೆ ಆಶ್ಚರ್ಯವಾಗಬಹುದು. ನಾಲಗೆ ನುಡಿಯಲಾರದುದನ್ನು ಕೈ ಬರೆದು ತಿಳಿಸುತ್ತದೆ ಸಂಕೋಚ, ಅಧೈರ್ಯ ನನ್ನ ನುಡಿಯ ಶಕ್ತಿಯನ್ನು ಉಡುಗಿಸಿದೆ ನಾನು ನಿಮ್ಮೆದುರಿಗೆ ನಿಂತು ಮಾತನಾಡಿದರೆ ನೀವೆಲ್ಲಿ ಸಹನೆ ಕಳೆದುಕೊಂಡು ಅಬ್ಬರಿಸಿ ನನ್ನ ಮಾತನ್ನು ಕತ್ತರಿಸಿ ಹಾಕುವಿರೋ ಎಂಬ ಶಂಕೆಯಿಂದ ಕಾಗದ ಬರೆಯುತ್ತಿದ್ದೇನೆ.

ಈ ಕಾಗದ ಬರೆಯುವ ಉದ್ದೇಶ—ನಾನು ಗೀತನ ತಂದೆಯನ್ನು ಪ್ರೀತಿಸುತ್ತೇನೆ. ನನ್ನ ಪ್ರೀತಿ ಬಲವಂತದಿಂದ ಜನ್ಮತಾಳಿದುದಲ್ಲ. ನಾನು ಮನಸಾರೆ ಅವರನ್ನು ಪ್ರೀತಿಸುತ್ತೇನೆ ಅವರ ಕೈಹಿಡಿದು ಸುಖವಾಗಿರಬಲ್ಲೆ ಎಂಬ ಆತ್ಮ ವಿಶ್ವಾಸ ನನಗಿದೆ ನಮ್ಮಿಬ್ಬರ ಬದುಕು ಒಂದಾಗಲು ನಿಮ್ಮ ಆಶೀರ್ವಾದ, ಅನುಮತಿ ನನಗೆ ಬೇಕು.

ನನಗೆ ಈಗ ಇರುವ ಧೈರ್ಯ ಒಂದೇ—ಅವರ ಬಾಳಿನೊಡನೆ ಬೆರೆಯುವುದು. ನನಗಿರುವ ಕನಸು ಒಂದೇ—ಅವರನ್ನು ಸುಖವಾಗಿರಿಸುವುದು ನನ್ನ ಆದರ್ಶ ನಮ್ಮಿಬ್ಬರ ಸುಖಮಯವಾದ ಜೀವನ

ಇದರ ಹೊರತು ನನಗೆ ಬೇರೆ ಧ್ಯೇಯ, ಕನಸುಗಳಿಲ್ಲ ನನ್ನ ಆಯ್ಕೆ ನಿರ್ಧಾರ ನೋಡಿ ನಿಮಗೆ ಕೋಪ ಬರಬಹುದು ನಿಜ, ಅವರಿಗೆ ವಯಸ್ಸಾಗಿದೆ ಆದರೆ ನಮ್ಮಿಬ್ಬರ ನಡುವೆ ಇರುವ ವಯಸ್ಸಿನ ಅಂತರ ನಮ್ಮ ಪ್ರೀತಿಯನ್ನು ಕುಗ್ಗಿಸಲಾರದು ಅವರು ಮುದುಕರಾಗಲಿ, ಕೂಲಿಗಾರರಾಗಲಿ, ಎಂಥವರೇ ಆಗಿರಲಿ—ನನ್ನ ನಿರ್ಧಾರ ಬದಲಾಗುವುದಿಲ್ಲ

ನನ್ನ ನಿರ್ಧಾರದಿಂದ ನಿಮಗೆ, ಸದಾಗೆ ತುಂಬಾ ನಿರಾಶೆಯಾಗಬಹುದು, ಕೋಪ ಬರಬಹುದು ಆದರೆ ಪ್ರೇಮದ ಸುಳಿಗೆ ಸಿಕ್ಕಿ ನಾನು ಅಸಹಾಯಕಳಾಗಿದ್ದೇನೆ, ವಿವಶಳಾಗಿದ್ದೇನೆ

ನನ್ನ ಸುಖ, ಸಂತೋಷಕ್ಕಿಂತ ನಿಮಗೆ ಹೆಚ್ಚಿನದು ಯಾವುದಿದೆ ?

—ಪದ್ಮಿನಿ ”

ಕಾಗದವನ್ನು ಮುಗಿಸಿ ನಂಜುಂಡಯ್ಯನವರು ಕಣ್ಣುಜ್ಜಿಕೊಂಡು ತಮ್ಮನ್ನು ತಾವೇ ಜಿಗುಟಿಕೊಂಡರು

ಇದು ಕನಸಲ್ಲವಷ್ಟೆ ?

ಕಾಗದವನ್ನು ಎರಡು, ಮೂರು ಬಾರಿ ಓದಿ ಅವರು ನಿಧಾನವಾಗಿ ಅರ್ಥಮಾಡಿಕೊಂಡರು ಮೊದಲು ಅವರಿಗೆ ಯಾವುದೂ ಅರ್ಥವಾಗಲಿಲ್ಲ ಕಾಗದದ ಒಕ್ಕಣೆ ಅರ್ಥವಾಗುತ್ತಾ ಬಂದಂತೆ, ಅದರೊಡನೆ ಕೋಪ, ಸಂತಾಪ ನಿಧಾನವಾಗಿ ಹರಿದುಬಂದು ಅವರೊಡಲಿನ ತುಂಬ ತುಂಬಿಕೊಂಡಿತು

ಅವರು ಕಾಗದವನ್ನು ಕವರಿಗೆ ಹಾಕಿ ದಿಂಬಿನ ಕೆಳಗಿಟ್ಟು ಪದ್ಮಿನಿ ಮಲಗಿದಲ್ಲಿಗೆ ಧಾವಿಸಿದರು ರೂಮಿನ ದೀಪವನ್ನು ಹಚ್ಚಿ ತಂದೆ ಮಗಳ ಹಾಸಿಗೆಯ ಬಳಿ ನಿಂತರು.

ಹಾಸಿಗೆಯ ಮೇಲೆ ಹಾಯಾಗಿ ಮಲಗಿ ಸುಖದ ಕನಸೊಂದನ್ನು ಕಾಣುತ್ತಿದ್ದ ಮಗಳನ್ನು ಎಳೆದು ಎಬ್ಬಿಸಬೇಕೆನಿಸಿತು ತಂದೆಗೆ ಆದರೆ ಅವಳ ಮಗುವಿನಂತಹ ಮುಖ ಅದಕ್ಕೆ ಅಡ್ಡ ಬಂತು.

ಕೆದರಿದ ಮುಂಗುರುಳು, ಮುಚ್ಚಿದ ಕಣ್ಣೆವೆಗಳು, ಮುಖದ ಮೇಲೆ ಮೆರೆದಾಡುತ್ತಿದ್ದ ಮುಗ್ಧತೆ, ಯಾವುದೋ ಕನಸೊಂದರ ಅಪೂರ್ವ ಅನುಭವದಿಂದ ಬಿರಿದ ಬಾಯಿ, ಇವುಗಳನ್ನು ನೋಡಿ ತಂದೆ ಹಿಮ್ಮೆಟ್ಟಿದರು.

'ಹೂಂ ಈಗೇನು ಆತುರ ಬೆಳಗ್ಗೆ ವಿಚಾರಿಸಿದರಾಯಿತು' ಎಂದು ನಿರ್ಧರಿಸಿ ಮತ್ತೆ ಹೋಗಿ ಮಲಗಿದರು ಆದರೆ ನಿದ್ದೆ ಮಾತ್ರ ಅವರಿಂದ ಬಹಳ ದೂರವಾಗಿತ್ತು

ರಾತ್ರಿ ಬಹಳ ಹೊತ್ತಿನವರೆವಿಗೆ ಎಚ್ಚರವಾಗಿದ್ದ ಪದ್ಮಿನಿಗೆ ಬೆಳಗ್ಗೆ ಬೇಗ ಎಚ್ಚರವಾಗಲಿಲ್ಲ ಬೆಳಿಗ್ಗೆ ಎದ್ದೊಡನೆ ಜಲಜಮ್ಮನಿಗೆ ಕೆಟ್ಟ ಸುದ್ದಿಯೊಂದು ಕಾದಿತ್ತು

ನಂಜುಂಡಯ್ಯನವರು ಹೆಂಡತಿಯ ಮುಖ ಕಂಡೊಡನೆ ಗುರುಗುಟ್ಟಿದ್ದರು.

"ನಿನ್ನ ಮಗಳ ಪ್ರತಾಪ ನೋಡಿದೆಯೇನೇ ನನಗೆ ಕಾಗದ ಬರೆದಿದ್ದಾಳೆ, ನಿನ್ನ ಮಗಳು "

"ಯಾರು ಪದ್ಮಿನಿಯೇ ?" ಜಲಜಮ್ಮ ಬೆಕ್ಕಸಬೆರಗಾಗಿ ಕೇಳಿದರು.

"ಹೂಂ ನಿನ್ನ ಮುದ್ದಿನ ಪರಿಣಾಮ ಈ ಕಾಗದ."

"ಏನಂತ ಬರೆದಿದ್ದಾಳೆ ? ಕಾಗದ ಯಾಕೆ ಬರೆದಳು ?" ಜಲಜಮ್ಮ ದಿಗ್ಭ್ರಾಂತರಾಗಿ ಕೇಳಿದರು

"ಅವಳು ಗೀತಳ ತಂದೇನ ಪ್ರೀತಿಸುತ್ತಾಳಂತೆ ಅವರನ್ನು ಮದುವೆ ಮಾಡಿಕೊಳ್ಳುತ್ತಾಳಂತೆ "

"ಗೀತನ ತಂದೆ !"

"ಹೂಂ ಮೊದಲನೇ ಹೆಂಡತೀನ ಕೊಂದ ಲಾಯರೀನ ಮದುವೆ ಮಾಡಿಕೊಳ್ಳುತ್ತಾಳಂತೆ ನಿನ್ನ ಮಗಳು "

ಜಲಜಮ್ಮ ಅಳುತ್ತಾ "ಎಲ್ಲವನ್ನೂ ಬಿಡಿಸಿ ಹೇಳೀಂದ್ರೆ ನನ್ನೆದೆಗೆ ಶೂಲ ಇಡಬೇಡಿ" ಎಂದರು

"ನಾನು ಯಾಕೆ ಇಡಲಿ ? ನಿನ್ನ ಮಗಳು ಇಡುತ್ತಾಳೆ "

"ಎಲ್ಲಾ ಬಿಡಿಸಿ ಹೇಳಿ ನಿಮ್ಮ ದಮ್ಮಯ್ಯ "

"ಎಲ್ಲಾ ಸ್ಪಷ್ಟವಾಗೇ ಇದೆ ಇನ್ನು ಬಿಡಿಸಿ ಹೇಳೋದೇನು ಬಂತು ?

ನಿನ್ನ ಮಗಳು ಮಾತೆತ್ತಿದರೆ ಗೀತನ ಮನೆಗೇಂತ ಓಡಿಹೋಗುತ್ತಿದ್ದಳಲ್ಲಾ ಈಗ ಯಾಕೇಂತ ಅರ್ಥವಾಯಿತೇ ? ಹೆಂಗಸರನ್ನು ಬಲೆಗೆ ಹಾಕಿಕೊಳ್ಳುವುದರಲ್ಲಿ ಅವನು ಚತುರ ಎಂತೆಂತಹ ಹೆಂಗಸರೋ ಅವನ ಬಲೆಗೆ ಬಿದ್ದಿದ್ದಾರೆ ಅಂತಹದರಲ್ಲಿ ಒಂದು ಕೆನ್ನೆ ಹಾಲು, ಒಂದು ಕೆನ್ನೆ ನೀರು ಇರುವ ಪದ್ಮಿನಿ ಅವನಿಗೆ ಮರುಳಾಗುವುದರಲ್ಲಿ ಸೋಜಿಗವೇನಿಲ್ಲ ಅವನಿಗೆ ನಡತೆ ಚೆನ್ನಾಗಿಲ್ಲಾನ್ನೋದು ನನಗೆ ಗೊತ್ತಿದ್ದರೂ ವಯಸ್ಸಾಗಿದೆ, ಈ ಮಗೂನ ಏನು ಮಾಡಬಲ್ಲಾಂತ ನಾನು ಹೆಚ್ಚು ಗಮನ ಕೊಡಲಿಲ್ಲ "

"ಅವಳಿಗೇನಾದರೂ ತಲೆ ಕೆಟ್ಟು ಹೋಗಿದೆಯೋ ಏನೋ ?"

ನಂಜುಂಡಯ್ಯನವರು ವ್ಯಂಗ್ಯವಾಗಿ ನಕ್ಕು "ಪ್ರೀತಿಯಂತೆ ಪ್ರೀತಿ ! ಸೀರೆ ಉಟ್ಟುಕೊಳ್ಳೋದಕ್ಕೆ ಶುರುಮಾಡಿ ನೆಟ್ಟಗೆ ಒಂದು ವರ್ಷವಾಗಿಲ್ಲ— ಅವನನ್ನು ಪ್ರೀತಿಸುತ್ತಾಳಂತೆ ! ಮದುವೆ ಮಾಡಿಕೊಳ್ಳುವುದೂಂದ್ರೆ ಬೊಂಬೆ ಆಟಾಂತ ಅಂದ್ಕೊಂಡಿದಾಳೇನೋ ? ಈಗಿನ ಕಾಲದ ಹುಡುಗರು ಸಿನಿಮಾ, ಕತೆ ಪುಸ್ತಕಗಳನ್ನು ಓದಿ ಮಾತೆತ್ತಿದರೆ ಪ್ರೀತೀಂತ ಶುರುಮಾಡುತ್ತಾರೆ "

"ಅವಳಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕು "

"ಇವಳು ಅವರ ಮನೆಗೆ ಹೋದಾಗ ಚೆನ್ನಾಗಿ ತಿಂಡಿ ಬಿಸ್ಕತ್ತು ಕೊಟ್ಟು ನಯವಾಗಿ ಮಾತನಾಡಿಸಿದಾನೇಂತ ಕಾಣುತ್ತೆ ಸರಿ ಇವಳು ಮರುಳಾಗಿ ಬಿಟ್ಟಿದ್ದಾಳೆ ಅವರ ದೊಡ್ಡ ಮನೆ ವೈಭವ ನೋಡಿ ಬೆರಗಾಗಿ ಹೋಗಿರಬೇಕು ಅವರ ಆಸ್ತಿಯೂ ಬೇಡ ಅವರ ಸಹವಾಸವೂ ಬೇಡ ಇಷ್ಟೆಲ್ಲಾ ನಿನ್ನಿಂದ ಆದದ್ದು" ಎಂದು ನಂಜುಂಡಯ್ಯನವರು ಹತ್ತಿರದಲ್ಲಿಯೇ ನಿಂತಿದ್ದ ಹೆಂಡತಿಯ ಮೇಲೆ ರೇಗಿದರು

"ಅಯ್ಯೋ ನಾನೇನು ಮಾಡಿದೇಂದ್ರೆ "

"ಅವಳು ಮೊದಲನೆ ಸಲ ಗೀತನ ಮನೆಗೆ ಹೋದಾಗಲೇ ಕಾಲು ಮುರಿದು ಮನೇಲಿ ಕೂರಿಸಬೇಕಾಗಿತ್ತು "

"ಹೀಗೆಲ್ಲಾ ಆಗುತ್ತೇಂತ ನಾನೇನು ಕನಸು ಕಂಡಿದ್ದೆನೇ ? ಈಗ ಪದ್ಮಿನಿ ಸ್ನೇಹಿತೆಯರು ಯಾರಾದರೂ ನಮ್ಮ ಮನೆಗೆ ಬಂದರೆ ಅವರ ತಾಯಿ ತಂದೆ ಹೆದರಿಕೊಳ್ಳುತ್ತಾರೆಯೇ ? ಆ ರಾಕ್ಷಸನು ನಮ್ಮ ಮಗೂ

ಮೇಲೆ ಕಣ್ಣು ಹಾಕುತ್ತಾನೆಂತ ನನಗೇನು ಗೊತ್ತು ?"

"ಇವತ್ತೇ ಸದಾನಂದನಿಗೆ ಕಾಗದ ಬರೆದುಬಿಡುತ್ತೇನೆ ಇನ್ನು ಅವನುಂಟು ಅವನ ತಂಗಿಯುಂಟು"

"ಅವನಿಂದಾನೇ ಇಷ್ಟೆಲ್ಲಾ ಹಗರಣ ನಡೆದಿದ್ದು ಈಗ ಮೂರು ವರ್ಷದ ಕೆಳಗೆ ನೀವು ಅವನ ಮಾತು ಕೇಳದೇ ತೆಪ್ಪಗೆ ಮದುವೆಮಾಡಿದ್ದರೆ ಅವಳು ಇಷ್ಟು ಹೊತ್ತಿಗೆ ಮೂರು ಮಕ್ಕಳ ತಾಯಿಯಾಗಿರುತ್ತಿದ್ದಳು"

ಜಲಜಮ್ಮ ಕಣ್ಣೆದುರಿಗಿಲ್ಲದ ಮಗನ ಮೇಲೆ ರೇಗಿದರು

ತಂದೆ ಅಸಮಾಧಾನದಿಂದ ಬುಸುಗುಟ್ಟುತ್ತಿದ್ದಾಗ, ತಾಯಿ ವ್ಯಥೆಯಿಂದ ಕಣ್ಣೀರುಗರೆಯುವುದರಲ್ಲಿದ್ದಾಗ ಪದ್ಮಿನಿ ಎದ್ದು ಹೊರಗೆ ಬಂದಳು

ಧೂಮಕೇತುವಿನಂತಿದ್ದ ತಂದೆಯನ್ನೂ, ಮೋಡಕವಿದ ಹಗಲಿನಂತಿದ್ದ ತಾಯಿಯನ್ನೂ ನೋಡಿ ಅವಳ ಮುಖದ ಮೇಲಿದ್ದ ಉಲ್ಲಾಸ ಮಾಯವಾಯಿತು ಮಗಳನ್ನು ಕಂಡೊಡನೆ ತಾಯಿ ಕೂಗಿದರು

"ಏನೇನು ಅನರ್ಥ ಮಾಡಿಕೊಂಡಿದೀಯೇ?"

ಪದ್ಮಿನಿಗಾಬರಿಯಾಗಿ ಒಂದು ಕ್ಷಣ ಗೋಡೆಗೊರಗಿ ನಿಂತು ಚೇತರಿಸಿಕೊಂಡು ಶಾಂತಳಾಗಿ ಹೇಳಿದಳು—

"ನಾನು ಏನೂ ಅನರ್ಥ ಮಾಡಿಕೊಂಡಿಲ್ಲಾಮ್ಮ"

"ದಿನಾ ಅವರ ಮನೆಗೆ ಹೋಗಿಬಂದು ಮಾಡ್ತಿದ್ದೆ ದೇವರೇ, ಇನ್ನು ಇವಳನ್ನು ಯಾರು ಮದುವೆಯಾಗ್ತಾರೆ ?"

"ನೀನು ಹೆತ್ತ ದಿನ ನಾನು ಹೇಗಿದ್ದೆನೋ ಇವತ್ತಿಗೂ ನಾನು ಹಾಗೇ ಇದೀನಮ್ಮ"

"ನಿನ್ನ ಹೆತ್ತು ನಾನು ಹಾಳಾದೆ ಇನ್ನು ಯಾವ ಪುಣ್ಯಾತ್ಮ ನಿನ್ನ ಕೈಹಿಡೀತಾನೋ ನಾನು ಕಾಣೆ"

"ನಾನೇ ಹೇಳಿದೀನಲ್ಲಾ ಯಾರು ನನ್ನ ಕೈಹಿಡೀತಾರೇಂತ "

"ನಿಮ್ಮ ಮಗಳ ಮಾತು ಕೇಳಿದಿರಾ ?" ಎಂದು ಗಂಡನಿಗೆ ಕೂಗಿ ಹೇಳಿ ಜಲಜಮ್ಮ ಅಳತೊಡಗಿದರು

"ಸದಾನ ಮಾತು ನೆಚ್ಚಿ ನಮ್ಮ ಗತಿ ಹೀಗಾಯಿತು ಅವನ ಮಾತು ಕೇಳದೆ ಮದುವೆ ಮಾಡಿಬಿಟ್ಟಿದ್ದರೆ ನಾವು ಜಾಣರಾಗುತ್ತಿದ್ದೆವು"

ತಾಯಿ ತಂದೆ ಏನೋ ಆಗಬಾರದು ಆಗಿಹೋಗಿದೆ ಎನ್ನುವಂತೆ

ಮಾತನಾಡುತ್ತಿರುವುದನ್ನು ನೋಡಿ ಪದ್ಮಿನಿಗೆ ನಗು ಬಂತು

"ಯಾಕಮ್ಮ ನೀನು ಸುಮ್ಮನೆ ಪೇಚಾಡುತ್ತೀಯಾ ? ನನ್ನಷ್ಟು ಸುಖಿ ಈ ಪ್ರಪಂಚದಲ್ಲಿ ಯಾರೂ ಇಲ್ಲ "

"ಬಯಸಿ ಬಯಸಿ ಮುದುಕನ್ನ ಮದುವೆ ಮಾಡಿಕೊಳ್ಳುವುದು ನ್ಯಾಯವೆ ? ನಿನ್ನ ವಯಸ್ಸೇನು, ಆತನ ವಯಸ್ಸೇನು "

"ವಯಸ್ಸು ಕಟ್ಟಿಕೊಂಡು ಏನಾಗಬೇಕಮ್ಮ ? ಮದುವೆಯ ವಿಷಯ ದಲ್ಲಿ ರೂಪ, ವಯಸ್ಸಿಗಿಂತಲೂ ಮುಖ್ಯವಾಗಿ ಮನಸ್ಸು ಒಪ್ಪಬೇಕು ನಾವಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿಕೊಂಡಿದ್ದೇವೆ ಶಾರದಾಮಣಿಗೂ, ರಾಮಕೃಷ್ಣ ಪರಮಹಂಸರಿಗೂ ಎಷ್ಟು ವರ್ಷ ವ್ಯತ್ಯಾಸವಿತ್ತು ಗೊತ್ತೆ ?"

ಜಲಜಮ್ಮ ಕೆರಳಿ ಹೇಳಿದರು "ಪರಮಹಂಸರನ್ನೂ, ಆತನನ್ನೂ ಹೋಲಿಸಬೇಡ ನೀನು ಆತ ದೇವರ ಅವತಾರ "

"ಪ್ರತಿಯೊಂದು ಆತ್ಮವೂ ನನ್ನ ಒಂದು ಅಂಶ ಎಂದು ದೇವರು ಹೇಳಿ ದ್ದಾರೆ "

"ಸಾಕು ಸುಮ್ಮನಿರು. ಎಲ್ಲಾ ತಿಳಿದವಳ ಹಾಗೆ ಮಾತನಾಡಬೇಡ ನಿಮ್ಮಿಬ್ಬರ ಮದುವೆ ಈ ಜನ್ಮದಲ್ಲಿ ಸಾಧ್ಯವಿಲ್ಲ "

ತಾಯಿಯ ಹಠ ನೋಡಿ ಪದ್ಮಿನಿಯೂ ರೇಗಿ ನುಡಿದಳು,

"ನನಗೂ ಈ ಮದುವೆಗಳಲ್ಲಿ ನಂಬಿಕೆಯಿಲ್ಲ ಮದುವೆ ಮಾಡಿ ಕೊಳ್ಳುವುದು ಸಮಾಜ, ಜನತೆಗೋಸ್ಕರವೇ ಹೊರತು ನಮಗೋಸ್ಕರ ವೇನಲ್ಲ. ಮನಸ್ಸು ಒಂದುಗೂಡಿದ ಮೇಲೆ ಮದುವೆ ಯಾಕೆ "

ಜಲಜಮ್ಮ ಆರ್ಭಟಿಸಿದರು "ಏನು ಮಾಡುತ್ತೀಯ ಮದುವೆ ಮಾಡದಿದ್ದರೆ ?"

ಪದ್ಮಿನಿಯೂ ದುಡುಕಿ ಹೇಳಿದಳು "ಬೇಡವೇ ಬೇಡ ನಾನು ಹೋಗಿ ಅವರ ಮನೆಯಲ್ಲಿದ್ದುಬಿಡುತ್ತೇನೆ ಆಗ ನಿಮಗೇ ಅವಮಾನ ಆಗ ನೀವು ನಾಲ್ಕು ಜನರಲ್ಲಿ ಮುಖ ಎತ್ತುವುದಕ್ಕಾಗುವುದಿಲ್ಲ "

"ನಿಮ್ಮ ಮಗಳ ಮಾತು ಕೇಳಿ ಬನ್ನಿ" ಎಂದು ಕೂಗಿದರು ಜಲಜಮ್ಮ. ಆದರೆ ನಂಜುಂಡಯ್ಯನವರು ತಾತ್ಸಾರದಿಂದ

"ಅವಳು ಎಲ್ಲಾದರೂ ಹಾಳಾಗಲಿ ಸದಾನಂದನಿಗೆ ಕೂಡಲೇ

ಬರುವ ಹಾಗೆ ಕಾಗದ ಬರೆಯುತ್ತೇನೆ ಅವನು ಬಂದಮೇಲೆ ಏನಾದರೂ ಮಾಡಿಕೊಳ್ಳಲಿ" ಎಂದರು

ಪದ್ಮಿನಿ ಬಚ್ಚಲುಮನೆಗೆ ಹೋಗಿ ಬಾಗಿಲನ್ನು ಹಾಕಿಕೊಂಡು ಮೊಳ ಕಾಲ ಮೇಲೆ ತಲೆ ಇಟ್ಟು ಬಿಕ್ಕಿಬಿಕ್ಕಿ ಅತ್ತಳು

ಆ ದಿನ ಪದ್ಮಿನಿಯೊಡನೆ ಯಾರೂ ಮಾತನಾಡಲಿಲ್ಲ ಕಾಲೇಜಿಗೆ ಹೋಗುವ ಸಮಯವಾಗಲು ಪದ್ಮಿನಿ ತಟ್ಟೆ ಹಾಕಿಕೊಂಡು ಕುಳಿತಳು ತಾಯಿ ಮಾತನಾಡದೇ ತಟ್ಟೆಗೆ ಅನ್ನ ಸುರಿದರು ಮೌನವಾಗಿ ಊಟ ಮಾಡಿ ಪದ್ಮಿನಿ ಕಾಲೇಜಿಗೆ ಹೊರಟಳು

ಕಾಲೇಜಿನಲ್ಲಿ ಅವಳ ಸಪ್ಪೆ ಮುಖವನ್ನು ನೋಡಿ ಗೀತಾ ಕೇಳಿದಳು

"ಏನು ಗಲಾಟೆ ಮಾಡಿಕೊಂಡಿದೀಯ ?"

"ಏನೂ ಇಲ್ಲ" ಎಂದು ಮೊಟಕು ಉತ್ತರ ಕೊಟ್ಟಳು ಪದ್ಮಿನಿ

ಸಂಜೆ ಪದ್ಮಿನಿ ಮನೆಗೆ ಬಂದಾಗಲೂ ಬೆಳಗಿನ ಬೆಂಕಿ ಇನ್ನೂ ಆರಿರ ಲಿಲ್ಲ

ಸಂಜೆ ಕಾಫಿ ತಿಂಡಿ ಮುಗಿಸಿ ಪದ್ಮಿನಿ ತಾಯಿಯ ಬಳಿ ನಿಂತು,

"ಅಮ್ಮಾ, ಗೀತನ ಮನೆಗ ಹೋಗಿಬರುತ್ತೇನೆ" ಎಂದಳು

"ಯಾಕೆ ನನ್ನ ಹೊಟ್ಟೆ ಉರಿಸುತ್ತೀಯಾ ?" ಎಂದರು ತಾಯಿ

ಪದ್ಮಿನಿ ಹಿಂತಿರುಗಿನೋಡದೆಯೇ ಮೆಟ್ಟಲಿಳಿದು ಗೀತನ ಮನೆಯ ಕಡೆ ಹೊರಟಳು ಪದ್ಮಿನಿಯನ್ನು ಕಂಡೊಡನೆಯೇ ಮೂರ್ತಿ ಹುಬ್ಬೇರಿಸಿ,

"ಏನಾಯಿತು ರಾಣಿಯವರ ರಾಯಭಾರ ?" ಎಂದರು

"ನನ್ನ ರಾಯಭಾರ ವಿಫಲವಾಯಿತು "

"ಮುಂದೆ ದಾರಿ ?"

"ನಮ್ಮ ಅರ್ಜೀನ ಹೈಕೋರ್ಟಿಗೆ ಹಾಕಿ ನೋಡೋಣ-"

"ಯಾರೇ ನಿನ್ನ ಹೈಕೋರ್ಟ್ ?"

"ಸದಾನಂದ ಅವನು ಅಮ್ಮ ಅಣ್ಣನ ಹಾಗೆ ಹಳೆಯ ಕಾಲದವನಲ್ಲ ಅವನನ್ನು ಒಪ್ಪಿಸುವುದು ನನಗೆ ಕಷ್ಟವಾಗುವುದಿಲ್ಲ ಅಮ್ಮ, ಅಣ್ಣನ ಹತ್ತಿರ ನಾನು ಮನಬಿಚ್ಚಿ ಮಾತನಾಡಲಾರೆ. ಆದರೆ ಅವನ ಹತ್ತಿರ ಮಾತನಾಡಲು ನನಗೆ ಯಾವ ಸಂಕೋಚವೂ ಇಲ್ಲ. ಅವನೊಡನೆ ನಾನು ಸ್ಪಷ್ಟವಾಗಿ,

ನಿರ್ಭಯವಾಗಿ ಬಿಚ್ಚಿದ ಮನಸ್ಸಿನಿಂದ ಮಾತನಾಡಬಲ್ಲೆ."

"ಆದರೆ ಅವನು ಇಲ್ಲಿಗೆ ಬರಬೇಕಲ್ಲ ?"

"ಅಣ್ಣಾನೆ ಅವನನ್ನು ಇಲ್ಲಿಗೆ ಕರೆಸುತ್ತಾರೆ."

"ಕಾರಣ ?"

"ನನಗೆ ಬುದ್ಧಿ ಹೇಳುವುದಕ್ಕೆ."

ಮುಂದೆ ಮಾತು ಬೆಳಸದೆ ಮೂರ್ತಿ ಮೌನವಾಗಿ ಕುಳಿತರು ಅವರ ಮೌನವನ್ನು ಕಂಡು ಪದ್ಮಿನಿ ಕೇಳಿದಳು,

"ಇದೇನು ಇದ್ದಕ್ಕಿದ್ದ ಹಾಗೇ ಮೂಕರಾಗಿಬಿಟ್ಟಿರಲ್ಲಾ."

ಮೂರ್ತಿ ನಿಧಾನವಾಗಿ ಹೇಳಿದರು : "ನಿಮ್ಮ ತಾಯಿ ತಂದೆಯ ಮಾತಿನಲ್ಲಿ ಏನೂ ತಪ್ಪಿಲ್ಲ ತಮ್ಮ ಮಗಳ ಸುಖಕ್ಕಾಗಿ ಅವರು ಹಾಗೆ ಹೇಳ್ತಾರೆ ಒಂದುಪಕ್ಷ ಗೀತ ಯಾರಾದರೂ ವಯಸ್ಸಾದವರನ್ನು ಮದುವೆಯಾಗುತ್ತೇನೆಂದು ಹಠ ಹಿಡಿದಿದ್ದರೆ ಆಗ ನಾನೂ ಹೀಗೆ ವಿರೋಧಿಸುತ್ತಿದ್ದೆನೊ ಏನೋ ? ಪದ್ಮಿನಿ, ಈಗಲೂ ನನ್ನ ಮಾತು ಕೇಳು ನನ್ನನ್ನು ಮರೆತು ನಿನಗನುರೂಪನಾದವನ ಕೈ ಹಿಡಿದು ಸುಖ ವಾಗಿರು."

"ಇನ್ನೊಬ್ಬನ ಕೈ ಹಿಡಿದ ಮೇಲೆ ನನಗೆ ಸುಖ ಎಲ್ಲಿಂದ ಬಂತು ? ನಿಮಗಾಗಿ ನಾನು ನಿಮ್ಮನ್ನು ಮದುವೆಯಾಗಲು ಬಯಸುತ್ತಿಲ್ಲ ನನಗಾಗಿ, ನನ್ನ ಸುಖ ಸಂತೋಷಕ್ಕಾಗಿ, ಸ್ವಾರ್ಥಕ್ಕಾಗಿ ನಿಮ್ಮನ್ನು ಮದುವೆಯಾಗ್ತ್ತೀನೆ ಇದರಲ್ಲಿ ನನ್ನ ತ್ಯಾಗವೇನಿಲ್ಲ ನನ್ನ ಸಂತೋಷ, ತೃಪ್ತೀನೂ ನಾನು ಲೆಕ್ಕಿಸಬೇಡವೇ ?"

"ಸೆಂಟಿಮೆಂಟಲ್ ಆಗಿ ಮಾತನಾಡಬೇಡ ಪ್ರಾಕ್ಟಿಕಲ್ ಆಗಿ ಹೇಳು."

"ಹೇಗೆ ಹೇಳಿದರೂ ಇಷ್ಟೆ."

"ಸರಿ. ನಿನ್ನ ಅಭಿಪ್ರಾಯ ಕೇಳಾಯಿತು ಇನ್ನು ನನ್ನ ಅಭಿಪ್ರಾಯ ತಿಳಿಸಲೇ ?"

ಪದ್ಮಿನಿ ತವಕದಿಂದ "ಹೇಳಿ" ಎಂದಳು

"ನಿನ್ನ ಇನ್ನು ಮೇಲೆ ನನ್ನ ಮನೆಗೆ ಸೇರಿಸೋದಿಲ್ಲ."

"ನಾನಾಗಿಯೇ ಬಂದರೂ ನೀವೇನೂ ಮಾಡುವಹಾಗಿಲ್ಲ"

"ಜೂಲೀನ ನಿನ್ನ ಮೇಲೆ ಛೂ ಬಿಡುತ್ತೇನೆ"

ಪದ್ಮಿನಿ ನಕ್ಕು "ನಾನು ಜೂಲಿ ಈಗ ಗೆಳೆಯರು" ಎಂದಳು.

"ಹನುಮನ ಕೈಲಿ ಕತ್ತು ಹಿಡಿದು ಆಚೆಗೆ ದಬ್ಬಿಸುತ್ತೇನೆ"

"ಎಲ್ಲಿ ಈಗಲೇ ಆಚೆಗೆ ನೂಕಿಸಿ ನೋಡೋಣ"

"ಅವನು ಬೇಡ ನಾನೇ ತಳ್ಳುತ್ತೇನೆ"

"ತಳ್ಳಿ, ನೋಡೋಣ"

ಮೂರ್ತಿ ಬೆರಳುಗಳನ್ನು ಮುತ್ತಿಟ್ಟುಕೊಂಡು "ನನ್ನ ದುರ್ಬಲ ತೇನ ನೀನು ಚೆನ್ನಾಗಿ ತಿಳಿದುಕೊಂಡಿದೀಯ ಅದರಿಂದಾನೆ ಇಷ್ಟೊಂದು ಪುಂಡತನ ಮಾಡುತ್ತಿದೀಯಾ ಪದ್ಮಿನಿ ನನ್ನ ಮೇಲೆ ದಯೆ ತೋರಿಸು"

"ದಯೆ ತೋರಿಸುವುದು ಎಂದರೆ ?"

"ನನ್ನನ್ನು ಕಾಡಬೇಡ ನಮ್ಮ ಮನೆಗೆ ಬರಬೇಡ ಈ ಮಾತನ್ನು ನಾನು ಅವತ್ತೇ ಹೇಳಿದೆ ಆದರೆ ನೀನು ಕೇಳಲಿಲ್ಲ. ಈಗಲೂ ಕಾಲ ಮೀರಿಲ್ಲ ನಮ್ಮಿಬ್ಬರ ಬದುಕಿನ ಹಾದಿ ಬೇರೆಬೇರೆಯಾಗಲಿ"

"ಪ್ರಪಂಚ ಗುಂಡಾಗಿದೆ ಆದುದರಿಂದ ನಾವು ಮತ್ತೆ ಸಂಧಿಸುತ್ತೇವೆ."

"ಅಷ್ಟುಹೊತ್ತಿಗೆ ನೀನು ಮರೆತಿರಬಹುದು"

"ನೀವು ಹೀಗೆಲ್ಲಾ ಮಾತನಾಡಿದರೆ ನಂಗೆ ಅಳು ಬರುತ್ತದೆ"

"ನೀನು ಅಳುತ್ತಿರುವಾಗ ಆಕಸ್ಮಾತ್ ಗೀತ ಬಂದು ನೋಡಿದರೆ ಏನೆಂದುಕೊಳ್ಳುತ್ತಾಳೆ ನಾನು ಹೊಡೆದೆ ಎಂದುಕೊಂಡರೆ ಕಷ್ಟ"

"ಅವಳು ಹಾಗೆ ತಿಳಿದುಕೊಂಡರೆ ನನಗೆ ತುಂಬಾ ಸಂತೋಷ ವಾಗುತ್ತೆ"

"ನೀನು ನಾನು ಹೇಳಿದ ಹಾಗೆ ಕೇಳ್ತೀಯೋ ಇಲ್ವೋ?"

"ನಿಮ್ಮಿಂದ ದೂರವಿರುವ ಒಂದು ವಿಷಯ ಬಿಟ್ಟು"

"ನಿನಗೆ ಏನು ಮಾಡಬೇಕು ಗೊತ್ತೆ ? ಈಚೀಚೆಗೆ ನೀನು ಬಹಳ ಕೆಟ್ಟುಹೋಗಿದೀಯ. ನಿನ್ನ ಹಿಡಿದು ಚೆನ್ನಾಗಿ ಹುಂ ಹೇಳಿ ಏನು ಪ್ರಯೋಜನ ?"

ಪದ್ಮಿನಿ ಸಪ್ಪೆಮುಖ ಮಾಡಿಕೊಂಡು "ನನ್ನ ನಿಮ್ಮಿಂದ ದೂರ

ಕಳಿಸಬೇಡಿ" ಎಂದಳು

"ನಿಮ್ಮ ತಾಯಿ-ತಂದೆ, ಅಣ್ಣ ನಿಗಾಗಿಯಾದರೂ ನನ್ನಿಂದ ದೂರವಿರ ಬಾರದೇ ?"

"ಅವರ ತೃಪ್ತಿ ಸಂತೋಷಕ್ಕಿಂತಲೂ ನನಗೆ ಸ್ವಸಂತೋಷ ಹೆಚ್ಚಿನದು "

"ನಿನ್ನ ಸಂತೋಷಪಡಿಸುವುದೇನು ಮಹಾಕಷ್ಟ ಎರಡು ಪೆಪ್ಪರು ಮೆಂಟ್ ಬಾಯಿಗೆ ಹಾಕಿದರೆ ಚಪ್ಪರಿಸುತ್ತಾ ಹೊರಟುಹೋಗ್ತೀಯ "

"ಪೆಪ್ಪರುಮೆಂಟ್ ಚಪ್ಪರಿಸುವ ಕಾಲ ಕಳೆದುಹೋಯಿತು ನನಗೊಂದು ಪ್ರಾಮಿಸ್ ಮಾಡ್ತೀರಾ ?"

"ಏನದು ?"

"ಆಣೆಮಾಡಿ ಹೇಳಿ "

"ಪೆಪ್ಪರುಮೆಂಟು ಚಪ್ಪರಿಸುವ ಹುಡುಗಿಯರಿಗೇ ಆಣೆಯಲ್ಲಿ ನಂಬಿಕೆ ಇರುವುದು , ಬುದ್ಧಿ ಇರುವವರು ಆಣೆಮಾಡುವುದಿಲ್ಲ "

"ಪರವಾಗಿಲ್ಲ ಮಾತುಕೊಡಿ "

"ಆಗಲಿ ಹೇಳು "

"ಇನ್ನು ಮೇಲೆ ನನ್ನಲ್ಲಿ ದಯೆತೋರು, ಕೃಪೆಮಾಡು ಎಂದು ಕೇಳಿ ಕೊಳ್ಳಬಾರದು ನೀವು ಕೇಳಿಕೊಂಡರೂ ನಾನು ಕರಗುವುದಿಲ್ಲ ನಮ್ಮಣ್ಣ ಸದಾಗೆ ಬರುವಂತೆ ಮನೆಯಲ್ಲಿ ಕಾಗದ ಬರೆದಿದ್ದಾರೆ ಅವನು ಬಂದರೆ ಆಗ ಯಾವುದನ್ನಾದರೂ ನಿರ್ಧರಿಸಬಹುದು ಅವನನ್ನು ನಾನು ಒಲಿಸಿ ಕೊಳ್ಳಬಲ್ಲೆ ಆ ಧೈರ್ಯ ನನಗಿದೆ ಅವನು ಒಪ್ಪಿಬಿಟ್ಟರೆ ಆಗ, ಅಮ್ಮ ಅಣ್ಣ ಅವನ ಮಾತಿಗೆ ಬದಲು ಹೇಳುವುದಿಲ್ಲ "

"ಈಗ್ಗೆ ಹದಿಮೂರು ವರ್ಷಗಳ ಹಿಂದೇನೇ ನೀನು ಈಗಿರುವ ಹಾಗೇ ಇದ್ದು ನನ್ನ ಕಣ್ಣಿಗೆ ಬಿದ್ದಿದ್ದರೆ ಚೆನ್ನಾಗಿತ್ತು "

ನಿಟ್ಟುಸಿರಿನೊಡನೆ ಬಂದ ಈ ಮಾತನ್ನು ಕೇಳಿ ಪದ್ಮಿನಿ,

"ಅಂತಹದೇನಪ್ಪ ನಿಮಗೆ ಕಷ್ಟ ಬಂದಿರೋದು ? ನಾವು ಸಂತೋಷ ವಾಗಿರಬಹುದಾದಾಗ ನೀವು ಇಲ್ಲದ ವ್ಯಥೆ ತಂದುಕೊಳ್ಳುತ್ತಿದೀರಿ ಎಲ್ಲಿ ಒಂದು ಸಲ ನಕ್ಕುಬಿಟ್ಟು, ನಗುವಿನಲ್ಲಿ ನಿಮ್ಮ ಕೊರಗು, ಮೂರ್ನಿಂಗ್

ಎಲ್ಲಾನೂ ಕೊಚ್ಚಿಸಿಬಿಡಿ ”

ಮೂರ್ತಿ ಕಿರುನಗೆ ಬೀರಿ “ಅದಕ್ಕೇ ನಾನು ನಿನಗೆ ಮರುಳಾಗಿರುವುದು ನೀನಿದ್ದರೆ ನಿದ್ದೆಮಾಡಿ ಎದ್ದವರ ಹಾಗೆ ನನ್ನ ದೇಹ ಮನಸ್ಸು ಎರಡೂ ಹಗುರವಾಗಿರುತ್ತದೆ ”

“ಈಗ ಹಗುರ ನನ್ನ ಕಟ್ಟಿಕೊಂಡಮೇಲೆ ಗೊತ್ತಾಗುತ್ತೆ ಭಾರ ”

“ನೀನು ಯೌವನದ ಚಿಲುಮೆ ಅದರಲ್ಲಿ ಮೀಯುವ ನಾನು ಎಂದೆಂದಿಗೂ ಹಗುರ ಮನಸ್ಸಿನ ಮನುಷ್ಯ ”

“ಈ ರೀತಿ ನೀವು ಎಷ್ಟು ಹೊತ್ತು ಮಾತನಾಡಿದರೂ ನಾನು ಕೇಳೋಕೆ ಸಿದ್ಧ ”

“ಪಾಪ ! ಕೇಳದೇ ಏನು ಮಾಡ್ತೀಯ ? ಕತ್ತಲಾಯಿತು ಹೊರಡು ಮನೆಗೆ” ಎಂದು ಹೇಳಿ ಮೂರ್ತಿ ಮಾಟಿನಲ್ಲಿ ಮೈಮರೆತು ಕುಳಿತಿದ್ದ ಪದ್ಮಿನಿಯನ್ನು ತಾವೇ ಎಬ್ಬಿಸಿದರು

ಪದ್ಮಿನಿ ಮನೆಗೆ ಬಂದಾಗ ಚೆನ್ನಾಗಿ ಕತ್ತಲಾಗಿತ್ತು ಅವಳು ಒಳಗೆ ಬಂದೊಡನೆ ಜಲಜಮ್ಮ ಮಗಳನ್ನು ದುರುಗುಟ್ಟಿ ನೋಡಿದರು ಆದರೆ ಅವಳನ್ನು ಬೈಯುವ, ಹಿಡಿದು ಥಳಿಸುವ ಧೈರ್ಯ ಅವರಿಗೆ ಬರಲಿಲ್ಲ

ತನಗಿಂತಲೂ ಎತ್ತರವಾಗಿ ಸೊಂಪಾಗಿ ಬೆಳೆದಿದ್ದ ಮುದ್ದಿನ ಮಗಳವಳು ಸದಾನಂದನ ಅಚ್ಚು ಮೆಚ್ಚಿನ ತಂಗಿ ಬುದ್ಧಿ ಬಂದಿದ್ದ ಕಾಲೇಜಿನ ವಿದ್ಯಾರ್ಥಿನಿ ತಾನೇನಾದರೂ ಕೋಪದ ಭರದಲ್ಲಿ ಒಂದೆರಡು ಮಾತುಗಳನ್ನಾಡಿಬಿಟ್ಟರೆ ಆಮೇಲೆ ಅವಳು ಏನಾದರೂ ಮಾಡಿಕೊಂಡರೋ ? ಈಗಿನ ಕಾಲದ ಹುಡುಗರ ಮನಸ್ಸು ಹೀಗೇ ಎಂದು ಹೇಳಲು ಬರುವುದಿಲ್ಲ ಪರೀಕ್ಷೆಯ ಪ್ರಶ್ನೆಪತ್ರಿಕೆ ಕಠಿಣವಾಗಿತ್ತೆಂದು ಸರಿಯಾದ ಉತ್ತರ ಬರೆಯದಿದ್ದ ಕಾರಣ, ಕಾಲೇಜಿನಲ್ಲಿ ಸೀಟು ಸಿಕ್ಕಲಿಲ್ಲವೆಂಬ ಕಾರಣದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದವರ ವಿಷಯವನ್ನು ದಿನಬೆಳಗಾದರೆ ಅವರು ವೃತ್ತಪತ್ರಿಕೆಗಳಲ್ಲಿ ಓದುತ್ತಿದ್ದರು ಅದರಲ್ಲಿಯೂ ಅವರು ಓದಿದ್ದ ಒಂದು ಭೀಕರ ಸಂಗತಿಯನ್ನು ಅವರು ಮರೆಯುವುದು ಸಾಧ್ಯವಿರಲಿಲ್ಲ

ಮನೆಯವರು ಅಡ್ಡಿಪಡಿಸಿದರೆಂಬ ಕಾರಣದಿಂದ ಪ್ರೇಮಿಗಳ ಜೋಡಿಯೊಂದು ಕೊಳವೊಂದಕ್ಕೆ ಧುಮುಕಿ ಜೊತೆಯಾಗಿಯೇ ಸಾವನ್ನಪ್ಪಿದ್ದರು.

ಇವೆಲ್ಲ ಸಂಗತಿಗಳೂ ಅವರ ಮನಸ್ಸಿನಿಂದ ಮರೆಯಾಗಿರಲಿಲ್ಲ ಆದುದರಿಂದಲೇ ಅವರಿಗೆ ಮಗಳನ್ನು ಎದುರಿಸುವ ಧೈರ್ಯ ಬರಲಿಲ್ಲ

"ಸಧ್ಯ ಸದಾನಂದ ಬಂದು ಈ ಬಿಕ್ಕಟ್ಟನ್ನು ಪರಿಹರಿಸಿಬಿಟ್ಟರೆ ಸಾಕು" ಎಂದು ತಾಯಿ ದೇವರಿಗೆ ಮೊರೆಯಿಟ್ಟರು

"ಕತ್ತಲೇಲಿ ಒಬ್ಬಳೇ ಬಂದೆಯಾ?—ಬೇಗಾದರೂ ಬರಬಹುದಿತ್ತು" ಎಂದು ಜಲಜಮ್ಮ ಹೇಳಿದಾಗ ಪದ್ಮಿನಿ ಉಲ್ಲಾಸದಿಂದ,

"ಒಬ್ಬಳೇ ಬರಲಿಲ್ಲಮ್ಮ ನನ್ನ ಜೊತೆ ಅವರೂ ಬಂದಿದ್ದರು"

"ಅವರು !"

"ಗೀತನ ತಂದೆ" ಎನ್ನುತ್ತಾ ಪದ್ಮಿನಿ ತಾಯಿಯ ಮುಖ ನೋಡಿ ನಕ್ಕಳು

* * *

ಸದಾನಂದನ ಆಗಮನವನ್ನು ಮನೆಯವರೆಲ್ಲ ತುದಿಗಾಲಿನಲ್ಲಿ ನಿಂತು ನಿರೀಕ್ಷಿಸುತ್ತಿದ್ದರು ಅವನ ಆಗಮನದ ಸುದ್ದಿ ಕೇಳಿ ಮನೆಗೆ ಮನೆಯೇ ಗೆಲುವಾಗಿತ್ತು ಅವನು ಬರೋಡೆಗೆ ಹೋಗಿ ಎರಡು ವರ್ಷಗಳಾಗಿದ್ದರೂ ಒಂದು ಬಾರಿಯೂ ಇತ್ತ ಕಡೆ ಬಂದಿರಲಿಲ್ಲ ಆದುದರಿಂದಲೇ ಎಲ್ಲರೂ ತವಕದಿಂದ ಎದುರು ನೋಡುತ್ತಿದ್ದರು

ನಂಜುಂಡಯ್ಯನವರು ಮಗನಿಗೆ ಅಗತ್ಯವಾಗಿ ಬರಬೇಕೆಂದು ಕಾಗದ ಬರೆದಿದ್ದರೇ ಹೊರತು ಕಾರಣವನ್ನು ಮಾತ್ರ ಅವನಿಗೆ ತಿಳಿಸಿರಲಿಲ್ಲ

ಅಣ್ಣನನ್ನು ನೋಡುವ ಆತುರದಲ್ಲಿ ಪದ್ಮಿನಿ ಕಾಲೇಜನ್ನು ಸಹ ಮರೆತಿದ್ದಳು

ಗಾಡಿಯಿಂದಿಳಿದು ಒಳಗೆ ಬಂದ ಸದಾನಂದ ತನ್ನೊಡನೆ ನಗು, ಉಲ್ಲಾಸ, ಬೆಳಕನ್ನು ಜೊತೆಯಲ್ಲಿಯೇ ಕರೆದುಕೊಂಡು ಬಂದಿದ್ದ.

ಅಣ್ಣನನ್ನು ನೋಡಿ ಪದ್ಮಿನಿ ಹಿಂದಿನಂತೆ ಓಡಿಹೋಗಲಿಲ್ಲ ಬದಲು ಮೆಟ್ಟಿಲಿನ ಮೇಲೆ ಕಂಭವೊಂದನ್ನೊರಗಿನಿಂತಿದ್ದವಳು ಸುಂದರವಾಗಿ ನಕ್ಕು

"ಬಾಣ್ಣ ಸದ್ದಾ" ಎಂದಳು

ತಂಗಿಯನ್ನು ನೋಡಿದೊಡನೆ ಅವಳಲ್ಲೇನೋ ದೊಡ್ಡ ಬದಲಾವಣೆಯಾಗಿದೆ ಎನಿಸಿತು ಸದಾನಂದನಿಗೆ.

ರೂಪಸಿ ಅಪ್ಸರೆಯಾಗಿದ್ದಳು ಬಳ್ಳಿಯೊಂದು ಮಿಂಚುಬಳ್ಳಿಯಾಗಿತ್ತು ಅವಳ ನಗುವಿನಲ್ಲಿ ಸ್ವಾಗತ, ಸಂಭ್ರಮವಿತ್ತು ಅವಳ ಕಣ್ಣುಗಳು ಎಂದಿನಂತೆಯೇ ಅಭಿಮಾನದಿಂದ ಅಣ್ಣನನ್ನು ನೋಡಿದುವು

ಆದರೂ ಅವಳು ಹಿಂದಿನ ಪದ್ಮಿನಿಯಲ್ಲವೆನಿಸಿತು ಸದಾನಂದನಿಗೆ ಅವಳಲ್ಲಿ ಹಿಂದಿನ ಚಂಚಲತೆ, ಹುಡುಗಾಟ ಈಗಲೂ ಕಾಣುತ್ತಿತ್ತು

ಆದರೂ ಇವಳು ಮೊದಲಿನ ಪದ್ಮಿನಿಯಲ್ಲ ಎಂದುಕೊಂಡ ಸದಾನಂದ ಹಾಗೆಯೇ ತಂಗಿಯ ಕಣ್ಣು ಕೋರಯಿಸುವ ಚೆಲುವು, ಹೃದಯ ಹಗುರಗೊಳಿಸುವ ಮೋಹಕ ನಗೆ ನೋಡಿ ಅವನ ಮನಸ್ಸು ಅಭಿಮಾನದಿಂದ ಉಬ್ಬಿತು

"ಏನೇ ನನಗಿಂತ ಎತ್ತರವಾಗಿಬಿಟ್ಟಿದ್ದೀಯ" ಎನ್ನುತ್ತಾ ಸದಾನಂದ ತಂಗಿಯ ಬೆನ್ನಿನ ಮೇಲೆ ಮೃದುವಾಗಿ ಹೊಡೆದ

"ಈಗ ನಿನ್ನ ನೋಡಿ ನಾನು ಸೋಲೊಪ್ಪಿಕೊಂಡೆ "

"ಕಾಲೇಜಿಲ್ಲವೇ ?"

"ಇತ್ತು ನಿನಗಾಗಿ ರಜ ತೆಗೆದುಕೊಂಡೆ "

"ಒಳಗೆ ಬಾಪ್ಪಾ ಸದಾ" ಎಂದು ಕೂಗಿದರು ಸದಾನಂದ ಒಳಗೆ ಹೋದ ಪದ್ಮಿನಿಯೂ ಅಣ್ಣನನ್ನು ಹಿಂಬಾಲಿಸಿದಳು

ಸದಾನಂದನ ಉಡಿಗೆ ತೊಡಿಗೆ ಇರಸರಿಕೆ ಬಹಳ ಸುಧಾರಿಸಿತ್ತು, ಅದನ್ನು ನೋಡಿ ಪದ್ಮಿನಿಗೂ ಆಶ್ಚರ್ಯವಾಗಿತ್ತು

ಯೌವನ, ಅಲಂಕಾರಪ್ರಿಯತೆಗೆ ಸಂಬಂಧವಿರಬೇಕೆಂದುಕೊಂಡಳು ಪದ್ಮಿನಿ ಸದಾನಂದ ಬಂದನೆಂಬ ಸಂಭ್ರಮದಿಂದ ಮನೆಯ ಮೂಲೆ ಮೂಲೆಯೂ ಬೆಳಕಾಗಿತ್ತು ಸದಾನಂದ ತಾನು ಬರೋಡಾದಿಂದ ತಂದಿದ್ದ ಸಿಲ್ಕಿನ ಸೀರೆಗಳನ್ನು ಪದ್ಮಿನಿಗೆ ಕೊಟ್ಟ

"ತುಂಬಾ ಚೆನ್ನಾಗಿದೆ ನಿನಗೆ ಇಷ್ಟು ಒಳ್ಳೇ ಅಭಿರುಚಿ ಇದೇಂತ ನನಗೆ ಗೊತ್ತಿರಲಿಲ್ಲ" ಎಂದು ಪದ್ಮಿನಿ ಹೇಳಿದಾಗ ಸದಾನಂದ "ಈ ಸೀರೆಗಳನ್ನು ಆರಿಸಿದವನು ನಾನಲ್ಲ ನನ್ನ ಮಿತ್ರನೊಬ್ಬನ ಮಡದಿ ಆಕೆಗೆ ಎರಡು ಸೀರೆ ತಂದುಕೊಡುವಂತೆ ಹೇಳಿದ್ದೆ" ಎಂದ

"ಇಷ್ಟೇನೆ ರಾಯರ ಜಾಣತನ" ಎಂದು ಪದ್ಮಿನಿ ಮೂದಲಿಸಿದಳು.

"ಆ ಮುಗಿಲ ಬಣ್ಣದ ಕಾಶ್ಮೀರ ಸಿಲ್ಕಿನ ಸೀರೆ ನಿನಗೆ ತುಂಬಾ ಚೆನ್ನಾಗಿ ಒಪ್ಪಬಹುದು ಸಂಜೆಗೆ ಉಟ್ಟುಕೋ" ಎಂದ ಸದಾನಂದ

"ಹೊಸ ಸೀರೆ ಉಟ್ಟುಕೊಂಡು ನಿನಗೆ ನಮಸ್ಕಾರ ಮಾಡ್ತೀನಿ ನನ್ನ ಮನೋಭಿಲಾಷೆ ನೆರವೇರಲೀಂತ ಆಶೀರ್ವಾದ ಮಾಡ್ತೀಯಾ ?"

"ಓಹೋ ಈಗಲೂ ಆಶೀರ್ವಾದ ಮಾಡೋಕೆ ನಾನು ಸಿದ್ಧ "

ಹನ್ನೊಂದೂವರೆ ಗಂಟೆಯಾದರೂ ಅಣ್ಣಾ ತಂಗಿಯರ ಮಾತು ಮುಗಿಯುವಂತೆ ತೋರಲಿಲ್ಲ ಜಲಜಮ್ಮ ಎಲ್ಲರಿಗೂ ಎಲೆ ಹಾಕಿ ಸದಾನಂದನ ಬಳಿಗೆ ಬಂದು,

"ಎಲೆ ಹಾಕಿದೆ ಊಟ ಮಾಡಿ ಮಾತಿಗೆ ಕೂತ್ಕೊಳ್ಳಿ" ಎಂದರು

ಊಟ ಮುಗಿದ ಮೇಲೆ ಪದ್ಮಿನಿ ಅಣ್ಣನಿಗೆ,

"ನನ್ನ ಸ್ನೇಹಿತೆಯೊಬ್ಬಳು ಕ್ರೋಷಾ ಹೇಳಿಕೊಡ್ತೀನೀಂತ ಹೇಳಿದ್ದಳು ಹೇಳಿಸಿಕೊಂಡು ಬರುತ್ತೇನೆ" ಎಂದಳು

"ಈ ಬಿಸಿಲಿನಲ್ಲಿ ?"

ತಂದೆ, ಮಗ ಮಾತನಾಡುವುದು ಬಹಳವಿದೆ ಎಂದು ಪದ್ಮಿನಿಗೆ ತಿಳಿದಿತ್ತು ಅವರು ಮಗನೊಡನೆ ಪದ್ಮಿನಿಯ ಚರಿತ್ರೆಯನ್ನು ವಿವರಿಸುವಾಗ ಮೂರ್ತಿಯ ನಿಂದನೆ ಅನಿವಾರ್ಯವಾಗಿ ಬಂದೇ ಬರುವುದೆಂದು ಅವಳಿಗೆ ತಿಳಿದಿತ್ತು ತಂದೆ ಆತನನ್ನು ನಿಂದಿಸುವಾಗ ತಾನು ಸುಮ್ಮನೆ ಕೇಳಲಾಗದೇ ದುಡುಕಿ ಮಾತನಾಡಿ ವೃಥಾ ಕಲಹಕ್ಕೆ ಕಾರಣವಾಗಬಹುದು ಎಂದು ಅಳುಕಿ ಪದ್ಮಿನಿ ಕ್ರೋಷಾ ಕಲಿಯುವ ನೆಪ ಹಾಕಿಕೊಂಡು ಹೊರಗೆ ಹೊರಟಿದ್ದಳು

ತಂದೆ ಮಗನಿಗೆ ಹೇಳಬೇಕಾದುದನ್ನೆಲ್ಲಾ ಹೇಳಿ ಮುಗಿಸಿದ ಮೇಲೆ ತನ್ನ ಭಾಗದ ವಿವರಣೆ ಕೊಟ್ಟರೆ ಸರಿ ಎಂದವಳು ನಿರ್ಧರಿಸಿದ್ದಳು

ತಾಯಿ ತಂದೆ ಮಗನಿಗೆ ತನ್ನ ವಿಷಯ ಕುರಿತು ಮನಸೋಕ್ತವಾಗಿ ಚರ್ಚಿಸಲು ಬಿಟ್ಟು ಪದ್ಮಿನಿ ಗೆಳತಿಯ ಮನೆಗೆ ಹೊರಟುಹೋದಳು

ಅವಳು ಮನೆಗೆ ವಾಪಸ್ಸು ಬಂದಾಗ ಸಂಜೆ ಐದು ಗಂಟೆಯಾಗಿತ್ತು ಅವಳು ಬರುವಷ್ಟು ಹೊತ್ತಿಗೆ ಚರ್ಚೆಯೆಲ್ಲಾ ಮುಗಿದು ಮೌನವಾಗಿತ್ತು

ಜಲಜಮ್ಮ ಅಡಿಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದರು.

ನಂಜುಂಡಯ್ಯನವರು ವ್ಯಾಸಭಾರತ ಹಿಡಿದು ಮನಸ್ಸಿನಲ್ಲಿಯೇ ಓದಿಕೊಳ್ಳು ತ್ತಿದ್ದರು ಸದಾನಂದ ರೂಮಿನಲ್ಲಿ ಹಾಸಿಗೆಯ ಸುರುಳಿಯೊಂದನ್ನೊರಗಿ ಪುಸ್ತಕವೊಂದನ್ನು ಕೈಲಿ ಹಿಡಿದಿದ್ದ

ಅವನ ಮುಖದ ಮೇಲಿದ್ದ ನಗು, ಸರಸತೆ ಮಾಯವಾಗಿತ್ತು ಕೆದರಿದ ಕ್ರಾಪನ್ನು ಬಾಚಿಕೊಳ್ಳುವ ಆಸಕ್ತಿಯೂ ಇಲ್ಲದೆ ಸದಾನಂದ ಕುಳಿತಿದ್ದ

ಕೆದರಿದ ಮನಸ್ಸಿನ ಪ್ರತೀಕವಾಗಿತ್ತು ಅವನ ಕ್ರಾಪು ಅಸಮಾಧಾನದ ಹೊಗೆ ಉಗುಳುತ್ತಿದ್ದ ಎಂಜಿನ್ನು ಅವನ ಮುಖ

ಪದ್ಮಿನಿ ಒಳಗೆ ಬಂದೊಡನೆ ಸದಾನಂದ ತಲೆ ಎತ್ತಿ ತಂಗಿಯ ಕಡೆ ನೋಡಿದ ಪದ್ಮಿನಿ ಅಣ್ಣನನ್ನು ನೋಡಿ ನಗಲು ಯತ್ನಿಸಿದಳು ಆದರೆ ಅವನ ಮುಖದಲ್ಲಿದ್ದ ಕಾಠಿಣ್ಯ ಅವಳ ತುಟಿಯ ಮೇಲೆ ಅರಳಿದ್ದ ನಗೆ ಮೊಗ್ಗನ್ನು ಚಿವುಟಿಹಾಕಿತು ಸೂರ್ಯನ ಕಾವಿಗೆ ಹಣ್ಣಾದ ಹೀಚು ಕಾಯಿಯಂತೆ ಅವಳ ಮಾತು ಬಂತು

"ಎಲ್ಲಿಗೂ ಹೋಗಲಿಲ್ಲವೇ ಸದಾ ?"

ಸದಾನಂದ ಪುಸ್ತಕವನ್ನು ಮುಚ್ಚಿಟ್ಟು "ಆ ಬಾಗಿಲು ಹಾಕಿಬಿಟ್ಟು ಇಲ್ಲಿ ಬಾ" ಎಂದ

ಪದ್ಮಿನಿಗೆ ಒಂದು ಗಳಿಗೆ ಹೆದರಿಕೆಯಾಯಿತು ಬಾಗಿಲು ಮುಚ್ಚಿ ತನಗೆ ಹೊಡೆದು ಬುದ್ಧಿ ಕಲಿಸುವೆನೆಂದು ನಿರ್ಧರಿಸಿರುವನೋ ? ಹುಂ ಹೊಡೆದು ಬುದ್ಧಿ ಕಲಿಸಲು ತಾನೇನು ಎಳೆಯ ಮಗುವೇ ?

ಪದ್ಮಿನಿ ಬಾಗಿಲನ್ನು ಮುಚ್ಚಿ ನಿಧಾನವಾಗಿ ಸದಾನಂದನ ಬಳಿಗೆ ಬಂದು ನಗಲು ಯತ್ನಿಸಿ ವಿಫಲಳಾಗಿ ಸುಮ್ಮನೆ ಕುಳಿತಳು

ನಿರಾಶೆ, ಅಸಮಾಧಾನದ ನಾಟ್ಯರಂಗಣವಾಗಿತ್ತು ಅವನ ಮುಖ

"ಪದ್ಮಿನಿ, ನೀನು ಹೀಗೆ ಮಾಡಬಹುದೇ ?"

"ಮಾಡಬಾರದ್ದು ನಾನೇನು ಮಾಡಿದೆನಣ್ಣ ?"

"ನಿನಗಾಗಿ, ನಿನ್ನ ವಿದ್ಯಾಭ್ಯಾಸಕ್ಕಾಗಿ, ನಿನ್ನ ವಿವಾಹಕ್ಕಾಗಿ ನಾನು ವಿವಾಹವಾಗದೆ ದುಡಿಯುತ್ತಿದ್ದೆ ನಿನ್ನಲ್ಲಿ ನಾನು ಬಹಳ ಆಸೆಗಳನ್ನಿಟ್ಟು ಕೊಂಡಿದ್ದೆ ಆದರೆ ನೀನು ಆ ಮುದುಕನಿಗೆ ಮರುಳಾಗಿ. .."

ಪದ್ಮಿನಿ ನಡುವೆ ತಡೆದು ಹೇಳಿದಳು "ಅವರೇನೂ ಮುದುಕರಲ್ಲ"

"ನಿನಗೆ ಹೋಲಿಸಿದರೆ ಅವರು ಮುದುಕರೇ"

"ಹೆಂಗಸರು ಬಹಳ ಬೇಗ ಮುದುಕರಾಗುತ್ತಾರೆ"

"ನಿನ್ನ ಹಿತ ನಮಗೆ ಮುಖ್ಯ ಆದುದರಿಂದ"

"ನನ್ನ ಸಂತೋಷಕ್ಕೆ ನೀವು ಏನೇನೂ ಬೆಲೆ ಕಟ್ಟುವುದಿಲ್ಲವೇ?"

"ಈಗ ನಾನು ಹಾಗೆಂದು ಹೇಳಿದನೇ? ಬಹಳ ಬೇಗ ಇಂಪ್ರೆಸ್ ಆಗುವ ವಯಸ್ಸು ನಿನ್ನದು ಶುಭ್ರವಾದ ಹಾಳೆಯಂತಿರುವ ನಿನ್ನ ಮನಸ್ಸಿನ ಮೇಲೆ ಒಳ್ಳೆಯವರೆಂದು ತೋರುವ ಆತನ ವ್ಯಕ್ತಿತ್ವ ಮೂಡಿದ್ದರೆ ಆಶ್ಚರ್ಯವೇನಿಲ್ಲ ಆದರೆ ಈ ಪ್ರಭಾವ ನಿನ್ನ ಮೇಲೆ ಬಹಳ ದಿನವಿರುವುದಿಲ್ಲ ಕ್ರಮೇಣ ಅದು ಮಾಸಿಹೋಗುತ್ತದೆ ದುಡುಕಬೇಡ ನಿಧಾನವಾಗಿ ಯೋಚಿಸು ಆತನ ಬಗ್ಗೆ ನಿನಗಿರುವ ವಿಶ್ವಾಸ, ಪ್ರೀತಿ ಎಲ್ಲವೂ ಕ್ಷಣಿಕ ಕ್ರಮೇಣ ಮೇಲೆದ್ದಿರುವ ಅಲೆ ಕೆಳಗಿಳಿಯುತ್ತದೆ"

"ಅಲ್ಲ ಸದಾನಂದ ನೀನು ನನ್ನ ತಪ್ಪು ತಿಳಿದಿರುವೆ ಅವರ ಯಾವ ಪ್ರಭಾವಕ್ಕೂ ನಾನು ಒಳಗಾಗಿಲ್ಲ ಇರುವ ವಿಷಯ ಇಷ್ಟೆ—ನಾನು ಅವರನ್ನು ಪ್ರೀತಿಸುತ್ತೇನೆ"

"ಪ್ರೀತಿ ಎಂದರೆ ಏನು ಗೊತ್ತೆ ನಿನಗೆ?"

"ಗೊತ್ತು"

"ಏನು ಹೇಳು?"

"ಅವರನ್ನು ನೋಡಿದಾಗ ನನ್ನಲ್ಲಿ ಮೂಡುವ ಭಾವನೆ ನನಗೆ ಇನ್ನಾರನ್ನು ನೋಡಿದಾಗಲೂ ಬರುವುದಿಲ್ಲ ಅವರ ಮಾತುಗಳನ್ನು ಕೇಳುವಾಗ ಉಂಟಾಗುವ ಆನಂದ ನನಗೆ ಬೇರೆ ಎಲ್ಲೂ ಸಿಕ್ಕುವುದಿಲ್ಲ ಅವರೆದುರಿನಲ್ಲಿ ನನ್ನನ್ನು ನಾನು ಮರೆಯುತ್ತೇನೆ"

"ಇದು ಪೊಳ್ಳು ವ್ಯಾಮೋಹ"

"ಇಲ್ಲ ಇಲ್ಲ ನಾನು ಚಿಕ್ಕವಳೆಂತ ನೀವು ಹೀಗೆಲ್ಲಾ ಹೇಳುತ್ತೀರಿ ನನ್ನ ಪ್ರೇಮವನ್ನು ನೀವು ವ್ಯವಹಾರದ ದೃಷ್ಟಿಯಿಂದ ನೋಡುತ್ತೀದೀರೇ ಹೊರತು ಮಾನವಸಹಜ ಭಾವನೆಯಿಂದ ನೋಡುತ್ತಿಲ್ಲ ಮದುವೇನೂ ವ್ಯಾಪಾರವನ್ನಾಗಿ ಮಾಡಬೇಕೆ? ನನ್ನ ವಯಸ್ಸು ಚಿಕ್ಕದು ಆದುದ

ರಿಂದ ನಾನು ಯುವಕನ ಕೈಹಿಡಿಯಲೇಬೇಕು ನನಗಿಂತಲೂ ಸ್ವಲ್ಪ ವಯಸ್ಸಾಗಿರುವವರನ್ನು ಖಂಡಿತ ಮದುವೆಯಾಗಲೇಬಾರದು ಈ ವ್ಯಾಪಾರಬುದ್ಧಿ ಮದುವೆಗೇಕೆ ಸದಾನಂದ ? ನಮ್ಮಿಬ್ಬರ ಮನಸ್ಸೊಪ್ಪಿದೆ ಇದಕ್ಕಿಂತಲೂ ಹೆಚ್ಚಿನದೇನು ಬೇಕು ?"

"ಹಾಗಲ್ಲ ಪದ್ಮಿನಿ ಇನ್ನು ಕೆಲವೇ ವರ್ಷಗಳಲ್ಲಿ ಆತ ತುಂಬಾ ಮುದುಕರಾಗುತ್ತಾರೆ ಆಗ ದಾಂಪತ್ಯಜೀವನದ ತಕ್ಕಡಿ ಕೆಳಗೆ ಮೇಲಾಗುತ್ತದೆ ಆಗ ನಿಮ್ಮ ಬಾಳು ಸಮತೂಕವಿಲ್ಲದೆ ಏರುಪೇರಾಗುತ್ತದೆ ದಾಂಪತ್ಯ ಜೀವನದಲ್ಲಿ ನಿನಗಿನ್ನೂ ಆಸಕ್ತಿ ಇರುವಾಗಲೇ ಆತನಿಗೆ ಆಸಕ್ತಿ ಕರಗಿ ಹೋಗಿರುತ್ತದೆ ಗಂಡನೊಡನೆ ಜಗತ್ತಿನಲ್ಲಿ ತಿರುಗಾಡುವ ಬಯಕೆ ನಿನಗಿದ್ದಾಗ ಆತನಿಗೆ ಒಲೆಯ ಮುಂದೆ ಕುಳಿತು ಬೆಂಕಿ ಕಾಯಿಸಿಕೊಳ್ಳುವ ಮನೋಭಾವ ಬಂದಿರುತ್ತದೆ ನೀನು ಪ್ರಾಪಂಚಿಕ, ಲೌಕಿಕ ವಿಷಯಗಳಲ್ಲಿ ಶ್ರದ್ಧೆ ವಹಿಸುವಾಗ ಆತನ ಲಕ್ಷ್ಯ ಪಾರಮಾರ್ಥಿಕದೆಡೆ ಹರಿದಿರಬಹುದು ನಿನಗೆ ಸಿನಿಮಾ ನೋಡುವ ಆಸೆ ಇದ್ದಾಗ ಆತ ದೇವಸ್ಥಾನಕ್ಕೆ ಹೋಗೋಣ ವೆಂದು ಹೇಳಬಹುದು ಶೃಂಗಾರಮಯ ಕಾದಂಬರಿಗಳನ್ನು ಓದಲು ನೀನು ಅಪೇಕ್ಷಿಸಿದಾಗ ಆತ ನಿನಗೆ ವೇದಾಂತದ ಪುಸ್ತಕ ತಂದುಕೊಡಬಹುದು ನಿನಗೆ ರುಚಿರುಚಿಯಾದ ತಿಂಡಿಗಳನ್ನು ತಿನ್ನುವ ಆಸೆಯಾದಾಗ, ಆತನ ದೇಹಸ್ಥಿತಿ ಯಾವುದನ್ನೂ ಅರಗಿಸಿಕೊಳ್ಳಲಾರದೇ ಕೇವಲ ಹಾಲನ್ನವನ್ನು ತಿನ್ನುವ ಮಟ್ಟಕ್ಕೆ ಉಳಿದಿರಬಹುದು ನಿನಗೆ ಪ್ರೇಮಗೀತೆ—ಆತನಿಗೆ ಭಗವದ್ಗೀತೆ, ನಿನಗೆ "

ಸದಾನಂದನ ಮಾತು ಕೇಳಿ ಪದ್ಮಿನಿ ನಕ್ಕು ಬಿಟ್ಟಳು

"ನಿನ್ನ ಮಾತು ಕೇಳಿ ನನಗೆ ನಗು ಬರುತ್ತಿದೆಯೇ ಹೊರತು ಹೆದರಿಕೆ ಯಾಗುತ್ತಿಲ್ಲ ನೀನು ನನ್ನ ಹೆದರಿಸಲಾರೆ ಸದಾ ಮದುವೆಯಾದ ಮಾರನೆಯ ದಿನವೇ ಅವರು ಸನ್ಯಾಸಾಶ್ರಮ ತೆಗೆದುಕೊಳ್ಳುವುದಾದರೂ ನಾನು ಅಡ್ಡಿ ಪಡಿಸುವುದಿಲ್ಲ ದಾಂಪತ್ಯ ಜೀವನ! ಆ ಜೀವನದಲ್ಲಿ ನನಗೆ ಮೋಹವಾಗಲಿ, ಆಕರ್ಷಣೆಯಾಗಲಿ ಯಾವುದೂ ಇಲ್ಲ "

"ನೀನಪೇಕ್ಷಪಟ್ಟರೆ ನಾನು ಎಷ್ಟು ಕಷ್ಟವಾದರೂ ಚಿಂತೆಯಿಲ್ಲ—ಯುವಕನೊಬ್ಬನನ್ನು "

"ನನಗೆ ತರುಣರನ್ನು ಕಂಡರೆ ಇಷ್ಟವಿಲ್ಲ ಅವರು ಸ್ವಾರ್ಥಿಗಳು, ಕ್ರೂರಿಗಳು, ನಮ್ಮನ್ನು ಅರ್ಥಮಾಡಿಕೊಳ್ಳುವುದಿಲ್ಲ "

"ನೀನು ನನ್ನನ್ನು ಇಷ್ಟಪಡುವುದಿಲ್ಲವೇ ? ನಾನೂ ಚಿಕ್ಕ ವಯಸ್ಸಿನವನು ತಾನೇ ?"

"ಸದ್ಯ, ದೇವರು ನಿನ್ನ ನನ್ನ ಅಣ್ಣನನ್ನಾಗಿ ಮಾಡಿದ್ದಾನೆ ಅದಕ್ಕಾಗಿ ದೇವರಿಗೆ ಕೃತಜ್ಞಳು ಇಲ್ಲದಿದ್ದರೆ ನಾನು ನಿನ್ನನ್ನೂ ಇಷ್ಟಪಡುತ್ತಿರಲಿಲ್ಲಾಂತ ಕಾಣಿಸುತ್ತದೆ "

"ನಾನೇನು ತಲೆಮೇಲೆ ಕಲ್ಲು ಹಾಕಿದೇನೆಯೇ ?"

"ಒಟ್ಟಿನಲ್ಲಿ ತರುಣರನ್ನು ನಾನು ಲೈಕ್ ಮಾಡುವುದಿಲ್ಲ "

"ನೀನೊಬ್ಬಳು ವಿಚಿತ್ರ ಹುಡುಗಿ "

"ನೋ ಕಾಂಮೆಟ್ಸ್ "

ಸದಾನಂದ ನಕ್ಕು "ಇನ್ನೂ ಈ ದುರಭ್ಯಾಸಾನ ನೀನು ಬಿಟ್ಟಿಲ್ಲವೇ? ಮಾತು ಮಾತಿಗೆ ಆಣೆಮಾಡು ಎನ್ನುವುದು, ನೋ ಕಾಂಮೆಟ್ಸ್ ಎಂದು ಹೇಳುವುದು "

"ಅದು ರಕ್ತಗತವಾಗಿ ಬಂದುಬಿಟ್ಟಿದೆ. ಈ ಜನ್ಮದಲ್ಲಿ ಹೋಗುವುದಿಲ್ಲ "

"ಅದಿರಲಿ ನನ್ನ ಮಾತಿಗೆ ಬೆಲೆ ಕೊಡ್ತೀಯಾ ?"

"ನಾನು ಸಂತೋಷವಾಗಿರುವುದು ನಿನಗೆ ಮುಖ್ಯವಾಗಿದ್ದರೆ ನನ್ನ ಮಾತನ್ನು ನೀವು ಗಮನಿಸುತ್ತೀರಿ ಒಂದು ಪಕ್ಷ ನಾನು ನಿಮ್ಮ ಮಾತಿಗೆ ಮನ್ನಣೆಯಿತ್ತು ಮುಂದೆ ನನ್ನ ಹೊಸ ಬದುಕಿಗೆ ಹೊಂದಿಕೊಳ್ಳಲಾರದೇ ಹೋದರೆ, ಅಸುಖಿಯಾದರೆ, ಇಜ್ಜೋಡಿನ ಸಂಸಾರವಾದರೆ ನೀವು ಶಾಂತಿಯಿಂದಿರಲು ಸಾಧ್ಯವೇ ? ನೀನಾದರೂ ನನ್ನ ಇಚ್ಛೆಯನ್ನು ಗೌರವಿಸು ಸದಾನಂದ ನೀನು ನನಗೆ ಬೆಂಬಲ ಕೊಟ್ಟು ನನ್ನ ಸುಖಿಯನ್ನಾಗಿ ಮಾಡ್ತೀಯಾಂತ ಭಾವಿಸಿದ್ದೆ ಮೊದಲಿನಿಂದಲೂ ನೀನು ನನ್ನ ಪರವಾಗಿದ್ದೆ. ಈಗ ನನಗೆ ಎದುರಾಗಬೇಕೆ ?"

"ಆತನ್ನ ನನಗೆ ಗುರುತು ಮಾಡಿಸುತ್ತೀಯಾ ?"

ಕಣ್ಣೀರಿನ ನಡುವೆ ಪದ್ಮಿನಿ ನಕ್ಕು "ಆಗಲಿ" ಎಂದಳು

ಪದ್ಮಿನಿಯ ಮನಸ್ಸನ್ನೊಲಿಸಿ ಈ ಮದುವೆಯಿಂದವಳ ಹೃದಯ ಮುಖ ತಿರುಗಿಸುವಂತೆ ಸದಾನಂದ ಮಾಡಿದ ಪ್ರಯತ್ನ ವಿಫಲವಾಯಿತು ತನ್ನ ತಂಗಿಯ ಪ್ರೀತಿಯನ್ನು ಸೂರೆಗೊಂಡವನ ಮನಸ್ಸು ತಿರುಗಿಸಿದರೆ ಸರಿ ಎಂದುಕೊಂಡ ಸದಾನಂದ

ಅವರನ್ನು ನೋಡಿ ಅವರೊಡನೆ ಮಾತನಾಡಿದ ಮೇಲೆ ತನ್ನಾಸೆಗೆ ಅಣ್ಣ ಖಂಡಿತ ಬೆಂಬಲ ಕೊಡುತ್ತಾನೆಂದು ಪದ್ಮಿನಿಯ ಎಣಿಕೆ

ಮಾರನೆಯ ದಿನ ಬೆಳಗ್ಗೆ ಕಾಫಿ ಕುಡಿದಾದೊಡನೆ ಸದಾನಂದ ಪದ್ಮಿನಿಯನ್ನು ಕೇಳಿದ,

"ಈಗ ಹೋಗೋಣವೇ ?"

ಅಣ್ಣನ ಆತುರವನ್ನು ಕಂಡು ಪದ್ಮಿನಿ ನಕ್ಕು "ಇಷ್ಟು ಹೊತ್ತಿನಲ್ಲಿ ಅವರು ಮನೆಯಲ್ಲಿರುವುದಿಲ್ಲ ಆಫೀಸಿಗೆ ಹೋಗಿರುತ್ತಾರೆ" ಎಂದಳು

"ಮಧ್ಯಾಹ್ನ ?"

"ಕೋರ್ಟಿಗೆ ಹೋಗ್ತಾರೆ ನಾವು ಸಂಜೆ ಐದು ಗಂಟೆಯ ಹೊತ್ತಿಗೆ ಹೋಗೋಣ ಆಗ ಅವರು ಮನೆಯಲ್ಲಿರುತ್ತಾರೆ "

ಸಂಜೆ ಪದ್ಮಿನಿ ಅಣ್ಣ ತಂದಿದ್ದ ಮುಗಿಲವರ್ಣದ ಕಾಶ್ಮೀರಿ ಸಿಲ್ಕ್ ಸೀರೆಯನ್ನುಟ್ಟು, ನಿಂಬೆಯ ಬಣ್ಣದ ಸಿಲ್ಕಿನ ಬ್ಲೌಸು ಧರಿಸಿ ಸದಾನಂದನ ಬಳಿಗೆ ಬಂದು ಕೇಳಿದಳು

"ನಮಸ್ಕಾರ ಮಾಡಲೇನಣ್ಣ ? ಆಶೀರ್ವಾದ ಮಾಡ್ತೀಯ ?"

"ಹಿರಿಯರು ಹೇಳಿದ ಹಾಗೆ ಕೇಳಿಕೊಂಡಿರೂಂತ ಆಶೀರ್ವಾದ ಮಾಡುತ್ತೇನೆ "

"ನಿನ್ನ ಮನಸ್ಸೊಪ್ಪಿದವನ ಕೈ ಹಿಡೀಂತ ಮಾಡುವ ಹಾಗಿದ್ದರೆ ?"

"ನೀನು ನನಗೆ ನಮಸ್ಕಾರ ಮಾಡಲೇಬೇಡ "

ಪದ್ಮಿನಿ ನಗುನಗುತ್ತಲೇ ಅಣ್ಣನಿಗೆ ನಮಸ್ಕಾರಮಾಡಿ ಎದ್ದುನಿಂತು,

"ಹೊರಡೋಣ" ಎಂದಳು

'ಸುದರ್ಶನ' ತಲುಪಿದಾಗ ಸುಮಾರು ಐದೂವರೆಯ ಸಮಯವಾಗಿತ್ತು.

ಬಾಗಿಲಿನಲ್ಲಿಯೇ ತನಗೆ ಸ್ವಾಗತ ನೀಡಿದ ಜೂಲಿಯನ್ನು ಎತ್ತಿ

ಕೊಂಡಳು ಜೂಲಿ ಅಪರಿಚಿತವಾದ ಸದಾನಂದನನ್ನ ನೋಡಿ ಬಗುಳಿತು

"ಹುಶ್ ಅವನು ನಮ್ಮಣ್ಣ" ಎಂದು ಜೂಲಿಗೆ ಪದ್ಮಿನಿ ಸಮಾಧಾನ ಹೇಳಿದಳು

"ನಿನ್ನ ಗುರುತು ಇದಕ್ಕೆ ಚೆನ್ನಾಗಿರುವ ಹಾಗಿದೆ"

"ನಾನೂ ಜೂಲಿ ಬಹಳ ಸ್ನೇಹಿತರು"

ಮನೆಯಲ್ಲಿ ಗೀತ ಇದ್ದಂತೆ ತೋರಲಿಲ್ಲ ಸದಾನಂದನನ್ನು ಹಾಲಿನಲ್ಲಿದ್ದ ಸೋಫದ ಮೇಲೆ ಕುಳ್ಳಿರಿಸಿ ಪದ್ಮಿನಿ,

"ತಾತ" ಎಂದಳು

"ರಾಯರು ಇನ್ನೂ ಮನೆಗೆ ಬಂದಿಲ್ಲ" ಎನ್ನುತ್ತಾ ತಾತ ಅಡಿಗೆಮನೆಯಿಂದ ಈಚೆಗೆ ಬಂದರು

"ಗೀತಾ ಎಲ್ಲಿ ?"

"ರಾಯರ ಸ್ನೇಹಿತರೊಬ್ಬರ ಮನೆಯಲ್ಲಿ ಏನೋ ಹಬ್ಬವಂತೆ ಅವರು ಸಂಜೆ ನಾಲ್ಕು ಗಂಟೆಗೇ ಅಲ್ಲಿಗೆ ಹೋದರು"

"ರಾಯರೂ ಅಲ್ಲಿಗೇ ಹೋಗಿದಾರಾ ?"

"ಇಲ್ಲ ಅವರಿನ್ನೂ ಕೋರ್ಟಿನಿಂದ ಬಂದೇ ಇಲ್ಲ" ಎನ್ನುತ್ತಾ ತಾತ ಸದಾನಂದನ ಕಡೆ ನೋಡಿದರು

"ನಮ್ಮಣ್ಣ ಸದಾನಂದ"

"ತುಂಬಾ ಸಂತೋಷ ಇನ್ನೇನು ರಾಯರು ಬರುವ ಸಮಯ ಹಾಲು ಬಿಸಿ ಮಾಡಿ ತರುತ್ತೇನೆ" ಎನ್ನುತ್ತಾ ತಾತ ಒಳಗೆ ಹೋದರು

ಅಣ್ಣ ತಂಗಿ ಮಾತನಾಡುತ್ತಾ ಕುಳಿತುಕೊಂಡರು

ಹೊರಗೆ ಕಾರಿನ ಸದ್ದಾಯಿತು ಪದ್ಮಿನಿ ಸಂಭ್ರಮದಿಂದ ಎದ್ದು ನಿಂತು ಅಣ್ಣನ ಕಡೆ ತಿರುಗಿ "ಅವರು ಬಂದರು" ಎಂದು ಹೇಳಿ ಬಾಗಿಲಿನ ಬಳಿಗೆ ಓಡಿಹೋದಳು

ಸದಾನಂದ ಎದೆಯಮೇಲೆ ಕೈಕಟ್ಟಿ ತಂಗಿಯ ಸಂಭ್ರಮವನ್ನೇ ನೋಡುತ್ತಾ ನಿಂತಿದ್ದ. ಪದ್ಮಿನಿ ಪೋರ್ಟಿಕೋದಲ್ಲಿನ ಮೇಲು ಮೆಟ್ಟಲಿನ ಮೇಲೆ ನಿಂತಳು ಮೂರ್ತಿ ಕಾರಿನ ಬಾಗಿಲನ್ನು ಧಡೀರನೆ ಹಾಕಿ ನಾಲ್ಕು

ಮೆಟ್ಟಲುಗಳನ್ನು ಒಂದೇ ಸಲಕ್ಕೆ ಹಾರಿ ಪದ್ಮಿನಿಯ ಬಳಿಗೆ ಬಂದು,

"ನನ್ನ ಪುಟ್ಟ ಹುಡುಗಿ ನಿನ್ನೆ ಯಾಕೆ ಬರಲಿಲ್ಲ ?"

"ನಿನ್ನೆ ನನ್ನ ನೋಡೋಕೆ ಯಾರೋ ಬಂದಿದ್ದರು"

"ಯಾರದು ?"

"ಒಬ್ಬ ಯುವಕ, ಸುರೂಪಿ. "

"ಆಣೆ ಮಾಡಿ ಹೇಳ್ತೀಯಾ ?"

ಪದ್ಮಿನಿ, ಮೂರ್ತಿ ನಗುತ್ತಾ ಒಬ್ಬರನ್ನೊಬ್ಬರು ನೋಡುತ್ತಾ ನಿಂತು ಕೊಂಡರು ಪದ್ಮಿನಿಯೇ ಮೊದಲು ಎಚ್ಚರಗೊಂಡು—

"ಒಳಗೆ ಬನ್ನಿ ನಿಮ್ಮನ್ನು ನೋಡೋಕೆ ಯಾರೋ ಬಂದಿದಾರೆ" ಎಂದಳು

ಸೋಫದ ಬಳಿ ನಿಂತಿದ್ದ ಸದಾನಂದನ ಕಡೆ ಕೈತೋರಿಸಿ ಪದ್ಮಿನಿ ನುಡಿದಳು "ಇವನು ನಮ್ಮಣ್ಣ ಸದಾನಂದ, ಇವರು ಗೀತಳ ತಂದೆ "

ಮೂರ್ತಿ ಸದಾನಂದನ ಹಸ್ತವನ್ನು ಕುಲುಕಿ, "ಕುಳಿತುಕೊಳ್ಳಿ" ಎಂದರು

ಸದಾನಂದ ಮೂರ್ತಿಯ ಚಿತ್ರವೊಂದನ್ನು ತಾನೇ ಕಲ್ಪಿಸಿಕೊಂಡಿದ್ದ. ಕುಳ್ಳಾದ ವ್ಯಕ್ತಿ, ಪಟ್ಟುಗಟ್ಟಿದ ತಲೆ, ಬೊಜ್ಜು ಮೈ, ಕನ್ನಡಕದ ಮುಖ

ಆದರೆ ಎದುರಿಗೆ ನಿಂತಿದ್ದ ವ್ಯಕ್ತಿ ಬಹಳ ಆಕರ್ಷಣೀಯವಾಗಿತ್ತು

ಬಾಲಕನ ತುಂಟ ತಲೆಗೂದಲು, ಮಗುವಿನ ನಗೆ, ಆಟಗಾರನ ಮೈಕಟ್ಟು, ಹರೆಯದವನ ಮುಖವನ್ನು ನೋಡಿ ಸದಾನಂದ ಒಂದು ಗಳಿಗೆ ಅಪ್ರತಿಭನಾಗಿ ನಿಂತಿದ್ದ

ಪದ್ಮಿನಿ, ಮೂರ್ತಿಯ ಕಣ್ಣುಗಳ ಸಮಾಗಮ ಅವನಿಗೆ ನೂರಾರು ಕತೆಗಳನ್ನು ಹೇಳಿದುವು ಒಬ್ಬರನ್ನೊಬ್ಬರು ನೋಡಿ ನಕ್ಕನಗು ಅವರ ಮನಸ್ಸಿನಲ್ಲಿ ಹುದುಗಿದ್ದ ಸಾವಿರಾರು ಭಾವನೆಗಳನ್ನು ಬಯಲುಮಾಡಿದುವು ಪದ್ಮಿನಿಯ ಕಡೆ ಅವರು ಒಂದೊಂದು ಸಲ ನೋಡಿದಾಗಲೂ ಮೂಕಗೀತೆಯನ್ನು ಕಣ್ಣಾಲಿಗಳು ಹಾಡುತ್ತಿದ್ದುವು. ಆ ನೋಟದಲ್ಲಿ ಅಡಗಿದ್ದ ಪ್ರೀತಿ, ಸ್ನೇಹ, ಅನುರಾಗ ತಾನು ಅಳೆಯಲಾಗದಷ್ಟು ಆಳ

ವಾಗಿದೆ ಎಂದು ಸದಾನಂದ ಕ್ಷಣದಲ್ಲಿ ತಿಳಿದುಕೊಂಡ

ಇನ್ನು ಪದ್ಮಿನಿ—ತಾಯಿಯ ತೆಕ್ಕೆಯಲ್ಲಿ ನಿಶ್ಚಿಂತೆಯಿಂದ ಆಟ ವಾಡುವ ಮಗುವಿನಂತೆ ಅವಳು ಶಾಂತಳಾಗಿ, ನಿರ್ಭೀತಳಾಗಿ, ಸಮಾಧಾನ ಚಿತ್ತಳಾಗಿ ಕುರ್ಚಿಯನ್ನೊರಗಿ ಕುಳಿತಿದ್ದಳು ದೇವರ ಗುಣಗಾನವನ್ನು ತನ್ಮಯತೆಯಿಂದ ಆಲಿಸುವ ಭಕ್ತಳಂತೆ ಅವಳು ಮೂರ್ತಿಯ ಮಾತು ಗಳನ್ನು ಕೇಳುತ್ತಿದ್ದಳು

ಸದಾನಂದನಿಗೆ ಗಳಿಗೆಗಳಿಗೆಗೂ ತಾನು ನಿರ್ಬಲನಾಗುತ್ತಿರುವಂತೆ ತೋರಿತು ಸಮಯ, ಅವನು ಮನನಮಾಡಿಕೊಂಡು ಬಂದಿದ್ದ ಭಾಷಣ, ಮೂದಲಿಕೆಯನ್ನು ಕ್ರಮೇಣ ನುಂಗಿಹಾಕುತ್ತಿತ್ತು

ಅವರಿಬ್ಬರ ಪ್ರೇಮದ ಎದಿರು ತನ್ನ ತರ್ಕ, ಚರ್ಚೆ, ಉಪದೇಶ, ಬುದ್ಧಿವಾದ, ಸಲಹೆ ಎಲ್ಲವೂ ವ್ಯರ್ಥವೆನಿಸಿತು ಅವನಿಗೆ ಅವರ ಪ್ರೇಮ, ವಶಿಷ್ಠನ ಬ್ರಹ್ಮಾಸ್ತ್ರವಾಗಿ ತನ್ನೆದುರಿಗೆ ನಿಂತಿರುವಂತೆ ಅವನಿಗೆ ಭಾಸ ವಾಯಿತು ಅವರ ಪರಸ್ಪರ ಆಕರ್ಷಣೆ, ಸ್ನೇಹ ಕ್ಷಣಿಕ ವ್ಯಾಮೋಹವಾಗಿರ ಲಿಲ್ಲ ಅನೇಕ ಜನ್ಮಗಳ ನಂಟು ಯಾವುದೋ ಕಾರಣದಿಂದ ಈ ಜನ್ಮದಲ್ಲಿ ಕೊಂಚ ತಡವಾಗಿ ಮತ್ತೆ ಕೂಡಲಿದೆಯೆಂದು ಸದಾನಂದನಿಗೆ ಎನಿಸಿತು

ಬರುವಾಗ ಇದ್ದ ಉತ್ಸಾಹ ಸದಾನಂದನಿಗೆ ಈಗ ಇರಲಿಲ್ಲ ಅವನು ಮೌನವಾಗಿ ಕುಳಿತು ಅವರಿಬ್ಬರನ್ನೂ ನೋಡುತ್ತಿದ್ದ

ಮೂರ್ತಿಯೊಡನೆ ಮಾತನಾಡುವಾಗ ಪದ್ಮಿನಿಯ ಮುಖ ಯಾವುದೋ ಒಳಗಿನ ಬೆಳಕಿನಿಂದ ತೇಜೋಮಯವಾಗುತ್ತಿತ್ತು ನುಡಿಗೆ ಎಲ್ಲಿಲ್ಲದ ಸವಿಜೇನು—ನಗುವಿಗೆ ಹೂವಿನಿಂದ ಎರವಲುಪಡೆದ ಸೌಂದರ್ಯ —ನವಿಲಿನ ಬೆಡಗು

ಪದ್ಮಿನಿ ಸುರೂಪಿಯೆಂದು ಸದಾನಂದ ಬಲ್ಲ ಆದರೆ ಪ್ರಿಯನ ಸಾನ್ನಿಧ್ಯದಲ್ಲಿ ಅವಳ ಸೌಂದರ್ಯ ಸೂರ್ಯನೆದುರಿನ ಕಮಲದಂತೆ ಅರಳು ತ್ತಿತ್ತು

ಅವರಿಬ್ಬರೂ ಯಾವುದೋ ಮಾತನಾಡಿ ನಕ್ಕಾಗ ಸದಾನಂದ ಎಚ್ಚರಗೊಂಡ ಪದ್ಮಿನಿ ಅಣ್ಣನನ್ನು ನೋಡಿ,

"ಯಾಕೆ ಮೂಕನಾಗಿರುವ ಹಾಗಿದೆ ?" ಎಂದಳು

ಚರ್ಚೆ, ತರ್ಕ, ಉಪನ್ಯಾಸ, ಬಿರುಸಿನ ಮಾತುಗಳ ವಿನಿಮಯ ಯಾವುದೂ ಇಲ್ಲದೆ ಸದಾನಂದ ತಂಗಿಯೊಡನೆ ಮನೆಗೆ ಹೊರಟ ಸದಾನಂದ ಮನೆಗೆ ಹೊರಟಾಗ ಮೂರ್ತಿ ಮತ್ತೆ ಕೈ ನೀಡಿದರು ಸದಾನಂದ ಅವರ ಕೈ ಕುಲುಕಿದ ಮೊದಲನೆಯ ಸಲ ಅವನ ಕೈಲಿದ್ದ ತಣ್ಪು ಈಗಿರಲಿಲ್ಲ ಈಗ ಅವನ ಕೈ ಮೊದಲಿಗಿಂತಲೂ ಕೊಂಚ ಬಿಸಿ ಯಾಗಿತ್ತು

ಪದ್ಮಿನಿ, ಸದಾನಂದ ಮೌನವಾಗಿಯೇ ದಾರಿಯನ್ನು ಸವೆಸಿದರು ಸದಾನಂದ ತನ್ನ ಮನಸ್ಸಿನ ಯೋಚನೆಗಳೊಡನೆ ಮಲ್ಲಯುದ್ಧ ನಡೆಸ ತ್ತಿದ್ದ ಪದ್ಮಿನಿಯ ಕಾಲುಗಳು ನೆಲದಮೇಲಿದ್ದರೂ ತಲೆ ನಕ್ಷತ್ರಗಳು ತುಂಬಿದ ಆಕಾಶದ ನಡುವೆ ಸಂಚರಿಸುತ್ತಿತ್ತು ಕಲ್ಪನೆಯ ಕುದುರೆಗಳನ್ನು ಕಟ್ಟಿದ್ದ ಭಾವನೆಗಳ ತೇರನ್ನೇರಿ ಹಗಲುಗನಸಿನ ಪ್ರಪಂಚದ ಬೀದಿಗಳಲ್ಲಿ ಪದ್ಮಿನಿಯ ಉತ್ಸವ ನಡೆದಿತ್ತು

ಸದಾನಂದ ಒಂದು ಬಾರಿ ತಲೆ ಕೊಡವಿ ತಂಗಿಯ ಕಡೆ ತಿರುಗಿದ ಬೀದಿಯ ದೀಪದ ಬೆಳಕಿನಲ್ಲಿ ಅವಳ ಮುಖದ ಮೇಲೆ ಮುಗುಳ್ನಗೆ ನರ್ತನ ನೋಡಿ ಸದಾನಂದ ಚಕಿತನಾದ

ಇವಳು ಯಾಕೆ ಇಷ್ಟೊಂದು ಸಂತೋಷವಾಗಿದ್ದಾಳೆ !

ಗಂಗಾನದಿಯಲ್ಲಿ ಅದೇತಾನೇ ಸ್ನಾನಮಾಡಿ ಬಂದ ಭಕ್ತನ ಆನಂದ ವಿತ್ತು ಅವಳ ಮುಖದಲ್ಲಿ

ಯಾವ ಪುಣ್ಯತೀರ್ಥದಲ್ಲಿ ಮಿಂದ ಅನುಭವವೋ ಅವಳಿಗೆ ! ಅವಳಿ ಗಾಗುತ್ತಿರುವ ನಿರ್ಮಲ ಆನಂದ, ಅನುಭವವನ್ನು ಕಸಿಯಲು ತಮಗೆ ಯಾವ ಹಕ್ಕಿದೆ ? ಅವಳ ಸಂತೋಷಕ್ಕಿಂತಲೂ ಮಿಗಿಲಾದುದು ಯಾವು ದಿದೆ ? ತಂಗಿಯ ಮನಸ್ಸನ್ನು ಮರುಳುಗೊಳಿಸಿದ ಆ ಮರುಳನನ್ನು ಖಂಡಿಸಿ ತನ್ನ ವಾಕ್ಚಾತುರ್ಯದಿಂದ ಅವರು ತತ್ತರಿಸಿಹೋಗುವಂತೆ ಮಾಡುವೆನೆಂದು ಹೊರಟಿದ್ದ ಸದಾನಂದ ಸಮುದ್ರವನ್ನು ಮೊದಲ ಬಾರಿ ಕಂಡ ಮಗುವಿನಂತೆ ಮೂಕನಾಗಿದ್ದ ಆ ಮೌನದಲ್ಲಿ ಆನಂದ, ಭಯದ ಸಂಗಮವೂ ಆಗಿತ್ತು

ಮನೆ ಸೇರುವ ಹೊತ್ತಿಗೆ ಸದಾನಂದನ ಮನಸ್ಸು ಪ್ರಶಾಂತವಾಗಿತ್ತು.

ಮಳೆಯಲ್ಲಿ ನೆಂದು ತನ್ನ ಕೊಳೆಯನ್ನೆಲ್ಲಾ ನೀಗಿಕೊಂಡು ಶುಭ್ರವಾದ ನಿಸರ್ಗದಂತಾಗಿತ್ತವನ ಹೃದಯ

ನಂಜುಂಡಯ್ಯನವರು ಸದಾನಂದನ ದಾರಿ ಕಾಯುತ್ತಾ ಕುಳಿತಿದ್ದರು ಜಲಜಮ್ಮ ಹುರುಳೀಕಾಯಿಯ ನಾರು ತೆಗೆಯುತ್ತಿದ್ದರು

ಪದ್ಮಿನಿ ಒಳಗೆ ಬಂದವಳೇ ಸೀರೆ ಬದಲಿಸಲೆಂದು ರೂಮಿಗೆ ಹೋದಳು ಸದಾನಂದ ತಂದೆಯ ಪಕ್ಕದಲ್ಲಿ ಕುಳಿತ

"ಏನಾಯಿತೋ ಮಗು ?" ಜಲಜಮ್ಮ ಆತಂಕದಿಂದ ಕೇಳಿದರು

"ಏನೂ ಆಗಲಿಲ್ಲ"

"ಅಂದರೆ ? ಅವರು ಸಿಕ್ಕಲಿಲ್ಲವೇ ?"

"ಸಿಕ್ಕಿದರು"

"ಆತನಿಗೆ ಬುದ್ಧಿ ಕಲಿಸಿಬಿಡಬೇಕಾಗಿತ್ತು."

"ಏನೂ ಪ್ರಯೋಜನವಿಲ್ಲ ಆದರಿಂದ"

"ಹಾಗೆಂದರೆ ?"

"ನಾನು ಕಿತ್ತು ಎಸೆಯಲಾರದಷ್ಟು ಆಳವಾಗಿ ಹೋಗಿದೆ ಬೇರು"

"ಹಾಗಾದರೆ ಅವಳು ಹೋದ ದಾರಿಗೇ ಬಿಟ್ಟುಬಿಡೋಣವೇ ?"

"ಇನ್ನು ಬೇರೆ ಉಪಾಯವೇ ಇಲ್ಲ"

"ನೀನು ಬಂದು ಏನಾದರೂ ಮಾಡ್ತೀಯಾಂತ ನಾವು ನೆಚ್ಚಿದ್ದೆವಲ್ಲೋ" ಎಂದರು ಜಲಜಮ್ಮ ನಿರಾಶೆಯಿಂದ

"ನಾನೂ ಹಾಗೆ ಅಂದುಕೊಂಡಿದ್ದೆ ಆದರೆ ಸನ್ನಿವೇಶ, ಸ್ಥಿತಿ ನಾನು ಯೋಚಿಸಿದ ರೀತಿ ಇರಲಿಲ್ಲ ಬೀಸುವ ಗಾಳಿಯ ಹಿಡಿದು ನಿಲ್ಲಿಸುತ್ತೇನೆ ಎಂದು ಹೋಗುವ ಹುಚ್ಚುತನ ನಾನು ಮಾಡಲಾರೆ. ಕಾಮದ ಬಿರುಗಾಳಿಯಾಗಿದ್ದಿದ್ದರೆ ಸ್ವಲ್ಪ ಹೊತ್ತು ರಭಸದಿಂದ ಬೀಸಿ ಸುಮ್ಮನಾಗುತ್ತಿತ್ತು ಆದರೆ ಇದು ಬತ್ತದ ಸಸಿಗಳ ಮೇಲೆ ಬೀಸುವ ತಂಗಾಳಿ ನಡು ಹಗಲಿನಲ್ಲಿ ನೆತ್ತಿಯ ಮೇಲೆ ಉರಿಯುವ ಸೂರ್ಯನ ಪ್ರಖರ ಕಿರಣಗಳು ಇನಗೆ ಕಾಣಲಿಲ್ಲ ಬದಲು ಬಾಲಸೂರ್ಯನ ಎಳೆಯ ಕಿರಣ"

ಸದಾನಂದ ಮಾತನಾಡುತ್ತಿದ್ದಂತೆಯೇ ಜಲಜಮ್ಮ ತರಕಾರಿ ಬುಟ್ಟಿಯನ್ನು ತೆಗೆದುಕೊಂಡು ಒಳಗೆ ಹೋದರು

ಸದಾನಂದ ಪದ್ಮಿನಿಯ ಬಳಿಗೆ ಹೋದ ಪದ್ಮಿನಿ ತಾನು ಬಿಚ್ಚಿದ್ದ ಸೀರೆಯನ್ನು ಮಡಿಸುತ್ತಾ ನಿಂತಿದ್ದಳು

"ನಮಸ್ಕಾರ ಮಾಡ್ತೀಯಾ ನನಗೆ ?" ಸದಾನಂದ ಕೇಳಿದ

"ಯಾಕೆ ?" ಪದ್ಮಿನಿ ಅಚ್ಚರಿಗೊಂಡು ಕೇಳಿದಳು

"ನಿನ್ನ ಮನಸ್ಸಿನಾಶೆ ನೆರವೇರಲೀಂತ ಆಶೀರ್ವಾದ ಮಾಡ್ತೀನಿ "

ಪದ್ಮಿನಿಯ ಕೈಯಿಂದ ಸೀರೆ ಜಾರಿತು

"ನಿಜವಾಗಿ ?"

ಸದಾನಂದ ನಿಧಾನವಾಗಿ ತಲೆ ಅಲುಗಿಸಿದ ವಿಷಾದದ ನಗೆಯೊಂದು ಅವನ ತುಟಿಯಂಚಿನಲ್ಲಿ ಮಿನುಗಿ ಮಾಯವಾಯಿತು ಆದರೆ ಅವನ ವಿಷಾದದ ನಗೆಯನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ ಪದ್ಮಿನಿ

"ಸದಾ, ನೀನೆಷ್ಟು ಒಳ್ಳೆಯವನು ! ನನಗೆ ಗೊತ್ತಿತ್ತು ಯಾರು ಕೈ ಬಿಟ್ಟರೂ ನೀನು ನನ್ನ ಬಿಡೋದಿಲ್ಲಾಂತ" ಎನ್ನುತ್ತಾ ಪದ್ಮಿನಿ ಕೆಳಗೆ ಬಾಗಿ ನೆಲದ ಮೇಲೆ ಬಿದ್ದಿದ್ದ ಸೀರೆಯನ್ನು ಕೈಗೆತ್ತಿಕೊಳ್ಳುತ್ತಾ,

"ಈಗ ನಮಸ್ಕಾರ ಮಾಡ್ತೀನಿ" ಎನ್ನುತ್ತಾ ತಲೆ ಎತ್ತಿದಾಗ ಸದಾನಂದ ಇರಲಿಲ್ಲ

* * *

ತಮ್ಮ ಮದುವೆಯ ಸುದ್ದಿಯನ್ನು ತಿಳಿಸಲು ಮೂರ್ತಿ, ಗೀತನೊಡಗೂಡಿ ಅಕ್ಕನ ಮನೆಗೆ ಹೋದರು ಅಪರೂಪಕ್ಕೆ ಬಂದ ತಮ್ಮನನ್ನು ಕಾವೇರಮ್ಮ ಸಂಭ್ರಮದಿಂದ ಎದುರುಗೊಂಡರು ಊಟವೆಲ್ಲಾ ಮುಗಿದ ಮೇಲೆ ಮೂರ್ತಿ ತಾವು ಬಂದ ಉದ್ದೇಶವನ್ನು ತಿಳಿಸಲು ಯತ್ನಿಸಿದರು

ತಮ್ಮ ಮದುವೆಯ ಸುದ್ದಿಯನ್ನು ತಾವೇ ಹೇಗೆ ಹೇಳುವುದೆಂದು ಮೂರ್ತಿಗೆ ತುಂಬಾ ಸಂಕೋಚವಾಯಿತು

ಯಾಕೆ ನಾಚಿಕೊಳ್ಳಬೇಕು ? ಯಾರೂ ಮಾಡದ ಕೆಲಸವನ್ನು ತಾವೇನೂ ಮಾಡುತ್ತಿಲ್ಲವಲ್ಲ ?

ಗೀತ, ಭವಾನಿ ರೂಮಿನಲ್ಲಿ ಪಗಡೆಯಾಡುತ್ತಿದ್ದರು ವಿಶ್ವನಾಥ ಮನೆಯಲ್ಲಿರಲಿಲ್ಲ ಹಾಲಿನಲ್ಲಿ ಕುಳಿತು ಎಲೆ, ಅಡಿಕೆ ಹಾಕಿಕೊಳ್ಳುತ್ತಿದ್ದ ಅಕ್ಕನೊಡನೆ ಮೂರ್ತಿ ಮಾತಿಗೆ ಮೊದಲು ಮಾಡಿದರು.

"ಕಾವೇರಿ, ನಿನಗೆ ಷಾಕ್ ಆಗುವಂತಹ ಸುದ್ದಿಯೊಂದನ್ನು ಹೇಳಲಾ ?" ಮೂರ್ತಿಯ ಮನಸ್ಸು ಅಳುಕಿದರೂ ಮುಖ ನಗುವಿನ ಮುಖವಾಡ ಧರಿಸಿತ್ತು

"ಅಂತಹ ಸುದ್ದಿ ಯಾವುದೋ ? ಕೆಟ್ಟ ಸುದ್ದಿಯೇ ?" ಕಾವೇರಮ್ಮ ಕೊಂಚ ಗಾಬರಿಯಿಂದಲೇ ಕೇಳಿದರು

"ಅದು ನಿನ್ನ ಸ್ವಭಾವದ ಮೇಲೆ ಹೋಗುತ್ತದೆ "

"ಗೀತನ ವಿಷಯವೇ ?"

"ಅಲ್ಲ "

"ವಿಶ್ವನಾಥ ?"

"ಅಲ್ಲ ಅದು ಕೇವಲ ನನಗೆ ಮಾತ್ರ ಸಂಬಂಧಿಸಿದ್ದು ನನಗೆ ಅಂದರೆ—ಅದರಲ್ಲಿ ಇನ್ನೊಬ್ಬರೂ ಬರುತ್ತಾರೆ "

"ಒಗಟಿಯಾಗಿ ಮಾತಾಡುವುದು ಸಾಕಪ್ಪ ಇರುವ ವಿಷಯವನ್ನು ನೇರವಾಗಿ ಹೇಳಿಬಿಡು "

"ನಿನ್ನ ತಮ್ಮ ಗೃಹಸ್ಥಾಶ್ರಮಕ್ಕೆ ಕಾಲಿಡಬೇಕೂಂತ ನಿರ್ಧರಿಸಿದ್ದಾನೆ "

"ಯಾರು ? ನೀನೇ !" ಕಾವೇರಮ್ಮ ಬೆಕ್ಕಸ ಬೆರಗಾದರು

"ನಿನಗೊಬ್ಬನೇ ತಮ್ಮನಲ್ಲವೇ ಇರೋದು ?"

"ಗೀತನ ತಾಯಿ ಹೋದ ಹೊಸದರಲ್ಲಿ ಜನ ನಿನಗೆ ಎಂತೆಂತಹ ಹೆಣ್ಣುಗಳನ್ನೋ ತಂದು ತೋರಿಸಿ ಕಾಲಿಗೆ ಅಡ್ಡ ಬಿದ್ದಿದ್ದರು ಆದರೆ ಆಗ ನೀನು ಅಂತಹ ಲಕ್ಷಣವಾದ ಹುಡುಗಿಯರನ್ನೆಲ್ಲಾ ನಿರಾಕರಿಸಿ ಈ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳುತ್ತೀನಿಂತ ಹೇಳಿದರೆ ನನಗೇಕೋ ನಂಬೋಕೆ ಸಾಧ್ಯವಿಲ್ಲ "

"ನಾನು ಸುಳ್ಳು ಹೇಳುತ್ತಿಲ್ಲ ಕಾವೇರಿ ನಾನು ನಿನ್ನ ಎದುರಿಗೆ ಕುಳಿತಿರುವುದು ಎಷ್ಟು ನಿಜವೋ ಮದುವೆ ಮಾಡಿಕೊಳ್ಳುವುದೂ ಅಷ್ಟೇ ನಿಜ "

ಕಾವೇರಮ್ಮನ ಮುಖದ ಕಳೆ ಇಳಿಯಿತು ಅವರು ತಮಗಾದ ಅಸಮಾಧಾನವನ್ನು ವ್ಯಕ್ತಪಡಿಸದೆ "ಹುಡುಗಿ ಯಾರು ?" ಎಂದರು

"ಗೀತನ ಸ್ನೇಹಿತೆ ಪದ್ಮಿನಿ"

"ಪದ್ಮಿನಿ!"

"ಹೂಂ ಅವಳೇ"

"ಆ ಹುಡುಗಿ! ಗೀತನ ಜೊತೆಯ ಹುಡುಗಿಯನ್ನು ನೀನು ಮದುವೆಯಾಗ್ತೀಯಾ?"

"ಹೌದು"

"ಎಷ್ಟು ವರ್ಷ ಆ ಹುಡುಗೀಗೆ?"

"ಹದಿನೆಂಟು ವರ್ಷವಾಗಿದೆ"

"ನಿನಗೆ ತುಂಬಾ ಚಿಕ್ಕವಳಾಗಲಿಲ್ಲವೇ?"

"ಹೌದು"

"ಮದುವೆ ಮಾಡಿಕೊಳ್ಳೋದಕ್ಕೆ ಮುಂಚೆ ಇನ್ನೊಂದು ಸಲ ಯೋಚನೆ ಮಾಡುತ್ತೀಯಾ?"

"ಯೋಚನೆ ಮುಗಿಸಿಯೇ ನಿನ್ನ ಬಳಿಗೆ ಬಂದಿದ್ದೇನೆ"

"ಮೂರ್ತಿ ನಾನೊಂದು ಮಾತು ಹೇಳುತ್ತೇನೆ ನೀನು ತಪ್ಪು ತಿಳಿಯಬೇಡ ಅವಳಿನ್ನೂ ಚಿಕ್ಕವಳಿರುವಾಗಲೇ ನೀನು ಮುದುಕನಾಗುತ್ತೀಯ ಆಗ ಅವಳು ನಿನಗೆ ದ್ರೋಹ ಮಾಡದೇ ಇರುತ್ತಾಳೇಂತ ಏನು ಖಾತ್ರಿ? ಈಗ ನೀನು ಅವಳ ಪ್ರಾಯಕ್ಕೆ, ಸೌಂದರ್ಯಕ್ಕೆ ಮರುಳಾಗಿರಬಹುದು ಮುಂದೆ ನೀನು ಮುಪ್ಪಿನ ಗುಹೆಯಲ್ಲಿ ಸೇರಿಯಾದಾಗ ಅವಳು ಮನೆತನದ ಮರ್ಯಾದೆ ಕಳೆಯುವಂತಹ ಕೆಲಸ ಮಾಡಿದರೆ ವಯಸ್ಸಾದ ಕಾಲಕ್ಕೆ ಅದೊಂದು ಚಿಂತೆ ನಿನ್ನನ್ನು ಇರಿಯಲಾರದೇ? ನೀನು"

"ಪದ್ಮಿನಿಯ ಸ್ವಭಾವ ನಿನಗೆ ಗೊತ್ತಿದ್ದಿದ್ದರೆ ನೀನು ಈ ತರಹ ಮಾತನಾಡುತ್ತಿರಲಿಲ್ಲ ಅಕ್ಕ" ಎಂದರು ಮೂರ್ತಿ ನೊಂದ ದನಿಯಿಂದ

"ಯೌವನ ಮಾಡಬಾರದ ಕೆಲಸವನ್ನು ಮಾಡಿಸುತ್ತದೆ ಆಗ ನೀನು ಈಗ ಮಾಡಿದ ಕೆಲಸಕ್ಕಾಗಿ ಪಶ್ಚಾತ್ತಾಪ ಪಡಬೇಕಾದೀತು ಭವಿಷ್ಯತ್ತಿನ ಕಡೆಗೊಂದು ಬಾರಿ ನೋಟ ಬೀರಿ ಆಮೇಲೆ ಮುಂದುವರಿದರೆ ಕ್ಷೇಮ"

"ಪದ್ಮಿನಿ ಅಂತಹ ಹುಡುಗಿಯಲ್ಲ"

"ಸದ್ಯಕ್ಕೆ ಅವಳು ಒಳ್ಳೆಯವಳಾಗಿರಬಹುದು ಮುಂದೆಯೂ ಹೀಗೆ

ಇರುತ್ತಾಳೆಂತ ಏನು ಖಾತ್ರಿಯಿದೆ ?"

"ನೀನು ಹೇಳುವ ರೀತಿಯ ಹುಡುಗಿಯಾಗಿದ್ದಿದ್ದರೆ ಮೊದಲನೆಯ ದಾಗಿ ಅವಳು ಮನೆಯವರನ್ನೆಲ್ಲಾ ವಿರೋಧಿಸಿ ನನ್ನ ಕೈ ಹಿಡಿಯಲು ಒಪ್ಪುತ್ತಿರಲಿಲ್ಲ"

"ಅವಳಿನ್ನೂ ಹುಡುಗಿ ಮುಂದಾಲೋಚನೆ ಮಾಡಲಿಲ್ಲವೇನೋ?"

"ಅವಳು ಮಾಡಿಲ್ಲದಿದ್ದರೇನು ? ನಾನು ಮಾಡಿದೀನಿ ಹಾಗೂ ಅದರ ಸ್ವರೂಪ ಎಷ್ಟು ಕರಾಳವಾಗಿರಬಹುದು ಎಂಬುದನ್ನೂ ತಿಳಿಸಿದ್ದೇನೆ ಆದರೂ ಅವಳು ತನ್ನ ನಿರ್ಧಾರ ಕದಲಿಸಲಿಲ್ಲ"

"ಈಗ ಹದಿಮೂರು ವರ್ಷಕ್ಕೆ ಹಿಂದೆಯೇ ನೀನು ಮದುವೆ ಮಾಡಿಕೊಂಡಿದ್ದರೆ ಚೆನ್ನಾಗಿತ್ತು"

"ಆಗ ಪದ್ಮಿನಿ ಇರಲಿಲ್ಲ ಅವಳಿಗಾಗಿಯೇ ಕಾಯುತ್ತಿದ್ದೆನೋ ಏನೋ ? ಎಂತೆಂಥಹ ಹುಡುಗಿಯರಿಗೂ ಸೋಲದವನು"

"ನೀನು ಅಷ್ಟೊಂದು ಬಯಸಿ ಮದುವೆಯಾಗುವಷ್ಟು ಚೆನ್ನಾಗಿದ್ದಾಳೆಯೇ ಆ ಹುಡುಗಿ ?"

"ನನ್ನ ದೃಷ್ಟಿಯಲ್ಲಿಂತೂ ಅವಳು ಚೆಲುವೆ ಇತರರ ದೃಷ್ಟಿಯಲ್ಲಿ ಅವಳು ಹೇಗ ಕಾಣಿಸುತ್ತಾಳೊ ನನಗೆ ಗೊತ್ತಿಲ್ಲ ನನ್ನ ನೀರಸ ಬಾಳು ಅವಳಿಂದಾಗಿ ಮತ್ತೆ ಜೀವ ಪಡೆದಿದೆ"

ಕಾವೇರಮ್ಮ "ಸರಿ ನಿನ್ನಿಷ್ಟ ನೀನು ಎಲ್ಲಾನೂ ಮೊದಲೇ ನಿರ್ಧರಿಸಿರುವ ಹಾಗಿದೆ" ಎಂದು ಹೇಳಿ ಒಳಗೆ ಹೋದರು

ಅವರ ಮನಸ್ಸಿನ ತುಂಬಾ ಅಸಮಾಧಾನ, ಅಶಾಂತಿ ತುಂಬಿಕೊಂಡಿತ್ತು

ಗೀತನನ್ನು ತಮ ಮಗನಿಗೇ ತಂದುಕೊಳ್ಳುವ ಉದ್ದೇಶದಲ್ಲಿ ಆಕೆಗೆ ಸ್ವಾರ್ಥವಿಲ್ಲದೇ ಇರಲಿಲ್ಲ ಗೀತನಿಂದಾಗಿ ತವರುಮನೆಯ ಆಸ್ತಿಯೆಲ್ಲವೂ ಮತ್ತೆ ತಮ್ಮ ಮನೆ ಸೇರುವುದೆಂದು ಅವರು ಆಶಿಸಿದ್ದರು ಸ್ವಾರ್ಥಸಾಧನೆಗಾಗಿಯೇ ಅವರು ವಿಶ್ವನಾಥ, ಗೀತನ ಎಳೆಯ ಮನಸ್ಸಿನ ಮೇಲೆ ತಾವಾಗಿಯೇ ಅನುರಾಗದ ಬೀಜವನ್ನು ನೆಟ್ಟು, ಅದು ಹುಲುಸಾಗಿ ಬೆಳೆಯುವಂತೆ ಪೋಷಿಸಿದರು

ಆದರೆ ಮೂರ್ತಿಯ ಮರುಮದುವೆ ಅವರ ಯೋಜನೆಗಳನ್ನೆಲ್ಲಾ

ಮುರಿದು ಹಾಕಿತು. ಗೀತ, ವಿಶ್ವನಾಥರ ಹೃದಯದ ಗಂಟು ಈಗ ಬಿಡಿಸಲಾಗದಂತಹ ಕಗ್ಗಂಟಾಗಿತ್ತು

ತಮ್ಮನ ಮೇಲಿನ ಅಸಮಾಧಾನದಿಂದಲೇ ಅವರು ಮೂರ್ತಿಯ ಮದುವೆಗೆ ಬರಲಿಲ್ಲ ತಮ್ಮ ಮನೆಯವರೆಲ್ಲರ ಪರವಾಗಿ ವಿಶ್ವನಾಥ ಮಾತ್ರ ಬಂದಿದ್ದ

ಮದುವೆಯ ಚಪ್ಪರದಲ್ಲಿ ಯಾರ ಮುಖದ ಮೇಲೂ ಕಳೆಯಿರಲಿಲ್ಲ ಮೂರ್ತಿ, ಪದ್ಮಿನಿ, ಗೀತಾ ಮಾತ್ರ ತುಂಬಾ ಸಂತೋಷದಿಂದ ಓಡಾಡುತ್ತಿದ್ದರು ಸದಾನಂದ ತಂಗಿಯನ್ನು ಪ್ರಸನ್ನಗೊಳಿಸುವುದಕ್ಕಾಗಿ ತುಟಿಗೆ ನಗುವಿನ ಬಣ್ಣ ಬಳಿದು ತನ್ನ ಕರ್ತವ್ಯ ಮಾಡುತ್ತಿದ್ದ ಪದ್ಮಿನಿಯ ತಾಯಿ, ತಂದೆಯಂತೂ ಯಾರದೋ ಮದುವೆಯೊಂದರಲ್ಲಿ ತಾವು ಅನಿವಾರ್ಯವಾಗಿ ಭಾಗವಹಿಸಬೇಕಾಗಿ ಬಂದಿರುವಂತೆ ವರ್ತಿಸುತ್ತಿದ್ದರು ಮೂರ್ತಿ, ಪದ್ಮಿನಿ ಇತರರ ಮುಖಲಕ್ಷಣವನ್ನು ಪರೀಕ್ಷಿಸಲಾರದಷ್ಟು ಪರಸ್ಪರರಲ್ಲಿ ಐಕ್ಯವಾಗಿದ್ದರು

ಅವರಿವರ ಪಿಸುಮಾತು, ವ್ಯಂಗ್ಯನಗೆ, ಕೊಂಕುನೋಟಗಳನ್ನು ತಪ್ಪಿಸಿ ಓಡಾಡಬೇಕಾದರೆ ಗೀತನಿಗೆ ಸಾಕಾಗಿ ಹೋಯಿತು ಕೊನೆಕೊನೆಗೆ ಅವಳು ಮೂರ್ತಿ, ಪದ್ಮಿನಿಯ ಮಗ್ಗುಲನ್ನು ಬಿಟ್ಟು ಅಲುಗಾಡಲಿಲ್ಲ ಅವರ ಸುತ್ತ ಆ ಬಗೆಯ ಮಾತುಗಳಿಗೆ ಅವಕಾಶವಿಲ್ಲವೆಂಬುದು ಗೀತನಿಗೆ ತಿಳಿದಿತ್ತು

ಪದ್ಮಿನಿಯ ಗೆಳತಿಯರೆಲ್ಲರೂ ಮದುವೆಗೆ ಬಂದಿದ್ದರು

ಕೆಲವರಿಗೆ ಅವಳ ಮದುವೆ ಪರಿಹಾಸ್ಯದ ವಿಷಯವಾಗಿದ್ದರೆ ಮತ್ತೆ ಕೆಲವರಿಗೆ ಅದು ಕನಿಕರಯೋಗ್ಯವಾಗಿ ತೋರಿತ್ತು ನಾನಾ ಬಗೆಯ ಊಹಾಪೋಹಗಳು ಎಲ್ಲಿಯೋ ಹುಟ್ಟಿ ಬೃಹದಾಕಾರವಾಗಿ ಬೆಳೆದು ರೆಕ್ಕೆ ಪುಕ್ಕಗಳೊಡನೆ ಹಾರಾಡುತ್ತಿದ್ದುವು

"ಪದ್ಮಿನಿ ಎಲ್ಲರನ್ನೂ ಬಿಟ್ಟು ಮುದುಕನ್ನ ಮಾಡಿಕೊಳ್ಳಬೇಕೆ ?"

"ಆದರೂ ಆತ ತುಂಬಾ ಚಿಕ್ಕವರ ಹಾಗೇ ಕಾಣಿಸುತ್ತಾರೆ !"

"ಚಿಕ್ಕವರ ಹಾಗೆ ಕಾಣಿಸಿದರೂ ಅವರಿಗೆ ವಯಸ್ಸಾಗಿದೆ ಗೀತನಷ್ಟು ದೊಡ್ಡ ಮಗಳಿರಬೇಕಾದರೆ ಅವರಿಗೆ ಕೊನೆಯ ಪಕ್ಷ ನಲವತ್ತಾದರೂ ಆಗಿರಬೇಕು."

"ನಮ್ಮ ತಾಯಿಗೆ ಅವರ ವಿಷಯ ಚೆನ್ನಾಗಿ ಗೊತ್ತು ಅವರಿಗೆ ಐವತ್ತು ವರ್ಷವಾಗಿದೆಯಂತೆ"

"ಪದ್ಮಿನಿ ಮುದುಕನ್ನ ಮದುವೆ ಮಾಡಿಕೊಳ್ಳುವಷ್ಟು ಡೆಸ್ಪರೇಟ್ ಆಗಿದ್ದಳೇ ?"

"ಸಾಲದುದಕ್ಕೆ ಅವರಿಗೆ ನಡತೆ ಬೇರೆ ಚೆನ್ನಾಗಿಲ್ಲವಂತೆ"

"ಮೊದಲನೆಯ ಹೆಂಡತೀನ ಕೊಲೆ ಮಾಡಿದಾರಂತೆ"

"ಪದ್ಮಿನಿ ಒಂದು ಪೆದ್ದು ಆ ಗೀತನ ಸ್ನೇಹ ಬೆಳೆಸಿ ಅವರ ಮನೆಗೆ ಬಂದು ಹೋಗಿ ಮಾಡುತ್ತಿದ್ದಳು ಆಗಲೇ ನನಗೆನ್ನಿಸಿತು ಇವಳು ಏನಾದರೂ ತೊಡಕು ಮಾಡಿಕೊಳ್ಳುತ್ತಾಳೇಂತ ಅವಳು ಅಲ್ಲಿಗೆ ಹೋಗಿ ಬಂದು ಮಾಡುವಾಗ ಏನು ಅನಾಚಾರವಾಯಿತೋ ಏನೋ ? ಮೊದಲೇ ಗುಣ ಚೆನ್ನಿಲ್ಲ ಒಬ್ಬಳೇ ಸಿಕ್ಕಿದಾಗ ಖತಂ ಹೋಗಿಯ ಎಂದು ತೋರು ತ್ತದೆ" ಈ ಮಾತನಾಡಿ ಕೃಪಾ ತನ್ನ ಪಾಡಿಗೆ ತಾನೇ ನಕ್ಕಳು

"ಹಾಗಂತೀಯಾ ?"

"ಮತ್ತೆನ್ನೇನು ? ಯಾರಾದರೂ ಕಂಡೂ ಕಂಡೂ ಬಾವಿಯೊಳಗೆ ಬೀಳುತ್ತಾರೆಯೇ ? ಇರುಳು ಕಂಡ ಬಾವಿಗೆ ಹಗಲು ಬೀಳಬೇಕಾದರೆ ಯಾರಾದರೂ ಹಿಂದಿನಿಂದ ಕತ್ತು ಹಿಡಿದು ತಳ್ಳಿರಬೇಕು"

"ಛೇ ಪಾಪ !"

"ಹಾಗಲ್ಲವೇ ಪದ್ಮಿನಿಯ ಅಪ್ಪ ಗೀತನ ತಂದೆಯ ಹತ್ತಿರ ತುಂಬಾ ಸಾಲ ಮಾಡಿಬಿಟ್ಟಿದ್ದರಂತೆ ಸಾಲ ತೀರಿಸಲಾರದೆ ಪದ್ಮಿನೀನ ಬಲವಂತ ಮಾಡಿ ಅವರ ಕೊರಳಿಗೆ ಕಟ್ಟುತ್ತಿದ್ದಾರಂತೆ"

"ಇರಬಹುದು, ಅದಕ್ಕೇ ಪದ್ಮಿನಿ ಮಂಕಾಗಿದಾಳೆ"

"ಅವಳೇನು ಮಂಕಾಗಿಲ್ಲ ಬೇಕಾದರೆ ನಿನಗೆ ಮಂಕು ಹಿಡಿಸು ತ್ತಾಳೆ"

ಗೀತ ತನ್ನ ಗುಂಪಿನ ಕಡೆ ಬರುತ್ತಿರುವುದನ್ನು ನೋಡಿ ಎಲ್ಲರೂ ಕಟ್ಟನೆ ಮಾತು ನಿಲ್ಲಿಸಿ ಕೃತಕ ನಗೆ ಬೀರಿದರು

"ಗೀತ, ಪದ್ಮಿನಿಗ ನಮ್ಮ ಕಂಗ್ರ್ಯಾಟ್ಸ್ ತಿಳಿಸಿಬಿಡಮ್ಮಾ"

"ನೀವೇ ಹೇಳುವಿರಂತೆ ಬನ್ನಿ" ಎಂದು ಹೇಳಿ ಗೀತಾ ತನ್ನ ಗೆಳತಿ

ಯರನ್ನು ಮೂರ್ತಿ ಪದ್ಮಿನಿ ಇದ್ದಲ್ಲಿಗೆ ಕರೆದುಕೊಂಡು ಹೋದಳು ತನ್ನ ಗೆಳತಿಯರನ್ನು ತಂದೆಗೆ ಒಬ್ಬೊಬ್ಬರನ್ನಾಗಿ ಪರಿಚಯ ಮಾಡಿಕೊಟ್ಟಳು ಅನಂತರ ಗೆಳತಿಯರ ಕಡೆ ತಿರುಗಿ, "ಇವರು ನಮ್ಮ ತಂದೆ—ಈಕೆ ನಮ್ಮ ಚಿಕ್ಕಮ್ಮ" ಎನ್ನುತ್ತಾ ಪದ್ಮಿನಿಯ ಕಡೆ ನೋಡಿ ನಕ್ಕಳು

ಗೆಳತಿಯ ಹಿಂದೆ ಹೊರಟಾಗ ಕಪಿಲಾ ಮಾತ್ರ,

"ಪರವಾಗಿಲ್ಲ ಆತ ಚೆನ್ನಾಗಿಯೇ ಇದ್ದಾರೆ ನೀವೆಲ್ಲರೂ ಹೇಳುವಂತೆ ಏನೋ ಆಗಬಾರದ್ದು ಆಗಿಹೋಗಿದೆ ಎಂದು ನನಗೆ ತೋರುವುದಿಲ್ಲ ಪದ್ಮಿನಿಯೂ ಸಂತೋಷದಿಂದಿದ್ದ ಹಾಗಿತ್ತು" ಎಂದಳು

"ಅಪ್ಪನ ಸಾಲ ತೀರಿತು ಎಂದು ಸಂತೋಷವಾಗಿರಬಹುದು"

"ಹೌದು ಯಾಕಾಗಬಾರದು ? ಹೆತ್ತ ತಂದೆಯ ಸಾಲದ ಹೊರೆ ಇಳಿಸಲು ಮುದುಕನ ಕೈಹಿಡಿಯುವುದು ದೊಡ್ಡ ತ್ಯಾಗ ನನ್ನ ಕಣ್ಣಿಗಂತೂ ಪದ್ಮಿನಿ ತ್ಯಾಗಿಯಾಗಿ ಕಾಣಿಸುತ್ತಾಳೆ"

"ಮದುವೆ ನಿಶ್ಚಯ ಆದಮೇಲೆ ಪ್ರಾಣತ್ಯಾಗ ಮಾಡೋಕೆ ಹೊರಟಿದ್ದಳಂತೆ"

"ಯಾರು ಹೇಳಿದರು ?"

"ಹೀಗೇ ಬಂತು ವೈರ್‌ಲೆಸ್" ಎಂದು ಮಾತು ಮುಗಿಸಿ ಗೆಳತಿಯರು ಎದ್ದರು

* * *

ಮದುವೆಯಾದ ಮಾರನೆಯ ದಿನವೇ ಜಲಜಮ್ಮ, ಸದಾನಂದ, ನಂಜುಂಡಯ್ಯನವರು ಪದ್ಮಿನಿಯನ್ನು ರಾಹುಕಾಲ ಕಳೆದ ಮೇಲೆ, ಬೆಳಗ್ಗೆ ಒಂಭತ್ತು ಗಂಟೆಯ ಹೊತ್ತಿಗೆ ಮೂರ್ತಿಯ ಮನೆಗೆ ಕರೆದುಕೊಂಡು ಬಂದರು ಸದಾನಂದ ತಂಗಿಗಾಗಿ ಸಂತೋಷ ಪ್ರಕಟಿಸುತ್ತಿದ್ದ. ಆದರೆ ಜಲಜಮ್ಮ, ನಂಜುಂಡಯ್ಯನವರು ಮಾತ್ರ ಉದಾಸೀನರಾಗಿದ್ದರು

ಹೊಸಿಲ ಮೇಲಿದ್ದ ಅಕ್ಕಿ ತುಂಬಿದ ಸೇರನ್ನು ಪದ್ಮಿನಿ ಉರುಳಿಸಿ ಬಲಗಾಲನ್ನು ಮುಂದಿಟ್ಟು ಮನೆಯೊಳಗೆ ಬಂದಳು

ಮೂರ್ತಿ, ಗೀತ ನಗುಮುಖದಿಂದ ಪದ್ಮಿನಿಯನ್ನು ಬರಮಾಡಿಕೊಂಡರು ಹತ್ತು ಗಂಟೆಯ ಹೊತ್ತಿಗೆ ಮೂರ್ತಿ ಆತುರವಾಗಿ ಊಟ

ಮಾಡಿಕೊಂಡು ಕೋರ್ಟಿಗೆ ಹೊರಟರು ಯಾವುದೋ ಕೊಲ ಮೊಕದ್ದಮೆ ತೆಗೆದುಕೊಂಡಿದ್ದ ಅವರು ಪದ್ಮಿನಿ ಮನೆಗೆ ಬಂದ ದಿನವೂ ಅನಿವಾರ್ಯವಾಗಿ ಕೋರ್ಟಿಗೆ ಹೋಗಲೇಬೇಕಾಗಿತ್ತು

ಗದ್ದಲದಲ್ಲಿ ಪದ್ಮಿನಿಯು ಬಳಿಗೆ ಕ್ಷಣಕಾಲ ನಸುನಾಚಿದಾಗ, ನಗುವಿನಿಂದ ಅರಳಿದ ಅವಳ ಕೆನ್ನೆಯನ್ನು ಹಿಂಡಿ

"ನಾನು ಬರ್ತೀನಿ ನಿನ್ನ ಮನೆಗೆ ಬಂದಿರುವ ನೆಂಟರನ್ನು ನೋಡಿಕೊಳ್ಳುವ ಜವಾಬ್ದಾರಿ ನಿನ್ನದು ಚೀರಿಯೋ "ಎಂದು ಹೇಳಿದರು

ಮುಂಬಾಗಿಲಿನಲ್ಲಿ ನಿಂತಿದ್ದ ವಿಶ್ವನಾಥನಿಗೆ,

"ನಾನು ಹೋಗ್ತೀನಿ ಎಲ್ಲರನ್ನೂ ಸರಿಯಾಗಿ ವಿಚಾರಿಸು" ಎಂದು ಎಚ್ಚರಿಕೆ ಹೇಳಿ ಮೂರ್ತಿ ಹೊರಟುಹೋದರು

ಹೋಗುವಾಗ ಅತ್ತೆ, ಮಾವನ ಅಪ್ಪಣೆ ತೆಗೆದುಕೊಂಡು ಹೋಗುವುದನ್ನು ಮರೆಯಲಿಲ್ಲ

ಊಟಣದೂಟ ಮುಗಿಸಿ ಪದ್ಮಿನಿಯ ತಾಯಿ, ತಂದೆ, ಅಣ್ಣ ಮನೆಗೆ ಹೊರಟರು ಪದ್ಮಿನಿ ಅವರು ಹೊರಟಾಗ ಅವರಿಗೆ,

"ಇವರು ಕೋರ್ಟಿನಿಂದ ಬರುವವರೆಗೆ ಇರಿ" ಎಂದಳು

ಆದರೆ ಜಲಜಮ್ಮ ಮಗಳ ಮನೆಯಲ್ಲಿ ನಿಲ್ಲುವುದು ಸಾಧ್ಯವಿರಲಿಲ್ಲ ಮದುವೆಯ ಸಂಭ್ರಮದಲ್ಲಿ ಮನೆಯ ಸಾಮಾನುಗಳು ತುಂಬಾ ಅವ್ಯವಸ್ಥೆಯಲ್ಲಿ ಬಿದ್ದಿದ್ದುವು ಕೇವಲ ಕೆಲಸದವರಿಗೆ ಮನೆಯ ಜವಾಬ್ದಾರಿಯನ್ನು ಒಪ್ಪಿಸಿ ಮಗಳ ಮನೆಯಲ್ಲಿ ನಿಲ್ಲುವುದು ಅವರಿಗೆ ಸರಿಯಾಗಿ ಕಾಣಲಿಲ್ಲ ಸಾಲದುದಕ್ಕೆ ಬೇಕಿಲ್ಲದ ಅಳಿಯನ ಮನೆಯ ಸೋಫಾದ ಮೃದುವಾದ ಮೆತ್ತೆಗಳೂ ಸಹ ಅವರ ಪಾಲಿಗೆ ಮುಳ್ಳಾಗಿದ್ದುವು

ತಾಯಿ, ತಂದೆ, ಅಣ್ಣ ಹೊರಟುಹೋದ ಮೇಲೆ ಪದ್ಮಿನಿಯ ಮನಸ್ಸು ಒಂದು ಕ್ಷಣ ಪಿಚ್ಚೆನಿಸಿತು ಅವರು ಹೋದ ಸಮಯದಲ್ಲಿ ಮೂರ್ತಿಯೂ ತನ್ನ ಬಳಿ ಇಲ್ಲದಿದ್ದುದ ಪದ್ಮಿನಿಗೆ ತುಂಬಾ ವ್ಯಥೆಯನ್ನುಂಟು ಮಾಡಿತು

"ಹೇಗಿದ್ದರೂ ಒಂದೇ ಊರಿನಲ್ಲಿರುತ್ತೇವೆ ಬೇಕೆನಿಸಿದಾಗ ಅಮ್ಮನ ಮನೆಗೆ ಹೋಗಿಬರಲು ಯಾರದೇನು ಅಡ್ಡಿ" ಎಂದು ಪದ್ಮಿನಿ ಮನಸ್ಸನ್ನು

ಸಮಾಧಾನ ಮಾಡಿಕೊಂಡಳು

ಮೂರ್ತಿ ಮಧ್ಯಾಹ್ನವೂ ಮನೆಗೆ ಬರಲಿಲ್ಲ ವಿಶ್ವನಾಥ ಊರಿಗೆ ಹೊರಟು ನಿಂತಿದ್ದ ಗೀತನ ಅಪ್ಪಣೆ ಪಡೆದು ವಿಶ್ವನಾಥ ಪದ್ಮಿನಿಯ ಬಳಿಗೆ ಹೋಗಿ, "ನಾನು ಹೊರಡ್ತೀನಿ ಮಾವನಿಗೆ ಹೇಳಿಬಿಡಿ" ಎಂದ

ಪಾವೆಯಿಂದ ವಿಶ್ವನಾಥನಿಗೆ ಹಿರಿಯಳಾದರೂ ವಯಸ್ಸಿನಿಂದ ಕಿರಿಯವಳಾದ ಪದ್ಮಿನಿ ಸಂಕೋಚದಿಂದ "ಆಗಲಿ" ಎಂದಳು

ಗೀತ ಅವಳ ಸಂಕೋಚ ನೋಡಿ "ಚಿಕ್ಕಮ್ಮಾ " ಎಂದು ಮಾತಿಗೆ ಮೊದಲು ಮಾಡಿದಳು ಪದ್ಮಿನಿ ಅವಳ ಮಾತು ಪೂರ್ಣಗೊಳಿಸುವುದಕ್ಕೆ ಮುಂಚೆಯೇ ಗೀತಳ ಕಿವಿ ಹಿಂಡಿ,

"ಗೀತಾ, ಇನ್ನೊಂದು ಸಲ ನನ್ನ ಚಿಕ್ಕಮ್ಮಾಂತ ಕೂಗಿದರೆ ಆಮೇಲೆ ನಾನು ನಿಜವಾಗಿಯೂ ಬಲತಾಯಿಯಾಗಿಬಿಡುತ್ತೇನೆ" ಎಂದಳು

ವಿಶ್ವನಾಥ ಪದ್ಮಿನಿಯಿಂದ ಬಹಳ ಉಪಕಾರ ಪಡೆದವನಂತೆ,

"ಹಾಗಾದರೂ ಮಾಡಿ ನನ್ನ ಹತ್ತಿರ ಅವಳು ಬರುವುದಕ್ಕೆ ಮುಂಚೆ ನಿಮ್ಮ ಬಲತಾಯಿತನದಿಂದಾಗಿ ಅವಳು ಬುದ್ಧಿ ಕಲಿತಿರಲಿ ಆಗ ಬಡವ ಬದುಕಿಕೊಳ್ಳುತ್ತಾನೆ" ಎಂದ

"ನಮ್ಮ ಗೀತ ನೀವು ತಿಳಿದುಕೊಂಡಿರುವಷ್ಟು ಕೆಟ್ಟವಳಲ್ಲ" ಎಂದಳು ಪದ್ಮಿನಿ

"ಎಷ್ಟಾಗಲಿ ನೀವು ನೀವು ಒಂದು ನಾನಿನ್ನು ಬರ್ತೀನಿ ಗೀತಾ ಅವರು ಮನೆಗೆ ಬರುವವರೆಗೆ ನನಗೆ ಇರೋಕಾಗೋದಿಲ್ಲ ನಾಳೆ ನಾನು ಊರಿನಲ್ಲಿರಬೇಕು ನನ್ನ ಪರವಾಗಿ ನೀನು ಕ್ಷಮಾಪಣೆ ಕೇಳಿಬಿಡು" ಎಂದು ಹೇಳಿ ವಿಶ್ವನಾಥ ಹೊರಟುಹೋದ

ಬೆಳಗ್ಗೆ ಹತ್ತು ಗಂಟೆಗೆ ಮನೆಬಿಟ್ಟು ಹೋದ ಮೂರ್ತಿ ಕೆಲಸದ ಒತ್ತಡದಿಂದಾಗಿ ರಾತ್ರಿ ಮನೆಗೆ ಬಂದಾಗ ಒಂಭತ್ತು ಗಂಟೆಯಾಗಿತ್ತು

ಗೀತ ತಂದೆಯ ಆಗಮನವನ್ನು ಎದಿರುನೋಡದೆ ಊಟ ಮುಗಿಸಿಬಿಟ್ಟಿದ್ದಳು ಗೀತ ಊಟ ಮುಗಿಸಿ, ಪದ್ಮಿನಿಯ ಕನಸುಕಾಣುವ ಕಣ್ಣುಗಳನ್ನು ನೋಡಿ ನಗುತ್ತಾ ಹೇಳಿದಳು

"ಕಾಯೋಕೆ ನೀನಿರುವಾಗ ನಾನೇಕೆ ಹಸಿದುಕೊಂಡಿರಬೇಕು,"

"ನಿಜ ವಿಶ್ವನಾಥ ಇದ್ದಿದ್ದರೆ ಆಗ ?"

"ಅವನಿದ್ದಿದ್ದರೂ ನಾನು ಅವನೊಡನೆ ಊಟಕ್ಕೆ ಕುಳಿತುಕೊಳ್ಳು ತ್ತಿರಲಿಲ್ಲ ಅವನು ಸುಮ್ಮನೆ ಕೀಟಲೆ ಮಾಡ್ತಾನೆ—ಇಂಡಿಯಾ ದೇಶ ದಲ್ಲಿ ಯಾಕೆ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೇಂತ ಈಗ ಕಾರಣ ಗೊತ್ತಾಯಿತೂಂತ ಹಾಸ್ಯ ಮಾಡುತ್ತಾನೆ"

ಮೂರ್ತಿಯನ್ನು ಕಾಯುತ್ತಿದ್ದ ಶಾತನಿಗೆ ಪದ್ಮಿನಿ, "ನೀವು ಮನೆಗೆ ಹೋಗಿ, ಅವರು ಬಂದರೆ ನಾನೇ ಬಡಿಸುತ್ತೇನೆ" ಎಂದಳು

"ಮನೆಗೆ ಬಂದ ದಿನವೇ ನೀನು ಕೆಲಸ ಮಾಡಬೇಕೆ?"

"ನನಗೇನೂ ಅದರಿಂದ ತೊಂದರೆಯಾಗ ವದಿಲ್ಲ ನೀವು ಹೋಗಿ" ಎಂದು ಪದ್ಮಿನಿ ಬಲವಂತಮಾಡಿ ತಾತನನ್ನು ಮನೆಗೆ ಕಳಿಸಿದಳು

ಅವರ ನಡುವೆ ತಾವಿರುವುದೂ ಒಂದು ರೀತಿಯಿಂದ ಅನಾನುಕೂಲ ಎಂದು ಭಾವಿಸಿದ್ದ ತಾತ ಪದ್ಮಿನಿಯಿಂದ ಹಚ್ಚು ಹೇಳಿಸಿಕೊಳ್ಳದೆ ಹೊರಟುಹೋದರು ಗೀತ, ಪದ್ಮಿನಿ ಮಾತನಾಡುತ್ತಾ ಕುಳಿತರು

ಕಾರಿನ ಸದ್ದು ದೂರದಲ್ಲಿ ಕೇಳಿಸಿದೊಡನೆ ಗೀತ ಆಕಳಿಸಿ ಮೈ ಮುರಿದು "ನನಗೆ ನಿದ್ದೆ ಬರ‍್ತಿದೆ ಹೋಗ್ತೀನಿ" ಎಂದಳು

ಪದ್ಮಿನಿ ಹೋಗುತ್ತಿದ್ದ ಗೀತನ ಕೈ ಹಿಡಿದು "ನೀನೂ ಇರು ಗೀತಾ, ನನಗೇಕೋ ತುಂಬಾ ನಾಚಿಕೆಯಾಗುತ್ತಿದೆ" ಎಂದಳು

ಗೀತ ತನ್ನ ಕೈಯನ್ನು ಬಿಡಿಸಿಕೊಂಡು, "ಬೆಳಗಿನ ಸಾಲ ಬಹಳ ಉಳಿದಿರಬೇಕು ಅಣ್ಣ ಮನೆಗೆ ಬರುತ್ತಲೇ ಚೆನ್ನಾಗಿ ದಬಾಯಿಸು— ನಾನು ಮನೆಗೆ ಬಂದ ದಿನವೇ ನೀವು ನನ್ನ ಬಿಟ್ಟು ಓಡಿಹೋಗಬೇಕೇ ಎಂದು ಕೇಳು" ಎಂದಳ

"ಪಾಪ ಅವರೇನು ಬೇಕೆಂದು ಹೋದರೆ? ಅವರು ಹೋಗು ವಾಗ ಅವರ ಮುಖ ನೋಡಬೇಕಿತ್ತು—ಎಷ್ಟು "

"ಆಗಲೇ ಅವರ ಪರ ವಹಿಸಿಬಿಟ್ಟೆ " ಎನ್ನುತ್ತಾ ಗೀತ ಮೆಟ್ಟ ಲೇರಿದಳು

ಮೂರ್ತಿ ಬಾಗಿಲು ತಟ್ಟುವವರೆಗೆ ಪದ್ಮಿನಿ ಉಗುರುಕಚ್ಚುತ್ತಾ ಒಂದು ಗಳಿಗೆ ಸುಮ್ಮನೆ ನಿಂತಳು

ತಾನೇಕೆ ಅಷ್ಟೊಂದು ತವಕ ತೋರಿಸಬೇಕು

ಪದ್ಮಿನಿ ನಿಧಾನವಾಗಿ ಬಾಗಿಲಿನ ಅಗಳಿಯನ್ನು ಎಳೆದು ನಿಂತಳು

"ಏನ್ರೀ ತುಂಬಾ ಬೇಜಾರಾಯಿತೇ ?" ಎನ್ನುತ್ತಾ ಮೂರ್ತಿ ಒಳಗೆ ಬಂದರು

"ಬೇಜಾರು ಯಾಕೆ ?"

"ಮದುವಣಗಿತ್ತಿಯಾಗಿ ನೀನು ಇಲ್ಲಿಗೆ ಬಂದ ದಿನವೇ ನಾನು ಮನೆಬಿಟ್ಟು ಈಗ ಬರುತ್ತಾ ಇದೀನಿ ಮದುವೆಯಾದ ಮಾರನೆಯ ದಿನವೇ ನನ್ನ ಕಂಡರೆ ಎಷ್ಟು ಅಲಕ್ಷ್ಯ ಎಂತ "

"ಮಾತನಾಡಬೇಕಾದರೆ ನನ್ನ ಸೊಂಟ ಹಿಡಿದೇ ಮಾತನಾಡಬೇಕೆ?"

"ಹೌದು ಇಲ್ಲದಿದ್ದರೆ ನನಗೆ ಮಾತು ಸರಿಯಾಗಿ ಹೊರಡೋದಿಲ್ಲ, ಹಾಗೂ ಬ್ಯಾಲೆನ್ಸ್ ತಪ್ಪಿಹೋದರೆ "

"ಊಟಕ್ಕೆ ಬರ್ತೀರಾ ?"

"ತಾತ ಎಲ್ಲಿ ?"

"ಅವರನ್ನು ಮನೆಗೆ ಕಳುಹಿಸಿಬಿಟ್ಟೆ "

"ಹಾಗಾದರೆ ಇವತ್ತು ಅನ್ನಪೂರ್ಣೆಯವರು ತಮ್ಮ ಅಮೃತಹಸ್ತ ದಿಂದ ಈ ಭಿಕ್ಷುಕನಿಗೆ ಅನ್ನ ನೀಡುವರೇ ? ಗೀತಾ ಎಲ್ಲಿ ?"

"ವಿಶ್ವನಾಥನ ಕನಸು ಕಾಣುತ್ತಿದ್ದಾಳೆ "

ಕೋರ್ಟು, ಆಫೀಸಿನಿಂದ ದಣಿದು ಹಣ್ಣಾಗಿ ಬಂದ ಮೂರ್ತಿಗೆ ಪದ್ಮಿನಿಯ ಮುಖ ಕಂಡೊಡನೆ ನವಚೇತನ ಬಂದಂತಾಗಿತ್ತು ಒಣಗಿ ನಿಂತಿದ್ದ ಭೂಮಿಯ ಮೇಲೆ ಚೆನ್ನಾಗಿ ಒಂದು ಹದ ಮಳೆ ಬಂದಂತಾಗಿತ್ತು ಅವರ ಸ್ಥಿತಿ

ಬಡಿಸಲು ಬಂದ ಪದ್ಮಿನಿಯ ಕೈಹಿಡಿದು ಮೂರ್ತಿ "ಈಗ ಹದಿ ಮೂರು ವರ್ಷಗಳ ಹಿಂದೆಯೇ ನೀನು ಯಾಕೆ ಹುಟ್ಟಲಿಲ್ಲ ?" ಎಂದರು

"ನನಗಿನ್ನೂ ಹದಿಮೂರೇ ವರ್ಷ ಎಂದುಕೊಂಡಿದೀರಾ ? ಆಗ ನಾನು ಐದಾರು ವರ್ಷದವಳಿರಬಹುದು "

"ಆಗಲೇ ನನ್ನ ಕಣ್ಣಿಗೆ ಬಿದ್ದಿದ್ದರೆ ?"

"ಏನು ಮಾಡುತ್ತಿದ್ದಿರಿ ?"

"ಆಗಲೇ ನಿನ್ನ ಇಲ್ಲಿಗೆ ಕರೆದುಕೊಂಡು ಬಂದು ಗೀತನ ಜೊತೆಗೆ ಸಾಕಿಕೊಳ್ಳುತ್ತಿದ್ದೆ "

"ಜೂಲೀನ ಸಾಕಿಕೊಂಡ ಹಾಗೆ ? "

"ಛೇ ಪದ್ಮಿನೀನ ಸಾಕಿದ ಹಾಗೆ "

"ನನ್ನ ಕೈ ಬಿಡಿ ಮತ್ತೆ ಬಡಿಸುವುದಕ್ಕೆ ಬಂದಾಗಲೆಲ್ಲಾ ಹೀಗೆ ಕೈ ಹಿಡಿದರೆ ನಾನೇನು ಮಾಡಲಿ ?"

ಪದ್ಮಿನಿಯು ಊಟ ಮುಗಿಯುವವರೆಗೆ ಮೂರ್ತಿ ಅಲ್ಲಿಯೇ ಕುಳಿತಿದ್ದು ನಂತರ "ನೀನು ಹೋಗಿ ಮಲಗಿಕೋ ನನಗೆ ಸ್ವಲ್ಪ ಕೆಲಸ ಇದೆ" ಎಂದರು

"ಏನು ಕೆಲಸ ?"

"ಕೊಂಚ ಟೈಪ್ ಮಾಡಬೇಕಾಗಿತ್ತು "

"ನಾನೂ ಅಲ್ಲೇ ಬಂದು ಕೂತಿರುತ್ತೇನೆ "

"ಬೇಡ "

"ಇಷ್ಟು ಹೊತ್ತಿನ ಮೇಲೆ ನನಗೆ ಒಬ್ಬಳಿಗೇ ಕುಳಿತಿರುವುದಕ್ಕೆ ಭಯವಾಗುತ್ತದ "

"ಹಾಗಾದರೆ ಇಲ್ಲೇ ಕುಳಿತುಕೋ ಆದರೆ ಮಧ್ಯೆ ಮಧ್ಯೆ ನನ್ನ ಮಾತನಾಡಿಸಿ ತೊಂದರೆ ಕೊಡಬಾರದು "

"ಇಲ್ಲ "

"ನನ್ನ ಹತ್ತಿರ ಬರಬಾರದು "

"ಪ್ರಯತ್ನಿಸುತ್ತೇನೆ—ಬಾರದ ಹಾಗೆ "

ಮೂರ್ತಿ ರೂಮಿನಲ್ಲಿದ್ದ ಟೈಪ್‌ರೈಟರ್‌ನ ಮುಚ್ಚಳವನ್ನು ತೆಗೆದು ಟೈಪು ಮಾಡತೊಡಗಿದರು ಪದ್ಮಿನಿ ಬೊಗಸೆಯಲ್ಲಿ ಗಲ್ಲವೂರಿ ಕುಳಿತಿದ್ದಳು ಮೂರ್ತಿ ನಾಲ್ಕು ಸಾಲು ಟೈಪು ಮಾಡುವುದರಲ್ಲಿ ಅವಳು "ಈ ಕೆಲಸಗಳಿಗೆಲ್ಲಾ ಸೆಕ್ರೆಟರೀನ ಯಾಕೆ ಇಟ್ಟುಕೋಬಾರದು ?" ಎಂದಳು

"ನಾನೂ ಯೋಚನೆ ಮಾಡ್ತಿದೀನಿ ಆದರೆ ನನ್ನ ಮನಸ್ಸಿಗೊಪ್ಪುವಂತಹ ಸೆಕ್ರೆಟರಿ ಸಿಕ್ಕುವುದು ಕಷ್ಟ "

"ಈಗಿನ ಕಾಲದಲ್ಲಿ ಓದಿದ ಹುಡುಗರಿಗೇನು ಕಡಿಮೆ ? ಬೇಕಾದಷ್ಟು ಜನ ಟೈಪಿಸ್ಟ್ ಸಿಕ್ಕುತ್ತಾರೆ

"ಹುಡುಗರು ನನಗೆ ಬೇಡ, ಹುಡುಗಿ ಬೇಕು"

"ಸೆಕ್ರೆಟರಿ ಹುಡುಗಿಯೇ ಆಗಬೇಕೆ ?"

"ಹೌದು ಇಲ್ಲದಿದ್ದರೆ ಕೆಲಸ ಮಾಡಲು ಉತ್ಸಾಹವೇ ಇರುವುದಿಲ್ಲ ಸೆಕ್ರೆಟರಿ ಕೇವಲ ಹುಡುಗಿಯಾಗಿದ್ದರೆ ಸಾಲದು ಅವಳು ನೋಡಲು ಲಕ್ಷಣವಾದ ಹುಡುಗಿಯೇ ಆಗಿರಬೇಕು"

"ಹಾಗೇನು ರೂಲ್ಸಿಲ್ಲ"

"ಅಮೇರಿಕಾಲಿ ಹಾಗೆ ರೂಲ್ಸಿದೆ"

"ಇದು ಅಮೆರಿಕಾ ಅಲ್ಲ"

ಅವಳ ದನಿಯಲ್ಲಿದ್ದ ಮತ್ಸರವನ್ನು ಗಮನಿಸಿ ಮೂರ್ತಿ ತುಂಬಾ ಗಂಭೀರವಾದ ದನಿಯಿಂದ ಹೇಳಿದರು "ನಾನು ಹೇಳುವುದನ್ನೆಲ್ಲಾ ಅವಳು ನನ್ನ ತೊಡೆಯ ಮೇಲೆ ಕುಳಿತುಕೊಂಡೇ ಟೈಪು ಮಾಡಬೇಕು"

ಹೂಬಾಣದಿಂದ ಉದುರುವ ಮನೋಹರವಾದ ಕಿಡಿಯಂತೆ ಪದ್ಮಿನಿ ಜ್ವಲಿಸುತ್ತಾ ಮೆಷಿನ್ನನ್ನು ತನ್ನ ಕೈಲಿ ಹಿಡಿದಳು

"ನನ್ನ ಹತ್ತಿರ ಬರಬಾರದೂಂತ ಹೇಳಿದ್ದೆ"

"ನಾನೇನು ನಿಮ್ಮ ಹತ್ತಿರ ಬರೋದಿಲ್ಲ ಈ ಯಂತ್ರಾನ ಹಾಳು ಮಾಡಿಬಿಡುತ್ತೇನೆ" ಎನ್ನುತ್ತಾ ಪದ್ಮಿನಿ ಮೇಜಿನಮೇಲಿಂದ ಯಂತ್ರವನ್ನು ತನ್ನ ಕೈಗೆ ತೆಗೆದುಕೊಂಡಳು ಮೂರ್ತಿ ಅವಳ ಕೈಹಿಡಿದು ತಡೆಯುತ್ತಾ,

"ನನ್ನ ಮೇಲಿನ ಸಿಟ್ಟಿಗೆ ಅದನ್ನು ಹಾಳುಮಾಡಬೇಡ" ಎಂದರು

"ಅದರ ಒಂದು ಭಾಗಾನೂ ನಾನು ಸಜೀವವಾಗಿ ಉಳಿಸೋದಿಲ್ಲ"

ಮೂರ್ತಿ ನಕ್ಕು "ನನ್ನ ಮಾತು ಪೂರ್ತಿ ಕೇಳಿಸಿಕೊಂಡು ಆಮೇಲೆ ಸಿಟ್ಟು ಮಾಡಿಕೋ ನನ್ನ ಷರತ್ತುಗಳಿಗೆ ಯಾವ ಟೈಪಿಸ್ಟೂ ಒಪ್ಪುವುದಿಲ್ಲ ಆದುದರಿಂದ ನನಗೆ ಸೆಕ್ರೆಟರಿಯೇ ಬೇಡ" ಎಂದರು

"ಮತ್ತೆ ನೀವೇ ಎಲ್ಲಾ ಟೈಪ್ ಮಾಡ್ತೀರಾ ?"

"ಗುಮಾಸ್ತರಿದಾರೆ ಇವತ್ತು ಹೆಚ್ಚಿಗೆ ಇದೇಂತ ನಾನು ಮಾಡುತ್ತಿದ್ದೆ"

"ನಾನು ಟೈಪ್ ಮಾಡಲು ಕಲಿಯಲಾ ?"

"ನನ್ನ ಷರತ್ತಿಗೆ ಒಪ್ಪಿಕೊಳ್ಳುತ್ತೀಯಾ ?"

"ನಾನು ಡ್ರೈವಿಂಗ್ ಕಲಿತು ಡ್ರೈವರ್ ಆಗಿದ್ದಾಯಿತು ಇನ್ನು ಟೈಪಿಂಗ್ ಕಲಿತು ನಿಮಗೆ ಸೆಕ್ರೆಟರಿಯಾಗಬೇಕು ನಾನು ಇನ್ನೂ ನಿಮಗೆ ಏನೇನು ಆಗಬೇಕೋ" ಎನ್ನುತ್ತಾ ಪದ್ಮಿನಿ ಮುದ್ದಾಗಿ ಮೂರ್ತಿಯ ಕಡೆ ನೋಡಿದಳು

ಟೈಪ್ ಮಾಡುತ್ತಿದ್ದ ಮೂರ್ತಿಯ ಬೆರಳುಗಳು ತಡೆದುವು ಅವರು ಯಂತ್ರದ ಕವರನ್ನು ಮತ್ತೆ ಅದಕ್ಕೆ ಹೊದಿಸಿದರು

"ಯಾಕೆ ಮುಚ್ಚಿಬಿಡುತ್ತಿದೀರಿ ?"

"ನೀನು ಹಾಗೆ ನನ್ನ ಮೇಲೆ ಬಾಣಪ್ರಯೋಗ ಮಾಡಿದರೆ ನನ್ನ ಗತಿ ಏನಾಗಬೇಕು ? ನಾನು ಸೋತೆ ಶರಣಾಗತರಾದವರ ಮೇಲೆ ವಿಜಯಿಗಳು ನಿರ್ದಯರಾಗಬಾರದು "

ಗೀತನ ರೂಮಿನ ಮುಂದೆ ಅವರಿಬ್ಬರೂ ಹಾದುಹೋಗುವಾಗ ಗೀತ ಕೂಗಿದ ದನಿ ಕೇಳಿಸಿತು

"ನೀನಿನ್ನೂ ಮಲಗಿಲ್ಲವಾ ?"

"ಇಲ್ಲ ನಿಮ್ಮ ಹತ್ತಿರ ಸ್ವಲ್ಪ ಕೆಲಸವಿತ್ತು" ಎಂದಳು ಗೀತ

ಮೂರ್ತಿ, ಪದ್ಮಿನಿ ರೂಮಿಗ ಹೋಗಿ ದೀಪ ಹಚ್ಚುವಷ್ಟರಲ್ಲಿ ಗೀತ ಅವರ ರೂಮಿನ ಬಾಗಿಲ ಬಳಿ ನಿಂತು "ಬರಬಹುದಾ " ಎಂದಳು.

ಪದ್ಮಿನಿ ಮುನಿಸಿನಿಂದ "ಬಾರೇ, ಸಾಕು ಬಿನ್ನಾಣ" ಎಂದಳು.

ಗೀತಾ ಒಳಗೆ ಬಂದು ಪದ್ಮಿನಿಯ ಕಡೆ ನೋಡಿ

"ನಿಮ್ಮ ಮದುವೆಗೆ ನಾನೇನೂ ಉಡುಗೊರೆ ಕೊಡಲಿಲ್ಲ" ಎಂದಳು

"ಕೊಟ್ಟಿದಿಯಲ್ಲಾ ಇವರನ್ನ "

"ಅದು ಬೇರೆ ವಿಷಯ ಈಗ ನ್ಯಾಯವಾಗಿ ನಿನಗೆ ಸಲ್ಲಬೇಕಾಗಿರುವ ಒಂದು ಪದಾರ್ಥನ ತಂದಿದೀನಿ "

"ಏನದು ?"

ಗೀತಾ ತನ್ನ ಹಸ್ತವನ್ನರಳಿಸಿ ಅದರ ಮೇಲ ಹೊಳೆಯುತ್ತಿದ್ದ ಚಿನ್ನದ ಚೈನೊಂದನ್ನು ಪದ್ಮಿನಿಗೆ ತೋರಿಸಿದಳು ಪದ್ಮಿನಿ ಆಶ್ಚರ್ಯದಿಂದ,

"ಇದು ನೀನ ು ಯಾವಾಗಲೂ ಹಾಕಿಕೊಳ್ಳುತ್ತಿದ್ದ ಸರ ಅಲ್ಲವೇ ?"

ಎಂದಳು

"ಈ ಸರಕ್ಕೆ ಸರಿಯಾದ ಹಕ್ಕುದಾರರು ಇಲ್ಲದಿದ್ದರಿಂದ ನಾನು ಇದನ್ನು ಹಾಕಿಕೊಳ್ಳುತ್ತಿದ್ದೆ ಅಷ್ಟೆ ಈ ಮನೆತನದ ಸೊಸೆಯರು ಮೊದಲಿನಿಂದಲೂ ಈ ಸರವನ್ನು ಹಾಕಿಕೊಳ್ಳುತ್ತಾ ಬಂದಿದಾರೆ ನಮ್ಮ ತಾಯಿ, ನಮ್ಮಜ್ಜಿ ಮುತ್ತಜ್ಜಿ—ಹೀಗೆ ವಂಶಪಾರಂಪರ್ಯವಾಗಿ ಬಂದಿದೆ ನಮ್ಮ ತಾಯಿ ಹೋದಾಗಿನಿಂದ ನಾನು ಹಾಕಿಕೊಳ್ಳುತ್ತಿದ್ದೆ ಈಗ ನೀನು "

ಪದ್ಮಿನಿ ಪ್ರಶ್ನಾರ್ಥಕವಾಗಿ ಮೂರ್ತಿಯ ಕಡೆ ನೋಡಿದಳು

"ಗೀತಳ ಮಾತು ನಿಜ ಪದ್ಮಿನಿ ಆ ಸರ ನ್ಯಾಯವಾಗಿ ನಿನಗೆ ಬರ ಬೇಕು" ಎಂದು ತೀರ್ಪಿತ ರು ಮೂರ್ತಿ

"ಗೀತನಿಗೆ ಸರ ಇಲ್ಲದ ಹಾಗಾಗುತ್ತದೆ "

"ಅವಳಿಗೆ ಬೇರೆ ಸರ ಮಾಡಿಸುತ್ತೇನೆ "

ಗೀತ ಹೇಳಿದಳು "ನನಗೆ ಬೇರೆ ಸರ ಬೇಡ "

"ಸರ ಬೆ ಡದಿದ್ದರೆ ಬಳೆ ಮಾಡಿಸಿಕೋ "

"ಊಹೂಂ ನನಗೆ ಬಳೆಯೂ ಬೇಡ "

"ಹಾಗಾದರೆ ನಿನಗೇನು ಬೇಕು ?" ಪದ್ಮಿನಿ ಕೇಳಿದಳು

"ನಾನು ಕೇಳಿದ್ದನ್ನು ಕೊಡ್ತೀರಾ ?"

"ಖಂಡಿತ" ಎಂದರು ಮೂರ್ತಿ

ಗೀತ ತುಂಟನಗೆ ಬೀರಿ ತಂದೆಯ ಕಡೆ ನೋಡಿ "ನನಗೆ ಏನು ಬೇಕು ಎನ್ನುವುದನ್ನು ಪದ್ಮಿನಿಯ ಕಿವಿಯಲ್ಲಿ ಗುಟ್ಟಾಗಿ ಹೇಳಿ ಹೋಗು ತ್ತೇನೆ ಆಮೇಲೆ ಅವಳು ನಿನಗೆ ಹೇಳುತ್ತಾಳೆ" ಎಂದಳು

"ಆಗಲಿ "

ಗೀತ ಎರಡು ಕೈಗಳಿಂದಲೂ ಪದ್ಮಿನಿಯ ಮುಖವನ್ನು ಹತ್ತಿರ ಕ್ಕೆಳೆದುಕೊಂಡು ಅವಳ ಕಿವಿಯ ಬಳಿ ತನ್ನ ಬಾಯನ್ನಿಟ್ಟು "ನನಗೊಬ್ಬ ಪುಟ್ಟ ತಮ್ಮ ಬೇಕು" ಎಂದು ಪಿಸುಗುಟ್ಟಿ ರೂಮಿನಿಂದಾಚೆ ಓಡಿ ಹೋದಳು



# ತ್ರಿವೇಣಿಯವರ ಕೃತಿಗಳು

## ಕಾದಂಬರಿಗಳು

ಹೂವು ಹಣ್ಣು
ಅಪಸ್ವರ
ಸೋತು ಗೆದ್ದವಳು
ಬೆಕ್ಕಿನ ಕಣ್ಣು
ದೂರದ ಬೆಟ್ಟ
ಮೊದಲ ಹೆಜ್ಜೆ
ಕೀಲುಗೊಂಬೆ
ಅಪಜಯ
ಕಂಕಣ
ಮುಚ್ಚಿದ ಬಾಗಿಲು

ಬಾನು ಬೆಳಗಿತು
ಮುಕ್ತಿ
ಹೃದಯಗೀತ
ಅವಳ ಮನೆ
ತಾವರೆಯ ಕೊಳ
ವಸಂತಗಾನ
ಕಾಶೀಯಾತ್ರೆ
ಶರಪಂಜರ
ಹಣ್ಣೆಲೆ ಚಿಗುರಿದಾಗ
ಅವಳ ಮಗಳು

ಬೆಳ್ಳಿಮೋಡ

## ಸಣ್ಣಕತೆಗಳು

ಹೆಂಡತಿಯ ಹೆಸರು
ಎರಡು ಮನಸ್ಸು
ಸಮಸ್ಯೆಯ ಮಗು

ಬೆಲೆ : ರೂ. 18-00